

ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಅಕ್ಟೋಬರ್ 02, 2013 ಪುಟ 20 ರೂ. 14/-


ರಂಗತಂಡ **ಇಪ್ಟಾ** ಸಂದರ್ಶನ **ಪುಂಡಲೀಕ ಹಾಲಂಬಿ**






ಮೋದಿಯು

ಹಾರರ್ ಸಿನಿಮಾದ ಟ್ರೈಲರ್



ನಂಜುಂಡಿ
ವಿಶ್ವಕರ್ಮರಿಗೆ

ಬೆಲೆ ಇಲ್ಲ



ಬೀದರ್

ಮರೆತ ಖೇಣಿ



ಮಂಗಳೂರು

ಅಂಡರ್‌ವರ್ಲ್ಡ್ ಅಧಿಪತ್ಯಕ್ಕಾಗಿ

ರವಿಪೂಜಾರಿ-ವಿಕ್ಕಿಶೆಟ್ಟಿ ಕತ್ತಿವರಸೆ





• ಪಾರ್ವತೀಶ
bparvateesha@gmail.com

ಬಿಡಿ ಚಿತ್ರಗಳು

ಸಂಪಾದಕ

ಕರ್ನಾಟಕದಲ್ಲೂ ಮೋದಿ ಎಂಬ ವಿಷಸರ್ಪದ ಹಲ್ಲುಗಳ

ಕರ್ನಾಟಕದಲ್ಲಿ ಮೋದಿ ಮೇನಿಯಾ ಧುತ್ತೆಂದು trigger off ಆಗಿದೆ.

ಅನಂತಮೂರ್ತಿಯವರು ಬರಗೂರರ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡುವಾಗ 'ನರೇಂದ್ರ ಮೋದಿ ಪ್ರಧಾನಿಯಾಗುವುದಾದರೆ ನಾನು ಅಂತಹ ನಾಡಿನಲ್ಲಿ ಇರಲು ಬಯಸುವುದಿಲ್ಲ' ಎಂದು ಹೇಳಿದ್ದು ಈಗ ದೊಡ್ಡ ವಿವಾದವಾಗಿದೆ.

ಎಲ್ಲರೂ ನಿರೀಕ್ಷಿಸಬಹುದಾದಂತೆ ಹಿಂದೂ ಫ್ಯಾಸಿಸ್ಟರು 'ಅನಂತಮೂರ್ತಿ ಬೇಕಿದ್ದರೆ ಪಾಕಿಸ್ತಾನಕ್ಕೆ ಹೋಗಲಿ' ಎಂದಿದ್ದಾರೆ. ಆರ್‌ಎಸ್‌ಎಸ್‌ನ 'ವಿಕ್ರಮ' ಪತ್ರಿಕೆಯ ಸಪ್ಲಿಮೆಂಟರಿಗಳಂತಾಗುತ್ತಿರುವ ವಿಜಯವಾಣಿ ಹಾಗೂ ಕನ್ನಡಪ್ರಭ ದಿನಪತ್ರಿಕೆಗಳಂತೂ ಅನಂತಮೂರ್ತಿಯವರ ವಿರುದ್ಧ ಯುದ್ಧ ಘೋಷಣೆ ಮಾಡುವಂತೆ ಹಾಗೂ ಮೋದಿಯ ರಕ್ಷಣೆಗೆ ನಿಲ್ಲುವಂತೆ ಅಬ್ಬರಿಸುತ್ತಾ ಪ್ರಚೋದನಾಕಾರಿ ವರದಿಗಳನ್ನು ಪ್ರಕಟಿಸುತ್ತಿವೆ. ಟಿವಿ ಚಾನಲ್ಲುಗಳಲ್ಲೂ ವಾಗ್ವಾದಗಳು ನಡೆಯುತ್ತಿವೆ. ಕನ್ನಡ ವೆಬ್‌ಸೈಟುಗಳಲ್ಲಿ, ಬ್ಲಾಗ್ ಹಾಗೂ ಫೇಸ್‌ಬುಕ್‌ನಲ್ಲೂ ಪರ ವಿರೋಧದ ಅಭಿಪ್ರಾಯಗಳ ಸುರಿಮಳೆಯಾಗುತ್ತಿದೆ. ಈ ಗದ್ದಲದ ನಡುವೆ ಬಿಜೆಪಿಯ ಮಾಜಿ ಸಂಸದ ಆಯನೂರು ಮಂಜುನಾಥ್ ಅನಂತಮೂರ್ತಿಯವರನ್ನು ಬೆತ್ತಲೆ ನಟಿ ಪೂನಂ ಪಾಂಡೆಗೆ ಹೋಲಿಸಿದ್ದಾರೆ. ಇದು ಆಯನೂರರ ಆಸಕ್ತಿ ಯಾವ ಕಡೆಗಿದೆ ಎಂಬುದಕ್ಕೆ ಸಾಕ್ಷಿ ಅಷ್ಟೆ.


ಈ ನಡುವೆ ಕೆಲವರು "ಚುನಾವಣೆ ಗೆದ್ದು ಮೋದಿ ಪ್ರಧಾನಿಯಾದರೆ ಅದರಲ್ಲಿ ತಪ್ಪೇನು, ನಾವದನ್ನು ಒಪ್ಪಿಕೊಳ್ಳಬೇಕಲ್ಲವೆ?" ಎಂದಿದ್ದಾರೆ. ಈ ತರದ ಖಾಯಂ ಬಾಲಕರ ಅಭಿಪ್ರಾಯಗಳನ್ನೂ ಗಮನಿಸುತ್ತಾ ನಾವೀ ಚರ್ಚೆಗೆ ಮುಖಾಮುಖಿಯಾಗಲೇ ಬೇಕಿದೆ.

ಫ್ಯಾಸಿಸ್ಟರು ಅಧಿಕಾರಕ್ಕೆ ಬಂದಾಗ ಪ್ರಜಾಪ್ರಭುತ್ವವಾದಿಗಳು ದೇಶ ಬಿಟ್ಟು ಹೋಗುವುದು ಅಥವಾ ಫ್ಯಾಸಿಸಂ ವಿರುದ್ಧ ಹೋರಾಡಲು ಅನೇಕ ದೇಶಗಳ ಜನರು ಇನ್ನೊಂದು ದೇಶಕ್ಕೆ ಹೋಗುವುದೆಲ್ಲಾ ಈ ಹಿಂದೆ ನಡೆದಿವೆ. ಹಿಟ್ಲರ್ ಅಧಿಕಾರಕ್ಕೆ ಬಂದಾಗ ಬರ್ಟೋಲ್ಟ್ ಬ್ರೆಕ್ಟ್ ಜರ್ಮನಿ ಬಿಟ್ಟು ಆಚೆಗೆ ಹೋದ. ಸ್ಪೇನ್‌ನಲ್ಲಿ ಜನರಲ್ ಫ್ರಾಂಕೊ ಅಧಿಕಾರ ಹಿಡಿದಾಗ ಜಗತ್ತಿನ ಅನೇಕ ದೇಶಗಳಿಂದ ಜನ ಫ್ಯಾಸಿಸಂ ವಿರೋಧಿಸಿ ಹೋರಾಡಲು ಸ್ಪೇನ್‌ಗೆ ಹೋಗಿದ್ದರು. ಸ್ವತಃ ಇಂದಿರಾ ಗಾಂಧಿ ಸಹ ಫ್ರಾಂಕೊ ವಿರೋಧಿ ಇಂಟರ್‌ನ್ಯಾಷನಲ್ ಬ್ರಿಗೇಡ್‌ನಲ್ಲಿ ಕೆಲಕಾಲ ಕೆಲಸ ಮಾಡಿದ್ದರು.

ಈ ಮೋದಿಯು ಹಿಟ್ಲರ್, ಮುಸಲೋನಿಯ ಭಾರತೀಯ ಜೆರಾಕ್ಸ್ ನಂತಿದ್ದಾನೆ. ಅವನಂಥ ಕೇಡಿಗಳು ಇಂಡಿಯಾದ ನಾಯಕನಾಗಕೂಡದೆಂಬ ಅರ್ಥದಲ್ಲಿ ಅನಂತಮೂರ್ತಿಯವರು ಆಡಿರುವ ಮಾತುಗಳೇಕೆ ಬಿಜೆಪಿಗಳಿಗೆ ಇಷ್ಟು ಅಸಹನೆ ತರಿಸುತ್ತಿದೆ ಎಂಬುದೇ ನಾವು ಕೇಳಬೇಕಾದ ಪ್ರಶ್ನೆ.

ಮೋದಿ ನಡೆಸಿರುವ ನರಮೇಧ, ನಕಲಿ ಎನ್‌ಕೌಂಟರ್‌ಗಳು, ಗುಜರಾತಿನ ಸಂಪನ್ಮೂಲ ಹಾಗೂ ಸರ್ಕಾರಿ ಖಜಾನೆಯನ್ನು ಕಾರ್ಪೊರೇಟ್ ಕಂಪನಿಗಳ ಲಾಭಕ್ಕೆ ತೆರೆದಿಟ್ಟಿರುವ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದರೆ ಸಾಕು ಬಿಜೆಪಿಗಳಿಗೆ ಸಿಟ್ಟು ಬರುತ್ತದೆ. ಈ ಮೋದಿ ಏಕಕಾಲದಲ್ಲಿ ಆರ್‌ಎಸ್‌ಎಸ್‌ನ ಕೇಸರಿ ಭಯೋತ್ಪಾದನೆ, ಹಿಂದೂತ್ವವಾದಿ ಸಿದ್ಧಾಂತ ಹಾಗೂ ಬಂಡವಾಳಶಾಹಿಗಳ ಹಿತಾಸಕ್ತಿ ಈಡೇರಿಸಬಲ್ಲ, ಇವೆಲ್ಲವನ್ನೂ ಒಂದೇ ಚೌಕಟ್ಟಿಗೆ ತರಬಲ್ಲ ನಾಯಕನಾಗಿದ್ದಾನೆ. ಹಾಗಾಗಿಯೇ ಆರ್‌ಎಸ್‌ಎಸ್-ಬಿಜೆಪಿಗೆ ಮೋದಿ ಬೇಕು, ಇಂಡಿಯಾದ ಪ್ರಮುಖ ಪತ್ರಿಕೆ-ಟಿವಿಗಳ ಒಡೆತನ ಹೊಂದಿರುವ ಕಾರ್ಪೊರೇಟ್ ಕಂಪನಿಗಳಿಗೂ ಮೋದಿಯೇ ಡಾರ್ಲಿಂಗ್ ಆಗಿದ್ದಾನೆ.

ಈ ಗುಂಪುಗಳಿಗೆ ಒಪ್ಪಿಗೆಯಾಗಿರುವ ನಾಯಕ ಮೋದಿಯ ವಿರುದ್ಧ ಯಾರೇ ಆಗಲಿ ಆಕ್ಷೇಪಣೆಯ ಮಾತುಗಳಾಡಿದರೆ ಅವರಿಗೆ ಸಿಟ್ಟು ಬರುವುದು ಸಹಜ ತಾನೆ?



ಇವತ್ತು ಮೋದಿಯನ್ನು ವಿರೋಧಿಸುವವರು 'ದೇಶದ್ರೋಹಿ'ಗಳೆನ್ನುವ ಹಂತಕ್ಕೆ ಬಿಜೆಪಿ ತಲುಪಿದೆ. ಇದರಲ್ಲಿ ಕಾಂಗ್ರೆಸ್‌ನ ಪಾಲು ಇಲ್ಲದಿಲ್ಲ, ಏಕೆಂದರೆ ಈ ಮೋದಿ ಮತ್ತವನ ಫ್ಯಾಸಿಸ್ಟ್ ಗ್ಯಾಂಗ್‌ನ ಮುಖವಾಡವನ್ನು ಬಯಲಿಗೆಳೆಯಲು ಕಾಂಗ್ರೆಸ್ ಎಂದೂ ಗಂಭೀರ ಪ್ರಯತ್ನ ಮಾಡಲೇ ಇಲ್ಲ, ಕಳೆದ ಅರವತ್ತು ವರ್ಷಗಳಿಂದ ಇಂಡಿಯಾದಾದ್ಯಂತ ನಡೆಯುತ್ತಾ ಬಂದಿರುವ ಕೋಮು ಗಲಭೆಗಳಿಗೆ ಆರ್‌ಎಸ್‌ಎಸ್ ಅನ್ನು ಕಾಂಗ್ರೆಸ್ ಎಂದೂ ಹೊಣೆ ಮಾಡಿಲ್ಲ. ಭಾರತದ ಆಂತರಿಕ ಭದ್ರತೆಗೆ ಮಾವೋವಾದ ಸವಾಲಾಗಿದೆ ಎನ್ನುತ್ತಿದ್ದಾರೆಯೇ ವಿನಃ ಈ ಹಿಂದೆಯಾಗಲೀ ಇವತ್ತಿಗೂ ಆಗಲಿ 'ಕೋಮುವಾದ' ಅಪಾಯಕಾರಿ ಎನ್ನುತ್ತಿಲ್ಲ, ನಮ್ಮ ಸಂವಿಧಾನದ ಆಶಯಗಳ ಪ್ರಕಾರ, ಇಂಡಿಯನ್ ಪೀನಲ್ ಕೋಡ್ 153–ಎ ಪ್ರಕಾರ ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗ ದಳದಂತಹ ಸಮಾಜದ್ರೋಹಿ ಗುಂಪುಗಳಿಗೆ ಶಿಕ್ಷೆಯಾಗಬೇಕಿದೆಯಾದರೂ ಕಾಂಗ್ರೆಸ್ ಇದನ್ನು ಎಂದೂ ಗಂಭೀರವಾಗಿ ಪರಿಗಣಿಸಲೇ ಇಲ್ಲ. ಚಾಪೆಯ ಕೆಳಗಿನ ನೀರಿನಂತೆ ಹಿಂದೂ ಭಯೋತ್ಪಾದಕ ಸಂಘಟನೆಯ ಜಾಲ ಅನೇಕ ದಶಕಗಳಿಂದಲೂ ಹರಡಿಕೊಳ್ಳುತ್ತಲೇ ಹೋಗುತ್ತಿದೆ. ಈ ಗುಂಪಿನ ವಿದ್ಯಾಭಾರತಿ ಶಾಲೆಗಳ ಸಂಖ್ಯೆ ಅಂದಾಜು ಮೂವತ್ತು ಸಾವಿರದಷ್ಟಿದ್ದು ಒಂದೂವರೆ ಲಕ್ಷ ಶಿಕ್ಷಕರು ಹಾಗೂ ಮೂವತ್ತೆರಡು ಲಕ್ಷ ವಿದ್ಯಾರ್ಥಿಗಳಿದ್ದಾರೆ. ಎನ್‌ಸಿಇಆರ್‌ಟಿಯ 1996 ರ ಒಂದು ವರದಿಯ ಪ್ರಕಾರ ಆರ್‌ಎಸ್‌ಎಸ್ ನಡೆಸುತ್ತಿರುವ ಶಾಲೆಗಳ ಪಠ್ಯಪುಸ್ತಕಗಳಲ್ಲಿ ಕೋಮುದ್ವೇಷ ಉಂಟುಮಾಡುವ, ಹುಸಿ ದೇಶ ಭಕ್ತಿ ಪ್ರಚೋದಿಸುವ ಅಂಶಗಳು ಯಥೇಚ್ಛವಾಗಿವೆ. ಆದರೆ ಕಾಂಗ್ರೆಸ್‌ಗೆ ಇದೊಂದು ಗಂಭೀರ ವಿಚಾರವೆನಿಸಿಲ್ಲ, ಆರ್‌ಎಸ್‌ಎಸ್ ತನ್ನ ಕಾರ್ಯಾಚರಣೆಯನ್ನು ಅದೆಷ್ಟು ವ್ಯವಸ್ಥಿತವಾಗಿ ಹರಡುತ್ತಿದೆಯೆಂದರೆ ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಆರೋಗ್ಯ, ಆದಿವಾಸಿ ಉದ್ಧಾರ, ಹಳ್ಳಿಗಳ ಅಭಿವೃದ್ಧಿ.... ಹೀಗೆ ನಾನಾ ಹೆಸರಿನಲ್ಲಿ ಒಂದು ಲಕ್ಷಕ್ಕೆ ಹೆಚ್ಚು ಕಾರ್ಯಕ್ರಮಗಳನ್ನು ಅಬಾಧಿತವಾಗಿ ನಡೆಸುತ್ತಾ ಬಂದಿದೆ. ಕಾಂಗ್ ಆಡಳಿತವೇ ಇರುವ ಅನೇಕ ರಾಜ್ಯ ಸರ್ಕಾರಗಳು ಇದಕ್ಕೆ ಕಣ್ಮುಚ್ಚಿಕೊಂ ಧನಸಹಾಯ ಒದಗಿಸುತ್ತಿವೆ. ಅರವತ್ತು ಸಾವಿರ ಶಾಖೆಗಳು, ಇಪ್ಪತ್ತು ಸದಸ್ಯರೂ ಇರುವ ಸಂಘ ಪರಿವಾರದ ವಿಧ್ವಂಸಕ ಶಕ್ತಿಯನ್ನು ಅಂದಾಜಿಸ ಕಾಂಗ್ರೆಸ್‌ಗಾಗಲಿ ಈ ದೇಶದ ನೈಜ ಪ್ರಜಾಪ್ರಭುತ್ವವಾದಿಗಳಿಗಾಗಲಿ ಈಗ ಸಾಧ್ಯವಾಗಿಲ್ಲ.

ಈ ಎಲ್ಲಾ ಸಾಧಕಬಾಧಕಗಳ ಸಂಚಯಿತ ಶಕ್ತಿ ಹಾಗೂ ಕೆಡುಕಿನ ಸಂಕೇತ ಇವತ್ತು ಮೋದಿ ಎಂಬ ಕೆಡುಕ 'ಉದ್ಭವ ಪ್ರಧಾನಿ ಅಭ್ಯರ್ಥಿ'ಯಾಗಿ ಹ ಹೊಮ್ಮಿದ್ದಾನೆ.

ಈ ಕೆಡುಕನ್ನು ಎದುರಿಸುವಾಗ ನಾವು ನಮ್ಮೆಲ್ಲರ ನಡುವಿನ ವೈಯ ಭಿನ್ನಾಭಿಪ್ರಾಯ, ಸೈದ್ಧಾಂತಿಕ ಅಂತರ ಹಾಗೂ ವ್ಯಕ್ತಿಗತ ಮಿತಿಗಳನ್ನು ದ ಏಕಾಭಿಪ್ರಾಯ ರೂಪಿಸುವತ್ತ ಸಾಗಬೇಕಿದೆ.

'ಫ್ಯಾಸಿಸಂ' ನಮ್ಮ ನಾ ಮನೆಯ ಬಾಗಿಲಿನ ಎದುರು ಬ ನಿಲ್ಲುತ್ತಿರುವಾಗ 'ಜನ ಓಟು ಮೋದಿಯನ್ನು ಗೆಲ್ಲಿಸಿದರೆ ನ ಅದನ್ನು ಒಪ್ಪಿಕೊಳ್ಳಬೇಕು ತ ಎಂಬ ಚಿಲ್ಲರೆ ಚಿಂತನೆಗಳಿಂದ ನ ಫ್ಯಾಸಿಸ್ಟರನ್ನು ಸೋಲಿಸಲಾಗುವು ಅದೇರೀತಿ ಈ ಶತಸೊಂಭೇರಿ ಕಾಂ ಒಂದನ್ನೇ ನಂಬಿ ಕೂತರೂ ಈ ದೇಶ ಪ್ರಜಾಪ್ರಭುತ್ವ ಹಾಗೂ ಜಾತ್ಯತೀ ಉಳಿಯಲಾರದು. ಈ ಮೋದಿ ಎಂ ಅಪಾಯಕಾರಿ ಎಂದರೆ ಚುನಾವಣ ತಯಾರಿಯ ಭಾಗವಾಗಿ ನಿವೃತ್ತ ಭಾರತಿ ಮಿಲಿಟರಿ ಯೋಧರನ್ನು ಸಂಘಟಿಸಿ ಭಾಷಣ ಮಾಡುತ್ತಿದ್ದಾನೆ. ಪ್ರಜಾಪ್ರಭುತ್ ನಂಬಿಕೆ ಇರುವವರು ಪ್ರಜೆಗಳೊಂದಿಗೆ ಮಾತನಾಡುತ್ತಾರೆ ಮಿಲಿಟರಿಯವರನ್ನು ಪ್ರಚೋದಿಸುವ ಪ್ರಯತ್ನ ಮಾಡುವುದಿಲ್ಲ. ಮೋದಿ ಈ ನಡೆ, ನಾಳೆ ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿಯಲಾಗದಿ ಮಿಲಿಟರಿಯನ್ನಾದರೂ ಎತ್ತಿ ಕಟ್ಟಿ ಅಧಿಕಾರ ಕಬಳಿಸುವ ಫ್ಯಾಸಿಸ್ಟ್ ಆಕಾಂಕ್ಷೆಯ ಬಿಂಬಿಸುತ್ತಿದೆ.


ಕರ್ನಾಟಕದಲ್ಲಿ ನಾವು ತುರ್ತಾಗಿ ಮಾಡಬಹುದಾದ ಕೆಲಸವೇನೆ ಎಲ್ಲಾ ಪ್ರಗತಿಪರ, ಜಾತ್ಯತೀತ, ಜನಪರ ಸಂಘಟನೆಗಳು ಹಾಗೂ ವ್ಯಕ್ತಿ "ಫ್ಯಾಸಿಸ್ಟ್" ಮೋದಿಯನ್ನು ವಿರೋಧಿಸುವ, ಜನರಲ್ಲಿ ಜಾಗೃತಿ ಮೂಡಿ ಕೆಲಸಕ್ಕಾಗಿ ಒಂದೆಡೆ ತರುವುದೇ ಆಗಿದೆ.

ಈ ಮೋದಿ 'The man eater' ಎಂಬುದನ್ನು ನ ಮರೆಯಕೂಡದು.

ವಿಶ್ವೇಶ್ವರಯ್ಯನವರ ಮಿದುಳಿನ ಚಮತ್ಕಾರದ ಹಿನ್ನೆಲೆ!



ಸೆಪ್ಟೆಂಬರ್ 15 ಸರ್ ಎಂ. ವಿಶ್ವೇಶ್ವರಯ್ಯನವರ ಜನ್ಮದಿನ. ಅದನ್ನು 'ಇಂಜಿನಿಯರ್ಸ್ ಡೇ' ಅಂತಲೂ ಆಚರಿಸುತ್ತಾರೆ. ಎಂವಿ ತೀರಿಕೊಂಡು ಈಗ ಐವತ್ತು ವರ್ಷ ಆಗಿದೆ. ನಾವೆಲ್ಲಾ ಚಿಕ್ಕವರಾಗಿದ್ದಾಗ, ವಿಶ್ವೇಶ್ವರಯ್ಯನವರ ಬದುಕು-ಸಾಧನೆಗಳ ಬಗ್ಗೆ ಇನ್ನೂ ತಿಳಿಯದಿರುವಾಗಲೇ 'ವಿಶ್ವೇಶ್ವರಯ್ಯನವರ ಮಿದುಳಿನ' ಬಗ್ಗೆ ಕೇಳುತ್ತಿದ್ದೆವು.



ನಾಲ್ವಡಿ

ಯಾರನ್ನಾದರೂ ಬುದ್ಧಿವಂತನೆಂದು ಹೊಗಳಲು ಅಥವಾ ಅತಿ ಬುದ್ಧಿ ತೋರುವವರನ್ನು ಹೀಯಾಳಿಸಲು "ಆಹಾ... ಹ.. ಇವಂದು ವಿಶ್ವೇಶ್ವರಯ್ಯನ ತಲೆ ಕಣ್ರೀ..." ಅನ್ನುವುದು ಮಾಮೂಲಾಗಿತ್ತು, ಎಂ.ವಿ. ತೀರಿಕೊಂಡಾಗ ಬ್ರಿಟಿಷರು ಅವರು ಮಿದುಳನ್ನು ಯಾರಿಗೂ ಕಾಣದಂತೆ ತೆಗೆದುಕೊಂಡು ಹೋಗಿ ಡಿಟೇಲಾಗಿ ಚೆಕ್ ಮಾಡಿದ್ದಲ್ಲದೆ ಈಗಲೂ ಜೋಪಾನವಾಗಿ ಇಟ್ಟುಕೊಂಡಿದ್ದಾರಂತೆ ಅನ್ನುವ ಬೆರಗಾಗಿಸುವ ರೂಮರ್‌ಗಳು ಇದ್ದವು... ಬಹುಶಃ ಈಗಲೂ ಇರಬಹುದೇನೊ!

ಇನ್ನು 'ಬಂಗಾರದ ಮನುಷ್ಯ' ಸಿನಿಮಾದ 'ಕಾವೇರಿಯನು ಹರಿಯಲು ಬಿಟ್ಟು ವಿಶ್ವೇಶ್ವರಯ್ಯ ಶ್ರಮ ಪಡದಿದ್ದರೆ...' ಎಂದು ಸಾಗುವ ಹಾಡು ಎಂ.ವಿ. ಕೀರ್ತಿಯನ್ನು ನಾಡಿನ ಮನೆಮನೆಗೂ ತಲುಪಿಸಿದೆ. ಅವರು ಬೀದಿ ದೀಪದ ಕೆಳಗೆ ಕುಳಿತು ಓದಿದ್ದೆಲ್ಲ ದಂತಕತೆಯಂತೆಯೇ ಹಬ್ಬಿದೆ.

ನೂರಾ ಎರಡು ವರ್ಷ ಬಾಳಿದ ಎಂ.ವಿ. ಜೀವನ ಹಾಗೂ ಸಾಧನೆಯಲ್ಲಿ ಕೆಲವು ಇಂಟರೆಸ್ಟಿಂಗಾದ ಒಳಸುಳಿಗಳಿವೆ. ಅವರು ಪ್ರದರ್ಶಿಸಿದ ಮುತ್ಸದ್ದಿತನ, ದೂರದೃಷ್ಟಿ, 'Industrialise or perish' ಎಂಬ ಕರೆಯ ತೆರೆಮರೆಯಲ್ಲಿದ್ದವರ ವಿವರಗಳು, ರಾಜೀನಾಮೆಯ ವಿವಾದಗಳ ಬಗ್ಗೆ ಹೆಚ್ಚಿನ ಚರ್ಚೆಗಳಾಗಿಲ್ಲ.

ಆಂಧ್ರದ ಕರ್ನೂಲಿನವರಾದ ಮೋಕ್ಷಗುಂಡಂ ವಂಶಸ್ಥರು ಚಿಕ್ಕಬಳ್ಳಾಪುರದ ಪಾಳೆಯಗಾರ ನಾರಾಯಣಗೌಡ ಎಂಬುವನ ಬಳಿ ಪ್ರಧಾನ ಪಂತ (ಮಂತ್ರಿ)ರಾಗಿ ಇದ್ದವರು. ಟೀಪೂ ಹತ್ಯೆಯ ನಂತರ ಬ್ರಿಟಿಷರು ನಾರಾಯಣಗೌಡನಿಗೆ ಅವನ ಪಾಳೆಯಪಟ್ಟನ್ನು ಮರಳಿ ನೀಡಿದ್ದರು. ಮುಂದೆ ನಾ.ಗೌಡ ಅದೃಶ್ಯನಾದ ಬಳಿಕ ಮೋಕ್ಷಗುಂಡಂ ಕುಟುಂಬಕ್ಕೆ ಬಡತನ ಬಂತು. ಆದರೆ ಬೀದಿ ದೀಪದ ಕೆಳಗೆ ಮಾತ್ರ ಓದಬಲ್ಲವರಾಗಿದ್ದ ಎಂ.ವಿ. ಪೂನಾತನಕ ಹೋಗಿ ಇಂಜಿನಿಯರಿಂಗ್ ಓದಲು ಹಣ ಹೇಗೆ ಹೊಂದಿಸಿದರೆಂಬುದು ಆಸಕ್ತಿದಾಯಕವಾಗಿದೆ. ಆಗ ಎಂ.ವಿ.ಗೆ ನೆರವಾಗಿದ್ದವರಲ್ಲಿ ದಿವಾನ್ ರಂಗಾಚಾರ್ಯ ಪ್ರಮುಖರು. ಜೊತೆಗೆ ಚಾರಲ್ಸ್ ಪಾಟರ್ಸ್ ಎಂಬುವರ ಬೆಂಬಲವೂ ಇತ್ತು, ಇವರೆಲ್ಲರನ್ನೂ ಮೀರಿ ಪೂನಾದಲ್ಲಿ ಎಂ.ವಿ. ಓದಿನ ಖರ್ಚಿಗೆ ಹಣ ನೀಡಿದ್ದು ಸರ್ ವಿಠಲದಾಸ್ ಟಾಕೂರ್ ಸೆ ಎಂಬ ಮಾರ್ವಾಡಿ ಉದ್ಯಮಿ.

ಮೊಗಲರ ಕಾಲದಿಂದಲೂ ದೆಹಲಿ-ಆಗ್ರಾದೊಂದಿಗೆ ಸೂರತ್ ಹಾಗೂ ಪೋರಬಂದರ್ ಮೂಲಕ ವಾಣಿಜ್ಯ ಮಾರ್ಗ ನಿರ್ವಹಿಸಿ ಸಿಂಧಿ, ಮಾರ್ವಾಡಿ, ಬನಿಯಾಗಳಿಗೆ ಅನುಭವವಿತ್ತು, ಬ್ರಿಟಿಷರು ಇಲ್ಲಿ ಒಮ್ಮೆ ರಾಜಕೀಯ ಹತೋಟಿ ಏರ್ಪಡಿಸಿಕೊಂಡ ನಂತರ ಇಂಡಿಯಾದ ಸಂಪತ್ತಿನ ವ್ಯವಸ್ಥಿತ ಲೂಟಿಗೆ ಮುಂದಾದರು. ಆಗ ವಾಣಿಜ್ಯ ವ್ಯವಹಾರದ ವಹಿವಾಟಿನಲ್ಲಿ ತಮ್ಮೊಂದಿಗೆ ಕೈಗೂಡಿಸಬಲ್ಲ ಒಂದು 'ದಲ್ಲಾಳಿ' ವ್ಯಾಪಾರಿ ವರ್ಗವಾಗಿ ಅವರು ಈ ಅನುಭವಿಗಳ ಗುಂಪನ್ನು ಪೋಷಿಸಿ ಬೆಳೆಸಿದರು. ಅಂತಹ ಸ್ಥಳೀಯ ಮಹತ್ವಾಕಾಂಕ್ಷಿ ಉದ್ದಿಮೆದಾರರಲ್ಲಿ ಈ ವಿಠಲದಾಸ್ ಟಾಕೂರ್ ಒಬ್ಬನಾಗಿದ್ದ.

ಐನೂರಕ್ಕೂ ಹೆಚ್ಚು ರಾಜಸಂಸ್ಥಾನಗಳಿದ್ದ ಬ್ರಿಟಿಷ್ ಇಂಡಿಯಾದಲ್ಲಿ ಅಷ್ಟೇ ಸಂಖ್ಯೆಯ ದಿವಾನರುಗಳು, ಆಡಳಿತಗಾರರು, ಇಂಜಿನಿಯರ್‌ಗಳು ಬೇಕಿರುತ್ತಿದ್ದರು. ವಿಠಲದಾಸ್ ತರದವರಿಗೆ ಅಲ್ಲೆಲ್ಲಾ ಹೊಸ ವ್ಯಾಪಾರದ ಅವಕಾಶಗಳನ್ನು ಹುಡುಕಿಕೊಳ್ಳಲು, ಉದ್ದಿಮೆ ವಿಸ್ತರಿಸಲು, ಹೊಸ ಕೈಗಾರಿಕೆಗಳನ್ನು ಆರಂಭಿಸಲು ಬೆಂಬಲಿಸುವಂತಹ ಪ್ರಮುಖರ ಅಗತ್ಯವಿತ್ತು, ಹಾಗಾಗಿ ಪೂನಾದಲ್ಲಿ ಆತ ವಿಶ್ವೇಶ್ವರಯ್ಯನವರಿಗೆ ಮಾತ್ರವಲ್ಲದೆ ಇನ್ನಿತರರಿಗೂ ಹಣದ ನೆರವು ನೀಡಿ ಉನ್ನತ ಶಿಕ್ಷಣ ಕೊಡಿಸಿ ನಂತರ ದೇಶದ ಬೇರೆ ಬೇರೆ ಸಂಸ್ಥಾನಗಳಲ್ಲಿ ಉನ್ನತ ಹುದ್ದೆಯನ್ನು ಕೊಡಿಸಲು ಪ್ರಭಾವ ಬೀರುತ್ತಿದ್ದ.

ವಿಶ್ವೇಶ್ವರಯ್ಯ ತಮ್ಮ ಓದುಮುಗಿಸಿದ ನಂತರ ಕೆಲ ವರ್ಷ ಬಾಂಬೆ, ಸೂರತ್ ಹಾಗೂ ಪೂನಾ ಮುನಿಸಿಪಾಲಿಟಿಗಳಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡಿದರು. ಆಗಲೇ ನೀರಾವರಿ, ಕುಡಿಯುವ ನೀರು ಹಾಗೂ ಚರಂಡಿ ವ್ಯವಸ್ಥೆ ಕಲ್ಪಿಸುವ ಹೊಸ ರೀತಿಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಯತ್ನಿಸಿ ಯಶಸ್ವಿಯೂ ಆದರು.

1898ರಲ್ಲೇ ಜಪಾನ್ ಪ್ರವಾಸ ಮಾಡಿ ಬಂದ ಎಂ.ವಿ. ನಂತರ 1912 ರಿಂದ 1918ರವರೆಗೆ ಮೈಸೂರಿನ ದಿವಾನರಾಗಿದ್ದರು. ಈ ಅವಧಿಯಲ್ಲಿ ನಿರ್ಮಾಣ ಆರಂಭಗೊಂಡ ಕೆಆರ್‌ಎಸ್ ಡ್ಯಾಂ, ಮೈಸೂರು ವಿ.ವಿ., ಮೈಸೂರು ಬ್ಯಾಂಕ್, ಭದ್ರಾವತಿ ಕಬ್ಬಿಣ ಕಾರ್ಖಾನೆಗಳೆಲ್ಲದರ ಹಿಂದೆಯೂ ಒಂದೊಂದು ಕತೆ ಇದೆ.

ಕೆಆರ್‌ಎಸ್ ಡ್ಯಾಂನ ಉದ್ದೇಶ ಕೃಷಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿತ್ತು, ಅಂತ ಏನೇ ಕತೆ ಹೇಳಿದರೂ ಇದಕ್ಕಿದ್ದ ಮುಖ್ಯ ಉದ್ದೇಶ ಶಿವನಸಮುದ್ರ ಜಲವಿದ್ಯುತ್ ಯೋಜನೆಗೆ ಬೇಸಿಗೆಯಲ್ಲೂ ಅಡೆತಡೆಯಿರದಂತೆ ನೀರು ಒದಗಿಸುವುದೇ ಆಗಿತ್ತು, ಆಗ ಕೆಜಿಎಫ್‌ನಲ್ಲಿ ಚಿನ್ನದ ಗಣಿಗಾರಿಕೆ ನಡೆಸುತ್ತಿದ್ದ ಬ್ರಿಟಿಷ್ ಕಂಪನಿಗೆ ಕರೆ ಸರಬರಾಜಾಗುತ್ತಿದ್ದುದೇ ಶಿವನಸಮುದ್ರದಿಂದ. ಉಳಿ ರೈತರಿಗೆ ನೆರವಾಗುವ ಉದ್ದೇಶದಲ್ಲಿ ನಾಲ್ವಡಿ ಕೃಷ್ಣ ಒಡೆಯರ್‌ರವರ ಕೊಡುಗೆಯೂ ಇತ್ತು.

ವಿಠಲದಾಸ್ ತರದ ಉದ್ಯಮಿಗಳಿಗೆ ಹೊಸ ವ್ಯಾಪ ಅವಕಾಶಗಳನ್ನು ಅನ್ವೇಷಿಸುವುದು, ಸಿಗುವ ಅವ ಬಾಚಿಕೊಳ್ಳುವುದರಲ್ಲಿ ಅಪಾರ ಆಸಕ್ತಿ ಇತ್ತು, ಅವನ ಮಹತ್ವಾಕಾಂಕ್ಷಿ ವ್ಯಾಪಾರಿಗಳಿಗೆ ತಮ್ಮ ಕನಸುಗ ವೇಗವಾಗಿ ಈಡೇರಿಸಿಕೊಳ್ಳಲು ಬೇಕಾದಷ್ಟು ದೊಡ್ಡ ಮ ಹಣ ಸಿಗದಿದ್ದಾಗ ಅಂತಹವರೇ ಎಂ.ವಿ.ಗೆ 'ಮೈಸ ಬ್ಯಾಂಕ್' ಸ್ಥಾಪಿಸುವ ಸಲಹೆ ಕೊಡುತ್ತಾರೆ. ಜನಸಾಮಾ ನೀಡುವ ಠೇವಣಿ ಹಣವೇ ತಾನೇ ನಂತರ ಮೊತ್ತವಾಗಿ ಉದ್ಯಮಿಗಳಿಗೆ ಸಾಲದ ರೂಪದಲ್ಲಿ ಸಿಗು ಸರ್ ಎಂ.ವಿ. ವಿಠಲದಾಸ್ ಬಗ್ಗೆ ಅದೆಷ್ಟು ಕೃತಜ್ಞತಾ ಹೊಂದಿದ್ದರೆಂದರೆ 1913ರಲ್ಲಿ ಮೈಸೂರು ಬ್ಯಾಂಕ್ ಆ ಬಂದಾಗ ತನ್ನ ಪೋಷಕ ವಿಠಲದಾಸ್ ಟಾಕೂರನೇ ಬ ಗೌವರ್ನರ್ ಆಗುವಂತೆ ಒತ್ತಾಯಿಸುತ್ತಾರೆ.

ಇನ್ನು ಭದ್ರಾವತಿಯ ಕಬ್ಬಿಣದ ಕಾರ್ಖಾನೆಯ

⏭

ಮುಜಾಫರ್‌ನಗರಕ್ಕೆ ಬೆಂಕಿ ಹಚ್ಚಿದ ಮೋದಿ ಬೆಂಬಲಿಗರು



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಕಳೆದ ವಾರ ಸುಮಾರು 50 ಜನರನ್ನು ಬಲಿ ತೆಗೆದುಕೊಂಡ ಉತ್ತರ ಪ್ರದೇಶದ ಮುಜಾಫರ್‌ನಗರ ಜಿಲ್ಲೆಯಲ್ಲಿನ ಕೋಮುಗಲಭೆಯನ್ನು ಕಳೆದ ಹತ್ತು ವರ್ಷಗಳಲ್ಲಿ ಭಾರತದಲ್ಲಿ ಸಂಭವಿಸಿರುವ ಅತಿ ದೊಡ್ಡ ಗಲಭೆ ಎಂದು ಹಲವರು ಬಣ್ಣಿಸಿದ್ದಾರೆ. ಈ ಕೋಮುಗಲಭೆಗೆ ಬೆಂಕಿ ಹಚ್ಚಿದವರು ಯಾರು? ಉತ್ತರ: ಹಿಂದೂಗಳ ರಕ್ಷಕ ಎಂದು ಪೋಸು ಕೊಡುವ ಕೋಮುವಾದಿ ಬಿಜೆಪಿ ಪಕ್ಷ. ಅವರಿಗೆ ನೆರವು ನೀಡಿದವರು ಯಾರು? ಉತ್ತರ: ಮುಸಲ್ಮಾನರ ರಕ್ಷಕ ಎಂದು ತನ್ನನ್ನು ಬಿಂಬಿಸಿಕೊಳ್ಳುವ ಸಮಾಜವಾದಿ ಪಕ್ಷ. ಇದು ವಿಚಿತ್ರವಾಗಿ ಅನಿಸುತ್ತಿದೆಯೇ? ಪರಸ್ಪರ ವಿರುದ್ಧ ದಿಕ್ಕಿನಲ್ಲಿರುವ ಈ ಎರಡು ಪಕ್ಷಗಳು ಹೀಗೆ ಕೈಜೋಡಿಸಲು ಸಾಧ್ಯವೇ ಎಂದು ...ದಿ ಆಗುತ್ತಿದೆಯೇ? ಆದರೆ ಕೋಮುದ್ವೇಷ, ರಾಜಕೀಯ ...ಾಸಕ್ತಿ ಮತ್ತು ಗುಂಪುಗಳ ಗೂಂಡಾಗಾರಿಕೆ ಜೊತೆಗೂಡಿದರೆ ಏನಾಗುತ್ತದೆ ಎಂಬುದಕ್ಕೆ ಮುಜಾಫರ್ ನಗರದಲ್ಲಿ ಆಗಿರುವುದು ಒಂದು ಉತ್ತಮ ಉದಾಹರಣೆಯಾಗುತ್ತದೆ.


ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿರುವ ಈ ಮುಜಾಫರ್‌ನಗರ ಜಿಲ್ಲೆಯು ಹಲವಾರು ದಶಕಗಳಿಂದ ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡೇ ಬಂದಿತ್ತು. ಜಿಲ್ಲೆಯ ಜನಸಂಖ್ಯೆಯಲ್ಲಿ ಶೇ. 47 ಮುಸಲ್ಮಾನರಿದ್ದರೂ, ಹಿಂದೂಗಳ ಬಲಶಾಲಿ ಜಾತಿಯಾದ ಜಾಟ್‌ಗಳು ಬಹುಸಂಖ್ಯಾತರಾಗಿದ್ದರೂ (ಮಿಕ್ಕವರು ದಲಿತರು ಮತ್ತು ...ಪಂಗಡಗಳಿಗೆ ಸೇರಿರುವವರು) ಈ ಪ್ರದೇಶದಲ್ಲಿ ಇತ್ತೀಚಿನ ತನಕ ಕೋಮುಗಲಭೆಗಳು ನಡೆದಿರಲಿಲ್ಲ. ಮುಸಲ್ಮಾನರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಅವರಲ್ಲಿ ಬಹುಪಾಲು ಜನ ಬಡವರು. ಅವರು ಭೂಮಾಲೀಕರಾದ ಜಾಟ್ ಜಾತಿಯವರ ಕಬ್ಬಿನ ಗದ್ದೆಗಳಲ್ಲಿ ಕೂಲಿ ಮಾಡುವವರು ಇಲ್ಲವಾ ಸೈಕಲ್ ರಿಪೇರಿ, ಬಟ್ಟೆ ವ್ಯಾಪಾರ ಇತ್ಯಾದಿ ಪುಟ್ಟಪುಟ್ಟ ಕಸುಬುಗಳಲ್ಲಿ ತೊಡಗಿರುವವರು. ಅಂದರೆ ಜಾಟ್ ಮತ್ತು ಮುಸಲ್ಮಾನರು ವಿವಿಧ ಕಾರಣಗಳಿಗೆ ಪರಸ್ಪರ ಅವಲಂಬಿತರಾಗಿದ್ದರಿಂದ ಇಲ್ಲಿ ಕೋಮುದ್ವೇಷಕ್ಕೆ ... ಸಿಕ್ಕಿರಲಿಲ್ಲ. ಅಷ್ಟೇ ಮುಖ್ಯವಾಗಿ ಈ ಪ್ರದೇಶದ ಜನ ಚುನಾವಣೆಗಳಲ್ಲೂ ಜಾತ್ಯತೀತ ನಿಲುವನ್ನೇ ಪ್ರದರ್ಶಿಸುತ್ತಾ ಬಂದಿದ್ದರು. ಇಂತಹ ಪ್ರದೇಶದಲ್ಲೇ ...ಗಳು ಕೋಮುಗಲಭೆಗಳನ್ನು ಹಚ್ಚುತ್ತಾರೆಂದರೆ ಅವರೆಷ್ಟು ಅಪಾಯಕಾರಿ ಎಂದು ಅರ್ಥವಾಗುತ್ತದೆ.


ಪ್ರಸ್ತುತ ಗಲಭೆ ಪ್ರಾರಂಭವಾಗಿದ್ದು ಸೆಪ್ಟೆಂಬರ್ 7ರಂದಾದರೂ ಅದಕ್ಕೂ ಮುನ್ನ ಕಳೆದ ಎರಡು ಮೂರು ತಿಂಗಳುಗಳಿಂದ ಈ ಪ್ರದೇಶದಲ್ಲಿ ಮುಸಲ್ಮಾನರ ವಿರುದ್ಧ ವ್ಯವಸ್ಥಿತ ಪಿತೂರಿಯನ್ನು ಆರಂಭಿಸಲಾಗಿತ್ತು. ಅವುಗಳಲ್ಲಿ ಕಪೋಲಕಲ್ಪಿತ 'ಲವ್ ಜೆಹಾದ್' ಕೂಡಾ ಒಂದಾಗಿತ್ತು. ಮುಸಲ್ಮಾನ ಯುವಕರು ಸ್ಟೈಲಿಷ್ ಆದ ಬೈಕು, ಮೊಬೈಲ್‌ಗಳನ್ನು ಹಿಡಿದು ಜಾಟ್ ಯುವತಿಯರನ್ನು ಮರುಳು ಮಾಡಿ ಅವರನ್ನೆಲ್ಲ ಇಸ್ಲಾಮ್ ಧರ್ಮಕ್ಕೆ ಮತಾಂತರ ಮಾಡುತ್ತಿದ್ದಾರೆ ಎಂಬ ಹುಯಿಲನ್ನು ಹಬ್ಬಿಸಲಾಗಿತ್ತು. ಅದರ ಜೊತೆಗೆ ಮುಸಲ್ಮಾನರು 'ಪವಿತ್ರ ಗೋವು'ಗಳನ್ನು ವಧೆ ಮಾಡುವ ಮೂಲಕ ಹಿಂದೂಗಳಿಗೆ ಸವಾಲು ಹಾಕುತ್ತಿದ್ದಾರೆ ಎಂಬುದು ಮತ್ತೊಂದು ಕಾಲ್ಪನಿಕ ಆರೋಪವನ್ನು ಮಾಡಲಾಗಿತ್ತು. ಮೂರನೆಯದಾಗಿ ನರಹಂತಕ ನರೇಂದ್ರ ಮೋದಿ ಮುಂದಿನ ಪ್ರಧಾನಿ ಆಗಿ ಹಿಂದೂಗಳ ಹಿತಾಸಕ್ತಿಯನ್ನು ಕಾಪಾಡುತ್ತಾನೆಂದೂ ಪ್ರಚಾರ ಮಾಡಲಾಯಿತು. ಈ ಮೂರೂ ವಿಷಯಗಳು ಪ್ರಚಾರ ಪಡೆಯುತ್ತಿದ್ದ ಸಂದರ್ಭದಲ್ಲೇ ಕವಲ್ ಎಂಬ ಹಳ್ಳಿಯಲ್ಲಿ ಆಗಸ್ಟ್ 27ರಂದು ಒಂದು ದುರಂತ ಸಂಭವಿಸಿ ಮೂರು ಯುವಕರ ಹೆಣಗಳು ನೆಲಕ್ಕೆ ಉರುಳಿದವು.

ಅವತ್ತು ಕವಲ್‌ನಲ್ಲಿ ನಿಜವಾಗಲೂ ಏನಾಯಿತು ಎಂಬುದರ ಬಗ್ಗೆ ಇವತ್ತಿಗೂ ಯಾರಲ್ಲೂ ಸ್ಪಷ್ಟತೆ ಇಲ್ಲ. ಹಲವರ ಪ್ರಕಾರ 'ಶಾನವಾಜ್ ಎಂಬ ಮುಸಲ್ಮಾನ್ ಯುವಕ ಓರ್ವ ಜಾಟ್ ಯುವತಿಗೆ ಕಿರುಕುಳ ನೀಡುತ್ತಿದ್ದ. ಇದರಿಂದ ಕೋಪಗೊಂಡ ಆ ಯುವತಿಯ ಸಹೋದರರಾದ ಸಚಿನ್ ಮತ್ತು ಗೌರವ್ ಶಾನವಾಜ್‌ನನ್ನು ಕವಲ್‌ನ ಮುಖ್ಯರಸ್ತೆಯಲ್ಲೇ ತರಾಟೆಗೆ ತೆಗೆದುಕೊಂಡರಲ್ಲದೆ ಆತನನ್ನು ಅಲ್ಲೇ ಕೊಂದು ಹಾಕಿದರು. ತಮ್ಮ ಸಮುದಾಯದ ಓರ್ವನನ್ನು ಹೀಗೆ ಕೊಂದಿದ್ದನ್ನು ಕಂಡ ಮುಸಲ್ಮಾನರು ಆ ಇಬ್ಬರು ಯುವಕರ ಮೇಲೆ ಮುಗಿಬಿದ್ದು ಅವರಿಬ್ಬರನ್ನೂ ಸ್ಥಳದಲ್ಲೇ ಕೊಂದುಹಾಕಿದರು.'

ಆದರೆ ಇತರರ ಪ್ರಕಾರ 'ಸಚಿನ್ ಮತ್ತು ಗೌರವ್ ಮುಸಲ್ಮಾನ ಯುವತಿಯೋರ್ವಳಿಗೆ ಕಿರುಕುಳ ನೀಡುತ್ತಿದ್ದರಿಂದ ಶಾನವಾಜ್ ಅವರನ್ನು ವಿಚಾರಣೆಗೆ ಗುರಿಪಡಿಸಿದ. ಆ ಜಗಳದಲ್ಲಿ ಸಚಿನ್ ಮತ್ತು ಗೌರವ್ ಶಾನವಾಜ್‌ನನ್ನು ಕೊಂದುಹಾಕಿದರು. ಇದನ್ನು ಕಂಡು ಕೋಪಗೊಂಡ ಮುಸಲ್ಮಾನರು ಆ ಇಬ್ಬರು ಹಿಂದೂ ಯುವಕರನ್ನು ಸ್ಥಳದಲ್ಲೇ ಸಾಯಿಸಿದರು.'

ಇನ್ನೂ ಕೆಲವರ ಪ್ರಕಾರ 'ಈ ಪ್ರಕರಣದಲ್ಲಿ ಯಾವ ಯುವತಿಯ ಪ್ರಸ್ತಾಪವೂ ಇಲ್ಲದೆ ಅವತ್ತು ಕವಲ್‌ನ ರಸ್ತೆಯಲ್ಲಿ ಶಾನವಾಜ್ ತನ್ನ ಬೈಕಿನಲ್ಲಿ ಹೋಗುತ್ತಿದ್ದಾಗ ಸಚಿನ್ ಮತ್ತು ಗೌರವ್ ಹೋಗುತ್ತಿದ್ದ ಬೈಕಿನೊಂದಿಗೆ ಡಿಕ್ಕಿ ಹೊಡೆದು, ಅವರ ನಡುವೆ ಸಣ್ಣ ತಕರಾರು ಪ್ರಾರಂಭವಾಗಿ, ಅದು ಹೊಡೆದಾಟಕ್ಕೆ ತಿರುಗಿ ಅಂತಿಮವಾಗಿ ಮೂವರೂ ಸತ್ತು ಹೋದರು.'





ಈ ಮೂರು ಕತೆಗಳಲ್ಲಿ ಯಾವುದು ಸತ್ಯ ಯಾವುದು ಮಿಥ್ಯ ಎಂಬುದು ಯಾರಿಗೂ ಗೊತ್ತಿಲ್ಲ. ಆದರೂ ಜಾಟ್ ಮತ್ತು ಮುಸಲ್ಮಾನರ ಮಧ್ಯೆ ದಟ್ಟವಾಗುತ್ತಿದ್ದ ಗುಮಾನಿ, ಅಪನಂಬಿಕೆ, ಹೆದರಿಕೆ ಇತ್ಯಾದಿಗಳಿಂದಾಗಿ ಆ ಸಮುದಾಯಗಳ ನಡುವಿನ ಬಿರುಕು ಹೆಚ್ಚಾಗುವಲ್ಲಿ ಈ ಪ್ರಕರಣ ನೆರವಾಯಿತು.

ಇದೇ ಹೊತ್ತಿಗೆ ದಿವಂಗತ ರೈತ ನಾಯಕ ಮಹೇಂದ್ರ ಸಿಂಗ್ ಟಿಕಾಯತ್ ಹುಟ್ಟುಹಾಕಿದ್ದ ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಒಂದು 'ಮಹಾನ್ ಪಂಚಾಯತ್'ಗೆ ಕರೆಕೊಟ್ಟಿತು. ರೈತರ ಹಿತಾಸಕ್ತಿಯನ್ನು ಕಾಪಾಡಲೆಂದೇ ಜನ್ಮ ತಾಳಿದ ಬಿಕೆಯು ಈ ಹಿಂದೆ ಇಂತಹ ಪಂಚಾಯತ್ ಸಭೆಗಳನ್ನು ಕರೆದಿರುವುದರಿಂದ ಅದಕ್ಕೆ ಆಡಳಿತಾಂಗ ಹೆಚ್ಚಿನ ಮಹತ್ವವನ್ನು ನೀಡದಿದ್ದದ್ದೇ ಮುಂದಿನ ದುರಂತಗಳಿಗೆ ನಾಂದಿ ಹಾಡಿತು. ಯಾಕೆಂದರೆ ಈ ಮಹಾನ್ ಪಂಚಾಯತ್‌ನ ಘೋಷ ವಾಕ್ಯವೇ 'ನಿಮ್ಮ ತಾಯಿ, ಮಗಳು, ಸೊಸೆಯಂದಿರನ್ನು ರಕ್ಷಿಸಿ' ಎಂಬುದಾಗಿತ್ತು.

ದುರಂತದ ಸಂಗತಿ ಯಾವುದೆಂದರೆ ಮಹೇಂದ್ರ ಸಿಂಗ್ ಟಿಕಾಯತ್ ಅವರು ಎಲ್ಲ ಸಮುದಾಯಗಳನ್ನು ತಮ್ಮ ಜೊತೆ ಇಟ್ಟುಕೊಳ್ಳುತ್ತಿದ್ದರು. ಈಗ ಅವರ ಪುತ್ರರಾದ ನರೇಶ್ ಮತ್ತು ರಾಕೇಶ್ ಜಾಟ್ ಹಿತಾಸಕ್ತಿಗಳೇ ಮುಖ್ಯವಾಗಿವೆ. ತಮ್ಮ ತಂದೆಗೆ ಇದ್ದಷ್ಟು ಸಾಮಾಜಿಕ ಆಸಕ್ತಿಯಾಗಲಿ, ಬೆಂಬಲವಾಗಲಿ, ರೈತರ ಬಗೆಗಿನ ಕಾಳಜಿಯಾಗಲಿ ಇವರಿಬ್ಬರಿಗೂ ಇಲ್ಲ. ಆದರೂ ಅವರ ಮಹತ್ವಾಕಾಂಕ್ಷೆಗೆ ಮಿತಿ ಇಲ್ಲ. ತಮ್ಮ ಅಸ್ತಿತ್ವವನ್ನು ಸಾಬೀತುಪಡಿಸಲು ತಿಣುಕಾಡುತ್ತಿರುವ ಅವರಿಬ್ಬರೂ ಇತ್ತೀಚಿಗೆ ಬಿಜೆಪಿ ಜೊತೆ ಸೇರಿದರೆ ತಮಗೆಷ್ಟು ಲಾಭ ಎಂಬ ಲೆಕ್ಕಾಚಾರದಲ್ಲಿ ತೊಡಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರಿಬ್ಬರಿಗೂ ಬಿಜೆಪಿ ಪ್ರಚೋದಿತ 'ಮುಸಲ್ಮಾನರಿಂದ ಜಾಟ್ ಮಹಿಳೆಯರ ರಕ್ಷಣೆ' ಎಂಬುದು ಸೂಕ್ತವಾಗಿ ಕಂಡಿದ್ದರಲ್ಲಿ ಅಚ್ಚರಿ ಇಲ್ಲ. ಇತ್ತ ಜಾಟ್ ಸಮುದಾಯವನ್ನು ರಕ್ಷಿಸಿದಂತೆಯೂ ಆಗುತ್ತದೆ, ಅತ್ತ ನರಹಂತಕ ನರೇಂದ್ರ ಮೋದಿಯ ನೇತೃತ್ವದ ಎನ್‌ಡಿಎ ಸರ್ಕಾರ ದೆಹಲಿಯಲ್ಲಿ ನಾಳೆ ಅಧಿಕಾರಕ್ಕೆ ಬಂದರೆ ತಮಗೂ ಸ್ಥಾನಮಾನ ಸಿಗುತ್ತದೆ ಎಂಬ ತಂತ್ರದೊಂದಿಗೇ ಅವರು ಈ ಸೆಪ್ಟೆಂಬರ್ 7ರಂದು ಮಹಾನ್ ಪಂಚಾಯತ್‌ಗೆ ಕರೆ ಕೊಟ್ಟಿದ್ದರು.

ಟಿಕಾಯತ್ ಪುತ್ರರು ಕರೆದಿದ್ದ ಈ ಪಂಚಾಯತ್ ಸಭೆಯಲ್ಲಿ ಬಿಜೆಪಿ ಮತ್ತು ಆರೆಸ್ಸೆಸ್ಸಿನ ಸದಸ್ಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಜೊತೆಗೆ ಅಲ್ಲಿಗೆ ಬಂದಿದ್ದ ಜನರು ಲಾಠಿ, ಲಾಂಗು, ಮಚ್ಚುಗಳನ್ನೂ ತಂದಿದ್ದರು. ಸಂಗೀತ್ ಸೋಮ್ ಎಂಬ ಬಿಜೆಪಿ ಶಾಸಕ ಮತ್ತು ಸಾಧ್ವಿ ಪ್ರಾಚಿ ಎಂಬ ವಿಶ್ವಹಿಂದೂ ಪರಿಷತ್ತಿನ ನಾಯಕಿ ಆ ಸಭೆಯಲ್ಲಿ ಭಾಗವಹಿಸಿದರಲ್ಲದೆ ಅಂದು ಮುಸಲ್ಮಾನರ ವಿರುದ್ಧ ಅವರಿಬ್ಬರೂ ಕೆಂಡಕಾರಿದರು. ನರಹಂತಕ ನರೇಂದ್ರ ಮೋದಿಗೆ ಜೈಕಾರ ಚೀರುತ್ತಾ, ಮುಸಲ್ಮಾನರನ್ನು ಅವಹೇಳನ ಮಾಡುತ್ತಾ ಅವತ್ತಿನ ಸಭೆ ಬರಕಾಸ್ತುಗೊಂಡಿತು. ಮಾತ್ರವಲ್ಲ ಅಲ್ಲಿಂದಲೇ ಕೋಮುಗಲಭೆ ಪ್ರಾರಂಭವಾಯಿತು.

ಅಷ್ಟರ ಹೊತ್ತಿಗೆ ಅವತ್ತಿನ ಸಭೆಯಲ್ಲಿ ಭಾಗವಹಿಸಿದ್ದ ಸಂಗೀತ್ ಸೋಮ್ ಅಂತರಜಾಲದ ಹಲವು ತಾಣಗಳಲ್ಲಿ ಒಂದು ದೃಶ್ಯವನ್ನು ಬಿಡುಗಡೆ ಮಾಡಿದ್ದ. ಆ ದೃಶ್ಯ ಭೀಕರವಾಗಿತ್ತು. ಸೋಮ್ ಪ್ರಕಾರ ಆ ದೃಶ್ಯಗಳು ಕೆಲವೇ ದಿನಗಳ ಹಿಂದೆ ಕಾವಲ್‌ನಲ್ಲಿ ಸಚಿನ್ ಮತ್ತು ಗೌರವ್ ಎಂಬ ಜಾಟ್ ಯುವಕರನ್ನು ಮುಸಲ್ಮಾನರು ಎಷ್ಟು ಭಯಂಕರವಾಗಿ ಕೊಂದು ಹಾಕಿದ್ದರು ಎಂಬುದನ್ನು ಕುರಿತದ್ದಾಗಿತ್ತು. ಸಹಜವಾಗಿಯೇ ಆ ದೃಶ್ಯ ಜಾಟ್ ಯುವಕರಲ್ಲಿ ಮುಸಲ್ಮಾನರ ವಿರುದ್ಧ ಆಕ್ರೋಶ ಹೆಪ್ಪುಗಟ್ಟುವಂತೆ ಮಾಡಿತು.

(ವಾಸ್ತವವಾಗಿ ಸೋಮ್ ಅಂತರಜಾಲದಲ್ಲಿ ಬಿಡುಗಡೆ ಮಾಡಿದ್ದ ದೃಶ್ಯಗಳು ಭಾರತಕ್ಕೆ ಸಂಬಂಧಿಸಿದ್ದೇ ಆಗಿರಲಿಲ್ಲ. ಬದಲಾಗಿ ಅವು ಎರಡು ವರ್ಷಗಳ ಹಿಂದೆ ಪಾಕಿಸ್ತಾನದ ಸಿಯಾಲ್‌ಕೋಟ್ ಎಂಬಲ್ಲಿ ಹಾಡುಹಗಲೇ ನಡೆದ ಕೊಲೆಗಳ ದೃಶ್ಯಾವಳಿಯಾಗಿತ್ತು. ಆದರೆ ಒಂದು ಸುಳ್ಳನ್ನೇ ಸಾವಿರ ಬಾರಿ ಹೇಳುವ ಮೂಲಕ ಅದನ್ನು ಸತ್ಯ ಎಂದು ಬಿಂಬಿಸುವ ಬಿಜೆಪಿ ಸಿದ್ಧಾಂತಕ್ಕೆ ಸೇರಿರುವ ಸೋಮ್ ಅದನ್ನೇ ಉತ್ತರ ಪ್ರದೇಶದ ಕಾವಲ್‌ನಲ್ಲಿ ನಡೆದದ್ದು ಎಂದು ಬೇಕಂತಲೇ ಬಿಂಬಿಸಿದ್ದ.)

ಆ ಭೀಭತ್ಸ ದೃಶ್ಯಾವಳಿ, ಬಿಜೆಪಿಯ ಚೆಡ್ಡಿಗಳ ಕೆಂಡಕಾರುವ ಭಾಷಣ, ಟಿಕಾಯತ್ ಸಹೋದರರ ಮಸಲತ್ತು, ನರೇಂದ್ರ ಮೋದಿ ಬಗೆಗಿನ ಅಮಲು... ಇವೆಲ್ಲವನ್ನೂ ತಲೆಗೆ ಏರಿಸಿಕೊಂಡು ಸಭೆಯಿಂದ ಹೊರಟ ಜನಸಮೂಹ 'ಪ್ರತೀಕಾರ'ಕ್ಕೆ ತವಕಿಸುತ್ತಿತ್ತು. ಅದಕ್ಕೆ ಮೊದಲು ಬಲಿಯಾದನೇ ಅವತ್ತಿನ ಸಭೆಯನ್ನು ತನ್ನ ವೀಡಿಯೋ ಕ್ಯಾಮರಾದಲ್ಲಿ ಸೆರೆಹಿಡಿಯಲು ಪೊಲೀಸರು ಬಾಡಿಗೆ ಆಧಾರದ ಮೇಲೆ ಕರೆದಿದ್ದ ಅಮಾಯಕ ಇಸ್ರಾರ್ ಎಂಬ ಮುಸಲ್ಮಾನರ ವೀಡಿಯೋಗ್ರಾಫರ್.

ಆ ಕ್ಷಣ ಶುರುವಾದ ಮಾರಣಹೋಮ ಮುಜಾಫರ್‌ನಗರವನ್ನಲ್ಲದೆ ಅಕ್ಕಪಕ್ಕದ ಜಿಲ್ಲೆಗಳಿಗೂ ಹಬ್ಬಿತು. ಕೇವಲ 36 ಗಂಟೆಗಳಲ್ಲಿ ಜಾಟ್ ಮತ್ತು ಮುಸಲ್ಮಾನ ಸಮುದಾಯಗಳಿಗೆ ಸೇರಿದ 38 ಜನ ಸಾವಿಗೀಡಾದರು (ಇದು ಉತ್ತರ ಪ್ರದೇಶದ ಸರ್ಕಾರ ನೀಡಿರುವ ಅಂಕಿಅಂಶಗಳು. ಆದರೆ ಸ್ವತಂತ್ರ ಸತ್ಯ ಶೋಧನಾ ತಂಡಗಳ ಪ್ರಕಾರ ಸಾವನ್ನಪ್ಪಿದವರ ಸಂಖ್ಯೆ 50ಕ್ಕಿಂತಲೂ ಮೇಲು. ಮಾತ್ರವಲ್ಲ, ಸತ್ತವರಲ್ಲಿ ಮುಸಲ್ಮಾನರೇ ಅಧಿಕ. ಹಾಗೆಯೇ ಈ ಕೋಮುಗಲಭೆಯಿಂದಾಗಿ ನಿರಾಶ್ರಿತರಾದವರ ಸಂಖ್ಯೆ ಸರ್ಕಾರದ ಪ್ರಕಾರ 25,000 ವಾದರೆ ಸತ್ಯ ಶೋಧನಾ ತಂಡಗಳ ಪ್ರಕಾರ 50,000 ಕ್ಕಿಂತಲೂ ಹೆಚ್ಚು).

ಅಮಾಯಕರು ಕೊಲೆಯಾಗುತ್ತಿದ್ದರೂ, ತಮ್ಮ ಮನೆಗಳನ್ನು ತೊರೆದು ರಕ್ಷಣೆಗಾಗಿ ಓಡುತ್ತಿದ್ದರೂ ರಕ್ತಪಿಪಾಸು ಬಿಜೆಪಿ ನಾಯಕರಿಗೆ ನೆಮ್ಮದಿಯಾಗಲಿಲ್ಲ. ಸುಳ್ಳುಗಳನ್ನು ಬೊಗಳುವ ತಮ್ಮ ಚಾಳಿಯನ್ನು ಲಂಗುಲಗಾಮಿಲ್ಲದೆ ಮುಂದುವರೆಸಿದರು. ಇದಕ್ಕೆ ಒಂದೆರಡು ಉದಾಹರಣೆಗಳು ಹೀಗಿವೆ:

ಸೆಪ್ಟೆಂಬರ್ 8ರಂದು 'ದೈನಿಕ್ ಜಾಗರಣ್' ಎಂಬ ಜನಪ್ರಿಯ ಹಿಂದಿ ಪತ್ರಿಕೆ 'ಮಹಾನ್ ಪಂಚಾಯತ್‌ನಿಂದ ಹಿಂತಿರುಗುತ್ತಿದ್ದ ಇಬ್ಬರ ಕೊಲೆ' ಎಂಬ ಶೀರ್ಷಿಕೆಯಡಿ ಒಂದು ವರದಿಯನ್ನು ಪ್ರಕಟಿಸಿತ್ತು. ಅದನ್ನು ಸ್ಕ್ಯಾನ್ ಮಾಡಿದ ಚೆಡ್ಡಿಗಳು ಅದಕ್ಕೆ 'ಮುಜಾಫರ್‌ನಗರದಲ್ಲಿ ಮುಸಲ್ಮಾನರ ಭಯೋತ್ಪಾದನೆ, ಬೆದರಿರುವ ಹಿಂದೂಗಳು' ಎಂಬ ಹೊಸ ಟೈಟಲ್ ಕೊಟ್ಟು ಅಂತರಜಾಲದಲ್ಲಿ ಬಿತ್ತರಿಸಿದರು. ಹಾಗೆಯೇ ಮಾರನೆ ದಿನ ಅದೇ 'ದೈನಿಕ್ ಜಾಗರಣ್' ಪತ್ರಿಕೆಯಲ್ಲಿ 'ಗಲಭೆಕೋರರನ್ನು ಗುಂಡಿಟ್ಟು ಕೊಲ್ಲುವ ಆದೇಶ' ಎಂಬ ಶ್ರೀರ್ಷಿಕೆಯಡಿ ಪ್ರಕಟಗೊಂಡ ವರದಿಗೆ 'ಮುಸಲ್ಮಾನರಿಂದ ಹಿಂದೂಗಳ ಮಾರಣಹೋಮ' ಎಂಬ ಹೊಸ ಶೀರ್ಷಿಕೆಯನ್ನು ನೀಡಿ ಬಿತ್ತರಿಸಿತು. ಸಹಜವಾಗಿಯೇ ಇವು ಕೋಮುಗಲಭೆಯನ್ನು ತೀವ್ರಗೊಳಿಸುವಲ್ಲಿ, ಎರಡೂ ಸಮುದಾಯಗಳ ನಡುವೆ ಸಂಶಯವನ್ನು ಹೆಚ್ಚಿಸುವಲ್ಲಿ ಅಮಾಯಕರ ಸಾವಿಗೆ ಕಾರಣವಾದವು.

ಇಲ್ಲಿಯತನಕ ಹೇಳಿರುವುದರಲ್ಲಿ ಕೋಮುವಾದಿ ಬಿಜೆಪಿ ತನ್ನ ರಾಜಕೀಯ ಹಿತಾಸಕ್ತಿಗಾಗಿ ಏನನ್ನು ಬೇಕಾದರೂ ಮಾಡಲೂ ಸಿದ್ಧ ಎಂಬುದು ಮತ್ತೊಮ್ಮೆ ನಮ್ಮ ಓದುಗರಿಗೆ ಸಾಬೀತಾಗಿದೆ ಎಂದು ಭಾವಿಸಿದ್ದೇನೆ. ಆದರೆ ಇದರಲ್ಲಿ ಇತರೆ ರಾಜಕೀಯ ಪಕ್ಷಗಳ ಪಾತ್ರವೇನು ಎಂದು ನೋಡುವುದು ಮುಖ್ಯವೆನಿಸುತ್ತದೆ.

ಮುಂದಿನ ವರ್ಷ ಲೋಕಸಭೆಗೆ ಚುನಾವಣೆಗಳು ನಡೆಯಲಿವೆ. ಆಗ ದೆಹಲಿಯಲ್ಲಿ ಯಾವ ಮೈತ್ರಿಕೂಟ ಅಧಿಕಾರ ಹಿಡಿಯಲಿದೆ ಎಂಬುದನ್ನು ನಿರ್ಧರಿಸುವಲ್ಲಿ ಉತ್ತರ ಪ್ರದೇಶದ ಫಲಿತಾಂಶ ಮುಖ್ಯವಾಗುತ್ತದೆ. ಯಾಕೆಂದರೆ ಆ ರಾಜ್ಯ 80 ಲೋಕಸಭಾ ಕ್ಷೇತ್ರಗಳನ್ನು ಒಳಗೊಂಡಿದೆ. ಇವತ್ತು ನಮ್ಮ ದೇಶದಲ್ಲಿರುವ ರಾಜಕೀಯ ಪಕ್ಷಗಳು ಹೇಳಿಕೊಳ್ಳುವಂತಹ ಸಾಧನೆಗಳು ಮಾಡಿರುವುದಿಲ್ಲ

▶▶ 04

ಯಾರ್ದೋ ದುಡ್ಡು, ಚೆಡ್ಡಿಗಳ ಘುಡ್ಡು

ಜಾಹಿರಾತಿಗೆ ಸರ್ಕಾರ ಖರ್ಚು ಮಾಡಿದ್ದು 85 ಕೋಟಿ

ದಕ್ಷಿಣ ಭಾರತದಲ್ಲೇ ಪ್ರಥಮ ಬಾರಿಗೆ ಅಧಿಕಾರಕ್ಕೆ ಬಂದಿದ್ದ ಬಿಜೆಪಿಗಳ ಸಾಧನೆ ಏನು?

ಈ ಪ್ರಶ್ನೆಗೆ ವಿಧಾನಸಭಾ ಚುನಾವಣೆಯಲ್ಲಿ ಜನ ಆದಾಗಲೆ ಉತ್ತರ ನೀಡಿದ್ದಾರೆ. ಅದಕ್ಕೂ ಮೀರಿ ಇಂತಹದ್ದೊಂದು ಪ್ರಶ್ನೆಗೆ ಉತ್ತರ ಹುಡುಕೇ ತೀರುತ್ತೇವೆ ಅಂತ ಹೊರಟರೆ ಎದುರಾಗೋದು ಗಣಿ ಹಗರಣ,



ಡಿನೋಟಿಫಿಕೇಷನ್, ಲಂಚಾವತಾರ, ರೇಪ್ ಪುರಾಣ, ಜೈಲೂಟ, ರೆಸಾರ್ಟ್ ದೊಂಬರಾಟಗಳಂತ ಹೈಡ್ರಾಮಾಗಳೆ. 'ಇದು ನಮ್ಮ ಸಾಧನೆ' ಅಂತ ಹೇಳಿಕೊಳ್ಳಲು ಖುದ್ದು ಬಿಜೆಪಿಗರಿಗೇ ಸಾಧ್ಯವಾಗೋದು ಬೆರಳೆಣಿಕೆಯಷ್ಟು ಕಾರ್ಯಗಳು ಮಾತ್ರ. ಆದರೂ ಐದು ವರ್ಷದ ಅಧಿಕಾರಾವಧಿಯಲ್ಲಿ ತಮ್ಮ ಘನಂದಾರಿ ಕೆಲಸಗಳ ಜಾಹಿರಾತಿಗೆಂದು ಬಿಜೆಪಿ ಸರ್ಕಾರ ಖರ್ಚು ಮಾಡಿದ್ದು ಬರೋಬ್ಬರಿ 85 ಕೋಟಿ ರೂಪಾಯಿಯನ್ನು!

ಹಾಗೆ ನೋಡಿದರೆ ಯಡ್ಡಿ ಪಟ್ಟಾಭಿಷೇಕದಿಂದ ಹಿಡಿದು ಶೆಟ್ಟರ್ ಪೀಠತ್ಯಾಗದವರೆಗೂ ಬಿಜೆಪಿಯ ಆಂತರಿಕ ಅಪರಾ-ತಪರಾಗಳು ಹೇಗಿದ್ದುವೆಂದರೆ ಬೇಡ-ಬೇಡವೆಂದರೂ ದಿನನಿತ್ಯ ಪ್ರತಿ ಪತ್ರಿಕೆಯ ಮುಖಪುಟದಲ್ಲು ಇವರದೇ ಸುದ್ದಿ ರಾರಾಜಿಸಿ ಪುಕ್ಕಟೆ ಪ್ರಚಾರ ಲಭಿಸುತ್ತಿತ್ತು. ಹೀಗೆ ಕರ್ನಾಟಕದ ಜನತೆಗೆ ಐದು ವರ್ಷ ಪುಕ್ಕಟೆ ಮನರಂಜನೆ ನೀಡುವುದರಲ್ಲೇ ಬ್ಯುಸಿಯಾಗಿದ್ದ ಬಿಜೆಪಿ ಸರ್ಕಾರ 85 ಕೋಟಿ ಖರ್ಚು ಮಾಡಿ ಪ್ರಚಾರ ಮಾಡಿಕೊಳ್ಳುವಂತಹ ಅದಿನ್ಯಾವ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತಂದಿತ್ತೆನ್ನುವ ಅನುಮಾನ ಸಹಜವಾಗಿಯೇ ಮೂಡುತ್ತದೆ. ಇದನ್ನು ಬಗೆಹರಿಸಿಕೊಳ್ಳುವ ಸಲುವಾಗಿ 2008ರಿಂದ 2013ರವರೆಗಿನ ರಾಜ್ಯ ಸರ್ಕಾರದ ಜಾಹಿರಾತು ಬಾಬ್ತುಗಳ ದಾಖಲೆಗಳನ್ನು ತಿರುವಿ ಹಾಕಿದರೆ ಸಾರ್ವಜನಿಕರ ಹಣ ಲೂಟಿ ಮಾಡಲು ಬಿಜೆಪಿ ಸರ್ಕಾರದ ಭ್ರಷ್ಟ ವ್ಯವಸ್ಥೆ Adjustment ಮಾಡಿಕೊಂಡಿರುವುದು ಸಾಬೀತಾಗುತ್ತದೆ. ಜನರಿಗೆ ಪರಿಚಿತವೂ ಇಲ್ಲದ, ಪ್ರಸರಣ ಸಂಖ್ಯೆಯೂ ಇಲ್ಲದ 'ಕಾಂಜಿ-ಪಿಂಜಿ' ಪತ್ರಿಕೆಗಳಿಗೆಲ್ಲ ಸರ್ಕಾರದ ಜಾಹಿರಾತುಗಳನ್ನು ನಿರಂತರವಾಗಿ ನೀಡುತ್ತಾ ಬೊಕ್ಕಸವನ್ನು ಬರಿದು ಮಾಡಿದ್ದಾರೆ.

ಈ ಬಗ್ಗೆ ಬೆಳಗಾಂನ ಕಾಂಗ್ರೆಸ್ ನಾಯಕ ಭೀಮಪ್ಪ ಗುಂಡಪ್ಪ ಗಡದ್ ಎಂಬುವರು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದಿರುವ ಕೆಲವು ಅಂಕಿಅಂಶಗಳು ಮೀಡಿಯಾ ಜಾಹೀರಾತು ಲಾಬಿಯ ಮುಖವಾಡವನ್ನು ಬಿಡಿಸಿಡುತ್ತವೆ.

ಆಡು ಮುಟ್ಟದ ಸೊಪ್ಪಿಲ್ಲ-ಬಿಜೆಪಿ ಮುಕ್ಕದ ಇಲಾಖೆ ಇಲ್ಲ

ಪ್ರತಿ ಇಲಾಖೆಯ ಭ್ರಷ್ಟಾಚಾರದಲ್ಲೂ 'ಗಿನ್ನಿಸ್ ದಾಖಲೆ' ಮಾಡಿ ಮನೆ ಸೇರಿಕೊಂಡಿರುವ ಬಿಜೆಪಿ ಕಡೇಪಕ್ಷ ವಾರ್ತಾ ಇಲಾಖೆಯನ್ನೂ ಬಿಟ್ಟಿಲ್ಲವೆನ್ನುವುದು ಇದರಿಂದ ಸಾಬೀತಾಗುತ್ತದೆ. ಸರ್ಕಾರದ ಯೋಜನೆ, ಕಾರ್ಯಕ್ರಮಗಳ ಬಗ್ಗೆ ರಾಜ್ಯದ ಪ್ರತಿಯೊಬ್ಬ ಸಾಮಾನ್ಯ ಪ್ರಜೆಗೂ ವಿಷಯ ಮುಟ್ಟಿಸಿ ಮನವರಿಕೆ ಮಾಡಿಕೊಡುವುದು ವಾರ್ತಾ ಇಲಾಖೆಯ ಜವಾಬ್ದಾರಿ. ಇದಕ್ಕಾಗಿ ಪತ್ರಿಕೆಗಳಲ್ಲಿ ಸರ್ಕಾರದ ಜಾಹಿರಾತುಗಳನ್ನು ನೀಡಲಾಗುತ್ತದೆ. ಹಾಗೆ ನೀಡುವಾಗ ಪತ್ರಿಕೆಯ ಪ್ರಸರಣ ಸಂಖ್ಯೆ ಜನಸಾಮಾನ್ಯರಿಗೆ ಪತ್ರಿಕೆ Reacability ಮೊದಲಾದವುಗಳನ್ನು ಗಮನಿಸಬೇಕಿರುವುದು ಅವಶ್ಯ. ಈ ನಿಟ್ಟಿನಲ್ಲಿ ಪಟ್ಟಿ ಮಾಡಿದರೆ ರಾಜ್ಯದಲ್ಲಿ ಮೂವತ್ತಕ್ಕಿಂತ ಹೆಚ್ಚು ಪತ್ರಿಕೆಗಳು ಸರ್ಕಾರದ ಜಾಹಿರಾತು ಪಡೆಯಲು ಅರ್ಹವೇ ಇರುವುದಿಲ್ಲ. ಆದರೆ ಬಿಜೆಪಿ ಸರ್ಕಾರ ಒಟ್ಟು 909 ವಿವಿಧ ಪತ್ರಿಕೆಗಳಿಗೆ ಜಾಹಿರಾತು ಹಂಚಿದೆ.

ತನ್ನ ಮೊದಲ ವರ್ಷ ಬಿಜೆಪಿ ಸರ್ಕಾರ ಜಾಹಿರಾತಿಗಾಗಿ ಖರ್ಚು ಮಾಡಿದ್ದು 17 ಕೋಟಿ ರೂಪಾಯಿಯನ್ನು, ಆನಂತರ 2009ರಲ್ಲಿ 12 ಕೋಟಿ, 2010ರಲ್ಲಿ 20 ಕೋಟಿ, 2011ರಲ್ಲಿ 16 ಕೋಟಿ, 2012-13ರಲ್ಲಿ 18



ಕೋಟಿ ಹೀಗೆ ತೆರಿಗೆದಾರರ ಹಣ ಖಾಲಿ ಮಾಡಿತ್ತು. ಇನ್ನು ಪ್ರಮುಖ ಪತ್ರಿಕೆಗಳಿಗೆ ಬಿಜೆಪಿ ಜಾಹಿರಾತಿನಿಂದ ಹರಿದುಹೋದ ಮೊತ್ತವೂ ಭಯಂಕರವಾಗಿದೆ. ಈ ಐದು ವರ್ಷದಲ್ಲಿ ಪ್ರಜಾವಾಣಿ ಪತ್ರಿಕೆಗೆ 9.34 ಕೋಟಿ, ವಿಜಯ ಕರ್ನಾಟಕ ಪತ್ರಿಕೆಗೆ 9.15 ಕೋಟಿ, ಕನ್ನಡ ಪ್ರಭ ಪತ್ರಿಕೆಗೆ 5.84 ಕೋಟಿ, ಉದಯವಾಣಿಗೆ 5.54 ಕೋಟಿ, ಸಂಯುಕ್ತ ಕರ್ನಾಟಕ ಪತ್ರಿಕೆಗೆ 4.67 ಕೋಟಿ, ಡೆಲ್ಲಿ ವಾರ್ತೆ ಪತ್ರಿಕೆಗೆ 4.04 ಕೋಟಿ, ಡೆಕ್ಕನ್ ಹೆರಾಲ್ಡ್‌ಗೆ 3.25 ಕೋಟಿ, ದಿ ಹಿಂದೂ ಪತ್ರಿಕೆಗೆ 2.96 ಕೋಟಿ, ಹೊಸ ದಿಗಂತ ಪತ್ರಿಕೆಗೆ 2.88 ಕೋಟಿ ರೂಪಾಯಿ ಲಭಿಸಿದೆ.

ತೂಕಡಿಸುವ ಅಧಿಕಾರಿಗಳಿಗೆ ಬಿಜೆಪಿ ಸರ್ಕಾರ ಹಾಸಿ ಕೊಟ್ಟಂತಿತ್ತು. ವಾರ್ತಾ ಇಲಾಖೆಯಲ್ಲಿ ಬಿಜೆಪಿ ಸಾಕಿಕೊಂಡಿದ್ದ ಭ್ರಷ್ಟ ವ್ಯವಸ್ಥೆ ಹೇಗಿತ್ತೆಂದರೆ ಕೇವಲ ಜಾಹಿರಾತು ದೋಚುವ ಉದ್ದೇಶದಿಂದ ತಮ್ಮ ಚೇಲಾಗಳೊ, ಸಂಬಂಧಿಕರೋ ನಡೆಸುತ್ತಿರುವ ಪತ್ರಿಕೆಗಳಿಗೆ ಜಾಹಿರಾತನ್ನು ನೀಡಲಾಗಿದೆ. ಸುಮಾರಷ್ಟು ಪತ್ರಿಕೆಗಳ ಹೆಸರು ಗಮನಿಸಿದರೆ ಜಾಹಿರಾತಿನ ಬಿಲ್ ಪಾಸ್ ಮಾಡಿಸಿಕೊಳ್ಳಲಿಕ್ಕೋಸ್ಕರವೇ ಪತ್ರಿಕೆಯನ್ನು ತೆರೆದಂತಿದೆ. ಅಲ್ಲದೆ ಕರ್ನಾಟಕದಲ್ಲಿ ಪ್ರಸರಣವಿರುವ ಬೇರೆ ಬೇರೆ ಭಾಷೆಯ ಪತ್ರಿಕೆಗಳಿಗೆ ಜಾಹಿರಾತು ನೀಡಿದರೆ ಅದರಲ್ಲಿ ಅರ್ಥವಿದೆ. ಯಾಕೆಂದರೆ ಕರ್ನಾಟಕದಲ್ಲಿರುವ ಬೇರೆ ಭಾಷಿಕರಿಗೂ ಸರ್ಕಾರದ ಯೋಜನೆಗಳ ಮಾಹಿ[...] ತಲುಪಿಸುವ ಉದ್ದೇಶವಿರಬಹುದು. ಆದರೆ ಕರ್ನಾಟಕದಿ[...] ಹೊರಗೆ ಮುದ್ರಣ ಕಂಡು, ಅಲ್ಲಿಯೇ ಪ್ರಸರಣವಾಗು[...] ಹತ್ತಾರು ಪತ್ರಿಕೆಗಳಿಗೂ ಲಕ್ಷಾಂತರ ಜಾಹಿರಾತು ನೀಡಿದ[...] ಅಲ್ಲದೆ ರಾಷ್ಟ್ರೀಯ ಮಟ್ಟದ ಪತ್ರಿಕೆಗಳಲ್ಲಿ ಕೇವಲ ಕರ್ನಾ[...] 'ಎಡಿಷನ್' (ಆವೃತ್ತಿ)ಗೆ ಜಾಹಿರಾತು ನೀಡುವ ಬದ[...] ಬೇಕಾಬಿಟ್ಟಿಯಾಗಿ 'ಆಲ್ ಎಡಿಷನ್' (ದೇಶಾದ್ಯ[...] ಪ್ರಸರಣವಾಗುವ)ಗೂ ಜಾಹಿರಾತು ನೀಡಿದ್ದರು. ಇ[...] ಜಿಲ್ಲಾವಾರು ಪತ್ರಿಕೆಗಳಿಗೆ ಜಾಹಿರಾತು ನೀಡುವಾಗ[...] ಸ್ಥಳೀಯ ರಾಜಕೀಯ ಲಾಭವನ್ನು ಲೆಕ್ಕಾಚಾರ ಹ[...] ಪತ್ರಿಕೆಗಳ ಪ್ರಸರಣ ಸಂಖ್ಯೆ ಗಮನಿಸದೆ ಆರ್ಡರ್ ಪಾ[...] ಮಾಡಲಾಗಿದೆ.

ಸಾರ್ವಜನಿಕರ ಹಣವನ್ನು ಜಾಹಿರಾತಿನ ಹೆಸ[...] ಪೋಲು ಮಾಡಿ ಬೊಕ್ಕಸವನ್ನು ಸಂಕಷ್ಟಕ್ಕೆ ತಳ್ಳಿದ ಬಿ[...] ಸರ್ಕಾರ ತೊಲಗಿರಬಹುದು, ಆದರೆ ವಾ[...] ಇಲಾಖೆಯೊಳಗೆ ಅವರು ಮಾಡಿಟ್ಟಿರುವ ಭ್ರಷ್ಟ ಅಧಿಕಾರಿ[...] ಕೂಟ ಈಗಲೂ ಕಾರ್ಯೋನ್ಮುಖವಾಗಿದೆ. ಹೊಸ ಸರ್ಕಾ[...] ಕೂಡಲೇ ಈ ಕೂಟಕ್ಕೆ ಸರ್ಜರಿ ಮಾಡಿ ಸರಿಪಡಿಸದಿ[...] ಬಿಜೆಪಿಯ ಕೆಸರು ಕೈಗಳು ಕಾಂಗ್ರೆಸ್ ಸರ್ಕಾ[...] ಮುಸುಡಿಗೂ ಜಾಹಿರಾತು ರಾಡಿ ಬಳಿಯುವುದ[...] ಅಚ್ಚರಿಯಿಲ್ಲ.

ಈ ಜಾಹಿರಾತು ಮಾಫಿಯಾ ಹೇಗೆ ಕೆಲಸ ಮಾಡು[...] ಎನ್ನಲು ಬೇಕಾದಷ್ಟು ಸಾಕ್ಷಿಗಳಿವೆ. ದೆಹಲಿ ವಾ[...] ಬೆಂಗಳೂರು ಎಂಬ ಪತ್ರಿಕೆಗೆ ಒಟ್ಟು ನಾಲ್ಕು ಕೋ[...] ರೂಪಾಯಿಗಳಷ್ಟು ಜಾಹಿರಾತು ಹಣ ಪಾವತಿಸಲಾಗಿ[...] ಅದೇ ರೀತಿ ಯಾರಿಗೂ ಗೊತ್ತಿರದ 'ದಿವ್ಯ ಭಾ[...] ಎಂಬ ಪತ್ರಿಕೆಗೆ 55 ಲಕ್ಷ ರೂಪಾಯಿಗಳ ಜಾಹಿರಾ[...] ಕೊಡಲಾಗಿದೆ. ಬೆಂಗಳೂರಿನ ದೆಹಲಿ ವಾರ್ತೆ ಪತ್ರಿ[...] ಒಟ್ಟು 1.10 ಕೋಟಿ ರೂ.ವನ್ನು ನೀರಿನಂತೆ ಹರಿಸಲಾಗಿ[...]

ವಾರ್ತಾ ಸಚಿವ ಸಂತೋಷ್ ಲಾಡ್‌ರವರು ಇಲಾಖೆ[...] ಈ ಹುಚ್ಚು ದರ್ಬಾರ್ ಬಗ್ಗೆ ನಿಗಾ ಇಡಬೇಕಿದೆ.

ಆರ್‌ಎಸ್‌ಎಸ್‌ನ ಮುಖ್ಯವಾಣಿಯಾಗಿರುವ ಹೊ[...] ದಿಗಂತ ದಿನಪತ್ರಿಕೆಗೆ 2.88 ಕೋಟಿ ರೂಪಾ[...] ಜಾಹಿರಾತನ್ನು ಈ ಹಿಂದಿನ ಬಿಜೆಪಿ ಸರ್ಕಾರ ನೀಡಿ[...]

ಈಗಿನ ಕಾಂಗ್ರೆಸ್ ಸರ್ಕಾರ ಕನಿಷ್ಠ ಪಕ್ಷ ಆರ್‌ಎಸ್‌ಎ[...] ಕೋಮುವಾದಿ ಪತ್ರಿಕೆಗಳಿಗಾದರೂ ಸರ್ಕಾರಿ [...] ನೀಡುವುದನ್ನು ನಿಲ್ಲಿಸಲಿ.

● ಗಿರೀಶ್ ತಾಳಿಕ[...]

03 ⏮ ಕಂಡಹಾಗೆ...

ವಾದ್ದರಿಂದ ಜಾತಿ, ಧರ್ಮದಂತಹ ವಿಷಯಗಳನ್ನೇ ಆಧರಿಸಿ ಚುನಾವಣೆಗಳನ್ನು ಎದುರಿಸಲು ಲೆಕ್ಕ ಹಾಕುತ್ತಿರುತ್ತವೆ. ಅಂತಹ ಲೆಕ್ಕಾಚಾರಗಳೇ ಉತ್ತರ ಪ್ರದೇಶದಲ್ಲಿ ಸಂಭವಿಸಿರುವ ಕೋಮುಗಲಭೆಯ ಹಿಂದಿವೆ.

ಉದಾಹರಣೆಗೆ ಸಮಾಜವಾದಿ ಪಕ್ಷವನ್ನೇ ತೆಗೆದುಕೊಳ್ಳಿ, ಕಳೆದ ವರ್ಷ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಸರ್ಕಾರ ತನ್ನ ಗೂಂಡಾ ಸಂಸ್ಕೃತಿಯಿಂದ ಈಗ ಎಂತಹ ಕೆಟ್ಟ ಹೆಸರು ಗಳಿಸಿದೆ ಎಂದರೆ ಅದಕ್ಕೀಗ ಅತ್ತ ಜಾಟ್ ಸಮುದಾಯದ ಬೆಂಬಲವೂ ಇಲ್ಲ, ಇತ್ತ ಮುಸಲ್ಮಾನರ ನೆರವೂ ಇಲ್ಲ ಎಂಬಂತಾಗಿದೆ. ಆದರೂ ಎಸ್‌ಪಿಯ ಮುಖ್ಯಸ್ಥ ಮುಲಾಯಮ್ ಸಿಂಗ್ ಯಾದವ್‌ಗೆ ಪ್ರಧಾನಿ ಆಗುವ ಕನಸು. ಇತ್ತೀಚೆಗೆ ಉತ್ತರ ಪ್ರದೇಶದ ಮುಸಲ್ಮಾನರು ಮಾಯಾವತಿಯ ಬಿಎಸ್‌ಪಿ ಮತ್ತು ಕಾಂಗ್ರೆಸ್ ಪಕ್ಷದತ್ತ ಒಲವು ತೋರುತ್ತಿದ್ದರಿಂದ ಹೇಗಾದರೂ ಮಾಡಿ ಮತ್ತೆ ಮುಸಲ್ಮಾನರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಎಸ್‌ಪಿ ಹವಣಿಸುತ್ತಿತ್ತು.

ಈಗ ಕೆಲವರು ಹೇಳುತ್ತಿರುವ ಪ್ರಕಾರ ಮುಜಾಫರ್ ನಗರದ ಕೋಮು ಗಲಭೆಗೆ ಮುಖ್ಯ ಕಾರಣ ಬಿಜೆಪಿಯೊಂದಿಗೆ ಎಸ್‌ಪಿ ಮಾಡಿಕೊಂಡ 'ಮ್ಯಾಚ್ ಫಿಕ್ಸಿಂಗ್'. ಯಾಕೆಂದರೆ ಬಿಜೆಪಿಗೆ ಗೊತ್ತು ತನಗೆ ಶತಾಯಗತಾಯ ಮುಂದಿನ ಲೋಕಸಭೆ ಚುನಾವಣೆಯಲ್ಲಿ ಮುಸಲ್ಮಾನರ ಓಟುಗಳು ಬರುವುದಿಲ್ಲವೆಂದು. ಹಾಗೆಯೇ "ನಮ್ಮನ್ನು ಬೆಂಬಲಿಸದಿದ್ದರೆ ನಿಮಗೆಂತಹ ಸ್ಥಿತಿ ಕಾದಿದೆ ನೋಡಿ" ಎಂದು ಮುಸಲ್ಮಾನ ಸಮುದಾಯವನ್ನು ಎಚ್ಚರಿಸುವ ಮೂಲಕ ಅವರನ್ನು ತನ್ನ ಪರ ಇಟ್ಟುಕೊಳ್ಳಲು ಎಸ್‌ಪಿ ಹವಣಿಸುತ್ತಿತ್ತು. ಈ ಹಿನ್ನೆಲೆಯಲ್ಲಿ ಜಾಟ್ ಮತ್ತು ಮುಸಲ್ಮಾನರ ನಡುವೆ ಕೋಮುಗಲಭೆಗಳು ನಡೆದರೆ ಎರಡೂ ಪಕ್ಷಗಳು ತಮ್ಮ ಓಟ್‌ಬ್ಯಾಂಕ್ ಅನ್ನು ಸ್ಥಿರಪಡಿಸಿಕೊಳ್ಳಲು ನೆರವಾಗುತ್ತದೆ. ಇಂತಹ ಒಂದು 'ಒಳಒಪ್ಪಂದ'ದಿಂದಾಗಿಯೇ ಗಲಭೆ ಶುರುವಾಗುವ ಎಲ್ಲ ಸೂಚನೆಗಳಿದ್ದರೂ ಎಸ್‌ಪಿ ಸರ್ಕಾರ ಏನನ್ನೂ ಮಾಡದೆ ನಿಷ್ಕ್ರಿಯವಾಗಿತ್ತು. ಈ ಗಲಭೆಗಳಿಗೆ ಸಂಬಂಧಿಸಿದಂತೆ ಪೊಲೀಸರು ಹಲವಾರು ಬಿಜೆಪಿ ನಾಯಕರ ವಿರುದ್ಧ ದೂರುಗಳನ್ನು ದಾಖಲಿಸಿದ್ದರೂ ಇಲ್ಲಿಯತನಕ ಅಖಿಲೇಶ್ ಸರ್ಕಾರ ಯಾವ ಚೆಡ್ಡಿ ನಾಯಕನನ್ನೂ ಬಂಧಿಸಿಲ್ಲದಿರುವುದೂ ಈ 'ಗುಪ್ತ ಒಪ್ಪಂದ'ಕ್ಕೆ ಸಾಕ್ಷಿ ನುಡಿಯುತ್ತಿರುವಂತಿದೆ.

ಇನ್ನು ಕಾಂಗ್ರೆಸ್ ಪಕ್ಷವೂ ಈ ಗಲಭೆಯ ರಾಡಿಯಲ್ಲಿ ಓಟ್ ಬ್ಯಾಂಕ್ ರಾಜಕೀಯ ಮಾಡಲು ಪ್ರಯತ್ನಿಸುತ್ತಿದೆ. ಗಲಭೆ ನಡೆದ ಮುಜಾಫರ್‌ನಗರಕ್ಕೆ ಭೇಟಿ ನೀಡಿದ ಪ್ರಧಾನಿ ಮನಮೋಹನ್ ಸಿಂಗ್ ಮತ್ತು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹೆಲಿಪ್ಯಾಡ್ ಹತ್ತಿರವೇ ಸ್ಥಳೀಯ ಅಧಿಕಾರಿಗಳೊಂದಿಗೆ ಒಂದು ಸಭೆಯನ್ನು ಜಾಟ್ ಮತ್ತು ಮುಸಲ್ಮಾನರನ್ನು ಓಲೈಸುವ ಯತ್ನ ಮಾಡಿದೆ.

ಮಾಯಾವತಿಯ ಬಿಎಸ್‌ಪಿ ತಾನು ಯಾವ ನಿಲುವು ತೆಗೆದುಕೊಂಡರೆ ತನಗೆ ಹೆಚ್ಚಿನ ಜನಬೆಂಬಲ ಸಿಗುತ್ತದೆ ಎಂದು ಮೀನಾಮೇಷ ಎಣಿಸುತ್ತಿರುವುದರಿಂದ ಆ ಪಕ್ಷದ ಯಾವ ಜನ ನಾಯಕನೂ ಮುಜಾಫರ್‌ನಗರದತ್ತ ಸುಳಿದಿಲ್ಲ. ತಾನೇನೇ ಮಾಡಿದರೂ ಇದರಲ್ಲಿ ತನಗೇನೂ ಗಿಟ್ಟುವುದಿಲ್ಲ ಎಂದು ಅರಿತಿರುವ ಅಜಿತ್ ಸಿಂಗ್ ನೇತೃತ್ವದ ಆರ್‌ಜೆಡಿ ತೆಪ್ಪಗೆ ಕೂತಿದೆ.



ನಿರಾಶ್ರಿತರ ಶಿಬಿರದಲ್ಲಿರುವ ಜನ

... ಒಟ್ಟಾರೆಯಾಗಿ ನಮ್ಮ ದೇಶದ ರಾಜಕೀಯ ಪ[...] ಇಂತಹ ಕಪಟ ಲೆಕ್ಕಾಚಾರಗಳಿಂದಾಗಿ ಇ[...] ಮುಜಾಫರ್‌ನಗರ ಎಂಬ ಜಿಲ್ಲೆಯ ಎಲ್ಲಾ ಸಮುದಾ[...] ಜನರ ಭಯಭೀತರಾಗಿ ಬದುಕುವಂತಾಗಿದೆ. ಹಲ[...] ಹಳ್ಳಿಗಳಿಂದ ಮುಸಲ್ಮಾನರನ್ನು ಓಡಿಸಿರುವ ಜಾ[...] ಸಮುದಾಯದ ಯುವಕರೂ ಈಗ ಬಂಧನ[...] ಎದುರಿಸಬೇಕಾಗುತ್ತದೆ ಎಂದು ಹೆದರಿ ಬೇರೆ ಊರು[...] ತಲೆ ಮರೆಸಿಕೊಂಡಿದ್ದಾರೆ. ಪರಿಣಾಮವಾಗಿ ಬಹ[...] ಹಳ್ಳಿಗಳಲ್ಲಿ ಸ್ಮಶಾನ ಮೌನ ಆವರಿಸಿದೆ.


ಇಲ್ಲಿಯ ತನಕ 'ಸಿಹಿ ಸಕ್ಕರೆ ಜಿಲ್ಲೆ' ಎ[...] ಕರೆಯಲ್ಪಡುತ್ತಿದ್ದ ಮುಜಾಫರ್‌ನಗರ ಇವತ್ತು ಬಿಜೆ[...] ಕುಚೋದ್ಯದಿಂದ, ಎಸ್‌ಪಿಯ ಕುತಂತ್ರದಿಂದ ಕೋಮ[...] ಹರಿಸುತ್ತಿರುವ ಪ್ರದೇಶ ಎಂದು ಕುಖ್ಯಾತಿ ಪಡೆದಿದ[...]

ಇದು ನಮ್ಮ ರಾಜಕೀಯ ಪಕ್ಷಗಳ ನಿಜ ಮುಖ[...] ತೋರುತ್ತದೆ ಮಾತ್ರವಲ್ಲ, ನರಹಂತಕ ನರೇಂದ್ರ ಮೋ[...] ಯನ್ನು ಪ್ರಧಾನಿ ಕುರ್ಚಿಯಲ್ಲಿ ಕೂರಿಸಲು ಕೋಮು[...] ಚೆಡ್ಡಿಗಳು ಎಂತಹ ಕ್ರೌರ್ಯಕ್ಕೂ ಇಳಿಯಬ[...] ಎಂಬುದನ್ನು ಮತ್ತೊಮ್ಮೆ ಜನರ ಮುಂದೆ ಸಾಬೀತಾಗಿ[...]

(ಮಾಹಿತಿ ಆಧಾರ ಮಾನವ ಹಕ್ಕು ಹೋರಾಟ[...] ಹರ್ಷ್ ಮಂದರ್, ಬಾರ್ಡರ್ ಸೆಕ್ಯೂರಿಟಿ ಫೋ[...] ಮಾಜಿ ಡೈರೆಕ್ಟರ್ ಜನರಲ್ ಈ.ಎನ್.ರಾಮ್‌ಮೋ[...] ಜವಾಹರ್‌ಲಾಲ್ ವಿಶ್ವವಿದ್ಯಾಲಯದ ಪ್ರೊಫೆಸರ್ ಕ[...] ಮಿತ್ರ ಚಿನಾಯ್, ನ್ಯಾಷನಲ್ ಇಂಟಿಗ್ರೇಷನ್ ಕೌ[...] ಸದಸ್ಯ ಜಾನ್ ದಯಾಲ್, ಹಿರಿಯ ಪತ್ರಕರ್ತ[...] ಸುಕುಮಾರ್ ಮುರಳೀಧರನ್ ಮತ್ತು ಸೀಮಾ ಮು[...] ಅವರಿದ್ದ ಸತ್ಯಶೋಧನಾ ತಂಡದ ವರದಿ ಮತ್ತು ಮಾಧ್ಯಮ ವರದಿಗಳು)



ಮಂಗಳೂರು: ಅಂಡರ್‌ವರ್ಲ್ಡ್ ಅಧಿಪತ್ಯಕ್ಕಾಗಿ ರವಿಪೂಜಾರಿ-ವಿಕ್ಕಿ ಕತ್ತಿ ವರಸೆ!!



ಮಂಗಳೂರಿನ ಹೈಟೆಕ್ ಪಾಪಿ ಪ್ರಪಂಚ ...ದೋಕುಳಿಗಾಗಿ ತಹತಹಿಸುತ್ತಿದೆ! ಕರಾವಳಿ ಮೂಲದ ...ನ್ವಯರಾದ ರವಿ ಪೂಜಾರಿ ಮತ್ತು ವಿಕ್ಕಿ ಶೆಟ್ಟಿ ...ಂಗಳೂರು ಅಂಡರ್‌ವರ್ಲ್ಡ್‌ನ ಅಧಿಪತಿಗಳಾಗುವ ...ಜಿದ್ದಿಗೆ ಬಿದ್ದಿದ್ದಾರೆ. ಈ ಭೂಗತ ಭೂಪರ ಗ್ಯಾಂಗ್‌ಗಳು ...ಗೊಳಗೇ ಕತ್ತಿ ಮಸೆಯುತ್ತ ಗನ್‌ಗಳಿಗೆ ಗುಂಡು ...ಬುತ್ತ ಪರಸ್ಪರ ಸ್ಕೆಚ್ ಹಾಕುತ್ತಿವೆ. ಕಡಲತಡಿಯ ...ಫಿಯಾ ಬಳಗದ ಅಲಿಖಿತ ಸಿದ್ಧಾಂತವೇ ಅಂಥದ್ದು; ...ಂಗಳೂರು ಭೂಗತ ಲೋಕವನ್ನು ಹಿಡಿತಕ್ಕೆ ...ಪಡಿಸಿಕೊಂಡರೆ ತಂತಾನೆ ಬೆಂಗಳೂರು ಅಂಡರ್‌ವರ್ಲ್ಡ್ ...ವಾಗುತ್ತದೆಂಬ ನಿಯಮ. ಬನ್ನಂಜೆ ರಾಜಾ, ಹೇಮಂತ ...ಜಾರಿ, ನಿಖಿಲ್ ಶೆಟ್ಟಿ, ಕೊರಗ ವಿಶ್ವನಾಥ ಶೆಟ್ಟಿ, ರವಿ ...ಜಾರಿ... ಮುಂತಾದ 'ಉಪ್ಪು ನೀರು' ಕುಡಿದು ಬೆಳೆದ ...ಗತ ದೊರೆಗಳು ಮಂಗಳೂರನ್ನು ಸುಲಿಗೆ ಸಾಮ್ರಾಜ್ಯ ...ಡಿಕೊಳ್ಳಲು ಕಳೆದೊಂದು ದಶಕದಿಂದ ಹವಣಿಸುತ್ತಲೇ ...ದ್ದಾರೆ.

... ದೋ ನಂಬರ್ ರಿಯಲ್ ಎಸ್ಟೇಟ್, ...ದರು, ತೊಗಲು ದಂಧೆಗಳೆಲ್ಲ ಹುಲುಸಾಗಿ ...ಳೆದಿರುವ ಮಂಗಳೂರಿನ ಪಾಪಿಲೋಕದ ...ರಾಕ್ರಮಿ ಎಂದೆನಿಸಿಕೊಳ್ಳಲು ಈಗ ...ಲಿಯಾದಲ್ಲಿ ತಲೆ ಮರೆಸಿಕೊಂಡಿರುವ ಡಾನ್ ... ಶೆಟ್ಟಿ ಯಾನೆ ವಿಜಯ್ ಶೆಟ್ಟಿ ಯಾನೆ ...ಲಕೃಷ್ಣ ಶೆಟ್ಟಿ ಅಖಾಡಕ್ಕಿಳಿದು ಗುಟುರು ...ಕತೊಡಗಿದ್ದಾನೆ. ಮತ್ತೊಬ್ಬ ಖತರ್‌ನಾಕ್ ...ಗತ ದೊರೆ ರವಿ ಪೂಜಾರಿಯೇ ಈತನ ...ರಾಳಿ. ಕಳೆದ ಆಗಸ್ಟ್ 2ರಂದು ತರಹೇವಾರಿ ...ಧೆಗಳಿಂದ ಕಳ್ಳ ಕುಬೇರನಾಗಿರುವ ...ಯೇಂದ್ರ ಭಟ್‌ನ ಕೊಲ್ಲುವ ವಿಫಲ ಯತ್ನ ...ಯಿತಲ್ಲ, ಆಗ ವಿಕ್ಕಿ ಶೆಟ್ಟಿ ಮಂಗಳೂರು ...ಗತ ರಾಜನಾಗುವ ಕಾರ್ಯಾಚರಣೆ ನಡೆಸಿರುವುದು ...ತಕ ಮತ್ತು ಪೊಲೀಸ್ ಲೋಕಕ್ಕೆರಡಕ್ಕೂ ಖಾತ್ರಿಯಾಗಿ ...ಗಿದೆ! ತನ್ನ ಬಲಗೈ ಭಂಟನಾಗಿದ್ದ ಬಿಜ್ಜೈ ರಾಜಾನ ...ಲೆಗೆ ಪ್ರತೀಕಾರವಾಗಿ ಈ ಹತ್ಯಾಪ್ರಯತ್ನ ಮಾಡಿದ್ದೇನೆಂದು ...ದ್ದು ವಿಕ್ಕಿ ಶೆಟ್ಟಿಯೇ ಅಬ್ಬರಿಸಿದ್ದಾನೆ. ಅಷ್ಟೇ ಅಲ್ಲ, ...ಮು ಭಟ್‌ಗೆ ಎಚ್ಚರಿಕೆ; ಮುಂದಾತ ಸಾಯಲು ...ದ್ಧನಾಗಬೇಕೆಂದೂ ಚೊಬ್ಬರಿಸಿದ್ದಾನೆ...

... ಟ್ರಾವೆಲ್ಸ್ ಏಜೆನ್ಸಿಯ ಪ್ರಶಾಂತನನ್ನು ಮುಗಿಸಿದ ಬೆನ್ನಿಗೇ ...ಕಾರಿನ ಮೇಲೆ ಗುಂಡಿನ ದಾಳಿಯಾಗಿದೆ. ಕೂದಲೆಳೆ ...ತರದಲ್ಲಿ ಭಟ್ ಬದುಕುಳಿದಿದ್ದಾನೆ. ಬಿಜ್ಜೈ ರಾಜ ಹೇಗೆ ... ಶೆಟ್ಟಿಯ ಆಜ್ಞಾನುಧಾರಿ ಹಫ್ತಾ ವಸೂಲಿಗಾರ, ...ರಿಸುವ ಫಂಟರ್ ಆಗಿದ್ದನೋ ಹಾಗೆ ಪಾಂಡು ಪೈ ...ಬ ನಟೋರಿಯಸ್ ರೌಡಿ ಭೂಗತ ಪಾತಕಿ ರವಿ ...ಜಾರಿಯ ಆತ್ಮೀಯ ಶಿಷ್ಯನಾಗಿದ್ದ. ಒಂದು ಕಾಲದಲ್ಲಿ ...ಜೈ ರಾಜಾ ಅಲಿಯಾಸ್ ಶೈಲೇಶ್ ಮತ್ತು ಮಂಗಳೂರಿನ ...ಬೀದಿಯ ಕೊಂಕಣಿಗರ ಪೋರ ಪಾಂಡು ಪೈ-ಪರಮ ...ರಾಗಿದ್ದರು. ರವಿ ಪೂಜಾರಿ ಯಾವಾಗ ಬಿಜ್ಜೈ ರಾಜಾನ ...ರ ಮಾಡಿ ಪಾಂಡು ಪೈನನ್ನು ತನ್ನ ಹಫ್ತಾ ಪ್ರತಿನಿಧಿಯಾಗಿ ...ಮಿಸಿಕೊಂಡನೋ ಆಗಾತ ಕೆರಳಿ ವಿಕ್ಕಿ ಪಡೆ ...ಸಿಕೊಂಡಿದ್ದ!

... ಪಾಂಡು ಪೈ ಅಂತಿಂಥ ರೌಡಿಯಾಗಿರಲಿಲ್ಲ, ಆತನ ...ಬಾಹು ಮಂಗಳೂರಿನಾಚೆಗೂ ವ್ಯಾಪಿಸಿತ್ತು, ಅಂತಾರಾಜ್ಯ ... ಆತನಿಗಿತ್ತು, ಪಾಂಡು ಪೈ ಅದ್ಯಾವ ಥರ ...ಲೀಸರಿಗೆ ತಲೆನೋವಾಗಿದ್ದನೆಂದರೆ, ಆತನ ನಕಲಿ ...ಕೌಂಟರ್‌ನಿಂದ ಕೊಂದು ಹಾಕುವ ಯೋಚನೆಯೂ ... ಟೀಮು ಹಾಕಿಕೊಂಡಿತ್ತು! ರವಿ ಪೂಜಾರಿಯ ...ಟಕ ಮಟ್ಟದ ಅಷ್ಟೂ ವ್ಯವಹಾರ ಈ ಪಾಂಡುವೇ ...ಯುತ್ತ ಆತನ ಅಚ್ಚುಮೆಚ್ಚಿನ ಸಹಚರನಾಗಿ ಹೋಗಿದ್ದ. ...ದು ಬಗೆಗಿನ ದ್ವೇಷ ಬಿಜ್ಜೈ ರಾಜಾನ ಹೊಟ್ಟೆಯಲ್ಲಿ ...ಗೇ ಇತ್ತು, ಆದರೆ ಗೆಳೆಯನಂತೆ ನಟಿಸುತ್ತಿದ್ದ, ಇದು ...ದುಗೆ ಗೊತ್ತಾಗಲೇ ಇಲ್ಲ, ಸ್ನೇಹಿತನಾಗಿದ್ದುಕೊಂಡೇ ... ರಾಜಾ 2009ರ ಮೇ ತಿಂಗಳಿನ ಒಂದು ದಿನ ...ಗಪುರದಲ್ಲಿ ಪಾಂಡುನನ್ನು ಕೊಂದೆಸೆದು ಬಿಡುತ್ತಾನೆ. ...ಪಾತಕನಿಗೆ ಬಾಸ್ ವಿಕ್ಕಿ ಶೆಟ್ಟಿಯ ಸಕಲ ಸಹಕಾರ ಸಿಗುತ್ತದೆ!

ಮಂಗಳೂರು-ಬೆಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ತನ್ನ ಚಾಣಾಕ್ಷ ಪ್ರತಿನಿಧಿಯಂತಿದ್ದ ಪಾಂಡುನ ಅವಸಾನದಿಂದ ಆತನ ಗುರು ರವಿ ಪೂಜಾರಿ ಕೊತಕೊತ ಕುದಿಯಲಾರಂಭಿಸುತ್ತಾನೆ! ಪಾಂಡುನೊಂದಿಗೆ ಪೂಜಾರಿಯ ಸಕಲ ಮಂಗಳೂರು ಲಿಂಕುಗಳು ಖತಮ್ ಆಗುತ್ತವೆ. ಆಗವನ ಕೆಂಗಣ್ಣು ಬಿಜ್ಜೈ ರಾಜಾನ ಮೇಲೆ ಬೀಳುತ್ತದೆ. ಆತನ ತಲೆ ತೆಗೆವ ಶಪಥ ಮಾಡುತ್ತಾನೆ. ಮಂಗಳೂರು ಭೂಗತ ಲೋಕಕ್ಕೆ ಮೆಸೇಜ್ ಒಂದನ್ನು ಕಳಿಸುವ ಪೂಜಾರಿ- ರಾಜಾನ ಹೆಣ ಉರುಳಿಸದೇ ಬಿಡಲಾರೆನೆಂದು ಹೇಳುತ್ತಾನೆ! ರವಿ ಪೂಜಾರಿ ಮುಯ್ಯಿ ತೀರಿಕೆಗೆ ಸಮಯ ಸಾಧಿಸುತ್ತಲೇ ಇರುತ್ತಾನೆ. ಆದರೆ ರಾಜಾನ ತಂಟೆಗೆ ಹೋಗಲು ರವಿಗೆ ಅದ್ಯಾಕೋ ವರ್ಷಗಳುರುಳಿದರೂ ಮುಹೂರ್ತ ಮಾತ್ರ ಸಿಗುತ್ತಲೇ ಇಲ್ಲ. ಇದರಿಂದ ರಾಜಾನಲ್ಲಿ ಧೈರ್ಯ ಮೂಡುತ್ತದೆ. ವಿಕ್ಕಿ ಶೆಟ್ಟಿಯಂಥ ರಕ್ಷಕನಿರುವಾಗ ಅಷ್ಟು ಸುಲಭಕ್ಕೆ ತನ್ನ ಉಸಾಬರಿಗೆ ಪೂಜಾರಿ ಬರಲಿಕ್ಕಿಲ್ಲವೆಂಬ ಹುಂಬತನ ಬೆಳೆಸಿಕೊಳ್ಳುತ್ತಾನೆ.

ಇದೇ ಸಂದರ್ಭದಲ್ಲಿ ಮಂಗಳೂರಿನಲ್ಲಿ ರಿಯಲ್ ಎಸ್ಟೇಟ್, ಬಿಲ್ಡರ್ಸ್ ಮಾಫಿಯಾ ಜಬರ್ದಸ್ತಾಗಿ ಬೆಳೆಯುತ್ತದೆ. ಬಿಜ್ಜೈ ರಾಜಾ ರಿಯಲ್ ಎಸ್ಟೇಟ್ ಉದ್ಯಮಿಗಳಿಂದ ವಸೂಲಿ ಮಾಡುವುದರ ಜತೆಜತೆಗೇ ತಾನೂ ಭೂವ್ಯವಹಾರ ಕುದುರಿಸತೊಡಗಿದ್ದ! ದೊಡ್ಡ ಮಟ್ಟದ ಹಣಕಾಸಿನ ವ್ಯವಹಾರ ನಡೆಸುತ್ತಿದ್ದ. ದಂಧೆ ಮದದಲ್ಲಿ ವೈರಿ ರವಿ ಪೂಜಾರಿಯ ವಾರ್ನಿಂಗ್ ಆತ ಮರೆತೇಬಿಟ್ಟಿದ್ದ. ಇದನ್ನೇ ಕಾಯುತ್ತಿದ್ದ ಪೂಜಾರಿ ಪಠಾಲಂ ಕಳೆದ ವರ್ಷದ ಡಿಸೆಂಬರ್ ತಿಂಗಳ ಮೊದಲ ದಿನವೇ ಬಿಜ್ಜೈ ರಾಜಾನ ಕೊಂದು ಹಾಕುತ್ತದೆ. ರವಿ ಪೂಜಾರಿ ಮಂಗಳೂರು ಮಟ್ಟದಲ್ಲೇ ರಾಜಾನ ಹತ್ಯೆ ಫಂಡ್ ಒಟ್ಟುಗೂಡಿಸಿ ಪ್ರದೀಪ್ ಮೆಂಡನ್ ಎಂಬ ಹಂತಕನಿಗೆ ಕೊಟ್ಟಿರುತ್ತಾನೆ.

ತನ್ನ ನಂಬಿಗಸ್ಥ ಸಹಚರನನ್ನು ಎದುರಾಳಿ ಪಡೆ ಕೊಂದಾಗ ಡಾನ್ ವಿಕ್ಕಿ ಶೆಟ್ಟಿ ಸುಮ್ಮನಿರಲು ಸಾಧ್ಯವಾ? "ಬಿಜ್ಜೈ ರಾಜಾನ ಕೊಂದವರನ್ನಷ್ಟೇ ಅಲ್ಲ, ಕೊಲೆಗೆ ಫೈನಾನ್ಸ್ ಮಾಡಿದ ಯಾರನ್ನೂ ಜೀವಸಹಿತ ಉಳಿಸಲಾರೆ..." ಎಂದಾತ ಸಾಲಿಡ್ ಸಂದೇಶವನ್ನು ಮಂಗಳೂರು ಪಾತಕ ಪ್ರಪಂಚಕ್ಕೆ ರವಾನಿಸುತ್ತಾನೆ. ತಕ್ಷಣಕ್ಕೆ ಆತನಿಗೆ ಸಿಕ್ಕಿದ ಬಲಿ ಟ್ರಾವೆಲ್ಸ್ ಏಜೆನ್ಸಿಯ ಪ್ರಶಾಂತ್. ಆತ ಬಿಜ್ಜೈ ರಾಜಾನ ಕೊಲೆ ಮಾಡಿದವರಿಗೆ ಹಣಕಾಸಿನ ನೆರವು ನೀಡಿದ್ದನೆಂದು ಅನುಮಾನ ವಿಕ್ಕಿಗೆ ಬಂದಿತ್ತು, ಹಾಗೆಯೇ ಫ್ಲೋರ್ ಮಿಲ್-ರಿಯಲ್ ಎಸ್ಟೇಟ್-ಹೋಟೇಲ್ ಹೀಗೆ ವಿವಿಧ ಬಿಸಿನೆಸ್ ಮನ್ ವಿಜಯೇಂದ್ರ ಭಟ್‌ನ ಕೊಲೆಗೂ ಪೂಜಾರಿ ಕರಾರುವಾಕ್ಕಾದ ಸ್ಕೆಚ್ ಹಾಕುತ್ತಾನೆ; ಆದರೆ ಸ್ವಲ್ಪದರಲ್ಲೇ ಗುರಿ ಮಿಸ್ ಆಗಿದೆ. ಆದರೆ ಭಟ್‌ಗೆ ಖಾತ್ರಿ ಅಂತೂ ತಪ್ಪಿದ್ದಲ್ಲ ಎಂಬುದು ಭೂಗತ ಲೋಕದ ಲೆಕ್ಕಾಚಾರ.

ಪ್ರಶಾಂತ್ ಕೊಲೆಯಿಂದ ಬಿಜ್ಜೈ ರಾಜಾ ಹತ್ಯೆಯ ಸೇಡು ಚುಕ್ತಾ ಆಯಿತೆಂದು ಭಾವಿಸಿದ್ದ ಪೊಲೀಸರಿಗೂ ಈಗ ನಿದ್ದೆಯಿಲ್ಲದ ದಿನಗಳು...


ತನ್ನವರನ್ನು ಒಬ್ಬೊಬ್ಬರನ್ನಾಗಿ ಹುಡುಕಿ ಹತ್ಯೆಗೆ ಹವಣಿಸುತ್ತಿರುವ ವಿಕ್ಕಿ ಶೆಟ್ಟಿಯ ಉಪದ್ರವ ಆತನ ಎದುರಾಳಿ ಡಾನ್ ರವಿ ಪೂಜಾರಿಯನ್ನು ಅಲರ್ಟ್ ಮಾಡಿದೆ. ಆತ ಗಾಯಗೊಂಡ ಸರ್ಪದಂತೆ ಬುಸುಗುಡುತ್ತಿದ್ದಾನೆ. ಮಂಗಳೂರಷ್ಟೇ ಅಲ್ಲ, ಬೆಂಗಳೂರು ಮತ್ತಿತರೆಡೆ ರವಿ ಪೂಜಾರಿಯ ದೊಡ್ಡ ಪಡೆಯೇ ಇದೆ. ಬೆಂಗಳೂರಿನ ಪೊಲೀಸರು ಆತ ಒಂದಿಷ್ಟು ಸಹಚರರನ್ನು ಪರಪ್ಪನ ಅಗ್ರಹಾರ ಜೈಲಿಗೆ ಅಟ್ಟಿದ್ದಾರೆ. ಆದರೂ ಆತನ ಶಕ್ತಿ ಕಡಿಮೆಯೇನಾಗಿಲ್ಲ. ಇದು ಮಂಗಳೂರು ವಿಕ್ಕಿ V/s ಪೂಜಾರಿ ಗ್ಯಾಂಗ್‌ವಾರ್‌ಗೆ ಅಖಾಡ ಆಗುವ ಆತಂಕ ಮೂಡಿಸಿದೆ. ಅಸ್ತಿತ್ವದ ಭಯದಿಂದ ಕಂಗೆಟ್ಟಿರುವ ಪೂಜಾರಿ ಅಷ್ಟು ಸಲೀಸಾಗಿ ತನ್ನ ಭೂಗತ ಸಾಮ್ರಾಜ್ಯ ವೈರಿ ವಿಕ್ಕಿ ಶೆಟ್ಟಿಗೆ ಬಿಟ್ಟು ಕೊಡುವುದಂತೂ ಇಲ್ಲ. ಸದ್ಯಕ್ಕಾಗಿ ಸುಮ್ಮನಿರುವಂತೆ ನಟಿಸುತ್ತಿದ್ದಾನೆ. ಸಂದರ್ಭ ಸಿಕ್ಕಾಗ ವಿಕ್ಕಿ ಪಡೆಗೆ ನೆತ್ತರಿನ ಉತ್ತರ ಆತ ಕೊಡದೇ ಬಿಡಲಾರ. ಕೊಲ್ಲಿಸಿದವನು ಕೊಲೆಯಾಗಲೇಬೇಕೆಂಬ ಭೂಗತ ಲೋಕದ ನೀತಿ ರವಿ ಪೂಜಾರಿ ಪಡೆಯನ್ನು ವಿಕ್ಕಿ ಬಂಟರ ಬೇಟೆಗೆ ಇಳಿಸದೇ ಬಿಟ್ಟೀತಾ?

ವಿಕ್ಕಿ ಶೆಟ್ಟಿ ಮತ್ತು ರವಿ ಪೂಜಾರಿ ಇಬ್ಬರೂ ಬಲಾಢ್ಯರೇ. ಆದರೆ ಈಗಿನ ಪರಿಸ್ಥಿತಿಯಲ್ಲಿ ರವಿ ಪೂಜಾರಿಗೆ ಇರುವಂಥ ಪ್ರಬಲ ನೆಟ್‌ವರ್ಕ್ ವಿಕ್ಕಿ ಶೆಟ್ಟಿಯ ಬಳಿಯಿಲ್ಲ, ಇದೇ ಅಂತಿಮ ಎಂದೇನೂ ಹೇಳಲಿಕ್ಕಾಗದು ಭೂಗತ ಲೋಕದಲ್ಲಿ ಯಾರು ಯಾವಾಗ ಡಾನ್ ಆಗುತ್ತಾರೆ, ಡಾನ್ ಯಾವಾಗ ಡುಮ್ಮಿ ಹೊಡೆಯುತ್ತಾನೆಂದು ಹೇಳಲಾಗದು. ಇಲ್ಲಿ ಏನಿದ್ದರೂ ದುಡ್ಡಿನದ್ದೇ ಆಟ! ತನ್ನ ಸಹಚರ ಬಿಜ್ಜೈ ರಾಜಾನ ತಲೆ ತೆಗೆದವರ ಸಾಲಾಗಿ ಮುಗಿಸಲು ವಿಕ್ಕಿ ಶೆಟ್ಟಿಯೇನೋ ಸರ್ವ ಸನ್ನದ್ಧನಾಗಿರಬಹುದು. ಆದರೆ ಅದಕ್ಕೆ ಪಾತಕಿ ರವಿ ಪೂಜಾರಿ ಅವಕಾಶ ಕೊಡಲಾರ. ಏಕೆಂದರೆ ಬಿಜ್ಜೈ ರಾಜಾನ ಕೊಂದವರು ಬಾಸ್ ರವಿ ಪೂಜಾರಿಯ ಆಜ್ಞಾನುಧಾರಿ ಹುಡುಗರು ಅಥವಾ ರವಿ ಪೂಜಾರಿ ಕೃಪಾಕಟಾಕ್ಷದಲ್ಲಿರುವ ಫೈನಾನ್ಷಿಯರ್ ಮತ್ತು ಉದ್ಯಮಿಗಳು.


ರವಿ ಪೂಜಾರಿಯ ಗ್ಯಾಂಗಿನ ಹಲವರು ಜೈಲಿನಲ್ಲಿದ್ದಾರೆ. ಆದರೆ ಜೈಲಲ್ಲಿ ಕುಳಿತೇ ರಕ್ತಪಾತದ ಪ್ಲಾನ್ ಹಾಕಬಲ್ಲ ಅಪಾಯಕಾರಿಗಳಿವರು. ಡಾನ್‌ಗಳಿಬ್ಬರು ಮೇಲಾಟಕ್ಕೆ ಬಿದ್ದರೆ ಅವರ ಅನುಯಾಯಿಗಳು ಗ್ಯಾಂಗ್‌ವಾರ್‌ಗೆ ಇಳಿದೇ ಇಳಿಯುತ್ತಾರೆ. ವಿಕ್ಕಿ ಶೆಟ್ಟಿಯ ಶೂಟ್‌ಔಟ್‌ನಿಂದ ಬಚಾವಾಗಿರುವ ಉದ್ಯಮಿ ವಿಜಯೇಂದ್ರ ಭಟ್ ರವಿ ಪೂಜಾರಿಯ ಖಾಸಾ ಆದ್ಮಿಯಾಗಿದ್ದ ದಿವಂಗತ ರೌಡಿ ಪಾಂಡು ಪೈನ ರಕ್ತ ಸಂಬಂಧಿ. ಇಂಥ ಹಲವು ಕಾರಣದ ಜತೆಗೆ ಭಟ್ ತನ್ನ ಶಿಷ್ಯ ಬಿಜ್ಜೈ ರಾಜಾನ ಕೊಲೆಗೆ ಫೈನಾನ್ಸ್ ಮಾಡಿದ್ದನೆಂಬ ಸಿಟ್ಟಿಂದಲೇ ವಿಕ್ಕಿ ಶೆಟ್ಟಿ ಆತನ ತಲೆಗೆ ಗನ್ ಹಿಡಿದಿರುವುದು. ಈ ಭಟ್ ವೈರಿ ರವಿ ಪೂಜಾರಿಯ ಸಂಪರ್ಕದಲ್ಲಿದ್ದಾನೆಂಬ ಲೆಕ್ಕಾಚಾರವೇನಾದರೂ ವಿಕ್ಕಿ ಶೆಟ್ಟಿಗಿದ್ದರೆ ಮಂಗಳೂರಲ್ಲಿ ಮತ್ತೆ ಗನ್ ಗದ್ದಲ ಗ್ಯಾರಂಟಿ! ವಿಕ್ಕಿ ಮಂಗಳೂರು ಮಾಫಿಯಾ ಲೋಕದ ಅಧಿಪತ್ಯಕ್ಕಾಗಿ ತನ್ನ ಸಹಚರರ ಟಾರ್ಗೆಟ್ ಮಾಡಿಕೊಂಡಿದ್ದಾನೆಂಬುದೂ ರವಿ ಪೂಜಾರಿಗೆ ಖಾತ್ರಿಯಾಗಿದೆ.

ಇದು ಮಂಗಳೂರಲ್ಲಿ ರಕ್ತಪಾತಕ್ಕೆ ನೆಪವಾಯಿತೆಂಬ ಅನುಮಾನ ಪೊಲೀಸರಿಗಷ್ಟೇ ಅಲ್ಲ, ಭೂಗತಲೋಕಕ್ಕೂ ಬರುವಂತೆ ಮಾಡಿದೆ. ವಿಕ್ಕಿ ಶೆಟ್ಟಿ ಪೊಲೀಸ್ 'ಖಬರಿ' ಎಂಬ ಕಾರಣಕ್ಕೆ ಸೇಫಾಗಿದ್ದಾನೆಂಬ ಸಿಟ್ಟೂ ರವಿ ಪೂಜಾರಿಗಿದೆ. ಒಟ್ಟಿನಲ್ಲಿ ಮಂಗಳೂರು ಪಾತಕಲೋಕ ಬಲಿಗಾಗಿ ಹಲ್ಲು ಮಸೆಯುತ್ತಿದೆ. ಯಾರಿಗೆ ಗ್ರಹಚಾರ ಕಾದಿದೆಯೋ?!


● ವರದಿಗಾರ



ಪಾಂಡು ಪೈ




ಬಿಜಯ್ ರಾಜ



ಪ್ರಶಾಂತ್

ಕಾರ್ಪೊರೇಟ್ ಪಾಲಿಟಿಕ್ಸ್ ಶುರು

ಗೆದ್ದ ಮರುಕ್ಷಣವೇ ಬೀದರ್ ಮರೆತ ಖೇಣಿ!



ಕಾಶೆಂಪೂರ್

ಗೆಲ್ಲಿಸಿ ಕಳಿಸಿದ ಮೂರೇ ತಿಂಗಳಿಗೆ ನೈಸ್ ಖೇಣಿಯ ಫೋಟೋ ಕಂಡರೆ ಸಾಕು ಬೀದರ್‌ನ ಮತದಾರರ ಮುಖ ಇಂಗು ತಿಂದ ಮಂಗನಂತಾ ಗುತ್ತದೆ!

ಸಿಕ್ಕಾಪಟ್ಟೆ ಡೆವಲಪ್‌ಮೆಂಟ್ ಮಾಡ್ತೀನಿ, ಪ್ರತಿ ಹಳ್ಳಿಗೂ ಕನಿಷ್ಠ 20 ಮಂದಿಗೆ ಕೆಲಸ ಕೊಡ್ತೀನಿ, ಬೀದರ್ ದಕ್ಷಿಣದ ರಸ್ತೆಗಳನ್ನೆಲ್ಲ ನೈಸ್ ನೈಸಾಗಿ ಮಾಡ್ತೀನಿ, ಬೇಕಾಬಿಟ್ಟಿ ಫ್ಯಾಕ್ಟ್ರಿ ಹಾಕ್ತೀನಿ, ಎಲ್ಲಾ ಮಕ್ಕಳಿಗೂ ಫ್ರೀ ಎಜುಕೇಷನ್ ಕೊಡಿಸ್ತೀನಿ, ಈಗಿರುವ ಸ್ಕೂಲು, ಕಾಲೇಜುಗಳನ್ನೆಲ್ಲ ಅಪ್‌ಗ್ರೇಡ್ ಮಾಡಿ ಕ್ವಾಲಿಟಿ ಎಜುಕೇಷನ್ ಕೊಡ್ತೀನಿ; ಅದು ಮಾಡ್ತೀನಿ, ಇದು ಮಾಡ್ತೀನಿ- ಎಂದೆಲ್ಲ ಭರವಸೆಗಳ ಮಹಾಪೂರವನ್ನೇ ಹರಿಸಿದ ನೈಸ್ ಖದೀಮ ಅಶೋಕ್ ಖೇಣಿ ಬಹುಶಃ ಗೆದ್ದ ಮರುಗಳಿಗೆಗೇ ಗೆಲ್ಲಿಸಿದ ಕ್ಷೇತ್ರ ಮರೆತ ಹಾಗಿದೆ.

ರಾಜಕಾರಣಿಯೊಬ್ಬನ ಕಾರ್ಯವೈಖರಿಗೂ ಕಾರ್ಪೊರೇಟ್ ಬಾಸ್ ಓರ್ವನ ವ್ಯಾವಹಾರಿಕ ತಂತ್ರಗಾರಿಕೆಗೂ ಇರುವ ವ್ಯತ್ಯಾಸಕ್ಕೆ ಪಕ್ಕಾ ಉದಾಹರಣೆ ಅಂತಿದ್ದರೆ ಅದು ಬೀದರ್ ದಕ್ಷಿಣ ಕ್ಷೇತ್ರವಷ್ಟೆ. ಗೆದ್ದು ಶಾಸಕನಾದ ಅಶೋಕ್ ಖೇಣಿಯನ್ನು ಬೀದರ್ ಜನ ಚುನಾವಣೆಯಲ್ಲಿ ಕಂಡಿದ್ದೇ ಕೊನೆ. ಇವತ್ತಿಗೆ ಆತ ಗೆದ್ದು ನೂರಿಪ್ಪತ್ತು ದಿನಗಳಾಗಿರಬೇಕು. ಮೊನ್ನೆ ಸ್ವಾತಂತ್ರ ದಿನಾಚರಣೆಯನ್ನೊಮ್ಮೆ, ಅನಂತರ ಹೈದರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆಯಲ್ಲಿ ಮತ್ತೊಮ್ಮೆ ಖೇಣಿ ಬೀದರಿಗೆ ಎಂದು ಮುಖ ತೋರಿಸಿ ನಾಪತ್ತೆಯಾಗಿದ್ದು ಬಿಟ್ಟರೆ ಜನಕ್ಕೆ ಖೇಣಿಯ ಮುಖ ಕಾಣುವುದೇನಿದ್ದರೂ ಬೀದಿ ಬದಿಯ ವಾಲ್‌ಪೋಸ್ಟರುಗಳಲ್ಲಿ!

ಗೇಟ್‌ಔಟ್... !

ಹಿಂದೆ ಹೈದ್ರಾಬಾದ್ ನಿಜಾಮನನ್ನು ನೋಡಬೇಕಿದ್ದರೆ ಜನ ದೂರದ ಹೈದ್ರಾಬಾದ್‌ಗೆ ಹೇಗೆ ಯಾತ್ರೆ ಹೋಗುತ್ತಿದ್ದರೋ ಹಾಗೆ ಖೇಣಿಯನ್ನರಸಿ ಜನ ಬೆಂಗಳೂರಿಗೆ ಬರಬೇಕು. ಹಾಗೊಮ್ಮೆ ಬೆಂಗಳೂರಿಗೆ ಬಂದರೂ ಅದೃಷ್ಟವಿದ್ದರಷ್ಟೇ ಖೇಣಿಯ ದರ್ಶನ ಸಾಧ್ಯ. ನೈಸ್ ರಸ್ತೆಯ ಖೇಣಿಯ ಕಾರ್ಪೊರೇಟ್ ಆಫೀಸಿನ ಸೆಕ್ಯೂರಿಟಿಗಳಿಗೆ ಬೀದರ್ ಜನರೆಂದರೇನೇ ಅಲರ್ಜಿ. ಬೀದಿನಾಯಿಯನ್ನು ಅಟ್ಟಿದಂತೆ ಬೀದರ್‌ನ ರೈತರನ್ನು ಗೇಟಿನ ಬಳಿ ಕೂಡ ಸುಳಿಯದಂತೆ ಸೆಕ್ಯೂರಿಟಿ ಗಾರ್ಡ್‌ಗಳು ಹೊರದಬ್ಬುತ್ತಾರೆ. ಅದೃಷ್ಟವಿದ್ದರಷ್ಟೇ ಖೇಣಿಯ ದರ್ಶನವಾಗುತ್ತದೆ. ನಾವು ಬೀದರ್ ದಕ್ಷಿಣದ ಮತದಾರರೆಂದು ಏನೇ ಆಣೆ ಪ್ರಮಾಣ ಮಾಡಿದರೂ ಅದನ್ನು ಖೇಣಿ ನಂಬಲಾರ. ಎಲ್ಲಿ ನಿನ್ನ ಓಟರ್ ಐಡಿ? ಇಲ್ಲಿಗ್ಯಾಕೆ ಬಂದೆ? ಬಂದಬಂದವರಿಗೆಲ್ಲಾ ದುಡ್ಡು ಹಂಚೋದಕ್ಕೆ ನಾನೇನು ಖೋಟಾನೋಟು ಪ್ರಿಂಟ್ ಮಾಡ್ತಿದ್ದೀನಾ? ಒಂದೊಂದು ಓಟಿಗೆ ಐದು ಸಾವಿರದಂತೆ ಕಾಸು ಎಣಿಸ್ಕೊಂಡೇ ತಾನೇ ನೀವೆಲ್ಲ ನನಗೆ ಓಟು ಕೊಟ್ಟಿದ್ದು? ಈಗ ಮತ್ತೆ ದುಡ್ಡಿಗೆ ಬಂದಿದ್ದೀಯಾ? ಇದೆಲ್ಲ ನನ್ನತ್ರ ನಡೆಯೋಲ್ಲ, ಏನೇ ಕೆಲಸ ಆಗಬೇಕು ಅಂದರೂ ವಾಪಸ್ಸು ಬೀದರ್‌ಗೆ ಹೋಗಿ ನನ್ನ ಪಿಎ ಬಳೀ ಡಿಟೇಲ್ಸ್ ಕೊಡು. ಆನಂತ್ರ ಏನು ಮಾಡಬೇಕು ಅನ್ನೋದನ್ನ ನನ್ನ ಪಿಎಗಳೇ ನಿನಗೆ ಡೈರೆಕ್ಷನ್ ಕೊಡ್ತಾರೆ. ಈಗ ಜಾಗ ಖಾಲಿ ಮಾಡು ಎಂದು ಸಾಗ ಹಾಕುತ್ತಾನೆ ಖೇಣಿ.

ಕಳೆದ ವಿಧಾನಸಭಾ ಚುನಾವಣೆಗೂ ಮುನ್ನ ವಾರಕ್ಕೆ ಕಮ್ಮಿಯೆಂದರೂ ಎರಡು ಬಾರಿ ಬೀದರ್‌ನಲ್ಲಿ ಖೇಣಿ ಪ್ರತ್ಯಕ್ಷನಾಗುತ್ತಿದ್ದ. ಚುನಾವಣೆಗಿನ್ನು 6 ತಿಂಗಳಿರುವಂತೆಯೇ ಲೋಡುಗಟ್ಟಲೆ ಲಾರಿಗಳಲ್ಲಿ ಸೀರೆಗಳನ್ನು ತರಿಸಿ ಹಳ್ಳಿಹಳ್ಳಿಗೂ ಹಂಚಿದ್ದ. ಮೀಸೆ ಬೋಳಿಸಿಕೊಂಡು ಪಕ್ಕಾ ಬೃಹನ್ನಳೆಯಂತೆ ವೈಯ್ಯಾರ ಮಾಡುತ್ತಿದ್ದ ಖೇಣಿಯ ಸೂಟುಬೂಟು, ಬಂದೂಕುಧಾರಿ ಅಂಗರಕ್ಷಕರು, ಟೈ ಕಟ್ಟಿಕೊಂಡು ಸುತ್ತಮುತ್ತ ಲ್ಯಾಪ್‌ಟಾಪ್ ಹಿಡಿದು ಠಳಾಯಿಸುತ್ತಿದ್ದ ಕಂಪೆನಿ ಅಧಿಕಾರಿಗಳನ್ನು ಕಂಡ ಬೀದರ್ ದಕ್ಷಿಣದ ಜನಕ್ಕೆ ಬ್ರಿಟಿಷ್ ಕಾಲದ ಪರಂಗಿ ಅಧಿಕಾರಿಗಳ ದೃಶ್ಯಾವಳಿಯೇ ಕಣ್ಣಿಗೆ ಕಟ್ಟುತ್ತಿತ್ತು.

ಗುರುಪಾದಪ್ಪ ನಾಗಮಾರಪಲ್ಲಿ, ಬಂಡೆಪ್ಪ ಕಾಶೆಂಪೂರ್, ಮಿರಾಜುದ್ದೀನ್ ಪಟೇಲ್, ಜುಲ್ಫಿಕರ್ ಹಷ್ಮಿ, ಭೀಮಣ್ಣ ಖಂಡ್ರೆ, ಆಟ್ಟೂರ್ ಥರದ ಫ್ಯೂಡಲ್ ರಾಜಕಾರಣಿಗಳನ್ನೇ ನೋಡುತ್ತಾ ಬಂದಿದ್ದ ಬೀದರ್ ಜನಕ್ಕೆ ಖೇಣಿಯ ಕಾರ್ಪೊರೇಟ್ ಶೈಲಿಯೇ ವಿಚಿತ್ರವಾಗಿತ್ತು, ಇದಕ್ಕೆ ತಕ್ಕಂತೆ ಬರಗೆಟ್ಟು ಕೂತಿದ್ದ ಸುಭಾಷ್ ನೇಳಗಿ, ಈಶ್ವರಪ್ಪ ಚಕೋತೆಯಂಥವರೆಲ್ಲ ಖೇಣಿ ಜೊತೆ ಕೈಜೋಡಿಸಿದರು. ಪಕ್ಷದ ಹೆಸರೇ ಕರ್ನಾಟಕ ಮಕ್ಕಳ ಪಕ್ಷ!

ಜಾಬ್ ಗಿಮಿಕ್


ನಿಮ್ಮೆಲ್ಲರ ಮಕ್ಕಳಿಗೂ ಫಾರಿನ್‌ಟೈಪ್ ಎಜುಕೇಷನ್ ಕೊಡಿಸ್ತೀನಿ. ಆನಂತರ ನಾನೇ ಫಾರಿನ್‌ನಲ್ಲಿ ಕೆಲಸಕ್ಕೂ ವ್ಯವಸ್ಥೆ ಮಾಡ್ತೀನಿ. ದೊಡ್ಡ ದೊಡ್ಡ ಫ್ಯಾಕ್ಟರಿಗಳನ್ನು ಹಾಕ್ತೀನಿ. ಪ್ರತಿ ಹಳ್ಳಿಗೂ ಕನಿಷ್ಠ 20 ಮಂದಿ ಯುವಕರಿಗೆ ಕೆಲಸ ಕೊಡ್ತೀನಿ ಎಂದ ಖೇಣಿ ಮಾಡಿದ ಮತ್ತೊಂದು ಗಿಮಿಕ್ ಎಂದರೆ ನೈಸ್ ಕಂಪೆನಿಯ ಕೆಲಸದ ಅರ್ಜಿಗಳನ್ನು ಹಳ್ಳಿಹಳ್ಳಿಗೂ ಹಂಚಿದ್ದು. ಇಂಗ್ಲಿಷಿನಲ್ಲಿ ಮುದ್ರಿಸಿದ್ದ ಬೇಕಾಬಿಟ್ಟಿ ಅರ್ಜಿಗಳನ್ನು ಹಂಚಲಾಯ್ತು. ಅಭ್ಯರ್ಥಿಯ ಫೋಟೋ ಪದವಿ ಸರ್ಟಿಫಿಕೇಟು, ಓಟರ್ ಐಡಿ ಸಮೇತ ಸಹಸ್ರಾರು ಅರ್ಜಿಗಳನ್ನು ಸಂಗ್ರಹಿಸಿದ ಖೇಣಿಯ ಅಧಿಕಾರಿಗಳು ಇನ್ನೇನು ಚುನಾವಣೆ ಮುಗಿದದ್ದೇ ತಡ ನಿಮಗೆಲ್ಲರಿಗೂ ಕೈತುಂಬಾ ಸಂಬಳದ ಕೆಲಸ ಗ್ಯಾರಂಟಿ ಎಂದೇ ರೈಲು ಬಿಟ್ಟರು.



ಖೇಣಿ ಪರ ಸುದೀಪ್ ಪ್ರಚಾರ

ಮತ್ತೊಂದೆಡೆ ಹೈದರಾಬಾದ್‌ನಲ್ಲಿ ನಡೆದ ಸೆಲಿಬ್ರಿಟಿ ಕ್ರಿಕೆಟ್ ಮ್ಯಾಚಿಗೆಂದು ಖೇಣಿ ಪ್ರತಿಹಳ್ಳಿಗೂ ಬಸ್ಸುಗಳನ್ನು ಕಳಿಸಿಕೊಟ್ಟ. ಸುದೀಪ್ ನೇತೃತ್ವದ ಕರ್ನಾಟಕ ಬುಲ್ಡೋಜರ್ಸ್ ತಂಡಕ್ಕೆ ಖೇಣಿಯೇ ಮಾಲಿಕನಾದ್ದರಿಂದ ಬೀದರ್‌ನ ಹುಡುಗರೆಲ್ಲ ಹೈದ್ರಾಬಾದ್ ಟ್ರಿಪ್ಪಿಗೆ ಮುಗಿಬಿದ್ದರು. ಹೈದರಾಬಾದ್‌ನಲ್ಲಿ ಗುಂಡು ತುಂಡು ವಸತಿ ಎಲ್ಲವನ್ನೂ ವ್ಯವಸ್ಥೆ ಮಾಡಿದ ಖೇಣಿ ಸಿನಿಮಾ ನಟರ ಜೊತೆ ನಿಲ್ಲಿಸಿ ಫೋಟೋ ಕೂಡ ತೆಗೆಸಿಕೊಟ್ಟ. ಇದಕ್ಕೆ ತಕ್ಕಂತೆ ಚುನಾವಣೆಯಲ್ಲಿ ನಟ ಸುದೀಪ್ ಬೀದರ್‌ಗೆ ಬಂದಿದ್ದೇ ಹಳ್ಳಿಹಳ್ಳೀ ಸುತ್ತಿ ಖೇಣಿ ಪರ ಪ್ರಚಾರಗೈದ. ಸಾಲದ್ದಕ್ಕೆ ಹಿಂದಿ ನಟ ಸುನೀಲ್ ಶೆಟ್ಟಿ ಕೂಡ ಬೀದರ್‌ಗೆ ಬಂದು ರೋಡ್‌ಶೋ ಕೊಟ್ಟ.

ಬೀದರ್ ಮಟ್ಟಿಗೆ ಖೇಣಿಯ ಗಿಮ್ಮಿಕ್ಕುಗಳೇ ವಿಚಿತ್ರವಾಗಿತ್ತು, ಮಕ್ಕಳನ್ನು ಹುಟ್ಟಿಸುವುದಷ್ಟೇ ನಿಮ್ಮ ಕೆಲಸ ಆನಂತರದ್ದೇನಿದ್ದರೂ ಮಕ್ಕಳ ಪಕ್ಷದ ಕೆಲಸ ಎಂಬಷ್ಟರಮಟ್ಟಿಗೆ ಖೇಣಿ ಭ್ರಮೆ ಹುಟ್ಟಿಸಿದ. ಜಿಲ್ಲಾ ಪಂಚಾಯ್ತಿ ಮಟ್ಟದ ಪುಢಾರಿಗಳು, ಎಲ್ಲೂ ಸಲ್ಲದ ಅಬ್ಬೇಪಾರಿಗಳೆಲ್ಲ ಖೇಣಿಯಿಂದ ಕೋಟಿ ಕೋಟಿ ಮೊತ್ತದಲ್ಲಿ ಕಾಸು ತಿಂದರು. ಯಾವುದೋ ಕಾಲಕ್ಕೆ ಕಾರಂಜಾ ಜಲಾಶಯದ ಮುಳುಗಡೆ ಪ್ರದೇಶಗಳೆಂದು ಸರ್ಕಾರದಿಂದ ಎಕರೆ ಲೆಕ್ಕದಲ್ಲಿ ಪರಿಹಾರವನ್ನೂ ಪಡೆದಿದ್ದ ರೈತರನ್ನೇ ಕುರಿಗಳನ್ನಾಗಿಸುವ ಮಾಸ್ಟರ್ ಪ್ಲಾನ್ ಒಂದನ್ನು ಖೇಣಿ ರೂಪಿಸಿದ. ಈಗಾಗಲೇ ನೀವೆಲ್ಲ ಪರಿಹಾರ ಪಡೆದಿದ್ದರೂ ಅದರ ವಿರುದ್ಧ ನಾನು ಸುಪ್ರೀಂಕೋರ್ಟಿಗೆ ಹೋಗ್ತೀನಿ. ಕೊಟ್ಟ ಪರಿಹಾರ ಸಾಲದು ಅಂತ ಕೇಸು ಹಾಕಿ ಪ್ರತಿ ರೈತನಿಗೂ ಹೆಚ್ಚುವರಿಯಾಗಿ ಸರ್ಕಾರ 10 ಲಕ್ಷ ಕೊಡುವಂತೆ ಮಾಡ್ತೀನಿ. ಹಾಗೊಮ್ಮೆ ಸರ್ಕಾರ ಕೊಡದೇ ಹೋದರೂ ನಾನೇ ಕೈಯಿಂದ ಹಾಕಿ ಪ್ರತಿ ಮನೆಗೆ 10 ಲಕ್ಷ ಕಟ್ಟಿ ಕೊಡ್ತೀನಿ ಎಂದೆಲ್ಲ ಖೇಣಿ ಕಾಗೆ ಹಾರಿಸಿದ್ದ.



ಅಶೋಕ್ ಖೇಣಿ

ಪಾಪ, ಬೀದರ್ ರೈತರು ತಾನೇ ನಂಬದೇ ಇರುತ್ತಾರಾ? ಮನೆಮನೆಗೆ ಬಿಟ್ಟಿಯಾಗಿ 10 ಲಕ್ಷ ಬರುತ್ತದೆ ಎಂದರೆ ಯಾರಿಗೆ ಬೇಡ? ಈ ರೀತಿ ಕಾರಂಜಾ ಮುಳುಗಡೆಯ ಗ್ರಾಮಗಳೆಂದೇ ಔರಾದ್ ಎಸ್, ಶಿರ್ಶಿ, ಸಂಗೊಳಗಿ, ನಿಡುವಂಚ, ಹುಚ್ಚುಕನಹಳ್ಳಿ, ಶ್ರೀಕಂಠನಹಳ್ಳಿ, ಭವಗಿ; ಇತ್ಯಾದಿ 15 ಗ್ರಾಮಗಳಲ್ಲಿ ಬರೋಬ್ಬರಿ 20 ಸಾವಿರದಷ್ಟು ಮತಗಳಿದ್ದವು. ಚುನಾವಣೆಗಿನ್ನು ವಾರ ಇರುವಂತೆಯೇ ನಕಲಿ ಸುಪ್ರೀಂಕೋರ್ಟ್ ಆದೇಶವೊಂದನ್ನು ಸೃಷ್ಟಿಸಿದ ಖೇಣಿ ಇನ್ನೇನು ಸುಪ್ರೀಂಕೋರ್ಟ್ ಪ್ರತಿ ಮನೆಗೂ 10 ಲಕ್ಷ ಹೆಚ್ಚುವರಿ ಪರಿಹಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ ಎಂಬಂತೆ ವಂಚಕ ತಂತ್ರವೊಂದನ್ನು ರೂಪಿಸಿಬಿಟ್ಟ.

ಪಾಪದ ರೊಕ್ಕ

ನಂಬಿದ ಕಾರಂಜಾ ಮುಳುಗಡೆ ಪ್ರದೇಶದ ಹದಿನೈದು ಊರುಗಳು ಸಾರಾಸಗಟಾಗಿ ಖೇಣಿ ಪರ ಓಟುಕೊಟ್ಟವು. ಈ ಪೈಕಿ 20 ಸಾವಿರದಲ್ಲಿ ಹದಿನೆಂಟು ಸಾವಿರದಷ್ಟು ಮತಗಳು ಖೇಣಿ ಬುಟ್ಟಿಗೇ ಬಿದ್ದವು. ಬೀದರ್ ದಕ್ಷಿಣದ ಒಟ್ಟು 1 ಲಕ್ಷದ 70 ಸಾವಿರ ಮತಗಳಲ್ಲಿ 40 ಸಾವಿರದಷ್ಟಿದ್ದ ಲಿಂಗಾಯತರು ಪೂರ್ತಿಯಾಗಿ ಖೇಣಿ ಪರ ನಿಂತಾಗಿತ್ತು. ಕಳೆದ ಬಾರಿ ಬಿಜೆಪಿ ಅಭ್ಯರ್ಥಿಯಾಗಿದ್ದ ಖೇಣಿಯ ದಾಯಾದಿ ಸಂಜಯ್ ಖೇಣಿಗೆ 30 ಸಾವಿರದಷ್ಟು ಮತಗಳು ಬಿದ್ದಿದ್ದರೆ ಈ ಬಾರಿ ಬಿಜೆಪಿಯಿಂದ ನಿಂತಿದ್ದ ಬಸವರಾಜ್ ಆಷ್ಟೂರೆ ಬರೀ 1200 ಮತಗಳನ್ನು ಗಿಟ್ಟಿಸಿದ್ದ!

ಇದರರ್ಥ ಜೆಡಿಎಸ್ ಅಭ್ಯರ್ಥಿ ಬಂಡೆಪ್ಪ ಕಾಶೆಂಪೂರ್ ವಿರುದ್ಧ ಕಾಂಗ್ರೆಸ್, ಬಿಜೆಪಿ, ಕೆಜೆಪಿ, ಬಿಎಸ್‌ಪಿ ಇತ್ಯಾದಿಗಳೆಲ್ಲರೂ ಖೇಣಿಯ ರೊಕ್ಕಕ್ಕೆ ತಮ್ಮನ್ನು ಮಾರಿಕೊಂಡಾಗಿತ್ತು. 33 ಸಾವಿರದಷ್ಟಿದ್ದ ಮುಸ್ಲಿಮರು, 30 ಸಾವಿರದಷ್ಟು ಕುರುಬರು, 15 ಸಾವಿರ ದಲಿತರು, 20 ಸಾವಿರದಷ್ಟು ದಲಿತ ಕ್ರೈಸ್ತರು, 8 ಸಾವಿರ ರೆಡ್ಡಿಗಳು, 8 ಸಾವಿರದಷ್ಟಿದ್ದ ಲಂಬಾಣಿಗಳೆಲ್ಲ ಲಿಂಗಾಯತರ ಪಾಳೇಗಾರಿಕೆ ವಿರುದ್ಧ ಮತ ಚಲಾಯಿಸಿದ್ದರೂ ಬಂಡೆಪ್ಪ ಕಾಶೆಂಪೂರ್ ಸಲೀಸಾಗಿ ಗೆಲ್ಲಬೇಕಿತ್ತು.

ಆದರೆ ನಡೆದದ್ದೇ ಬೇರೆ. ಖೇಣಿಯ ಪಾಪದ ರೊಕ್ಕವೇ ಮಾತಾಡಿತ್ತು, ಕಾಂಗ್ರೆಸ್‌ನಿಂದ ನಿಂತಿದ್ದ ಲಿಂಗಾಯತರ ಮೀನಾಕ್ಷಿ ಸಂಗ್ರಾಮ್ ಕೇವಲ 5 ಸಾವಿರ ಮತಗಿಟ್ಟಿಸುವ ಮೂಲಕ ಪರೋಕ್ಷವಾಗಿ ಖೇಣಿಗೆ ನೆರವಾದಳು. ಕೆಜೆಪಿಯಿಂದ ನಿಂತಿದ್ದ ಮತ್ತೊಬ್ಬ ಲಿಂಗವಂತ ಬೆಲದಾಳೆ 11 ಸಾವಿರಕ್ಕೂ ಅಧಿಕ ಅಹಿಂದ ಮತಗಳನ್ನು ಕಿತ್ತನೇ ಹೊರತು ಲಿಂಗಾಯತ ಮತಗಳನ್ನು ಮುಟ್ಟಲಿಲ್ಲ, ಇನ್ನು ಬಿಎಸ್‌ಪಿಯಿಂದ ನಿಂತಿದ್ದ ಅಬ್ದುಲ್ ಮನ್ನಾನ್ 16 ಸಾವಿರದಷ್ಟು ಮುಸ್ಲಿಂ ಮತಗಳನ್ನು ಕೀಳುವ ಮೂಲಕ ಬಂಡೆಪ್ಪ ಕಾಶೆಂಪೂರ್‌ಗೆ ಸಲ್ಲಬೇಕಿದ್ದ ಮುಸ್ಲಿಂ ಮತಗಳನ್ನೇ ಕಿತ್ತು ಖೇಣಿಗೆ ನೆರವಾಗಿದ್ದ.

ಬಿಎಸ್‌ಪಿ, ಕೆಜೆಪಿ, ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿಗಳೆಲ್ಲರಿಗೂ ಖೇಣಿ ಕೋಟಿ ಲೆಕ್ಕದಲ್ಲಿ ಫೇಣಿ ತಿನ್ನಿಸಿದ್ದ. ಇಡೀ ಬೀದರ್ ದಕ್ಷಿಣದಲ್ಲಿ ಖೇಣಿಯ ರೊಕ್ಕದ ಹೊಳೆಯೇ ಹರಿದಿತ್ತು.

120 ಕೋಟಿ ಸುರಿದು

ಪ್ರತಿ ಓಟಿಗೂ ತಲಾ 5 ಸಾವಿರದಂತೆ ರೊಕ್ಕ ಹಂಚಿದ ಖೇಣಿ ಕಂಪೆನಿಯ ಧೂರ್ತರ ಮುಂದೆ ಕಾಶೆಂಪೂರ್ ಲೆಕ್ಕಾಚಾರಗಳೆಲ್ಲ ತಲೆಕೆಳಕಾದವು. ಕಾಂಗ್ರೆಸ್, ಬಿಜೆಪಿ, ಕೆಜೆಪಿ ಮತ್ತು ಖೇಣಿಯ ಮಧ್ಯೆ ಲಿಂಗಾಯತ ಮತಗಳೆಲ್ಲ ಹಂಚಿಕೆಯಾಗಿ ಕುರುಬರು, ಮುಸ್ಲಿಮರು, ದಲಿತರ ಮತಗಳೆಲ್ಲ ಸಾರಾಸಗಟಾಗಿ ತನಗೆ ಬೀಳುತ್ತವೆಯೆಂಬ ಕಾಶೆಂಪೂರ್ ಲೆಕ್ಕಾಚಾರ ಖೇಣಿಯ ದುಡ್ಡಿನ ಮುಂದೆ ನಿರರ್ಥಕಗೊಂಡಿತ್ತು, ಕಾಶೆಂಪೂರ್‌ಗೆ 31 ಸಾವಿರದಷ್ಟು ಓಟು ಬಿದ್ದರೆ ಖೇಣಿ ಬರೋಬ್ಬರಿ 47,763 ಮತಗಳನ್ನು ದೋಚಬಿಟ್ಟ. ಅಂದರೆ ಗೆಲುವಿನ ಅಂತರವೇ 16 ಸಾವಿರದಷ್ಟು!

ಲಿಂಗಾಯತರೆಲ್ಲ ಏಕಪಕ್ಷೀಯವಾಗಿ ಖೇಣಿಯ ಬೆನ್ನಿಗೆ ನಿಂತಿದ್ದರು!



ಸೆಲೆಬ್ರಿಟಿ ಕ್ರಿಕೆಟ್ ಲೋಕ

ಕಬ್ಬಿನ ಬಾಕಿಗೂ ಖೋತಾ ಸಕ್ಕರೆ ಫ್ಯಾಕ್ಟ್ರಿಯೂ ಗೋತಾ!


ಬೀದರ್ ಸಕ್ಕರೆ ಕಾರ್ಖಾನೆ


ಖೇಣಿಯನ್ನು ಗೆಲ್ಲಿಸಿದ ತಪ್ಪಿಗೆ ಬೀದರ್ ರೈತರು ಏನೆಲ್ಲಾ ದಂಡ ಕಟ್ಟಬೇಕೋ. ಅವುಗಳ ಪೈಕಿ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯ (ಬಿಎಸ್‌ಎಸ್‌ಕೆ) ದುರಂತವೂ ಒಂದು. ಖೇಣಿಯ ದಾಯಾದಿ ಸಂಜಯ್ ಖೇಣಿಯೇ ಸದ್ಯ ಬಿಎಸ್‌ಎಸ್‌ಕೆಯ ಅಧ್ಯಕ್ಷನಾದ್ದರಿಂದ ಖೇಣಿಗಳೆಲ್ಲಿ ಬೀದಿಗೆ ಬಾಲ ಬಿಚ್ಚುತ್ತಾರೋ ಎಂಬ ಆತಂಕ ನಾಗಮಾರಪಲ್ಲಿ ಪಟಾಲಮ್ಮಿಗಿದೆ. ಪ್ರತಿ ವರ್ಷ ಸಕ್ಕರೆ ಕಾರ್ಖಾನೆ ಕಾರ್ಯಾರಂಭವಾಗಬೇಕೆಂದರೆ ಅದಕ್ಕೆ ಬೇಕಾದ ಕೋಟಿಗಟ್ಟಲೆ ಸಾಲ ಹುಟ್ಟುತ್ತಿದ್ದದ್ದು ಬೀದರ್‌ನ ಡಿಸಿಸಿ ಬ್ಯಾಂಕಿನಿಂದ.


ಬೀದರ್ ಸುತ್ತಮುತ್ತಲ ಸಹಸ್ರಾರು ರೈತರು ಕಳೆದ ವರ್ಷ ಬಿಎಸ್‌ಎಸ್‌ಕೆಗೆ ಕಬ್ಬು ಕೊಟ್ಟಿದ್ದರ ಬಾಕಿ ಮೊತ್ತವೇ 24 ಕೋಟಿಯಷ್ಟಿದೆ. ಇದಲ್ಲದೆ ಫ್ಯಾಕ್ಟರಿಯ ನೌಕರರ ಸಂಬಳವೆಂದು 3 ಕೋಟಿಯಷ್ಟು ಬಾಕಿಬಿದ್ದಿದೆ. ಸಾಲದ್ದಕ್ಕೆ ಕಾರ್ಖಾನೆ ಮತ್ತೆ ಕಾರ್ಯಾರಂಭ ಮಾಡುವುದಕ್ಕೂ 15 ಕೋಟಿ ಬೇಕು. ಅಲ್ಲಿಗೆ ಈ ವರ್ಷ ಮತ್ತೆ ಕಾರ್ಖಾನೆ ನಡೆಯಬೇಕೆಂದರೆ ಒಟ್ಟು 43 ಕೋಟಿ ರೂಪಾಯಿಗಳಿದ್ದರಷ್ಟೇ ಸಾಧ್ಯ. ಈ ಪಾಟಿ ರೊಕ್ಕ ಹೊಂದಿಸುವ ತಾಕತ್ತಾಗಲಿ, ಯೋಗ್ಯತೆಯಾಗಲಿ ಸಂಜಯ್ ಖೇಣಿಗಿಲ್ಲ.

ಹಾಗಂತ ಡಿಸಿಸಿ ಬ್ಯಾಂಕ್‌ನಿಂದ ಸಾಲ ಹುಟ್ಟಬೇಕೆಂದರೆ ಅದಕ್ಕೆ ಮನಸ್ಸು ಮಾಡಬೇಕಾಗಿದ್ದು ಗುರುಪಾದಪ್ಪ ನಾಗಮಾರಪಲ್ಲಿ. ಏಕೆಂದರೆ ಡಿಸಿಸಿ ಬ್ಯಾಂಕಿಗೆ ಸದ್ಯ ಅಧ್ಯಕ್ಷನಾಗಿರುವುದು ಬೀದರ್‌ನ ಶಾಸಕರೂ ಆಗಿರುವ ನಾಗಮಾರಪಲ್ಲಿಯೇ. ಸರಿಸುಮಾರು 43 ಕೋಟಿಯಷ್ಟು ಸಾಲಕೊಟ್ಟು ಬಿಎಸ್‌ಎಸ್‌ಕೆ ಕಾರ್ಯಾರಂಭ ಮಾಡಲು ನಾಗಮಾರಪಲ್ಲಿಗೆ ಧೈರ್ಯ ಸಾಲುತ್ತಿಲ್ಲ. ಕೊಟ್ಟ ಸಾಲ ಬರದೇ ಹೋದರೆ ಏನು ಮಾಡಬೇಕೆಂಬುದೂ ಯಾರಿಗೂ ಗೊತ್ತಿಲ್ಲ. ಈ ಕಾರಣಕ್ಕೆ ಸಾಲ ಕೊಡಲು ಸಾಧ್ಯವಿಲ್ಲ ಎಂದು ನಾಗಮಾರಪಲ್ಲಿ ತಲೆತಪ್ಪಿಸಿಕೊಳ್ಳುತ್ತಿದ್ದಾರೆ. ಸಾಲ ಬರಲಿಲ್ಲ ಎಂದರೆ ರೈತರು ಬಾಕಿಗಾಗಿ ದಂಗೆ ಏಳುತ್ತಾರೆ. ಸಂಜಯ್ ಖೇಣಿಗೆ ರೈತರೇ ಒದೆ ಕೊಡುವ ಗಳಿಗೆ ದೂರವಿಲ್ಲ.

ಹೀಗಾಗಿ ಸಂಜಯ್ ಖೇಣಿ ಈಗ ಸರ್ಕಾರದೆದುರು ದಮ್ಮಯ್ಯ ಗುಡ್ಡೆ ಹಾಕುತ್ತಿದ್ದಾನೆ. ಸಂಜಯ್ ಖೇಣಿ ಅಧ್ಯಕ್ಷನೆಂದು ಗೊತ್ತಾಗಿದ್ದೇ ಸರ್ಕಾರವೂ ಹಿಂದೇಟು ಹಾಕುತ್ತಿದೆ. ನಾಳೆ ಅಶೋಕ್ ಖೇಣಿಯ ಸಮೇತ ಸಂಜಯ್ ಖೇಣಿಯೂ ಕೊಟ್ಟ ಸಾಲಕ್ಕೆ ಕೈ ಎತ್ತಿದರೆ ರೈತರಿಗೆ ಉತ್ತರ ಕೊಡುವವರ್ಯಾರು? ಹೀಗಾಗಿ ಖೇಣಿಯಿಂದಾಗಿಯೇ ಕಬ್ಬು ಬೆಳೆಗಾರರ ಆತಂಕವೂ ಇಮ್ಮಡಿಗೊಂಡಿದೆ. ಇದನ್ನೆಲ್ಲ ಲೆಕ್ಕ ಹಾಕಿಯೇ ಅಶೋಕ್ ಖೇಣಿ "ರೈತರ್ಯಾರೂ ಚಿಂತಿ ಮಾಡಬ್ಯಾಡ್ರಿ, ನಲವತ್ತೋ ಐವತ್ತೋ ಕೋಟಿ ಬೇಕಿದ್ದರೆ ನಾನೇ ಹಾಕ್ತೀನಿ" ಎಂದು ಚುನಾವಣೆಗೂ ಮುನ್ನ ಬಡಾಯಿ ಕೊಚ್ಚಿದ್ದ. ಆದರೀಗ ಖೇಣಿ ಈಗ ಉಲ್ಟಾ ಹೊಡೆದಿದ್ದಾನೆ. 'ನಾನು ಆ ರೀತಿ ಹೇಳೇ ಇಲ್ಲ, ಅಷ್ಟೆಲ್ಲಾ ದುಡ್ಡು ನಾನೆಲ್ಲಿಂದ ತರಲಿ? ಅದನ್ನು ಸರ್ಕಾರವೇ ಮಾಡಬೇಕು...' ಎನ್ನುತ್ತಿದ್ದಾನೆ.

ಪತ್ರಕರ್ತರೊಬ್ಬರು 'ಅವತ್ತು ನಾನೇ ಸಾಲ ಕೊಟ್ಟು ರೈತರ ಬಾಕಿ ತೀರಿಸ್ತೀನಿ ಎಂದ್ರಲ್ಲಾ' ಎಂದು ಖೇಣಿಗೆ ಪ್ರಶ್ನೆ ಹಾಕಿದ್ದಕ್ಕೆ 'ನಾನು ಹಾಗಂದಾಗ ನೀವು ಅಲ್ಲಿದ್ದು ಕೇಳಿಸಿಕೊಂಡ್ರಾ?' ಎಂದು ತಿರುಗೇಟು ನೀಡಿದನಂತೆ ಖೇಣಿ. ಅತ್ತ ಕಬ್ಬಿನ ಬಾಕಿಯೂ ಇಲ್ಲ, ಇತ್ತ ಕಾರ್ಖಾನೆಗೂ ಏಳಿಗೆಯಿಲ್ಲ ಎಂಬಂತಾಗಿದೆ ಬೀದರ್ ರೈತರ ಪಾಡು. ಖೇಣಿ ಬೀದರ್‌ಗೆ ಕಾಲಿಡದಿದ್ದರೆ ಇಂತಾ ಗತಿ ಬರುತ್ತಿತ್ತೆ? ●


ಜೋಕರ್ ಖೇಣಿ


ಮಳೆಯಿಲ್ಲದೆ ಬಸವಳಿದ ಬೀದರ್ ರೈತ

ಈ ರೀತಿ ಬೀದರ್ ದಕ್ಷಿಣಕ್ಕೆಂದೇ ಖೇಣಿ ಖರ್ಚು ಮಾಡಿದ ಮೊತ್ತವೆಷ್ಟು ಗೊತ್ತೆ?

ಬರೋಬ್ಬರಿ 120 ಕೋಟಿ!

ಅಂದರೆ ಕರ್ನಾಟಕದಲ್ಲಿ ಬೇರೆ ಯಾವುದೇ ಅಭ್ಯರ್ಥಿ ಮಾಡದಷ್ಟು ಖರ್ಚನ್ನು ಖೇಣಿ ಮಾಡಿದ್ದ. ಕಾರ್ಪೊರೇಟ್ ಖದೀಮನೊಬ್ಬ ಶಾಸಕನಾಗಲು ನೂರು ಕೋಟಿಗೂ ಅಧಿಕ ಮೊತ್ತದ ರೊಕ್ಕ ಬಿಚ್ಚುತ್ತಾನೆಂದರೆ ಅದರ ಉದ್ದೇಶವೇ ಬೇರೆಯಿರುತ್ತದೆ. ಎತ್ತಿಂದೆತ್ತ ಲೆಕ್ಕ ಹಾಕಿದರೂ ಐದು ವರ್ಷದ ಅವಧಿಯಲ್ಲಿ ಖೇಣಿ ಬೀದರ್‌ನಿಂದ ಈ ಮೊತ್ತದ ದುಡ್ಡೆತ್ತುವುದು ಸಾಧ್ಯವೇ ಇಲ್ಲ. ಹಾಗಿದ್ದೂ ಎಮ್ಮೆಲ್ಲೇ ಆಗುವ ಹುಚ್ಚು ಖೇಣಿಗೇಕೆ?

ಗಣಿಕಳ್ಳರು, ಗ್ರಾನೈಟ್ ಖದೀಮರು, ಬೆಂಗಳೂರು ಸುತ್ತಮುತ್ತಲ ನೆಲಕಂಟಕರೆಲ್ಲ ಹೇಗೆ ರಾಜಕೀಯ ಅಧಿಕಾರದ ಮೂಲಕ ತಮ್ಮ ಪಾಪದ ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳಬೇಕಿತ್ತೋ ಅದೇ ತಂತ್ರಕ್ಕೆ ಖೇಣಿಯೂ ಕೈಯಿಟ್ಟಿದ್ದ. ನೈಸ್ ಕಂಪನಿಯ ಹಗಲುದರೋಡೆಯನ್ನು ಮುಚ್ಚಿಕೊಳ್ಳಬೇಕಿದ್ದರೆ ಖೇಣಿಗೆ ರಾಜಕೀಯ ಅಧಿಕಾರ ಬೇಕಿತ್ತು. ನೂರು ಕೋಟಿ ಸುರಿದು ಶಾಸಕನಾದವನಿಗೆ ತನ್ನ ಅಧಿಕಾರ ಬಳಸಿ ಸಾವಿರ ಕೋಟಿ ದೋಚುವುದು ಯಾವ ಮಹಾ?

ಗೆದ್ದವನೆ ನಾಪತ್ತೆ

ಈಗ ಆಗಿರುವುದೂ ಅದೇ. ಖೇಣಿ ಗೆದ್ದಾಗಿದೆ. ಇನ್ನು 5 ವರ್ಷಗಳ ಕಾಲ ಸಮಸ್ಯೆಯಿಲ್ಲ. ಈತನ ಬೀದರ್ ದಕ್ಷಿಣಕ್ಕೆ ಶಾಸಕರಾಗಿದ್ದ ಕಾಶಂಪೂರ್ ಕನಿಷ್ಠ ಕ್ಷೇತ್ರದಲ್ಲೇ ಇದ್ದು ರೈತಾಪಿಗಳಿಗೆ ನೆರವಾಗುತ್ತಿದ್ದರು. ಯಾರೇ ರೈತ ಮಗಳ ಮದುವೆಗೋ, ಕಾಯಿಲೆ ಕಸಾಲೆಗೋ ಕಷ್ಟ ಹೇಳಿಕೊಂಡು ಬಂದಿದ್ದರೆ ಕನಿಷ್ಠ ಐದೋ ಹತ್ತೋ ಸಾವಿರವಾದರೂ ಕಾಶಂಪೂರ್‌ರಿಂದ ಗಿಟ್ಟುತ್ತಿತ್ತು. ಬಂಡೆಪ್ಪ ಮಂತ್ರಿಯಾಗಿ ಬೆಂಗಳೂರಲ್ಲಿದ್ದರೂ ಅವರ ತಮ್ಮ ಮಾರುತಿ ಕಾಶಂಪೂರ್ ಸ್ಥಳೀಯವಾಗಿ ಜನರ ಕಷ್ಟಕಾರ್ಪಣ್ಯಕ್ಕೆ ನೆರವಾಗುತ್ತಿದ್ದ. ಮಿರಾಜುದ್ದೀನ್‌ರ ತಮ್ಮ ನಸೀಮುದ್ದೀನ್‌ನಂಥ ಸ್ಥಳೀಯ ರಾಜಕಾರಣಿಗಳೂ ಕಷ್ಟ ಕೈಗಾದರೂ ಆಗುತ್ತಿದ್ದರು.

ಆದರೆ ಗೆದ್ದ ಖೇಣಿಯನ್ನು ಹುಡುಕಿ ಬೆಂಗಳೂರಿಗೆ ಬಂದರೂ ಆತ ನೋಡುವುದಕ್ಕೂ ಸಿಗಲಾರ. ಸದ್ಯ ಖೇಣಿಯ ಪರ ಇಡೀ ಬೀದರ್ ದಕ್ಷಿಣವನ್ನಾಳುತ್ತಿರುವವನು ಆತನ ದಾಯಾದಿ ಸಂಜಯ್ ಖೇಣಿ. ಮಿಕ್ಕಂತೆ ಹುಡಿಪುಡಿ ಪುಢಾರಿಗಳಿದ್ದಾರೆ. ಖೇಣಿಯ ಪಿಎಗಳೆಂದು ಬರೋಬ್ಬರಿ 8 ಮಂದಿ ನೈಸ್ ಕಂಪೆನಿಯ ಅಧಿಕಾರಿಗಳು ಬೀದರ್‌ನಲ್ಲಿ ಠಿಕಾಣಿ ಹೂಡಿದ್ದಾರಾದರೂ ಇವರೆಲ್ಲ ರೈತರ ಅರ್ಜಿ ಸ್ವೀಕರಿಸಿ ಅದನ್ನು ಖೇಣಿಗೆ ತಲುಪಿಸುವ ಪೋಸ್ಟ್‌ಮ್ಯಾನ್‌ಗಳೇ ಹೊರತು ಯಾರೂ ನಯಾಪೈಸೆ ಕೈಬಿಚ್ಚಿ ಕೊಡುವವರಲ್ಲ. ಆಸ್ಪತ್ರೆ ಖರ್ಚು, ಶಾಲೆಯ ಫೀಜು ಎಂದೆಲ್ಲ ರೈತ ಕಣ್ಣೀರಿಟ್ಟರೆ ನಾವೇನಿದ್ದರೂ ಅರ್ಜಿ ಸ್ವೀಕರಿಸೋರು. ದುಡ್ಡೇನಿದ್ದರೂ ನೀವು ಸಾಹೇಬರನ್ನೇ ಕೇಳಬೇಕು ಎನ್ನುತ್ತಾರೆ ನೈಸ್ ಸೂಟುಧಾರಿಗಳು.

ಕೊಟ್ಟ ಅರ್ಜಿಗಳು ಕಸದಬುಟ್ಟಿಗಲ್ಲದೆ ಸರ್ಕಾರದ ಇಲಾಖೆ ಮುಟ್ಟುವುದು ಕಷ್ಟ. ಏಕೆಂದರೆ ಖೇಣಿಯ ಮಕ್ಕಳ ಪಕ್ಷವೇನಿದ್ದರೂ ನೈಸ್ ಮಕ್ಕಳದ್ದೇ ಹೊರತು ಸರ್ಕಾರ ಅಲ್ಲವಲ್ಲ. ಇನ್ನು ರೈತರ ಅರ್ಜಿ ಓದಲು ಖೇಣಿಗೆ ಟೈಮೇ ಇಲ್ಲ. ಪ್ರತಿ ಹಳ್ಳಿಗಳಿಗೂ ತಲಾ 20 ಮಂದಿಗೆ ಕೆಲಸ ಕೊಡಲು ಖೇಣಿಯೇನೂ ಮಂತ್ರವಾದಿಯಲ್ಲ. ಇನ್ನು ಕಾರಂಜಾ ಮುಳುಗಡೆ ಗ್ರಾಮಗಳ ರೈತರಿಗೆ ತಲಾ 10 ಲಕ್ಷದಂತೆ ಕೊಡುತ್ತಾ ಹೋದರೆ ಖೇಣಿಯ ಕಂಪೆನಿಯೇ ದಿವಾಳಿಯಾಗುತ್ತದೆ. ಬೇಕಾಬಿಟ್ಟಿ ಫ್ಯಾಕ್ಟ್ರಿ ಹಾಕಿ ಜನರಿಗೆ ಕೆಲಸ ಕೊಡುವಂತಿದ್ದರೆ ಖೇಣಿ ಏಕೆ ರಸ್ತೆಯ ಹೆಸರಲ್ಲಿ ರೈತರ ಭೂಮಿ ದೋಚುತ್ತಿದ್ದ?

ತೀರ ಇತ್ತೀಚೆಗೆ ಖೇಣಿಯ ಛೇಲಾ ಪತ್ರಕರ್ತರೊಬ್ಬರು 'ನೀವ್ಯಾಕೆ ಗೆದ್ದ ಮೇಲೆ ಬೀದರ್‌ನತ್ತ ತಲೆ ಹಾಕುತ್ತಿಲ್ಲ' ಎಂದು ಕೇಳಿದ್ದಕ್ಕೆ 'ಅಲ್ರಿ... ಎಲೆಕ್ಷನ್ನಿಗೆ ಅಂತ ನೂರು ಕೋಟಿ ಸುರಿದೇ ಹೈರಾಣಾಗಿದ್ದೀನಿ. ಇನ್ನು ಬೀದರ್‌ಗೆ ಪದೇ ಪದೇ ಹೋಗಿ ಎಲ್ಲಿಂದ ರೊಕ್ಕ ಹಂಚಲಿ? ನಾನೇನು ಖೋಟಾನೋಟು ಪ್ರಿಂಟ್ ಮಾಡೋ ಮಿಷಿನ್ ಇಟ್ಟಿದ್ದೀನಾ?' ಎಂದನಂತೆ ಜೋಕರ್ ಖೇಣಿ!

ಬೀದರ್ ಜನಕ್ಕೆ ಬೇಕಿತ್ತಾ ಇದು!

● ರಾ. ಸೋಮನಾಥ್

ಅನಂತಮೂರ್ತಿನ ಯಾಕೆ ಟೀಕೆ ಮಾಡಿದೆ ಗೊತ್ತಾ?

ಥೂತ್ತೇರಿ

▸ ಯಾಹೂ

ಶಿವಮೊಗ್ಗದ ಶೆಟ್ಟಿ ಅಂಗಡಿಯೊಂದರಲ್ಲಿ ಯಡ್ಡಿ ಮತ್ತು ಈಶು ಒಂದಾಗಿ ಕುಳಿತು ಹರಟಿದರಂತಲ್ಲಾ, ಸದರಿ ಸುದ್ದಿಯನ್ನು ಕೇಳಿದ ನಾಡಿನ ಜನತೆ ಹೌಹಾರಿ ಅಚ್ಚರಿಪಡುತ್ತಿರಬೇಕಾದರೆ, ಕಟ್ಟೆ ಪುರಾಣದ ಕಾಳ ಮಾವ ಕಂಡಕಂಡವರನ್ನೆಲ್ಲ ಕರೆದು "ನೋಡಿರ್ಲಾ, ಆ ಪುಣ್ಯಾತ್ಮರ ನೋಡಿ ಬದುಕಬ ಕಲ್ತಗೋಳಿ. ಸಣ್ಣ ಪುಟ್ಟ ಜಗಳ ಆದಿ ಪೋಲಿಟೇಶನ್ನಿಗೋಯ್ತಿರಿ. ಅಲ್ಲಿಂದ ಕೋರ್ಟಿಗೋಯ್ತಿರಿ. ಲಾಯಿರಿ ಮಡಗ್ತಿರಿ. ಸಾಲ ಸೂಲ ಮಾಡಿ ಲಾಯಿರಿ ಹೆಡ್ತಿಗೆ ಸೀರೆ ಉಡುಸ್ತಿರಿ. ಪಟ್ಟಗಿಲ್ದೆ ಸೊರಗಿದ್ದ ಲಾಯಿರಿ ವಾರಕ್ಕೊಂದಿನ ಬಾಡು ತಿನ್ನಂಗೆ ಮಾಡ್ತಿರಿ. ಕಡಿಗೇನಾಯ್ತದೆ? ಕೋರ್ಟಿಗೋಗಿ ಗೆದ್ದೋನು ಸೋತ, ಸೋತೋನು ಸತ್ತ ಅನ್ನಂಗಾಯ್ತದೆ. ಅಂಥಾ ನನ್ನ ಮಕ್ಕಳು ಕಣ್ಣಾ ಬುಟ್ಟು ಆ ಯಡೂರಪ್ಪನ್ನ, ಈಶ್ವರಪ್ಪನ್ನ ನೋಡಿ ಕಲ್ತಗಬೇಕು. ಅದೇನು ಜಗಳಾಡಿದ್ರು, ಅದೇನು ಕಿತ್ತಾಡಿದ್ರು, ಅದೇನು ಬೋದಾಡಿದ್ರು. ಕಿವೀಲಿ ಕೇಳಕ್ಕಾಯ್ತಿತ್ತೆ ಆ ಮಾತ? ಅವುನು ಇವುನ್ನ ಸೋಲಿಸಕ್ಕೆ ಹೋರಾಡಿದ, ಇವುನು ಅವುನ್ನ ತಗಿಯಕ್ಕೆ ಪ್ಲಾನು ಮಾಡಿದ. ಆದ್ರೆ ಇಬ್ರೂ ಕಿಸಗಂಡು ಬಿದ್ರು. ಇವತ್ತಂಗಾದ್ರು? ಕೊಳ್ಳಲಿಕ್ಕಿದ ಜೀವದಂಗಾದ್ರು. ಸೇಯಿಂತ್ರ ಅಂದ್ರೆ ಹಿಂಗಿರಬೇಕು. ಇವತ್ತೇನಾಯ್ತು? ಅವುರ ಆಡಿಕೊಂಡೋರಿಗೆ ಅರಿಕ್ಯಾಯ್ತು, ಚಾಡಿ ಮಾತಿನೋರು ಉಸುರಿಲ್ದಂಗಾದ್ರು, ಅವುರ ವೈರಿಗಳು ತೃಪ್ತಾದ್ರು. ಮುಂದೆ ಈ ನಾಡಲ್ಲಿ ಯಾರೇ ಜಗಳಾಡಿದ್ರು, ಕದಡಾಡಿದ್ರು ಅವುರಿಗೆ ಎಡೂರಪ್ಪ-ಈಶ್ವರಪ್ಪನ ಸುದ್ದಿ ಹೇಳಬೇಕು. ರಾಮಾಂಜನೇಯ ಯುದ್ಧ ಆದ ಮ್ಯಾಲೆ ಏನಾಯ್ತು? ಅದೇ ರಾಮ ಆಂಜನೇಯ ಪಬ್ಬರಿಗೊಬ್ಬರು ತಬ್ಬಿಕೊಂಡ್ರು. ಆಗ ಜಾಂಬುವುನ ಮಕ ಯಂಗಾಯ್ತು ಗೊತ್ತೆ? ತುಂಬಿರೊಗಲ್ಲಾ ನೋಡಿದ ಶಂಕರಮೂರ್ತಿ ಶೆಟ್ಟಿ ಮುಖ ನೋಡಿದಂಗಾಯ್ತು. ಆಗೊ ಅಂಗೆ ಯಾರೂ ಜಗಳಾಡಬ್ಯಾಡರೊ. ಆಡಿದ್ರು ಈಶ್ವರಪ್ಪ-ಎಡೂರಪ್ಪನಂಗಾಡಿ" ಎಂದನಂತಲ್ಲಾ, ಥೂತ್ತೇರಿ!

* * *

ಈಶ್ವರಪ್ಪ-ಎಡೂರಪ್ಪನ ಆಲಿಂಗನದಿಂದ ಉದ್ಭವಿಸಿದಂತಿರುವ ಆಯನೂರ್ ಮಂಜುನಾಥ್ ಅನಂತಮೂರ್ತಿಯವರನ್ನ ಬಾಯಿಗೆ ಬಂದಂತೆ ಟೀಕಿಸಿದ್ದಾನೆಂಬ ಸುದ್ದಿ ಕೇಳಿ ಈ ಬಗ್ಗೆ ಆತನನ್ನೆ ಮಾತನಾಡಿಸಿದರೆ ಹೇಗೆ ಅನ್ನಿಸಿತಲ್ಲಾ. ಆ ಕೂಡಲೇ ವಿಜಯ ಮಲ್ಯನಿಂದ ಆಯನೂರ್ ಪೋನ್ ನಂಬರ್ ಪಡೆದು ಪೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "... ಸಿದ್ದಲಿಂಗೇಶ್... ಎಡೆಯೂರ ಸಿದ್ದಲಿಂಗೇಶಾ..."

"ಹಲೋ ಯಾರು ಸಾರ್ ತಾವು?"

"ನಾನು ಸಾರ್, ಗೌರಿ ಪತ್ರಿಕೆ ಯಾಹು."

"ಓ ಏನ್ರಿ ಯಾಹು, ಹೇಗಿದ್ದೀರಿ?"

"ಚನ್ನಾಗಿದ್ದಿನಿ ಸಾರ್. ತಾವೇಗಿದ್ದೀರಿ?"

"ನಾನೂ ಚೆನ್ನಾಗಿದ್ದೀನಿ."

"ಚುನಾವಣೆ ಮುಗದು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ, ಎಡೂರಪ್ಪ ಅತಂತ್ರವಾದ ಮೇಲೆ ಅವುರಿಗೆ ಸರಿಯಾದ ಉತ್ತರ ಕೊಟ್ರಿ ಸಾರ್, ಥ್ಯಾಂಕ್ಸ್."

"ನಾನು ಉತ್ತರ ಕೊಟ್ಟನ?"

"ಹೌದಲ್ಲವ ಸಾರ್? ಆ ಎಡೂರಪ್ಪ ಪಾರ್ಟಿ ಬಿಟ್ಟು ಹೋಗಿ ಆರು ಸೀಟು ಗೆದ್ರು, ಅಕಸ್ಮಾತ್ ಪಾರ್ಟಿಲೆ ಇದ್ದಿದ್ರೆ ಏನೂ ಆಯ್ತಿರಲಿಲ್ಲ, ಅವರ ಶಕ್ತಿ ಅಷ್ಟೆ ಅಂದ್ರಲ್ಲ ಸಾರ್."

"ಚುನಾವಣೆ ರಿಜಲ್ಟ್ ಬಗ್ಗೆ ಕೇಳಿದಾಗ ಇನ್ನೇನೇಳಕ್ಕಾಗತೆ. ಹಾಗೆ ಹೇಳಬೇಕಲ್ಲವ?"

"ನಿಜ ಸಾರ್. ಆಗ ಅಂಗೇ ಹೇಳಬೇಕು. ಈಗ ಎಡೂರಪ್ಪ ಬಿಜೆಪಿಗೆ ಬರ್ತಾಯಿರುವಾಗ ಏನೇಳ್ತಿರಿ ಸಾರ್?"

"ಎಡೂರಪ್ಪ ಬಿಜೆಪಿಗೆ ಅನಿವಾರ್ಯವಾದ ನಾಯಕ, ಅವರ ಲೀಡರ್‌ಶಿಪ್ಪಲ್ಲಿ ನಾವ್ಗಲ್ಲ ಹೋರಾಡ್ತಿವಿ ಅಂತಿನಿ."

"ನಿಜ ಸಾರ್. ಪಕ್ಷ ನಿಷ್ಠೆ ಮಾತು ಅಂದ್ರೆ ಇದೆ ನೋಡಿ."

"ನೋಡ್ರಿ ಯಾಹು. ನಾನು ಒಂದು ಪಕ್ಷದಲ್ಲಿದ್ದಾಗ ಆ ಪಕ್ಷದ ಅಜೆಂಡಾಗಳ ಬಗ್ಗೆ ಬಹಳ ನಿಷ್ಠೆಯಿಂದ ಮಾತಾಡ್ತಿನಿ. ಆ ಪಕ್ಷ ಬಿಟ್ಟುಕೊಡ್ತೆ ಅದನ್ನೆ ಮಾತಾಡಕ್ಕಾಗುತ್ತ?"

"ನಿಜ ಸಾರ್. ನಾನೇ ನನ್ನ ಕಿವಿಯಾರ ಕೇಳಿದ್ನೆ. ನೀವು ಕಾಂಗ್ರೆಸ್ ಸೇರಿದಾಗ ಕಾಂಗ್ರೆಸ್‌ನವುರಿಗೆ ಕಾಂಗ್ರೆಸ್ ಸಿದ್ಧಾಂತದ ಪಾಠ ಮಾಡಿದ್ರಿ, ಮಲ್ಯನ ಪಾರ್ಟಿಗೋದಾಗ್ಲು ಅಂಗೇ ಮಾತಾಡಿದ್ರಿ."

"ನಾನೇ ಮರತಿದ್ದೀನಿ ಕಂಡ್ರಿ. ಏನು ಮಾತಾಡಿದ್ನೆ?"

"ಕಾಂಗ್ರೆಸ್‌ನಂಥ ಸೆಕ್ಯುಲರ್ ಪಾರ್ಟಿ ಇನ್ನೊಂದಿಲ್ಲ, ಸದ್ಯದ ಪರಿಸ್ಥಿತಿಲಿ ದೇಶ ಮುನ್ನಡೆಸೊ ಶಕ್ತಿ ಇರದು ಕಾಂಗ್ರೆಸ್ ಪಾರ್ಟಿಗೆ ಮಾತ್ರ ಅಂದಿದ್ರಿ."

"ಹಾಗಂದಿದ್ದಾ?"

"ಹೌದು ಸಾರ್. ನೀವು ಬಿಜೆಪಿ ಬಿಟ್ಟು ಕಾಂಗ್ರೆಸ್ಸಿಗೆ ಬಂದ್ರಲ್ಲ ಆಗ 'ಈ ಬಂಗಾರಪ್ಪ ನಾನು ಬಿಚ್ಚಿ ಹಾಕಿದ ಚೆಡ್ಡಿ ತಗೊಂಡು ಹಾಯ್ಕೊಂಡು ಬಿಜೆಪಿಗೆ ಹೋಗಿದ್ದಾರೆ. ಅಂಥವರಿಂದ ನಾನು ಕಲಿಬೇಕಾದ್ದೇನೂ ಇಲ್ಲ' ಅಂದಿದ್ರಿ."

"ಹೌದೇನ್ರಿ?"

"ಪೇಜಾವರನ ಆಣೆ ಮಾಡೇಳ್ತಿನಿ ಸಾರ್, ಹಿಂಗೇ ಹೇಳಿದ್ರಿ. ಅದಕ್ಕೂ ಮೊದ್ಲು 'ಕಾಂಗ್ರೆಸ್ ಪಾರ್ಟಿ ಸೇರೋದೆ ಆದ್ರೆ ನಾನು ರಾಜಕಾರಣದಿಂದ ನಿವೃತ್ತಿ ಆಯ್ತಿನಿ' ಅಂದಿದ್ರಿ."

"ಅಂದಿದ್ದೆ ಸರಿ. ಆದ್ರೆ ಈಗ ಕಾಂಗ್ರೆಸ್ಸಲ್ಲಿದ್ದೀನಾ?"

"ಕಾಂಗ್ರೆಸ್ ಯಾಕೆ ಬುಟ್ರಿ ಸಾರ್?"

"ನಾನು ಬಿಜೆಪಿ ಬಿಡಬೇಕಾದ್ರೆ ಅನಂತಕುಮಾರನ ಕಾಟ ಜಾಸ್ತಿಯಾಗಿ ನಮ್ಮ ಲೀಡ್ರಾದ ಎಡೂರಪ್ಪನವರೇ ಜೆಡಿಎಸ್ ಕಡೆ ಹೊರಟಿದ್ರು. ಹಾಗಾಗಿ ನಾನು ಕಾಂಗ್ರೆಸ್ಸಿಗೋದೆ ಕಂಡ್ರಿ. ಆ ನಂತರ ನಮ್ಮ ಲೀಡ್ರು ಸ್ಟ್ರಾಂಗಾಯ್ತಿದ್ದಂಗೆ ಪುನಃ ಬಿಜೆಪಿಗೆ ಬಂದೆ."


"ಮಲ್ಯನತ್ರಕ್ಕೇಗಿದ್ರಲ್ಲವೆ?"

"ಅಲ್ಲಿಗೋಗಿ ಬಂದಿದ್ದೇ ನನಗೆ ಮರತೋಗ್ಯದೆ ಕಂಡ್ರಿ."

"ಉಪಕಾರನ ಇಷ್ಟು ಬೇಗ ಮರೀಬಾರ್ದು ಸಾರ್. ಅದರಲ್ಲೂ ಮಲ್ಯನಂತ ದಾನಿನ ಮರಿಬಾರ್ದು."

"ರಾಜಕಾರಣದಲ್ಲಿ ಕೆಲವು ವಿಷಯ ಮರೀಬೇಕು, ಕೆಲವನ್ನು ಜ್ಞಾಪಕದಲ್ಲಿ ಇಟ್ಟಗೋಬೇಕು ಕಂಡ್ರಿ."

"ನಿಜ ಸಾರ್. ನಿಮ್ಮನ್ನ ನೋಡಿದ್ರೆ ಒಂದು ಸುತ್ತು



ಬಂದ್ರು ಕೂಡ ಬಿಜೆಪಿ ಅಜೆಂಡ ಮರೆತಿಲ್ಲ ನೀವು. ಅದ್ಕೆ ಅನಂತಮೂರ್ತಿಯವರ ಬಗ್ಗೆ ಹಗುರವಾಗಿ ಮಾತಾಡಿದ್ದಿರಿ."

"ನಾನು ಬಿಜೆಪಿ ವೇದಿಕೆಯಲ್ಲಿದ್ದುಕೊಂಡು ಮಾತಾಡೊ ಮಾತು ಹಗುರವಾಗಿ ಕಾಣದು ಸಹಜ ಕಂಡ್ರಿ. ಅನಂತಮೂರ್ತಿಯವರು ನಮ್ಮ ನಾಡಿನ ದೊಡ್ಡ ಲೇಖಕರು. ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟವ್ರು. ಅವರ ಕತೆಗಳಿಗಿಂತ್ಲೂ ನಾನು ಪ್ರಬಂಧಗಳನ್ನ ಈಗ್ಲೂ ಓದ್ತಿನಿ. ಅವ್ರು ಬರದಿರೊ 'ಅವಸ್ಥೆ' ಎಷ್ಟು ಒಳ್ಳೆ ಕಾದಂಬರಿ. ಇದೇ ನಮ್ಮ ಜಿಲ್ಲೆ ಗೋಪಾಲಗೌಡ್ರನ್ನ ಕುರಿತು ಬರದದ್ದು. ಇನ್ನ ಅವರ ಸಾಕ್ಷಿ, ಪೂರ್ವಾಪರ, ಹಕ್ಕಿ ಮತ್ತು ಪರಿಸರ ಇಂತ ಕೃತಿಗಳು ಮತ್ತೆ ಮತ್ತೆ ಓದೋ ತರ ಇವೆ. ಅವರ ತಮ್ಮ ಇಲ್ಲೆ ಮೂಳೆ ಡಾಕ್ಟರು ಕಂಡ್ರಿ. ನನಗೆ ಲಾಠಿ ಬೀಸಿ ಬೀಸಿ ಕೀಲು ನೋವಾದಾಗ ಅವ್ರತ್ರನೆ ಹೋಗಿ ಟ್ರೀಟ್‌ಮೆಂಟ್ ತಗೋತಿನಿ. ಅದ್ರೆ ಏನು ಮಾಡೋದೇಳಿ. ಈ ಕಾಲ ಬಿಜೆಪಿಲಿ ಎಲ್ಲರಿಗಿಂತಲೂ ನಾನು ಅತಿ ನಿಷ್ಠಾವಂತನಾಗಿ ಪ್ರತಿಕ್ರಿಯಿಸಬೇಕಾಗಿದೆ."

"ಅದ್ಯಾಕೆ ಸಾರ್?"

"ನಾನು ಪಾರ್ಟಿ ಬಿಟ್ಟು ಎಲ್ಲೆಲ್ಲೊ ಹೋಗಿ ಬಂದೆ ನೋಡಿ. ಅದಕ್ಕೆ ಹೆಚ್ಚು ಕೂಗಬೇಕಾಗಿದೆ. ಬೊಗಳಬೇಕಾಗಿದೆ ಕಂಡ್ರಿ."


"ಥೂತ್ತೇರಿ!!"

ಮೇಲುಕೋಟೆ: ಹಳ್ಳ ಹಿಡಿಯಲಿದೆಯೇ ರತ್ನಾಂಗಿ ಕದ್ದ ಕೇಸು?



ಮೇಲುಕೋಟೆಯ ಚೆಲುವ ನಾರಾಯಣಸ್ವಾಮಿ ವಿಗ್ರಹದ ಮೇಲಿದ್ದ ಚಿನ್ನದ ಆಭರಣಗಳನ್ನೇ ಮುಂಡಾಯಿಸಿದ ಆರೋಪ ಹೊತ್ತಿರುವ ಅರ್ಚಕ ನರಸರಾಜ ಭಟ್ಟ ಊರು ಬಿಟ್ಟು ಬರೋಬ್ಬರಿ ಎರಡು ತಿಂಗಳುಗಳೇ ಕಳೆದಿದೆ. ಆದರೆ ಮಂಡ್ಯ ಪೊಲೀಸರು ಆತನನ್ನು ಬಂಧಿಸಿ ಜೈಲಿಗಟ್ಟುವ ಬದಲು ಚಂದಮಾಮ ಕಥೆ ಹೇಳುತ್ತಿರುವುದನ್ನು ನೋಡಿದರೆ ರತ್ನಾಂಗಿ ಆಭರಣ ಕದ್ದ ಕೇಸು ಹಳ್ಳ ಹಿಡಿಯುವ ಎಲ್ಲಾ ಸಾಧ್ಯತೆಗಳು ನಿಚ್ಚಳವಾಗಿ ಕಂಡುಬರುತ್ತಿದೆ.

ಕಳೆದ 2009ರಲ್ಲಿ ಬೆಂಗಳೂರಿನ ದಾನಿ ಮುರಳಿ ಜಗನ್ನಾಥ್ ಎಂಬುವವರು ಚೆಲುವನಾರಾಯಣಸ್ವಾಮಿಗೆ ನೀಡಿದ್ದ 1200 ಗ್ರಾಂ ಚಿನ್ನದ ರತ್ನಾಂಗಿಯಲ್ಲಿ 800ಗ್ರಾಂ ಚಿನ್ನ ಮಾಯವಾದ ಹಿಂದೆ ಅರ್ಚಕ ನರಸರಾಜಭಟ್ಟನ ಪಾತ್ರವಿರುವುದು ಪಾಂಡವಪುರ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಸ್ಪಷ್ಟವಾಗಿ ಸಾಬೀತಾಗಿತ್ತು. ಆದಾಗಿ ತಿಂಗಳುಗಳೇ ಕಳೆದರೂ ಭಟ್ಟನ ವಿರುದ್ಧ ಕ್ರಮ ಕೈಗೊಳ್ಳಲು ಧಾರ್ಮಿಕ ದತ್ತಿ ಇಲಾಖೆ ಆಯುಕ್ತರೇ ಆಗಲಿ, ಜಿಲ್ಲಾಧಿಕಾರಿಯೇ ಆಗಲಿ, ದೇವಾಲಯ ವ್ಯವಸ್ಥಾಪನಾ ಸಮಿತಿಯೇ ಆಗಲಿ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ, ಕಳ್ಳತನ ಪ್ರಕರಣ ದಾಖಲಿಸಲು ಎಲ್ಲರೂ ಮೀನಾಮೇಷ ಎಣಿಸುತ್ತಾ ಕಾಲಹರಣ ಮಾಡಿದರು.


ನರಸರಾಜ ಭಟ್ಟ

ರತ್ನಾಂಗಿ ಆಭರಣ ನುಂಗಿದ ಭಟ್ಟ ಇನ್ನೇನು ಅದನ್ನು ಜೀರ್ಣಿಸಿಕೊಂಡೇ ಬಿಡುತ್ತಾನೆ ಎಂಬ ಪರಿಸ್ಥಿತಿ ಯಾವಾಗ ನಿರ್ಮಾಣವಾಯಿತೋ ಆಗ ಸ್ಥಳೀಯ ಹೋರಾಟಗಾರರು ಕಾರ್ಯಪ್ರವೃತ್ತರಾದರು. ಅವರಿಗೆ ವಿಶ್ವಹಿಂದೂಧರ್ಮ ಸಂರಕ್ಷಣಾ ಟ್ರಸ್ಟ್ ಎಂಬುದು ಬೆಂಬಲಕ್ಕೆ ನಿಂತಿತು. ಅವರ ಪ್ರಯತ್ನದ ಫಲವಾಗಿ ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ಭಟ್ಟನ ವಿರುದ್ಧ ರತ್ನಾಂಗಿ ಕಳ್ಳತನ ಆರೋಪದಡಿ ಪ್ರಕರಣ ದಾಖಲಾಯಿತು. ಅಲ್ಲಿಯವರೆಗೂ ಮೇಲುಕೋಟೆಯಲ್ಲೇ ಅಡ್ಡಾಡಿಕೊಂಡಿದ್ದ ಭಟ್ಟ ಕಳ್ಳತನದ ಕೇಸು ದಾಖಲಾಗುತ್ತಿದ್ದಂತೆ ರಾತ್ರೋರಾತ್ರಿ ಮಾಯವಾಗಿಬಿಟ್ಟ.

ಜಾಮೀನು ಅರ್ಜಿ ವಜಾ



ಮೇಲುಕೋಟೆ ಪೊಲೀಸರಾಗಲಿ, ಜಿಲ್ಲಾ ಅಪರಾಧ ಪತ್ತೆದಳ ವಿಭಾಗದ ಪೊಲೀಸರಾಗಲಿ ಭಟ್ಟನ ಬೆನ್ನು ಬಿದ್ದಿರಲಿಲ್ಲ. ಆದರೂ ಮೇಲುಕೋಟೆಯಲ್ಲೇ ಇದ್ದರೆ ಬಂಧನಕ್ಕೆ ಒತ್ತಡ ಬರಬಹುದೆಂದು ಅರಿತ ಭಟ್ಟ ಊರುಬಿಟ್ಟು ಬೆಂಗಳೂರಿನಲ್ಲಿರುವ ಮಗಳ ಮನೆ ಸೇರಿಕೊಂಡ. ಬೆಂಗಳೂರಿನ ಪ್ರಖ್ಯಾತ ವಕೀಲರೊಬ್ಬರಿಗೆ 2.50 ಲಕ್ಷ ರೂ. ಕೊಟ್ಟು ಜಾಮೀನು ಕೊಡಿಸುವಂತೆ ಅಂಗಲಾಚಿಕೊಂಡ. ಹೈಕೋರ್ಟ್‌ನಲ್ಲಿ ಭಟ್ಟನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡುವಂತೆ ಅವರ ವಕೀಲರು ಎಷ್ಟೇ ವಾದ ಮಾಡಿದರೂ ಒಪ್ಪದ ನ್ಯಾಯಾಲಯ, ನರಸರಾಜಭಟ್ಟ ಏನೂ ತಪ್ಪು ಮಾಡದೆ ಇದ್ದರೆ ತನಿಖಾಧಿಕಾರಿಗಳ ಮುಂದೆ ಶರಣಾಗಿ ತಮ್ಮ ಹೇಳಿಕೆ ನೀಡಲಿ. ನಂತರ ಜಾಮೀನಿಗೆ ಪ್ರಯತ್ನಿಸಲಿ ಎಂದು ಮಂಗಳಾರತಿ ಎತ್ತಿದೆ. ಭಟ್ಟನ ಜಾಮೀನು ಅರ್ಜಿ ತಿರಸ್ಕೃತವಾಗಿ ತಿಂಗಳೇ ಉರುಳಿದರೂ, ಆತನನ್ನು ಬಂಧಿಸದಂತೆ ಪ್ರಭಾವಿಗಳೇ ಒತ್ತಡ ಹಾಕುತ್ತಿರುವುದರಿಂದ ಮಂಡ್ಯ ಪೊಲೀಸರು ಕೂಡ ಗಾಢನಿದ್ರೆಯಲ್ಲಿದ್ದಾರೆ. ಜಿಲ್ಲಾಧಿಕಾರಿ ಬಿ.ಎನ್.ಕೃಷ್ಣಯ್ಯ ಇತ್ತ ಗಮನಹರಿಸಿ ಭಟ್ಟನನ್ನು ಬಂಧಿಸುವಂತೆ ಎಸ್ಪಿ ಭೂಷಣ್ ಬೊರಸೆಯವರಿಗೆ ಆದೇಶ ನೀಡುತ್ತಾರೆ ಎಂದರೆ ಅವರು ತಿರುಗಿಯೂ ನೋಡುತ್ತಿಲ್ಲ, ಯಾರ ಭಯವೂ ಇಲ್ಲದ ಭಟ್ಟ ಬೆಂಗಳೂರಿನಲ್ಲಿ ಬಿಂದಾಸ್ ಆಗಿ ತಿರುಗಾಡಿಕೊಂಡಿದ್ದಾನೆ

ತಟ್ಟೆಕಾಸಿಗಾಗಿ ಕಿತ್ತಾಟ

ಮೇಲುಕೋಟೆ ಚಲುವನಾರಾಯಣಸ್ವಾಮಿ ದೇವಾಲಯದ ಅರ್ಚಕರ ನಡುವಿನ ಹೊಟ್ಟೆಕಿಚ್ಚಿಗೆ ತಟ್ಟೇಕಾಸೇ ಮುಖ್ಯಕಾರಣ. ತಿಂಗಳಿಗೆ ಲಕ್ಷಾಂತರ ರೂ. ತಟ್ಟೆಕಾಸಿಗಾಗಿ ಹಲವು ದಶಕಗಳಿಂದಲೂ ಅರ್ಚಕರ ನಡುವೆ ಕದನ ನಡೆಯುತ್ತಲೇ ಬಂದಿದೆ. ಇನ್ನೂ ದೇವರಿಗೆ ಭಕ್ತರು ನೀಡುವ ಆಭರಣ ಕದ್ದು ಸಾಗಿಸುವುದರಲ್ಲಿ ಇಲ್ಲಿನ ಕೆಲವು ಅರ್ಚಕರು ಕುಖ್ಯಾತಿ ಗಳಿಸಿದ್ದಾರೆ.

ಅವರಲ್ಲಿ ನರಸರಾಜಭಟ್ಟ ಕೂಡ ಒಬ್ಬ, ಬೆಂಗಳೂರಿನ ದಾನಿ ಮುರಳಿ ಜಗನ್ನಾಥ್ ಎಂಬಾತ ಚಲುವನಾರಾಯಣ ಸ್ವಾಮಿಗೆ 1200ಗ್ರಾಂ ಚಿನ್ನದಲ್ಲಿ ಮೇಲಾಯ, ಕೀಳಾಯ, ಪಾದಜೋಡಿ ಹೊಂದಿರುವ ರತ್ನಾಂಗಿ ಆಭರಣ ಮಾಡಿಸಿದರೆ, ಈ ಭಟ್ಟ ಅದನ್ನು ದೇವರಿಗೆ ಹಾಕಿ ತನ್ನ ಮನೆಗೆ ಸಾಗಿಸಿಬಿಟ್ಟ. 3-4 ತಿಂಗಳು ಮನೆಯಲ್ಲೇ ರತ್ನಾಂಗಿ ಇಟ್ಟುಕೊಂಡ ಭಟ್ಟನ ವಿರುದ್ಧ ದೇವಸ್ಥಾನದಲ್ಲೇ ಇದ್ದ ಇತರ ಅರ್ಚಕರು ಒಂದು ಕಣ್ಣಿಟ್ಟು ಕೂತಿದ್ದರು. 3-4 ತಿಂಗಳಾದರೂ ಭಟ್ಟ ರತ್ನಾಂಗಿ ಆಭರಣವನ್ನು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗೆ ಒಪ್ಪಿಸಲೇ ಇಲ್ಲ. ಈ ಬಗ್ಗೆ ಭಟ್ಟನ ಹಿತಶತ್ರುಗಳಾದ ಕೆಲವರು ಮಾಧ್ಯಮಗಳಲ್ಲಿ ವರದಿ ಬರುವಂತೆ ಮಾಡಿದರು. ಯಾವಾಗ ಮಾಧ್ಯಮಗಳಲ್ಲಿ ವರದಿ ಬಂತೋ ಕಾರ್ಯನಿರ್ವಾಹಕ ಅಧಿಕಾರಿ ನರಸರಾಜಭಟ್ಟನಿಗೆ ನೋಟಿಸ್ ಕೊಟ್ಟರು. ಆಗ ಭಟ್ಟ ಚೆನ್ನೈನ ವಿಜಯಾಮೆಟಲ್ ವರ್ಕ್ಸ್ ಎಂಬ ಹೆಸರಿನಲ್ಲಿ ತಾನೇ ನಕಲಿ ಬಿಲ್ ನೀಡಿ ರತ್ನಾಂಗಿ ಆಭರಣ ಒಪ್ಪಿಸಿದ. ದಾನಿಯ ಪ್ರಕಾರ 1200 ಗ್ರಾಂ ಇರಬೇಕಿದ್ದ ಚಿನ್ನ ಮೌಲ್ಯಮಾಪನದ ನಂತರ 387 ಗ್ರಾಂ ಆಗಿತ್ತು, 800 ಗ್ರಾಂನಷ್ಟು ಚಿನ್ನವನ್ನು ಭಟ್ಟನೇ ನುಂಗಿಹಾಕಿದ್ದ.

ನರಸರಾಜಭಟ್ಟನಿಗೆ ತಿಂಗಳೊಂದಕ್ಕೆ 1 ಲಕ್ಷ ರೂ.ಗಳಿಗೂ ಹೆಚ್ಚು ತಟ್ಟೆಕಾಸು ಸಿಗುತ್ತಿತ್ತು. ಆದರೆ ದುರಾಸೆಯ ಭಟ್ಟ ದೇವರಿಗೆ ಭಕ್ತರು ಅರ್ಪಿಸಿದ ಚಿನ್ನಕ್ಕೆ ಕನ್ನ ಹಾಕಿದ. ಈ ರೀತಿ ಮಾಡಿಕೊಂಡ ಹಣದಿಂದಲೇ ಎರಡೆರಡು ಕಾರು ಇಟ್ಟುಕೊಂಡಿದ್ದಾನೆ. ಬೆಂಗಳೂರಿನಲ್ಲಿ ಆಸ್ತಿ ಖರೀದಿಸಿದ್ದಾನೆ. ತಾನಿಲ್ಲದೆ ಹೋದ ಸಂದರ್ಭದಲ್ಲಿ



ರತ್ನಾಂಗಿ ಆಭರಣ

ಬದಲಿ ಅರ್ಚಕರೊಬ್ಬರು ಕೆಲಸ ಮಾಡಬಹುದೇ ಹೊರತು ಬೇರಾರನ್ನೂ ದೇವಸ್ಥಾನಕ್ಕೆ ಬಿಟ್ಟುಕೊಳ್ಳುವಂತಿಲ್ಲ. ಆದರೆ ಭಟ್ಟ ತಟ್ಟೆಕಾಸಿನ ಲೆಕ್ಕಾಚಾರದಲ್ಲಿ ತನ್ನ ಕುಟುಂಬದ ಸದಸ್ಯರನ್ನೆಲ್ಲಾ ಬಳಸಿಕೊಳ್ಳುತ್ತಾನೆ. ಇದು ಮುಜರಾಯಿ ಇಲಾಖೆ ಅಧಿಕಾರಿಗಳಿಗೆ ಗೊತ್ತಿದ್ದರೂ ಅವರು ಸುಮ್ಮನಿರುವ ಹಿಂದಿನ ಕಾರಣ ರಹಸ್ಯವಾಗುಳಿದಿಲ್ಲ.

ಚಲುವನಾರಾಯಣನ ರತ್ನಾಂಗಿ ಆಭರಣವಷ್ಟೇ ಅಲ್ಲ ಭಕ್ತರು ನೀಡಿದ್ದ ಶಂಖ, ಚಕ್ರ, ಗದೆ, ಕಿರೀಟ ಎಲ್ಲವೂ ಕಾಣೆಯಾಗಿವೆ. ಈ ಬಗ್ಗೆ ವಿಶ್ವಹಿಂದೂ ಧರ್ಮ ಸಂರಕ್ಷಣಾ ವೇದಿಕೆಯ ಅಧ್ಯಕ್ಷ ವಿಜಯ್‌ಕುಮಾರ್ ಫೋಟೋ ಲಗತ್ತಿಸಿ ದೇವಸ್ಥಾನ ಕಾರ್ಯನಿರ್ವಾಹಕ ಅಧಿಕಾರಿಯಾದ ವೇಣುಗೋಪಾಲ್‌ಗೆ ಅರ್ಜಿ ಸಲ್ಲಿಸಿ, ಮಾಹಿತಿ ಹಕ್ಕಿನಡಿ ಮಾಹಿತಿ ಕೇಳಿದ್ದರು. ಹಾಗೆಯೇ ದೇವಸ್ಥಾನದ ಅಂತರಂಗದ ಕೈಂಕರ್ಯಪರರಿಗೆ ನೋಟಿಸ್ ನೀಡಿ ಮಾಹಿತಿ ನೀಡುವಂತೆ ಕೋರಿದ್ದರು. ಅದಕ್ಕೆ ಕೈಂಕರ್ಯಪರರು ಶಂಖ, ಚಕ್ರ, ಗದೆ, ಕಿರೀಟ ಇದ್ದದ್ದು ನಿಜ. ಆದರೆ ದಾನಿಗಳ ಬಗ್ಗೆ ಗೊತ್ತಿಲ್ಲ, ಈಗ ಆಭರಣಗಳು ಎಲ್ಲಿವೆ ಎಂತಲೂ ಗೊತ್ತಿಲ್ಲ ಅಂದಿದ್ದಾರೆ. ಅಲ್ಲಿಗೆ ಭಟ್ಟನೇ ಇಲ್ಲೂ ಕೈಚಳಕ ಮೆರೆದಿರಬಹುದೆಂಬ ಅನುಮಾನ ಬಲಗೊಳ್ಳುತ್ತಿದೆ.

ಇಂಗಳಗಿ ವರದಿಯತ್ತ ಎಲ್ಲರ ಚಿತ್ತ

ಚಲುವನಾರಾಯಣನ ರತ್ನಾಂಗಿ ಆಭರಣ ಅವ್ಯವಹಾರ ರಾಜ್ಯ ವಿಧಾನಸಭೆಯಲ್ಲೂ ಪ್ರತಿಧ್ವನಿಸಿದ್ದರಿಂದ ರಾಜ್ಯ ಸರ್ಕಾರ ನ್ಯಾಯಾಂಗ ತನಿಖೆಗೆ ಆದೇಶಿಸಿ ನಿವೃತ್ತ ನ್ಯಾಯಮೂರ್ತಿ ಇಂಗಳಗಿಯವರನ್ನು ನೇಮಿಸಿದೆ. ಅದರಂತೆ ನ್ಯಾಯಮೂರ್ತಿ ಇಂಗಳಗಿ ಸೆ.17 ಮತ್ತು 18ರಂದು ಮೇಲುಕೋಟೆಗೆ ತೆರಳಿ ಆರೋಪಿಗಳ ಕುಟುಂಬಸ್ಥರು ಹಾಗೂ ದೂರುದಾರರಿಂದ ಹೇಳಿಕೆ ಪಡೆದಿದ್ದಾರೆ. ಆಭರಣ ಕದ್ದು ಕ್ರಿಮಿನಲ್ ಕೇಸು ಹೆಟ್ಟಿಸಿಕೊಂಡಿರುವ ನರಸರಾಜಭಟ್ಟನಿಗೆ ನೋಟಿಸ್ ಕೊಟ್ಟರೂ ಆತನ ಪರಮಪುತ್ರ ರಾಮಪ್ರಿಯ, ಭಟ್ಟನ ತಮ್ಮ ನಾರಾಯಣಭಟ್ಟ, ಭಟ್ಟನ ರಕ್ಷಣೆಯ ಹೊಣೆ ಹೊತ್ತಿರುವ ಕರಗಂ ನಾರಾಯಣ ಅಯ್ಯಂಗಾರ್ ಮೊದಲಾದವರು ಇಂಗಳಗಿ ಮುಂದೆ ಭಟ್ಟ ಯಾವುದೇ ತಪ್ಪು ಮಾಡಿಲ್ಲ ಎಂದು ಹೇಳಿಕೆ ನೀಡಿದ್ದಾರೆ.

ಆದರೆ ಭಟ್ಟನ ಜೊತೆ ದೇವಸ್ಥಾನದಲ್ಲಿ ಅರ್ಚಕರಾಗಿ ಕೆಲಸ ಮಾಡುತ್ತಿದ್ದ ದೇಗುಲದ ಅಂತರಂಗ ಕೈಂಕರ್ಯ ಪರರಾದ ಎಂ.ಎ. ನರಸಿಂಹಯ್ಯಂಗಾರ್, ಪಾರ್ಥಸಾರಥಿ, 3ನೇ ಸ್ಥಾನಿಕ ತಿರುನಾರಾಯಣ ಅಯ್ಯಂಗಾರ್, 4ನೇ ಸ್ಥಾನಿಕ ನಾಗರಾಜ ಅಯ್ಯಂಗಾರ್ ಮೊದಲಾದವರು ದಾನಿ ಮುರಳಿ ಜಗನ್ನಾಥ್ 1500 ಗ್ರಾಂ ಚಿನ್ನದ ರತ್ನಾಂಗಿಯನ್ನು ನರಸರಾಜಭಟ್ಟನಿಗೆ ನೀಡಿದರೆಂದು ಇಂಗಳಗಿ ಮುಂದೆ ನುಡಿದಿದ್ದಾರೆ. ಹೋರಾಟಗಾರರಾದ ಶ್ರೀನಿವಾಸ್, ಜಿ.ರಮೇಶ್, ಎಂ.ಬಿ.ಶ್ರೀನಿವಾಸ್ ಮೊದಲಾದವರು ಕೂಡ ಭಟ್ಟನ ವಿರುದ್ಧವಾಗಿ ಹೇಳಿಕೆ ನೀಡಿದ್ದಾರೆ.

ಈಗಾಗಲೇ ಪಾಂಡವಪುರ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನರಸರಾಜಭಟ್ಟ ಕರ್ತವ್ಯ ಲೋಪ ಎಸಗಿ, ಅಧಿಕಾರ ದುರ್ಬಳಕೆ ಮಾಡಿಕೊಂಡು ದಾನಿ ನೀಡಿದ್ದ 800 ಗ್ರಾಂ ಚಿನ್ನವನ್ನು ಲಪಟಾಯಿಸಿರುವುದು, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುವುದು, ರಕ್ಷಣೆಗಾಗಿ ನಕಲಿ ದಾಖಲೆ ಸೃಷ್ಟಿ ಸೇರಿದಂತೆ ಪ್ರಮುಖ ಆರೋಪಗಳು ದಾಖಲೆ ಸಮೇತ ಸಾಬೀತಾಗಿದೆ. ನ್ಯಾಯಮೂರ್ತಿ ಇಂಗಳಗಿ ಕೂಡ ಈ ಬಗ್ಗೆ ಗಮನಹರಿಸಿ ನಿಷ್ಪಕ್ಷಪಾತದ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ನೀಡುವ ಮೂಲಕ ಇಂತಹ ವಂಚಕ ಅರ್ಚಕರಿಂದ ಚಲುವನಾರಾಯಣಸ್ವಾಮಿಯನ್ನು ರಕ್ಷಣೆ ಮಾಡಲಿ ಎಂಬುದೇ ಎಲ್ಲರ ಆಶಯ.

● ನಾಗೇಶ್

02 ◀◀ ಬಿಡಿಚಿತ್ರಗಳು

ಹೇಳಬೇಕೆಂದರೆ ಮೊದಲನೇ ವಿಶ್ವ ಮಹಾಯುದ್ಧದ ಕಾಲದಲ್ಲಿ ಬ್ರಿಟನ್ ಸೇನೆಗೆ ಹಾಗೂ ಅಮೆರಿಕದ ಶಸ್ತ್ರಾಸ್ತ್ರ ತಯಾರಿಕಾ ಕಾರ್ಖಾನೆಗಳಿಗೆ ಅತೀ ಕಡಿಮೆ ದರದಲ್ಲಿ ಕಬ್ಬಿಣ ಅದಿರು ಸರಬರಾಜು ಮಾಡುವ ಉದ್ದೇಶದೊಂದಿಗೆ ಅದಕ್ಕೆ ಚಾಲನೆ ನೀಡಲಾಯಿತು. ಕೆಮ್ಮಣ್ಣುಗುಂಡಿ, ಕುಂಸಿ ಮುಂತಾದೆಡೆ ಲಭ್ಯವಿದ್ದ ಯಥೇಚ್ಛ ಅದಿರಿನ ಬಗ್ಗೆ ಶೋಧನೆ ನಡೆಸಿದ್ದ ನ್ಯೂಯಾರ್ಕ್‌ನ ಸಂಸ್ಥೆಯೊಂದು ಈ ಕಬ್ಬಿಣ ಕಾರ್ಖಾನೆ ಸ್ಥಾಪನೆಗೆ ಪ್ರೇರಣೆಯಾಗಿತ್ತು, 2ನೇ ವಿಶ್ವಯುದ್ಧ ಮುಗಿಯುವವರೆಗೂ ಭದ್ರಾವತಿಯ ಕಬ್ಬಿಣ ಕಾರ್ಖಾನೆಯಲ್ಲಿ ತಯಾರಾಗುತ್ತಿದ್ದ ಅದಿರು ಮದ್ರಾಸ್, ಬಾಂಬೆ, ಕರಾಚಿ ಬಂದರುಗಳ ಮೂಲಕ ಇಂಗ್ಲೆಂಡ್ ಹಾಗೂ ಅಮೆರಿಕದ ಮಾರ್ಷಲ್ ಕಂಪನಿಗಳಿಗೆ ಹರಿದುಹೋದದ್ದೆ ಜಾಸ್ತಿಯಾಗಿತ್ತೆ ವಿನಃ ಕರ್ನಾಟಕದೊಳಗೆ ಕೈಗಾರಿಕೀಕರಣಕ್ಕೆ ಒದಗಿಬಂದದ್ದು ಕಡಿಮೆ.

ವಿದೇಶಿ ವ್ಯಾಪಾರಿಗಳು, ಸ್ಥಳೀಯ ದಲ್ಲಾಳಿ ಬಂಡವಾಳಿಗರು ಹಾಗೂ ಇದೇ ನೆಲದ ಚಿಕ್ಕ ಉದ್ದಿಮೆದಾರರ ನಡುವೆ ಪೈಪೋಟಿ, ಅಸ್ತಿತ್ವಕ್ಕಾಗಿ ಸಂಘರ್ಷ ನಡೆಯುತ್ತಿದ್ದ ಅವಧಿಯಲ್ಲಿ ಅಧಿಕಾರದಲ್ಲಿದ್ದ ವಿಶ್ವೇಶ್ವರಯ್ಯ ತಮ್ಮ ಬ್ರಿಟಿಷ್ ಬಾಸ್‌ಗಳ ಹಿತಾಸಕ್ತಿ ಕಾಪಾಡಬಲ್ಲ ಅನೇಕ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿ ತೋರಿಸಿದರು. Bombay Manufacturers Association ನ ಗೌರವಾಧ್ಯಕ್ಷನಾಗಿದ್ದ ವಿಠಲದಾಸ್ ಠಾಕೂರನ ಕುಟುಂಬದೊಂದಿಗೆ ನಿಕಟ ಸಂಬಂಧ ಹೊಂದಿದ್ದ ಎಂ.ವಿ. ಅವರೊಂದಿಗೆ ವಿಪರೀತ ಅನಿಸುವಷ್ಟು ಪತ್ರ ವ್ಯವಹಾರ ಹೊಂದಿದ್ದರು.

ಇದೇ ವಿಠಲದಾಸ್ ಮತ್ತವನ ವ್ಯಾಪಾರಿ ಗೆಳೆಯರು ಒಮ್ಮೆ ಇಂಡಿಯಾದ ಪ್ರಮುಖ ಆಡಳಿತಗಾರರಿಗೆ ವಿದೇಶಿ ಪ್ರವಾಸ ಏರ್ಪಡಿಸಿದಾಗ ಎಂ.ವಿ. ಕೂಡ ಪಾಲ್ಗೊಂಡು ಜಪಾನ್, ಸ್ವೀಡನ್, ಕೆನಡಾ, ಅಮೆರಿಕಗಳಿಗೆ ಹೋಗಿ ಬರುತ್ತಾರೆ. ನಂತರ ದಿವಾನ್ ವಿಶ್ವೇಶ್ವರಯ್ಯ ಜಪಾನ್-ಜರ್ಮನಿಗಳೊಂದಿಗೆ ಮೈಸೂರು ಸಂಸ್ಥಾನವು ಜಂಟಿ ಉದ್ದಿಮೆಗಳನ್ನು ಸ್ಥಾಪಿಸುವ ಯೋಚನೆ ಮಾಡಿದಾಗ ಪರಿಸ್ಥಿತಿ ಬಿಗಡಾಯಿಸಿತು.


ಮಿರ್ಜಾ ಇಸ್ಮಾಯಿಲ್

ಕಾಗದ ಕಾರ್ಖಾನೆ, ಕಾರ್ ಉತ್ಪಾದನೆ ಇತ್ಯಾದಿ ಯೋಜಿತ ಹೊಸ ಕಾರ್ಖಾನೆಗಳಿಂದ ವಿಠಲದಾಸ್ ತರದವರಿಗೆ ಲಾಭವಾಗುತ್ತಿದ್ದರೂ ಬ್ರಿಟಿಷರಿಗೆ ತಮ್ಮ ವಿರೋಧಿಗಳಾಗಿದ್ದ ಜರ್ಮನಿ-ಜಪಾನ್‌ನವರಿಗೆ ಇಲ್ಲಿ ಕಾಲೂರಲು ಅವಕಾಶ ನೀಡಲು ಒಪ್ಪಿಗೆ ಇರಲಿಲ್ಲ, ಅಲ್ಲದೆ ಕೃಷ್ಣರಾಜ ಒಡೆಯರ ಸ್ವತಃ ಇಂಗ್ಲೆಂಡಿನ ಆಟೋಮೊಬೈಲ್ ಉದ್ದಿಮೆಗಳಲ್ಲಿ ತಮ್ಮ ಸ್ವಂತದ ಲಕ್ಷಾಂತರ ರೂಪಾಯಿ ಹಣ ಹಾಕಿ-ಷೇರುಗಳನ್ನು ಖರೀದಿಸಿದ್ದರು. ಹಾಗಿರುವಾಗ ಜಪಾನ್-ಜರ್ಮನಿಯವರಿಗೆ ಇಲ್ಲಿ ವ್ಯಾಪಾರ ನಡೆಸಲು ಅವಕಾಶ ಸಿಗಲುಂಟೆ? ಇದೆಲ್ಲ ನಂತರ ಒಳಬೇಗುದಿಯಾಗಿ ಬೆಳೆದು ವಿಶ್ವೇಶ್ವರಯ್ಯ ದಿವಾನ್ ಹುದ್ದೆ ಕಳೆದುಕೊಳ್ಳಬೇಕಾಗಿ ಬಂತು. ಆದರೆ ಅದನ್ನು ಮರೆಮಾಚಿ ಅವರು ಮಿಲ್ಲರ್ ವರದಿಯ 'ಮೀಸಲಾತಿ' ವಿರೋಧಿಸಿದರೆಂಬ ಒಂದೇ ಕಾರಣದಿಂದ ದಿವಾನ್ ಹುದ್ದೆಗೆ ರಾಜೀನಾಮೆ ನೀಡಬೇಕಾಗಿ ಬಂತು ಎಂಬಂತೆ ಪ್ರಚಾರ ಮಾಡಲಾಗುತ್ತಿದೆ.

ನಂತರ ದಿವಾನರಾದ ಮಿರ್ಜಾ ಇಸ್ಮಾಯಿಲ್ ಕೂಡ ಬಾಂಬೆಯ ಕೆಲ ಬನಿಯಾ ಉದ್ದಿಮೆದಾರರು ಅಮೆರಿಕದ ಫೋರ್ಡ್ ಕಂಪನಿಯೊಂದಿಗೆ ಕೈಜೋಡಿಸಿ ಇಲ್ಲಿ ಕಾರ್ ತಯಾರಿಕೆಗೆ ಹೊರಟಾಗ ಬೆಂಬಲ ನೀಡಿ ಕೆಲಸ ಕಳೆದುಕೊಳ್ಳಬೇಕಾಯಿತು.

ಇವೆಲ್ಲಾ ಅಂತಾರಾಷ್ಟ್ರೀಯ ಉದ್ದಿಮೆ ಸಂಸ್ಥೆಗಳ ನಡುವಿನ ಪೈಪೋಟಿಯ ಉಪ ಉತ್ಪನ್ನಗಳಂತ ಘಟನೆಗಳು.

ಜಾತಿ, ಕಂದಾಚಾರಗಳನ್ನು ವಿರೋಧಿಸುತ್ತಿದ್ದ ಎಂ.ವಿ. ಅಪರೂಪದ ಪ್ರಾಮಾಣಿಕ-ದಕ್ಷ ಆಡಳಿತಗಾರರಾಗಿದ್ದರು. ಆದರೆ ಅವರ ಎಲ್ಲಾ ಕನಸು-ಯೋಜನೆಗಳು ಕೇವಲ ಸ್ವಂತದ್ದಾಗಿರಲಿಲ್ಲ, ಇತಿಹಾಸದ ಚಲನೆಯ ನಿರ್ದಿಷ್ಟ ಕಾಲಘಟ್ಟದಲ್ಲಿ ಬಲಿಷ್ಠ ಆರ್ಥಿಕ ಶಕ್ತಿಗಳ ಚದುರಂಗದಾಟದಲ್ಲಿ ಎಂ.ವಿ. ಸಹ ಒಂದು ದಾಳದಂತೆ ಚಲಾವಣೆಯಾದವರೇ ಎಂಬುದನ್ನು ನಾವು ಗಮನಿಸಬೇಕು.

ನರೇಂದ್ರ ಮೋದಿಯ 'ಗುಜರಾತ್ ಮಾದರಿಯ ಅಭಿವೃದ್ಧಿ'ಯ ಬಗ್ಗೆ ಈಗ ವಿಪರೀತ ಪ್ರಚಾರ ನೀಡಲಾಗುತ್ತಿದೆ. ಆದರೆ ನಾವು ಕೊಂಚ ಸಹನೆ ಹಾಗೂ ಅನುಮಾನ ಇಟ್ಟುಕೊಂಡೇ ಆ ಅಭಿವೃದ್ಧಿಯ ಒಳಮರ್ಮವೇನೆಂದು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಾದರೆ ಇನ್ನೊಂದು ಮುಖ ಕಾಣುತ್ತದೆ.

ಇದನ್ನು ವಿಶ್ವೇಶ್ವರಯ್ಯ ಹಾಗೂ ನರೇಂದ್ರ ಮೋದಿಯ ನಡುವಿನ ಸಮಾನ ಅಂಶಗಳೆಂದು ನೋಡುವ ಅಗತ್ಯವಿಲ್ಲ, ಬದಲಾಗಿ ಅಪರೂಪದ ಮಿದುಳು ಎಂಬುದರ ಹಿಂದೆ ಯಾವ್ಯಾವ ಪ್ರೇರಕಶಕ್ತಿಗಳಿರುತ್ತವೆಂಬ ವಾಸ್ತವದ ಅರ್ಥ ಕಂಡುಕೊಳ್ಳುವ ಪ್ರಯತ್ನವಾಗಬೇಕು ಅಷ್ಟೆ.

ಅಂದಹಾಗೆ ವಿಶ್ವೇಶ್ವರಯ್ಯನವರಿಗೆ ಸಿಕ್ಕ ಬಿರುದುಗಳಲ್ಲಿ ಕಿಂಗ್ ಜಾರ್ಜ್ ನೀಡಿರುವ 'Knight Commander of the Indian Empire' ಪ್ರಮುಖವಾದದ್ದು. ಇದರ ಅರ್ಥವನ್ನು ಬಿಡಿಸಿ ಹೇಳಬೇಕಿಲ್ಲ.

- ಈ


‘ವಾರ್ತಾಭಾರತಿ’ಗೆ 11ನೇ ಹುಟ್ಟುಹಬ್ಬ

ಭಿನ್ನಮತದ ಮಹತ್ವ ಕಾಣಿಸಿದ ಪತ್ರಿಕೆ

ಜನದನಿಯ ಸಾರಥಿ

ವಾರ್ತಾಭಾರತಿ

ಹಿರಿಯ ಲೇಖಕರಾದ ಅನಂತಮೂರ್ತಿ ಅವರು ತಮ್ಮ ‘ಮಾತುಸೋತ ಭಾರತ’ ಕೃತಿಯ ಮುನ್ನುಡಿಯಲ್ಲಿ ‘ವಾರ್ತಾಭಾರತಿ’ ಪತ್ರಿಕೆಯ ಬಗ್ಗೆ ಒಂದು ಟಿಪ್ಪಣಿ ಬರೆದರು: “ವಾರ್ತಾಭಾರತಿ ಪತ್ರಿಕೆಯ ಇಡೀ ತಂಡ, (ಇಲ್ಲಿ ನಾನು ಗುರುತಿಸದ ಇನ್ನೂ ಅನೇಕರು) ನಮ್ಮ ಕಾಲವನ್ನು ಆಳವಾಗಿ ತಿಳಿಯಬಲ್ಲವರಾಗಿದ್ದಾರೆ. ‘ವಾರ್ತಾಭಾರತಿ’ ಪತ್ರಿಕೆಯ ಸಂಪಾದಕೀಯಗಳಂತೂ ನನಗೆ ಬಹಳ ಪ್ರಿಯವಾಗಿವೆ. ಸದ್ಯ ಎಲ್ಲ ಕನ್ನಡ ದಿನಪತ್ರಿಕೆಗಳಿಗಿಂತ ಗುಣದಲ್ಲಿ ಶ್ರೇಷ್ಠವಾಗಿರುವ ಈ ಪತ್ರಿಕೆ ಯಾವ ರಾಜಿಯನ್ನೂ ಮಾಡಿಕೊಳ್ಳದಂತೆ ಬೆಳೆಯಬೇಕೆಂಬುದು ನನ್ನ ಆಶಯ.”



ಪ್ರಧಾನ ಸಂಪಾದಕ ಅಬ್ದುಸ್ಸಲಾಂ ಪುತ್ತಿಗೆ

ದಿನಪತ್ರಿಕೆಯೊಂದು ನಮ್ಮ ಮಹತ್ವದ ಲೇಖಕರೊಬ್ಬರ ಮೆಚ್ಚುಗೆಯನ್ನು ಹೀಗೆ ಪಡೆಯುವುದೇ ಒಂದು ದೊಡ್ಡ ಪ್ರಶಸ್ತಿ. ಆದರೆ ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿರುವ ನನ್ನ ಅನೇಕ ಗೆಳೆಯರಿಗೆ ಅಥವಾ ಪ್ರಗತಿಪರ ಸಂಗಾತಿಗಳಿಗೆ ಈ ಪತ್ರಿಕೆಯ ಪರಿಚಯ ನಾನಾ ಕಾರಣದಿಂದ ಇಲ್ಲ. ಅದು ಅವರಿಗೆ ಲಭ್ಯವಾಗುತ್ತಿಲ್ಲ. ಈ ಸನ್ನಿವೇಶ ಅನೇಕ ಪತ್ರಿಕೆಗಳ ವಿಷಯದಲ್ಲಿಯೂ ಇದೆ. ಕನ್ನಡದಲ್ಲಿ ಸಮಾಜವಾದಿ ಆಶಯಗಳ ಪರವಾಗಿ ಅಥವಾ ಸಮಾನ ಶತ್ರುಗಳ ವಿರುದ್ಧವಾಗಿ ತುಡಿಯುತ್ತಿರುವ ಪತ್ರಿಕೆಗಳು ಹಲವಾರಿವೆ. ಕರ್ನಾಟಕದಲ್ಲಿ ಪರ್ಯಾಯ ರಾಜಕಾರಣದ ಆಸ್ಥೆಯುಳ್ಳ ಮತ್ತು ಆರೋಗ್ಯಕರ ಸಮಾಜ ಕಟ್ಟುವ ಕನಸುಳ್ಳ ಪತ್ರಿಕೆಗಳು ಇವೆ. ಆದರೆ ಅವು ಚೆಲ್ಲಿಕೊಂಡಿವೆ ಇಲ್ಲವೇ ಕೊಡುಕೊಳ್ಳು ಸಂಬಂಧವಿಲ್ಲದೆ ದ್ವೀಪವಾಗಿವೆ. ತಮ್ಮೊಳಗೆ ಎಷ್ಟೇ ಸಣ್ಣಪುಟ್ಟ ಭಿನ್ನಮತ ಅಥವಾ ಸ್ಪರ್ಧೆ ಇದ್ದರೂ, ಸೈದ್ಧಾಂತಿಕತೆ ವಿಷಯದಲ್ಲಿ ಸಂಪರ್ಕರಹಿತವಾಗಿ ಅವು ಇರುವುದು ವಿಚಿತ್ರ. ಕಾಲಕಾಲಕ್ಕೆ ಸಮಾನಮನಸ್ಕ ಪತ್ರಿಕೆಗಳು ಸೇರುವುದು ಉಚಿತವೆಂದು ಅನಿಸುತ್ತದೆ.

ಸಮಾನಮನಸ್ಕ ಪತ್ರಿಕೆಗಳು ಮತ್ತು ಪತ್ರಕರ್ತರು ಮಾತ್ರವಲ್ಲ, ಲೇಖಕರು, ಚಳವಳಿಗಾರರು, ಕಾರ್ಯಕರ್ತರು ಕೂಡ ಪರಸ್ಪರ ವೈಚಾರಿಕ ಬೌದ್ಧಿಕವಾದ ಸಂಪರ್ಕ ಮತ್ತು ಸಂವಾದ ಇರಿಸಿಕೊಳ್ಳುವ ಅವಕಾಶಗಳನ್ನು ಹೆಚ್ಚು ಸೃಷ್ಟಿಸಿಕೊಳ್ಳುವ ಅಗತ್ಯವಿದೆ. ‘ವಾರ್ತಾಭಾರತಿ’ ಅಥವಾ ಮೈಸೂರಿನ ‘ಆಂದೋಲನ’ದಂತಹ ಪತ್ರಿಕೆಗಳು ಕರ್ನಾಟಕದ ಒಂದು ಭಾಗಕ್ಕೆ ಸೀಮಿತಗೊಳ್ಳುವುದು ಇಲ್ಲವೇ ಕ್ಷೀಣ ಪ್ರಸಾರ ಸಂಖ್ಯೆ ಹೊಂದಿರುವುದು ಒಂದು ವೈರುಧ್ಯವೆನಿಸುತ್ತದೆ.

ನಾನು ‘ವಾರ್ತಾಭಾರತಿ’ಯನ್ನು ಅದು ಪ್ರಾರಂಭವಾದ ದಿನದಿಂದಲೂ ಓದುತ್ತಿದ್ದೇನೆ. ಮುಸ್ಲಿಂ ಮೂಲಭೂತವಾದದ ಕುರಿತ ಅದರ ನಿಲುವಿನ ಬಗ್ಗೆ ನನಗೆ ಕೆಲವು ಪ್ರಶ್ನೆಗಳಿವೆ. ಮೂಲಭೂತವಾದ ವಿರೋಧಿಸುವ ನೆಪದಲ್ಲಿ ನಿರ್ದಿಷ್ಟ ಧರ್ಮ ಅಥವಾ ಸಮುದಾಯವನ್ನು ಬರ್ಬರವೆಂದು ಬಿಂಬಿಸುವ ಕೋಮುವಾದಿ ಗ್ರಹಿಕೆಯನ್ನು ಒಡೆಯಬೇಕಿದೆ ನಿಜ; ಅದೇ ಹೊತ್ತಲ್ಲಿ, ಮುಸ್ಲಿಂ ಸಮುದಾಯದ ಪ್ರಗತಿಶೀಲತೆಯನ್ನು ತಡೆಹಿಡಿದು ಅದಕ್ಕೊಂದು ಅಪಕೀರ್ತಿ ತರುವಂತಾಗಿರುವ ಪುರುಷವಾದ ಮತ್ತು ಮೂಲಭೂತವಾದಗಳ ಬಗ್ಗೆ ಮತ್ತಷ್ಟು ಸ್ಪಷ್ಟತೆ ಮತ್ತು ನಿಷ್ಠುರತೆ ಪಡೆದುಕೊಳ್ಳಬೇಕಿದೆ. ಸೆಕ್ಯುಲರ್ ವಿಚಾರವಾದಿ ಎನಿಸಿಕೊಳ್ಳಲು ತಮ್ಮ ಧರ್ಮ ಮತ್ತು ಧಾರ್ಮಿಕ ಸಮುದಾಯಗಳ ಬಗ್ಗೆ ಅನಗತ್ಯವಾಗಿ ಕಟುವಾಗುವ ಧೋರಣೆ ಒಂದು ಸಮಸ್ಯೆಯಾದರೆ; ಮೂಲಭೂತವಾದವು ಸಮುದಾಯ/ಧರ್ಮ ರಕ್ಷಣೆಯ ಹೆಸರಲ್ಲಿ ಸೃಷ್ಟಿಸುತ್ತಿರುವ ಧಾರ್ಮಿಕ ಅಸಹನೆ, ದ್ವೀಪಪ್ರಜ್ಞೆ, ಸ್ತ್ರೀಯರ ಸಾರ್ವಜನಿಕ ಬದುಕಿಗೆ ಪ್ರವೇಶಿಸುವ ವಿಷಯದಲ್ಲಿರುವ ಸಂಕುಚಿತ ಧೋರಣೆ, ಉಗ್ರವಾದ ಇತ್ಯಾದಿಗಳನ್ನು ತೀವ್ರವಾದ ವಿಮರ್ಶೆಗೆ ಒಳಪಡಿಸದಿರುವುದು ಇನ್ನೊಂದು ಸಮಸ್ಯೆ. ಇದು ಹೆಚ್ಚಿನ ಉರ್ದು ಪತ್ರಿಕೆಗಳ ಬಿಕ್ಕಟ್ಟು. ಇದು ಮುಸ್ಲಿಂ ಸಮುದಾಯದಿಂದ ಬಂದಿರುವ ಚಿಂತಕರ ಬಿಕ್ಕಟ್ಟೂ ಆಗಿದೆ.

‘ವಾರ್ತಾಭಾರತಿ’ ನನಗೆ ಮೂರು ಕಾರಣಗಳಿಂದ ವಿಶಿಷ್ಟವೆನಿಸಿದೆ.

1. ರಾಜಕೀಯದ ಇಲ್ಲವೇ ವಾಣಿಜ್ಯದ ಸುದ್ದಿಗಳಿಗೆ ಹೆಚ್ಚಿನ ಪತ್ರಿಕೆಗಳು ಕೊಡುವ ಆದ್ಯತೆಗಳಿಗೆ ಹೋಲಿಸಿದರೆ, ಇದು ಸಾಮಾಜಿಕವಾದ ಸಾಂಸ್ಕೃತಿಕವಾದ ವಿಷಯಗಳಿಗೆ ಹೆಚ್ಚಿನ ಆದ್ಯತೆ ಕೊಡುತ್ತದೆ. ಕಳೆದೊಂದು ದಶಕದಿಂದ ಹಿಂದುತ್ವವಾದಿಗಳ ಪ್ರಯೋಗ ಭೂಮಿಕೆಯಾಗಿದ್ದ ಕರಾವಳಿಯಲ್ಲಿದ್ದು ಇದು ಮಾಡಿದ ಕೆಲಸಕ್ಕೆ ಒಂದು ಚಾರಿತ್ರಿಕ ಮಹತ್ವವಿದೆ. ಇದು ಮತೀಯವಾದದ ವಿರುದ್ಧ ಅನೇಕ ರಂಗಗಳಲ್ಲಿ ಕೆಲಸ ಮಾಡಿದ ಸಂಗಾತಿಗಳಿಗೆ ವೇದಿಕೆಯಾಗಿ ನಿಂತಿತು. ಇಲ್ಲಿ ಪ್ರಕಟವಾದ ಸುದ್ದಿ ಮತ್ತು ಅಂಕಣ ಬರಹಗಳು, ಬಲಪಂಥೀಯ ರಾಜಕೀಯಕ್ಕೆ ಒಂದು ಸಾಂಸ್ಕೃತಿಕ ಪ್ರತಿರೋಧವನ್ನು ಕಟ್ಟುವ ಕೆಲಸ ಮಾಡಿದವು. ‘ವಾರ್ತಾಭಾರತಿ’ಯಂತಹ ಪತ್ರಿಕೆ ಇಲ್ಲದಿದ್ದರೆ, ಕರಾವಳಿಯಲ್ಲಿ ನಡೆದ ಅನೇಕ ವಿದ್ಯಮಾನಗಳ ಇನ್ನೊಂದು ಮಗ್ಗುಲು ಕರಾವಳಿಯಲ್ಲದ ಓದುಗರಿಗೆ ಸಿಗುತ್ತಿರಲಿಲ್ಲ. ಈ ಕಾರಣಕ್ಕೆ ಇದೊಂದು ಸಬಾಲ್ಟರ್ನ್ ಧೋರಣೆಯ ಪತ್ರಿಕೆ.

2. ಹೆಚ್ಚಿನ ಬಹುಪ್ರಸಾರದ ಪತ್ರಿಕೆಗಳಿಗೆ ಹೋಲಿಸಿದರೆ, ಇದರ ಸಂಪಾದಕೀಯಗಳು ಬಹಳ ಪ್ರಬುದ್ಧವಾದವು ಮತ್ತು ವಿಶಿಷ್ಟವಾದವು. ಅಲ್ಲಿರುವ ಚಿಂತನಶೀಲತೆ, ರಾಜಕೀಯಪ್ರಜ್ಞೆ, ಅಂತಾರಾಷ್ಟ್ರೀಯ ರಾಜಕಾರಣದ ಅರಿವು, ಕೋಮುವಾದ ಮತ್ತು ಸಾಮ್ರಾಜ್ಯಶಾಹಿಯ ಬಗೆಗಿನ ಸೈದ್ಧಾಂತಿಕ ಪ್ರತಿರೋಧ, ಜನಪರ ಕಾಳಜಿ ಮತ್ತು ಬದ್ಧತೆ, ತಾತ್ವಿಕ ಖಚಿತತೆ, ಭಾಷೆಯ ಮೇಲಿರುವ ಹಿಡಿತ, ತರ್ಕದ ಬಿಗಿ, ಹೊಣೆಗಾರಿಕೆ, ಬಿಕ್ಕಟ್ಟಿನ ಸನ್ನಿವೇಶದಲ್ಲಿ ವಿದ್ಯಮಾನವನ್ನು ಸೂಕ್ಷ್ಮವಾಗಿ ವಿಶ್ಲೇಷಿಸುವ ರೀತಿ, ಪರ್ಯಾಯಗಳನ್ನು ಹೊಳೆಸುವ ಬಗೆ, ನಾಡನ್ನು ಕಟ್ಟುವ ಕಾಣ್ಕೆ ಇವು ಅಪೂರ್ವವಾದವು. ಸಂಪಾದಕೀಯವು ಪತ್ರಿಕೆಯ ದೃಷ್ಟಿಕೋನವನ್ನು ಪ್ರಕಟಪಡಿಸುವ ಮಹತ್ವದ ಬದಲಿಸುವ ಮತ್ತು ರೂಪಿಸುವ ಕೆಲಸ ನಿರ್ವಹಿಸಿವೆ. ‘ವಾರ್ತಾಭಾರತಿ’ ಪ್ರಸಾರ ಸಂಖ್ಯೆ ದೊಡ್ಡದಿರಲಿಕ್ಕಿಲ್ಲ, ಆದರೆ ಅದರಲ್ಲಿ ಓದುಗರ ಮನಸ್ಸನ್ನು ಕಟ್ಟುವ ನಾಡಿನ ಅತ್ಯುತ್ತಮ ಚಿಂತಕರು ಬರೆದಿದ್ದಾರೆ ಎನ್ನುವುದು ಮುಖ್ಯ ಸಂಗತಿ.

3. ಈ ಪತ್ರಿಕೆಯ ಹೆಸರನ್ನು ಕಂಡರೆ ಸಂಘಪರಿವಾರಕ್ಕೆ ಸೇರಿದ್ದು ಎಂಬ ಶಂಕೆ ಬರುವಂತಿದೆ. ಆದರೆ ಕೋಮುವಾದದ ವಿರುದ್ಧ ಹೋರಾಟದಲ್ಲಿ ಮುಖ್ಯ ಪಾತ್ರ ವಹಿಸುತ್ತ ಬಂದಿರುವ ಪತ್ರಿಕೆಗಳಲ್ಲಿ ಇದೊಂದು. ಗುಜರಾತ್ ಪ್ರಯೋಗವನ್ನು ತನ್ನದೇ ರೀತಿಯಲ್ಲಿ ಮಾಡುತ್ತಿದ್ದ ಕರಾವಳಿಯಲ್ಲಿ ಅದು ಹುಟ್ಟಿದ್ದಕ್ಕೆ ಇರುವ ಚಾರಿತ್ರಿಕ ಅನಿವಾರ್ಯತೆ ಅರ್ಥವಾಗುತ್ತದೆ. ಕರಾವಳಿಯಲ್ಲಿ ಹುಟ್ಟುವ ಯಾವುದೇ ಜನಪರ ಪತ್ರಿಕೆಗಳು ಬೇರುಬಿಡದಂತೆ ಕೊರಳುಕೊಯುವ ಸ್ಪರ್ಧೆಯನ್ನೊಡ್ಡುವ ಸನ್ನಿವೇಶವೊಂದು ಅಲ್ಲಿದೆ. ಜನಪರ ಪತ್ರಿಕೆಗಳಿಗೆ ಇದು ಔದ್ಯಮಿಕ ಸಹಜ ಸ್ಪರ್ಧೆ ಮಾತ್ರವಾಗಿರದೆ, ಸೈದ್ಧಾಂತಿಕ ಹೋರಾಟವೂ ಆಗಿರುತ್ತದೆ. ‘ಮುಂಗಾರು’ ಹಿಂದೆ ಹಾಗೆ ಅಲ್ಲಿ ಹುಟ್ಟಿತು. ಆಗ ಅದನ್ನು ಓದುವುದು, ಅದಕ್ಕೆ ಬರೆಯುವುದು ಮತ್ತು ಚಂದಾ ಮಾಡಿಸುವುದು ನಮಗೆಲ್ಲ ಚಳವಳಿಯ ಕೆಲಸವಾಗಿತ್ತು. ಆದರೆ ನಾನಾ ಕಾರಣಗಳಿಂದ ‘ಮುಂಗಾರು’ ನಂತರ ಬಂದ ‘ಜನವಾಹಿನಿ’ ಪತ್ರಿಕೆಗಳು ಸೋತು ನಿರ್ಗಮಿಸಿದವು. ಅವು ಯುದ್ಧಭೂಮಿ ತ್ಯಜಿಸಲು ಅವುಗಳ ವ್ಯಾವಹಾರಿಕ ಅಶಿಸ್ತು ಹಾಗೂ ತಾತ್ವಿಕ ಶಿಥಿಲತೆಗಳೂ ಕಾರಣವಾಗಿದ್ದವು ಎಂದು ಅವುಗಳಲ್ಲಿ ಕೆಲಸ ಮಾಡಿದ ಗೆಳೆಯರು ಹೇಳಿದ್ದುಂಟು.



ಸಹ ಸಂಪಾದಕ ಬಶೀರ್

ಭಾಗ. ಆದರೆ ಕೆಲವು ಪತ್ರಿಕೆಗಳಿಗೆ ಸಂಪಾದಕೀಯಗಳೇ ಇಲ್ಲ; ಆದರೆ ಈ ಸಂಪಾದಕೀಯದ ಹೊಣೆಗಾರಿಕೆಯನ್ನು ಕನ್ನಡದಲ್ಲಿ ಕಿರುಪತ್ರಿಕೆಗಳು ಅರ್ಥಪೂರ್ಣವಾಗಿ ನಿಭಾಯಿಸಿಕೊಂಡು ಬಂದಿವೆ. ‘ಜೀವನ’ ಪತ್ರಿಕೆಗೆ ಮಾಸ್ತಿ, ‘ರುಜುವಾತು’ಗೆ ಅನಂತಮೂರ್ತಿ, ‘ಸಂಕ್ರಮಣ’ಕ್ಕೆ ಚಂಪಾ, ‘ಲಂಕೇಶ್ ಪತ್ರಿಕೆ’ಗೆ ಲಂಕೇಶ್ ಅವರು ಬರೆದ ಸಂಪಾದಕೀಯಗಳು ಪುಸ್ತಕಗಳಾಗಿ ಪ್ರಕಟವಾಗಿದ್ದು, ಕನ್ನಡ ಚಿಂತನ ಸಾಹಿತ್ಯದ ಭಾಗವಾಗಿವೆ. ಇಂದೂಧರ ಹೊನ್ನಾಪುರ, ಗೌರಿ ಲಂಕೇಶ್, ಜಿ.ರಾಮಕೃಷ್ಣ ಮುಂತಾದವರು ಬರೆದಿರುವ ಸಂಪಾದಕೀಯಗಳು ಕೂಡ ಹೊಸನಾಡನ್ನು ಕಟ್ಟುವ ತವಕ ಮತ್ತು ಕಾಳಜಿಯ ನೋಟಗಳನ್ನು ಒಳಗೊಂಡಿವೆ. ತಿಂಗಳ ಅಥವಾ ವಾರದ ಪತ್ರಿಕೆಗಳಲ್ಲಿ ಈ ಬಗೆಯ ಚಿಂತನಶೀಲವಾದ ಧ್ಯಾನಸ್ಥ ಸಂಪಾದಕೀಯಗಳು ಸಾಧ್ಯ. ಆದರೆ ದಿನವೂ ಪ್ರಕಟವಾಗುವ ಧಾವಂತದ ದಿನಪತ್ರಿಕೆಗಳಲ್ಲಿ ಇವು ಕಷ್ಟ. ಆದರೂ ‘ಹಿಂದೂ’ ಪತ್ರಿಕೆಯ ಸಂಪಾದಕೀಯಗಳು ತಮ್ಮ ಖಚಿತ ಮತ್ತು ಪ್ರಗತಿಪರ ದೃಷ್ಟಿಕೋನಕ್ಕೆ ಸಾಕ್ಷಿಯಾಗಿವೆ. ರಘುರಾಮಶೆಟ್ಟರು ‘ಮುಂಗಾರು’ ಪತ್ರಿಕೆಗೆ ಬರೆಯುತ್ತಿದ್ದ ಸಂಪಾದಕೀಯಗಳು ಚಿಂತನೆಯಿಂದ ಕೂಡಿರುತ್ತಿದ್ದವು. ಅವರು ಕರ್ನಾಟಕದ ರಾಜಕಾರಣ ಆರ್ಥಿಕತೆ ಎಲ್ಲವನ್ನು ಅಂಕಿಅಂಶಗಳ ಸಮೇತ ಬಲ್ಲವರಾಗಿದ್ದರು. ಅವುಗಳ ನಂತರ ನಾನು ಕಂಡ ಚಿಂತನಶೀಲ ಸಂಪಾದಕೀಯಗಳೆಂದರೆ ‘ವಾರ್ತಾಭಾರತಿ’ಯವು. ಇಲ್ಲಿ ರಾಜಕೀಯವಾಗಿ ಸರಿತನಕ್ಕಾಗಿ ಅತಿ ಎಚ್ಚರ ವಹಿಸದೆ, ಚರ್ಚಿಸಲು ಹಿಂಜರಿಕೆ ಹುಟ್ಟಿಸುವ ಸಂಕೀರ್ಣ ವಿಷಯಗಳ ಬಗ್ಗೆ, ದಿಟ್ಟವಾಗಿ ಸಂಪಾದಕೀಯ ಬರೆದಿರುವುದನ್ನು ಮತ್ತು ಚರ್ಚೆಗೆ ಒಡ್ಡಿಕೊಂಡಿರುವುದನ್ನು ಗಮನಿಸಿರುವೆ. ಅತ್ತಲೂ ಇತ್ತಲೂ ಇರುವಂತಹ ಅಭಿಪ್ರಾಯ ತಾಳದೆ ಖಚಿತವಾದ ನಿಲುವನ್ನು ತಾಳಿರುವ ಈ ಸಂಪಾದಕೀಯಗಳು ಪುಸ್ತಕ ರೂಪದಲ್ಲಿ ಪ್ರಕಟವಾದರೆ ಕನ್ನಡ ಚಿಂತನ ಸಾಹಿತ್ಯಕ್ಕೆ ಕೊಡುಗೆಯಾಗಬಲ್ಲವು; ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಕೈಪಿಡಿಯಾಗಬಲ್ಲವು ಅನಿಸಿದೆ.

ಕನ್ನಡದಲ್ಲಿ ಬಂಡವಾಳ ಹೂಡಿಕೆ, ಪ್ರಸರಣ ಸಂಖ್ಯೆ ಗುಣಮಟ್ಟಗಳ ದೃಷ್ಟಿಯಿಂದ ಯಶಸ್ಸನ್ನು ಸಾಧಿಸಿದ ಪತ್ರಿಕೆಗಳು ಬಹಳಷ್ಟಿವೆ. ಆದರೆ ಸುದ್ದಿ ವಿಶ್ಲೇಷಣೆ ಮತ್ತು ವ್ಯಾಖ್ಯಾನ ಆ ಮೂಲಕ ಒಂದು ತಾತ್ವಿಕ ಚಿಂತನೆ ಮಂಡಿಸುವ ವಿಷಯ ಬಂದಾಗ, ಹೆಚ್ಚಿನವು ನಿರಾಶೆ ಹುಟ್ಟಿಸುತ್ತವೆ. ಅವುಗಳಲ್ಲಿ ಕೆಲವಕ್ಕೆ ನಮ್ಮ ಕಣ್ಣೆದುರಿನ ಸಮಾಜ ಕುರಿತಂತೆ ಒಂದು ಆಳವಾದ ದಾರ್ಶನಿಕ ದೃಷ್ಟಿಕೋನವೇ ಇರುವುದಿಲ್ಲ, ಜಡತೆ, ಅಭಿರುಚಿಹೀನತೆ, ಅಪಕ್ವ ರಾಜಕೀಯ ದೃಷ್ಟಿಕೋನ, ಪಕ್ಷಪಾತ, ತಿರುಚುವಿಕೆ, ಅಧ್ಯಯನರಾಹಿತ್ಯ ಮುಂತಾದ ಮಿತಿಗಳು ಅಲ್ಲಿ ಢಾಳಾಗಿವೆ. ಕೆಲವು ಪತ್ರಿಕೆಗಳಲ್ಲಿ ಸುದ್ದಿಗಿಂತ ಸುದ್ದಿ ವಿಶ್ಲೇಷಣೆಗಳೇ ಅವುಗಳ ಹಿರಿಮೆಗೆ ಕಾರಣ. ‘ಹಿಂದೂ’ ಪತ್ರಿಕೆಯಲ್ಲಿ ಪಿ. ಸಾಯಿನಾಥ್ ಮಾತ್ರವಲ್ಲ, ಹಸನ್ ಸುರೂರ್, ನೀನಾ ವ್ಯಾಸ್, ಜಯತಿ ಘೋಷ್ ಮುಂತಾದವರ ಸುದ್ದಿವಿಶ್ಲೇಷಣೆಗಳು ಓದುಗರ ಅರಿವನ್ನು ವಿಸ್ತರಿಸಿವೆ ಮತ್ತು ಚಿಂತಿಸುವ ದೃಷ್ಟಿಕೋನವನ್ನೆ ಬದಲಿಸಿವೆ. ಕನ್ನಡದಲ್ಲಿ ಜಿ. ರಾಜಶೇಖರ, ದಿನೇಶ್ ಅಮೀನ್‌ಮಟ್ಟು, ಶಿವಸುಂದರ್, ನಾಗೇಶ ಹೆಗಡೆ, ಡಾ.ವಾಸು–ಮುಂತಾದವರ ವಿಶ್ಲೇಷಣ ಬರಹಗಳು ಹೀಗೇ ಓದುಗರ ಆಲೋಚನೆಯನ್ನು

ಆದರೆ ‘ಮುಂಗಾರು’, ‘ಜನವಾಹಿನಿ’ ನಡೆದು ಬಿಟ್ಟು ಹಾದಿಯಲ್ಲಿ ಪ್ರಯಣ ಆರಂಭಿಸಿದ ‘ವಾರ್ತಾಭಾರತಿ’ ಕರಾವಳಿಯಲ್ಲಿರುವ ಪೈಪೋಟಿಯ ಕದನದಲ್ಲಿ ಬದುಕಿದೆ, ಮಾತ್ರವಲ್ಲ ಬೆಳೆದು ದಶಕವನ್ನು ಪೂರೈಸಿದೆ. ನನಗೆ ನೆನಪಿರುವಂತೆ, ಪತ್ರಿಕೆ ಆರಂಭಿಸುವ ಮುನ್ನ ‘ವಾರ್ತಾಭಾರತಿ’ ತಂಡ ಒಂದು ಸಂಶೋಧನೆ ಮಾಡಿತ್ತು. ಆ ವರದಿಯಲ್ಲಿ ಕರ್ನಾಟಕದ ವಿವಿಧ ಪತ್ರಿಕೆಗಳ ವರದಿಗಾರಿಕೆ ವಿಧಾನ, ಭಾಷೆಯ ಬಳಕೆ, ದೃಷ್ಟಿಕೋನಗಳ ಸೈದ್ಧಾಂತಿಕ ವಿಶ್ಲೇಷಣೆಯಿದೆ. ಸಾಹಿತ್ಯದಲ್ಲಿ ಭಾಷೆಯ ಬಳಕೆ ಮತ್ತು ದೃಷ್ಟಿಕೋನಗಳ ಸಂಬಂಧಗಳನ್ನು ವಿಶ್ಲೇಷಣೆ ಮಾಡುವುದನ್ನು ಸಂಶೋಧನ ವಿದ್ಯಾರ್ಥಿಗಳಿಗೆ ಕಲಿಸುವ ಸಂದರ್ಭದಲ್ಲಿ ಈ ವರದಿಯನ್ನು ಅಧ್ಯಯನ ಮಾಡುವಂತೆ ನಾನು ಸೂಚಿಸುವುದುಂಟು. ಈ ಹಿನ್ನೆಲೆಯಲ್ಲಿ ಇಂದಿಗೂ ಕರ್ನಾಟಕದ ಮುಖ್ಯ ಪತ್ರಿಕೆಗಳ ಮುಖಪುಟದ ತಲೆಬರಹಗಳನ್ನು ಗಮನಿಸಿದರೆ, ಅವುಗಳ ತಾತ್ವಿಕ ನಿಲುವು ಮತ್ತು ರಾಜಕಾರಣದ ದಿಸೆ ಸ್ಪಷ್ಟವಾಗುತ್ತದೆ.

‘ವಾರ್ತಾಭಾರತಿ’ ಸೈದ್ಧಾಂತಿಕ ಸ್ಪಷ್ಟತೆಯನ್ನು ಮಾತ್ರವಲ್ಲದೆ, ವೃತ್ತಿಪರತೆಯನ್ನು ಸಹ ಮೈಗೂಡಿಸಿಕೊಂಡಿದೆ. ನಮ್ಮ ಕಾಲದ ಒಂದು ವೈರುಧ್ಯವೆಂದರೆ, ಪ್ರತಿಗಾಮಿ ಸಂಘಟನೆಗಳ ಏಕೀಕರಣ ಮತ್ತು ಪ್ರಗತಿಪರ ಸಂಘಟನೆಗಳು ಛಿದ್ರೀಕರಣ. ತಮ್ಮ ಭಿನ್ನಮತ ಮತ್ತು ದಾಯಾದಿ ಕಲಹಗಳಿಗೆ ಖ್ಯಾತವಾಗಿರುವ ಪ್ರಗತಿಪರರು, ಕೆಲವೊಮ್ಮೆ ತಮ್ಮ ಸೈದ್ಧಾಂತಿಕ ಶತ್ರುಗಳಿಗಿಂತ ಹೆಚ್ಚಾಗಿ ಭಿನ್ನಮತದ ಮೂಲಕ ಚರ್ಚೆ ಮಾಡಬಹುದಾದ ಸಂಗಾತಿಗಳ ವಿಷಯದಲ್ಲಿ ಅಸಹನೆ ತೋರುವುದುಂಟು. ಪ್ರಗತಿಪರ ಪತ್ರಿಕೆ ಮತ್ತು ಸಂಘಟನೆಗಳಲ್ಲಿ ಕಾಣದ ತಂತ್ರಗಾರಿಕೆ, ವೃತ್ತಿಪರತೆ, ಸಂಘಟನಾಶಕ್ತಿಗಳು ಬಲಪಂಥೀಯ ಸಂಘಟನೆ–ಪತ್ರಿಕೆಗಳಲ್ಲಿ ಕಾಣುವುದುಂಟು. ಪತ್ರಿಕೆ ಅಥವಾ ಸಂಘಟನೆಗಳಿಗೆ ಉದಾತ್ತ ಆಶಯವಿರುವುದು ಹೊಸಸಮಾಜ ಕಟ್ಟುವ ಕನಸಿರುವುದು ಮಾತ್ರ ಮುಖ್ಯವಲ್ಲ, ಅವನ್ನು ನಡೆಸಿಕೊಂಡು ಹೋಗುವ ವ್ಯವಹಾರಶೀಲತೆ ಕೂಡ ಮುಖ್ಯ. ಲಂಕೇಶ್ ಅವರಿಗೆ ಇದು ಸಾಧ್ಯವಾಗಿತ್ತು. ಈ ವೃತ್ತಿಪರತೆಯ ಕುಶಲತೆ ಮತ್ತು ವ್ಯವಹಾರ ಜ್ಞಾನದ ಎಚ್ಚರದ ಮಾತನ್ನು ಅವರು ಹಲವಾರು ಸಲ ಬರೆದಿದ್ದಾರೆ. ಈ ದೃಷ್ಟಿಯಿಂದ ‘ವಾರ್ತಾಭಾರತಿ’ಯಂತಹ ಪತ್ರಿಕೆಗಳು ಹೆಚ್ಚಬೇಕು ಮಾತ್ರವಲ್ಲ ಅವು ಕುಸಿಯದೆ ನಡೆಯಬೇಕು.

ಈಗ ಅನೇಕ ಪತ್ರಿಕೆಗಳಿಗೆ ಸುದ್ದಿಕೊಡುವುದು ಅವನ್ನು ವಿಶ್ಲೇಷಿಸಿ ಚಿಂತನೆ ಕೆರಳಿಸುವುದು ಮುಖ್ಯವಾಗಿಲ್ಲ, ಬದಲಾಗಿ ಓದುಗರಲ್ಲಿ ತಮ್ಮ ನಿಲುವನ್ನು ಹೇರುವ ಮತ್ತು ಅವರ ಸಮ್ಮತಿ ಸೃಷ್ಟಿಸುವ ಕೆಲಸ ಜೋರಾಗಿ ನಡೆಯುತ್ತಿವೆ. ಅವು ಸರ್ವಾಧಿಕಾರಿ ಫ್ಯಾಸಿಸ್ಟರು ದೇಶವನ್ನಾಳುವುದಕ್ಕೆ ಜನರ ಮಾನಸವನ್ನು ಸಿದ್ಧಮಾಡುವುದರಲ್ಲಿ ತೊಡಗಿವೆ. ಮಾಧ್ಯಮಗಳು, ಫ್ಯಾಸಿಸ್ಟ್ ವಿಚಾರಧಾರೆ, ಮುಕ್ತಮಾರುಕಟ್ಟೆಯ ಆರ್ಥಿಕನೀತಿ, ಕಾರ್ಪೋರೇಟ್ ಹಿತಾಸಕ್ತಿಗಳು, ಬಲಪಂಥೀಯ ರಾಜಕಾರಣ, ಏಕೀಭವಿಸುತ್ತಿದೆ. ಇಂತಹ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಸುದ್ದಿಯ ಅಥವಾ ಘಟನೆಯ ಇನ್ನೊಂದು ಮಗ್ಗುಲನ್ನು ಬಿಡಿಸಿ ತೋರಿಸುವ, ಭಿನ್ನಮತ ಹುಟ್ಟಿಸುವ, ಭಿನ್ನಮತವನ್ನು ಸಹನೆಯಿಂದ ಕೇಳುವ, ಚಿಂತನಶೀಲ ಪ್ರವೃತ್ತಿ ಬೆಳೆಸುವ ಕೆಲಸ ಎಷ್ಟು ಮುಖ್ಯವೆಂದು ಅರಿವಾಗುತ್ತಿರುವ ಹೊತ್ತಲ್ಲಿ, ‘ವಾರ್ತಾಭಾರತಿ’ ಹನ್ನೊಂದನ್ನು ದಾಟುತ್ತಿದೆ. ಅದು ಮತ್ತಷ್ಟು ಕನ್ನಡದ ಚಿಂತಕರನ್ನು ಒಳಗೊಳ್ಳುವಂತಾಗಲಿ, ಹೆಚ್ಚಿನ ಓದುಗರನ್ನು ತಲುಪುವಂತಾಗಲಿ ಎಂದು ಹಾರೈಸುವೆ.



ರಹಮತ್ ತರೀಕೆರೆ

‘ವಾರ್ತಾ ಭಾರತಿ’ಗೆ ಲಂಕೇಶ್ ಮೀಡಿಯಾದ ಶುಭ

27 ಸೆಪ್ಟೆಂಬರ್ 2013, ಶುಕ್ರವಾರ ಸಂಜೆ 5.00 ಕ್ಕೆ ಸ್ಥಳ: ಪುರಭವನ, ಬೆಂಗಳೂರು

ಉದ್ಘಾಟನೆ:
ಶ್ರೀ ಎನ್. ರಾಮ್
ಪ್ರಧಾನ ಸಂಪಾದಕರು, ‘ದಿ ಹಿಂದೂ’ ದೈನಿಕ

ಮುಖ್ಯ ಅತಿಥಿ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ವಿಶೇಷಾಂಕ ಬಿಡುಗಡೆ
ಜ್ಞಾನಪೀಠ ಪುರಸ್ಕೃತ
ಡಾ.ಯು.ಆರ್.ಅನಂತಮೂರ್ತಿ

ಗೌರವ ಅತಿಥಿ
ಶ್ರೀ ದೇವನೂರ ಮಹಾದೇವ
ಖ್ಯಾತ ಚಿಂತಕ ಹಾಗೂ ಬರಹಗಾರರು,

ಪ್ರಸ್ತಾವನೆ
ಅಬ್ದುಸ್ಸಲಾಮ್ ಪುತ್ತಿಗೆ
ಪ್ರಧಾನ ಸಂಪಾದಕ, ವಾರ್ತಾಭಾರತಿ ದೈನಿಕ


ವಿಶೇಷ ಆಹ್ವಾನಿತರು
ಎಚ್.ಎಂ. ಅಫ್ರೋಝ್ ಅಸ್ಸಾದಿ
ನಿರ್ದೇಶಕರು, ಮಾಧ್ಯಮ ಕಮ್ಯುನಿಕೇಷನ್ಸ್ ಲಿ.,
ಮಂಗಳೂರು
ಸಯ್ಯದ್ ಅಬ್ದುಲ್ ಖಾದರ್ ಬಾಶು
ಅಧ್ಯಕ್ಷರು,
ಗ್ರೀನ್‌ವ್ಯಾಲಿ ನ್ಯಾಷನಲ್ ಸ್ಕೂಲ್
ಹಾಗೂ ಪಿಯು ಕಾಲೇಜು,
ಶೀರೂರು, ಉಡುಪಿ

ಅಧ್ಯಕ್ಷತೆ
ಎಸ್.ಎಂ. ಸಯ್ಯದ್ ಖಲೀಲ್
ಅಧ್ಯಕ್ಷರು,
ಮಾಧ್ಯಮ ಕಮ್ಯುನಿಕೇಷನ್ಸ್ ಲಿ.
ಮಂಗಳೂರು

ಓದುಗ ಬಳಗದ ವಿಶೇಷ ಅತಿಥಿಗಳು
ಶ್ರೀ ವಿ.ಎಂ. ಸಂಘರ್ಷ, ಕೋಲಾರ
ಶ್ರೀಮತಿ ಶೈಲಜಾ ವಿಠಲ, ಮೈಸೂರು
ಶ್ರೀ ಕುಮಾರ್ ಶೃಂಗೇರಿ, ಬೆಂಗಳೂರು


ಮಾಹಿತಿಗಾಗಿ ಸಂಪರ್ಕಿಸಿ:
8095897444

ನಿಮಗಿದು ನಮ್ಮ
ಆತ್ಮೀಯ ಆಮಂತ್ರಣ
ವಾರ್ತಾಭಾರತಿ ಬಳಗ



ವಿಜಯವಾಣಿ ಕನ್ನಡಪ್ರಭ

ಎರಡು ಕನ್ನಡ ಪತ್ರಿಕೆಗಳು ಹಾಗೂ ಅವುಗಳ 'ನಮೋ ಬ್ರಿಗೇಡ್'



ಸಂಪಾದಕರಿಗೆ ಪತ್ರ:

ಕನ್ನಡಪ್ರಭ ಹಾಗು ವಿಜಯವಾಣಿ ಪತ್ರಿಕೆಗಳ ಸಂಪಾದಕರ ಪತ್ರಕರ್ತರ ದಿರಿಸು ಮತ್ತೊಮ್ಮೆ ಕಳಚಿ ಬಿದ್ದು ಅವರು ಬೆತ್ತಲೆಯಾಗಿದ್ದಾರೆ. ದಿನಾಂಕ 15.9.2013ರಂದು ಬೆಂಗಳೂರಿನಲ್ಲಿ ನಡೆದ ಬರಗೂರು ರಾಮಚಂದ್ರಪ್ಪನವರ ಪುಸ್ತಕ ಬಿಡುಗಡೆಯ ಸಮಾರಂಭದಲ್ಲಿ ಯು.ಆರ್.ಅನಂತಮೂರ್ತಿ ಮಾತನಾಡುತ್ತ 'ಮೋದಿ ಕಾಲದಲ್ಲಿ ಬದುಕಲು ನಾನು ಇಷ್ಟಪಡೋಲ್ಲ' ಎಂದು ಹೇಳಿದರು. ಇದರ ವರದಿ ದಿ. 16.9.2013ರ ಕನ್ನಡಪ್ರಭದ ಮುಖಪುಟದ ನೆತ್ತಿಯಲ್ಲೇ ಪ್ರಕಟವಾಯಿತು. ಕನ್ನಡದ ಲೇಖಕನಿಗೂ ಮುಖಪುಟದ ಮನ್ನಣೆಯೇ ಎಂದು ಆಶ್ಚರ್ಯಪಟ್ಟುಕೊಳ್ಳುವಷ್ಟರಲ್ಲಿ, ಅದು ಅನಂತಮೂರ್ತಿಯವರ ತೇಜೋವಧೆಗೆ ಸಂಪಾದಕ ವಿಶ್ವೇಶ್ವರ ಭಟ್ಟ ಹೆಣೆದ ಕುತಂತ್ರ ಎನ್ನುವುದು ಸ್ಪಷ್ಟವಾಗಿಬಿಟ್ಟಿತು. ಸಂಪಾದಕರು ವರದಿಗೆ ಕೊಟ್ಟ ತಲೆಬರಹ 'ಮೋದಿ ಆಳುವ ನಾಡಲ್ಲಿ ಬದುಕಲಾರೆ'! ವರದಿಯಲ್ಲಿ ಅನಂತಮೂರ್ತಿಯವರ ಭಾಷಣದ ನಾಲ್ಕು ಸಾಲನ್ನು ಪ್ರಕಟಿಸಿದ ಸಂಪಾದಕರು, ಅದರ ಬಹುಪಾಲನ್ನು ಮೋದಿ ಅಭಿಮಾನಿಗಳ ಮಾತಿಗೆ ಮೀಸಲಾಗಿರಿಸಿದ್ದರು. ಈಗ 81ರ ಹರೆಯದಲ್ಲಿರುವ ಅನಂತಮೂರ್ತಿ ಸದ್ಯದ ಸ್ಥಿತಿಯ ಕುರಿತು ದುಗುಡದಿಂದ ಹೇಳಿದ ಮಾತೊಂದನ್ನು ತಿರುಚಿ, ಚಿದಾನಂದ ಮೂರ್ತಿಯಾದಿಯಾಗಿ ಎಲ್ಲರೂ ಅವರನ್ನು ಭಯೋತ್ಪಾದಕ ಮತ್ತು ದೇಶದ್ರೋಹಿ ಎಂಬಂತೆ ಮಾತನಾಡಿದರು. ಒಬ್ಬರು ಅನಂತಮೂರ್ತಿ ವೀಸಾಕ್ಕೆ ಪ್ರಯತ್ನಿಸಲಿ; ಅವರಿಗೆ ಸೋನಿಯಾ ಸಹಾಯ ಮಾಡಬಹುದು ಎಂದು ಸೂಚಿಸಿದರು. ಮತ್ತೊಬ್ಬರು ಅವರು ಪಾಕಿಸ್ತಾನಕ್ಕೋ ಅಫ್ಘಾನಿಸ್ತಾನಕ್ಕೋ ಹೋಗಲಿ ಎಂದು ಸಲಹೆ ಕೊಟ್ಟರು. ಈ ನಮೊ ಪಡೆಯ ಬಂಟರಲ್ಲಿ ಬಿ.ಜೆ.ಪಿ. ರಾಜ್ಯಾಧ್ಯಕ್ಷ ಪ್ರಹ್ಲಾದ ಜೋಶಿ ಒಬ್ಬರು ಮಾತ್ರ ಇಳಿವಯಸ್ಸಿನ ಅನಂತಮೂರ್ತಿಯವರಿಗೆ ದೀರ್ಘಾಯುಷ್ಯ ಕೋರುವ ಸೌಜನ್ಯ ಉಳಿಸಿಕೊಂಡಿದ್ದರು! ಇನ್ನುಳಿದವರೆಲ್ಲರೂ ಅನಂತಮೂರ್ತಿ ತೊಲಗಿ ಹೋಗಲಿ ಎಂದು ಚೂರೂ ಅಳುಕಿಲ್ಲದೆ ಹೇಳಿದರು. ಇದು ವ್ಯಂಗ್ಯದಲ್ಲಿ ಆಡಿದ ಮಾತು ಎಂದು ಭಾವಿಸುವುದಕ್ಕೂ ಅವಕಾಶವಿಲ್ಲ; ವ್ಯಂಗ್ಯ ಮುಂತಾದ ಭಾಷೆಯ ಸೂಕ್ಷ್ಮ ಬಳಕೆ ಈ ಒರಟರಿಗೆ ಮೀರಿದ್ದು, ಇವರು ಹೇಳುವ ಮಾತಿಗೆ ಇರುವುದು

ಒಂದೇ ಅರ್ಥ-ಯಥಾರ್ಥ!

ನಾಳೆ ಇವರ ಕೈಗೆ ಅಧಿಕಾರ ಸಿಕ್ಕಿಬಿಟ್ಟರೆ ಖಂಡಿತ ತಾವು ಆಡಿದ ಮಾತನ್ನು ಇವರು ಕಾರ್ಯರೂಪಕ್ಕೆ ತರುವವರೇ.

ನಾಯಿ ಬೊಗಳಿದರೆ ದೇವಲೋಕ ಹಾಳಾಗುತ್ತದೆಯೆ ಎಂದು ಕನ್ನಡದ ಗಾದೆ ಇದೆ. ಅನಂತಮೂರ್ತಿಯವರಂತೂ ತಮ್ಮ ಕುರಿತು ಅತೀವ ಅಸಹನೆ ತೋರುವವರನ್ನು ಕೂಡ ಸಹಿಸಿಕೊಳ್ಳುವವರಷ್ಟೇ ಅಲ್ಲ; ಯಾವ ಸನ್ನಿವೇಶ ಇಂತಹ ಅಸಹನೆಯನ್ನು ಹುಟ್ಟಿಹಾಕುತ್ತದೆ ಎಂದು ಅರ್ಥಮಾಡಿಕೊಳ್ಳಬಲ್ಲ ಹೃದಯವಂತರು. ಕನ್ನಡಪ್ರಭದ ಸಂಪಾದಕ ವಿ.ಭಟ್ಟರ ಕುತಂತ್ರ ಅವರಿಗೆ ಹೊಸ ಅನುಭವವೇನೂ ಅಲ್ಲ, ಭಟ್ಟರು ಈ ಹಿಂದೆ ವಿಜಯ ಕರ್ನಾಟಕದ ಸಂಪಾದಕರಾಗಿದ್ದಾಗ ಅವರ ವಿರುದ್ಧ ಎಸ್.ಎಮ್.ಎಸ್. ಆಂದೋಲನವನ್ನೇ ಪ್ರಾಯೋಜಿಸಿದ್ದರು. ಅಬ್ಬರದ ಪ್ರಚಾರ, ಆಕರ್ಷಕ ಪ್ಯಾಕೇಜುಗಳಿಂದ ಹಸಿ ಹೇಸಿಗೆಯನ್ನೂ ಮಾರುವ ಚಾಲಾಕಿ ಮತ್ತು ಎದುರಾಳಿಯ ಸೊಲ್ಲಡಗಿಸುವ ಫ್ಯಾಸಿಸ್ಟ್ ದುಂಡಾವರ್ತಿಗಳ ಅಪೂರ್ವ ಮಿಶ್ರಣವೇ ವಿಶ್ವೇಶ್ವರ ಭಟ್ಟ ಎಂಬ ವಿಸ್ಮಯ! ಈ ದೇಶದ ಮುಸ್ಲಿಮರು ಮತ್ತು ಕ್ರೈಸ್ತರು ಮಾತ್ರವಲ್ಲ ಹಿಂದೂಗಳಲ್ಲೂ ತಮ್ಮ ರಾಜಕೀಯ ಒಲ್ಲದ ಎಲ್ಲರೂ ದೇಶದ್ರೋಹಿಗಳು ಎಂದು ಚಿತ್ರಿಸುವ ಇವರ ಫ್ಯಾಸಿಸ್ಟ್ ವರಸೆಯ ಇತ್ತೀಚಿನ ಉದಾಹರಣೆ, ಮೇಲೆ ಹೇಳಿರುವ ವರದಿ. ಇದರ ವಿರುದ್ಧ ನಾವು ದನಿ ಎತ್ತಲೇಬೇಕು.

ಅನಂತಮೂರ್ತಿ ಕನ್ನಡದ ಬಲು ಮುಖ್ಯ ಲೇಖಕರಲ್ಲಿ ಒಬ್ಬರು. ಅವರ ಜೊತೆ ಕನ್ನಡಿಗರ ವಾಗ್ವಾದ, ಮೆಚ್ಚುಗೆ, ಭಿನ್ನಮತ, ಅನುಸಂಧಾನಗಳ ನಂಟು 60 ವರ್ಷಗಳದ್ದು. ಇಂತಹ ಮಹತ್ವದ ಲೇಖಕರನ್ನು ಪತ್ರಿಕೆಗಳು ಚಿಲ್ಲರೆ ಮಾತುಗಳಲ್ಲಿ ನಿಂದಿಸುವುದನ್ನು ಅವರ ಓದುಗರು ಪ್ರತಿಭಟಿಸಬೇಕು. ಬರುವ ಲೋಕಸಭಾ ಚುನಾವಣೆಯ ಫಲಿತಾಂಶ ಹೇಗೇ ಇರಲಿ, ಮೋದಿ ಈ ದೇಶದ ರಾಜಕೀಯ ವಾಗ್ವಾದವನ್ನು ರೂಪಿಸುತ್ತಾರೆ. ಅಭಿವೃದ್ಧಿ, ಪೌರತ್ವ ಮತ್ತು ರಾಷ್ಟ್ರದ ಪರಿಕಲ್ಪನೆಗಳನ್ನು ಮಾತ್ರವಲ್ಲದೆ ಸಾಮಾಜಿಕ ನ್ಯಾಯ ಮತ್ತು ಸಮಾನತೆಗಳ ಕುರಿತ ಚರ್ಚೆಯ ಪ್ರಧಾನ ನೆಲೆಗಳನ್ನು ಸಹ ಮೋದಿತ್ವ/ಹಿಂದೂತ್ವ ನಿರ್ಧರಿಸುತ್ತದೆ; ಇದನ್ನು ಯೋಚಿಸಲು ಸಹ ಭಯವಾಗುತ್ತದೆ. ಚುನಾವಣೆಗಳಲ್ಲಿ ಬಹುಮತ ಪಡೆದು ಅಧಿಕಾರಕ್ಕೇರುವುದು ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯ ಒಂದು ವೈಧಾನಿಕ ಅಂಶ ಮಾತ್ರ; ಪ್ರಜೆಗಳ ಕಲ್ಯಾಣ, ಸಾಮಾಜಿಕ ನ್ಯಾಯ ಹಾಗು ನಾಗರಿಕ ಸಮಾನತೆಗಳ ತತ್ವವನ್ನು ನಿರೂಪಿಸುವ ಸಂವಿಧಾನಕ್ಕೆ ಉತ್ತರದಾಯಿಯಾಗಿರುವುದು ಪ್ರಜಾಪ್ರಭುತ್ವದ ಬೆನ್ನೆಲುಬು. ಬಹುಮತದ ಮೂಲಕ ಅಧಿಕಾರ ಪಡೆದು ಸಂವಿಧಾನದ ಬೆನ್ನೆಲುಬು ಮುರಿಯುವ, ನಾಗರಿಕ ಹಕ್ಕು, ಸಾಮಾಜಿಕ ಸಮಾನತೆಯ ಪರಿಕಲ್ಪನೆಗಳನ್ನೇ ಛಿದ್ರಗೊಳಿಸಿ ಪ್ರಜಾಪ್ರಭುತ್ವಕ್ಕೆ ಚೇತರಿಸಿಕೊಳ್ಳಲಾರದ ಹಾಗೆ ಲಕ್ವ ಹೊಡೆಸುವುದಕ್ಕೂ ಸಾಧ್ಯವಿದೆ ಎನ್ನುವುದನ್ನು ಅರಿಯಲು ನಾವು ನಾಜಿ ಜರ್ಮನಿಯ ಉದಾಹರಣೆಯತನಕ ಹೋಗಬೇಕಾಗಿಲ್ಲ.

ಮೋದಿಯ ಗುಜರಾತ್ ರಾಜ್ಯದ ಉದಾಹರಣೆಯೇ ನಮ್ಮೆದುರಿಗಿದೆ!

ಮೋದಿ ಅಧಿಕಾರಕ್ಕೆ ಬಂದಾಗಿಂದ, ಮೇಧಾ ಪಾಟ್ಕರ್ ಗುಜರಾತ್ ರಾಜ್ಯದ ಗಡಿ ಪ್ರವೇಶಿಸದ ಹಾಗೆ ಸ್ವತಃ ಗುಜರಾತ್ ಸರಕಾರವೇ ನಿಗಾ ವಹಿಸಿದೆ-ಕಾರಣ: ಮೇಧಾ ಪಾಟ್ಕರ್ 'ನಮೋ ಮಾದರಿಯ ಅಭಿವೃದ್ಧಿ'ಯಿಂದ ಸಂತ್ರಸ್ತರಾದವರನ್ನು ಒಗ್ಗೂಡಿಸಿ ಜನಾಂದೋಲನ ಮಾಡುತ್ತಾರೆ (ಅವರು 'ದೇಶದ್ರೋಹಿ'!). ವಂಜಾರನ ಪತ್ರ ಬಹಿರಂಗಪಡಿಸದಂತೆ ಗುಜರಾತಿನ ಕಾನೂನು ಪಾಲಕರು 'ನಮೋ ದೇವರೆಂದು' ನೆಚ್ಚಿಕೊಂಡು ಅವರ ಕಾನೂನಿನ ಪ್ರಕಾರ 'ಭಯೋತ್ಪಾದಕರು, ದೇಶದ್ರೋಹಿಗಳ'ನ್ನು ಕೊಲ್ಲುತ್ತಿರಬೇಕು-ಸಂವಿಧಾನಿಕ ಬದ್ಧತೆಯ ಮಾತಾಡಿದ ಪೊಲೀಸ್ ಅಧಿಕಾರಿಗಳು ಅಪರಾಧಿಗಳು. ದೇಶದ ಸರ್ವೋಚ್ಚ ನ್ಯಾಯಾಲಯ, ಮೋದಿ ಆಳ್ವಿಕೆಯಡಿ ಸಂವಿಧಾನಿಕ ನ್ಯಾಯಿಕ ವಿಚಾರಣೆಗೆ ಅಪಾಯವಿದೆ ಎಂದು ಕೇಸುಗಳನ್ನು ಮಹಾರಾಷ್ಟ್ರ ಕೋರ್ಟುಗಳಲ್ಲಿ ನಡೆಸುವ ಆಜ್ಞೆ ನೀಡಿದೆ-ಇದು ನಮೋ ಮುಖ್ಯಮಂತ್ರಿಯಾಗಿರುವ ಗುಜರಾತಿನಲ್ಲಿರುವ 'ಬಹುಮತದ ಆಳ್ವಿಕೆ'ಯ ಪ್ರಜಾಪ್ರಭುತ್ವ!

ಅದಕ್ಕೆ ತೀಸ್ತಾ ಸೆಟ್ಲ್ವಾಡ್ ಹೇಳುತ್ತಾರೆ "ಇದು ಚುನಾವಣಾ ಪ್ರಜಾಪ್ರಭುತ್ವ ಹಾಗು ಸಂವಿಧಾನಿಕ ಪ್ರಜಾಪ್ರಭುತ್ವಗಳ ನಡುವೆ ನಡೆಯುತ್ತಿರುವ ಹೋರಾಟ".

ಅನಂತಮೂರ್ತಿ ಹಿಂಸೆಯನ್ನು ರಾಜಕೀಯ ವಿಧಾನವಾಗಿ ಸ್ವೀಕರಿಸಿದ ಎಲ್ಲ ಸಿದ್ಧಾಂತಗಳನ್ನು ವಿರೋಧಿಸುತ್ತಾ ಬಂದವರು; ಪ್ರಜಾಪ್ರಭುತ್ವವಾದಿಯಾಗಿದ್ದುಕೊಂಡು ದೇಶದ ಪ್ರಜಾಪ್ರಭುತ್ವ ಎದುರಿಸುತ್ತಿರುವ ಅಪಾಯದ ಕುರಿತು ಅವರು ಆತಂಕಗೊಂಡಿದ್ದಾರೆ. ಅವರ ಆತಂಕ ನಮ್ಮದೂ ಆಗಬೇಕು.



- ಜಿ.ರಾಜಶೇಖರ್, ಕೆ.ಫಣಿರಾಜ್

ಮೋದಿ ಎಂಬ ಹಾರರ್ ಸಿನಿಮಾದ ಟ್ರೈಲರ್

ಇದು ಗೋಡ್ಸೆ ಸಂತತಿಯವರ ಅರಚಾಟ

ಅನಂತಮೂರ್ತಿಯವರ ಹೇಳಿಕೆಯನ್ನು ಎಲ್ಲರೂ ಒಪ್ಪಬೇಕಂತೇನಿಲ್ಲ, ಆದರೆ ಅವರ ಅಭಿಪ್ರಾಯ ಜಾತ್ಯತೀತ ವಿಚಾರಧಾರೆಯಾಗಿ ಈ ನಾಡಿನ ಆಶೋತ್ತರಗಳ ಸಾಕ್ಷಿಪ್ರಜ್ಞೆಯಾಗಿ ಮೂಡಿಬಂದಿರುವುದಂತೂ ಸತ್ಯ. ಮೋದಿ ಪ್ರಧಾನಿಯಾದರೆ ಆಗಬಹುದಾದ ಅನಾಹುತದ ಅಂದಾಜು ಆ ಮಾತುಗಳಲ್ಲಿದೆ. ಇನ್ನು ಸಂಘಪರಿವಾರದವರು ಈ ಹೇಳಿಕೆಯ ವಿರುದ್ಧ ಅರಚಾಡಿದಷ್ಟೂ ಅನಂತಮೂರ್ತಿಯವರ ಹೇಳಿಕೆಗೆ ತೂಕ ಹೆಚ್ಚುತ್ತಾ ಹೋಗುತ್ತದೆ ಹಾಗೂ ಜನರಿಗೆ ವಿಚಾರಧಾರೆ ತಲುಪುತ್ತದೆ. ಮೋದಿ ಅರ್ಥಾತ್ ಗೋಡ್ಸೆ ಸಂತತಿಯವರು ಈ ಹೇಳಿಕೆ ವಿರೋಧಿಸುತ್ತಿರುವ ತೀವ್ರತೆಯನ್ನು ನೋಡಿದರೆ ಅದು ಬೀರಬೇಕಾದ ಪರಿಣಾಮವನ್ನು ಬೀರಿದೆ ಎಂದಾಯಿತು. ಯಾಕೆಂದರೆ ಈಗ ಸಂಘಪರಿವಾರದ ಕೋಮುವಾದಿಗಳು ಮೈ ಪರಚಿಕೊಳ್ಳುತ್ತಾರೆಂದರೆ ಅವರಿಗೆ ಬಿಸಿ ಮುಟ್ಟಿದೆ ಎಂತಲೇ ಅರ್ಥ. ಇಲ್ಲವೆಂದಾದಲ್ಲಿ ರಾಜಿ ರಾಜಕಾರಣದ ಮೂಲಕ ತಮ್ಮ ಹಾದಿಯಲ್ಲಿ ನಿರಂಕುಶವಾಗಿ ನಡೆದುಬಿಡುತ್ತಾರೆ. ಈ ಹೇಳಿಕೆ ಮತ್ತು ಅದಕ್ಕೆ ಪೂರಕವಾಗಿ ಉದ್ಭವಿಸಬಹುದಾದ ಚಿಂತನಾ ಜಾಗೃತಿಯನ್ನು ಹತ್ತಿಕ್ಕುವ ಉದ್ದೇಶದಿಂದ ಅನಂತಮೂರ್ತಿ ಹೇಳಿಕೆ ವಿರುದ್ಧದ ಅಭಿಯಾನವನ್ನು ಬೆದರಿಕೆಯ ಅಸ್ತ್ರವಾಗಿ ಬಳಸಿಕೊಳ್ಳಲು ಹವಣಿಸುತ್ತಿದ್ದಾರೆ. ಈ ಹೇಳಿಕೆಗೆ ಅನಂತಮೂರ್ತಿಯವರು ಏಕಾಂಗಿಯಲ್ಲ, ಅವರ ಬೆನ್ನಿಗೆ ಪ್ರತಿಯೊಬ್ಬ ಪ್ರಜ್ಞಾವಂತರೂ ಇದ್ದೇವೆ. ಇದನ್ನು ಸಾಬೀತುಮಾಡುವ ಉದ್ದೇಶದಿಂದಲೇ ಅಕ್ಟೋಬರ್ ನಾಲ್ಕನೇ ತಾರೀಖಿನಂದು ಪ್ರೊ.ಜಿ.ಕೆ.ಗೋವಿಂದರಾವ್ ನೇತೃತ್ವದಲ್ಲಿ ಪ್ರಗತಿಪರರೆಲ್ಲಾ ಸಭೆ ಸೇರಿ ಮೋದಿ ವಿರೋಧಿ ಅಭಿಯಾನ ಆರಂಭಿಸಲು ಚಿಂತಿಸುತ್ತಿದ್ದೇವೆ.




- ಎ.ಕೆ. ಸುಬ್ಬಯ್ಯ, ಹಿರಿಯ ವಕೀಲರು ಮತ್ತು ಪ್ರಗತಿಪರರು

ಮಾನವೀಯತೆಗೆ ಅಗೌರವ

ನಾನು ಭಾನುವಾರ ನಡೆದ ಕಾರ್ಯಕ್ರಮದಲ್ಲಿದ್ದೆ ಮತ್ತು ಅಂದು ಅನಂತಮೂರ್ತಿಯವರು ಹೇಳಿದುದನ್ನು ನಾನು ಅರ್ಥಮಾಡಿಕೊಂಡಿದ್ದುದು ಹೀಗೆ: "ಮೋದಿ ಪ್ರಧಾನಿಯಾದರೆ, 'ಅಂತಹ' ಭಾರತದಲ್ಲಿ ನಾನಿರಲು ಇಷ್ಟಪಡುವುದಿಲ್ಲ." ಈ ಹೇಳಿಕೆಯ ಅರ್ಥ 'ನಾನು ದೇಶವನ್ನು ಬಿಟ್ಟು ಹೋಗುತ್ತೇನೆ' ಎಂದು ಖಂಡಿತಾ ಅಲ್ಲ, ಅದರ ಅರ್ಥ 'ಅಂತಹ ದೇಶ ನನಗೆ ಬೇಡ' ಎಂದು. ಇದು ನಮ್ಮ ದೇಶವನ್ನೇ ಕುರಿತಾದ, ತುಂಬಾ ನೋವಿನ, ಕಳಕಳಿಯ, ಕಾಳಜಿಯ ಉದ್ಗಾರ.

ಈ ಮಾತನ್ನು ಬೇರೆ ಬೇರೆ ಶಬ್ದಗಳಲ್ಲಿ ಅನಂತಮೂರ್ತಿಯವರು ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ. ಅವರು ಬಹು ಧರ್ಮೀಯ, ಬಹು ಸಾಂಸ್ಕೃತಿಕ, ಬಹು ಭಾಷಿಕ ಪರಿಕಲ್ಪನೆಯನ್ನು ಆಧರಿಸಿದ ದೇಶವನ್ನು ಇಚ್ಛಿಸುತ್ತಾರೆ, ಪ್ರೀತಿಸುತ್ತಾರೆ. ಮತ್ತು 'ಏಕಮುಖಿ' ಪರಿಕಲ್ಪನೆಯನ್ನು (ಎಂದರೆ ಒಂದು ಧರ್ಮ, ಒಂದು ಭಾಷೆ, ಒಂದು ಸಂಸ್ಕೃತಿ) ಒಂದು ಸುಸಂಸ್ಕೃತ ದೇಶದ ಆಧಾರದಂತೆ ಕಾಣುವುದಿಲ್ಲ. ಎಂದರೆ, ಅವರ ಉದ್ಗಾರ 'ನನಗೆ ಬಹುಮುಖಿಯಾದ ದೇಶೀಯ ವ್ಯವಸ್ಥೆ ಬೇಕು' ಎಂಬ ಉದಾರ, ಪ್ರಬುದ್ಧ ನಿಲುವನ್ನು ತೋರಿಸುತ್ತದೆ. ಈ ಹೇಳಿಕೆಯನ್ನು 'ಪಲಾಯನವಾದ,' 'ನಮ್ಮ ದೇಶದ ಬಗ್ಗೆ ಪ್ರೀತಿಯಿಲ್ಲ,' ಇತ್ಯಾದಿ ಅರ್ಥೈಸುವುದು; ಮತ್ತೆ ಈ ಹೇಳಿಕೆಗೆ 'ಕಾಂಗ್ರೆಸ್-ಸೋನಿಯಾ ಗಾಂಧಿ' ಎಳೆದು ತಂದು 'ಇಷ್ಟವಿಲ್ಲದಿದ್ದರೆ ಪಾಕಿಸ್ತಾನಕ್ಕೆ ಹೋಗಲಿ' ಎನ್ನುವುದು ಅವರ ಪ್ರಬುದ್ಧ ನಿಲುವಿಗೆ ಹಾಗೂ ಇಡೀ ಮಾನವೀಯ ಚಿಂತನೆಗೆ ನಾವು ತೋರುವ ಅಗೌರವ ಎಂದು ನನಗೆ ತೋರುತ್ತದೆ. ಇದೊಂದು 'ನೈತಿಕ-ರಾಜಕೀಯ ನಿಲುವು'; ಮತ್ತು ಈ ನಿಲುವನ್ನು ಸಾರ್ವಜನಿಕವಾಗಿ ಮಂಡಿಸುವುದಕ್ಕೆ ಹಾಗೂ ಆ ನಿಲುವಿಗೆ ಬದ್ಧರಾಗಿರುವುದಕ್ಕೆ ಅಗಾಧ ನೈತಿಕ ಪ್ರಜ್ಞೆ ಬೇಕು. ಅಂತಹ ಧೈರ್ಯ ಹಾಗೂ ಪ್ರಜ್ಞೆ ಇದ್ದರೆ ಮಾತ್ರ ಒಂದು ದೇಶವನ್ನು ಕಟ್ಟುವುದಕ್ಕೆ ಆಗುತ್ತದೆ; ಇಲ್ಲದಿದ್ದರೆ, ಕೆಡುವುವುದು ತುಂಬಾ ಸುಲಭ. ಇಂತಹ ಮಹಾನ್ ಚಿಂತಕರನ್ನು ನಾವು ಅರ್ಥ ಮಾಡಿಕೊಳ್ಳದೆ ಅವರನ್ನು ತುಚ್ಛವಾಗಿ ಕಾಣುವುದು ಅತ್ಯಂತ ದುರದೃಷ್ಟಕರ.



-ಡಾ. ಸಿ.ಎನ್.ರಾಮಚಂದ್ರನ್, ಹಿರಿಯ ಸಂಶೋಧಕ ಮತ್ತು ಚಿಂತಕ

ಕೋಮುವಾದಿಗಳ ವಿಕೃತ ಅಭಿಯಾನ

ಒಂದು ಜನಾಂಗದ ಹತ್ಯೆ ಮಾಡಿದ, ವಿನಾಕಾರಣ ಒಂದು ಸಮುದಾಯವನ್ನೇ ದ್ವೇಷಿಸುವ ನರೇಂದ್ರ ಮೋದಿಯನ್ನು ಜಾತ್ಯತೀತ ತಳಹದಿಯ ಭಾರತದ ಪ್ರಧಾನಿ ಮಾಡಲಿಕ್ಕೆ ಬಿಜೆಪಿ ಹೊರಟಿರುವುದು ದುರದೃಷ್ಟಕರ. ಇದನ್ನು ಸಾಧಿಸಲು ಇಡೀ ದೇಶಾದ್ಯಂತ ಮೋದಿ ಪರವಾದ ಪ್ರಚಾರ ಆಂದೋಲನಕ್ಕೆ ಸಂಘಪರಿವಾರ ವ್ಯವಸ್ಥಿತ ಅಭಿಯಾನವನ್ನೇ ಆರಂಭಿಸಿದೆ. ಮೋದಿಯ ಹಿನ್ನೆಲೆ, ಅವನ ಕೋಮುಪೂರಿತ ದೃಷ್ಟಿಕೋನಗಳನ್ನು ಆಳವಾಗಿ ಬಲ್ಲ ಎಂಥವರಿಗೇ ಆದರೂ ಇಂತಹ ಸಂದರ್ಭದಲ್ಲಿ ಆತಂಕ ಮೂಡುವುದು ಸಹಜ. ಅಂತಹುದೇ. ಅಂತಃಕರಣದ ಆತಂಕ ಅನಂತಮೂರ್ತಿಯವರಲ್ಲೂ ಮೂಡಿದೆ. ಅದನ್ನವರು ಮುಕ್ತವಾಗಿ ವ್ಯಕ್ತಪಡಿಸಿದ್ದಾರೆ. ತಮಗೆ ಎದುರಾಗುವ ವಿರೋಧವನ್ನು, ಭಿನ್ನಮತಗಳನ್ನು ಸಹಿಸಿಕೊಳ್ಳದೆ ಇರುವುದೇ ಸಂಘಪರಿವಾರ ಮತ್ತು ಬಿಜೆಪಿಯ ಹುಟ್ಟುಗುಣ. ಹಾಗಾಗಿ ಬಲು ಆಕ್ರಮಣಕಾರಿಯಾಗಿ ಅಂತಹ ವಿರೋಧಿಗಳ ಮೇಲೆ ಮುಗಿಬಿದ್ದುಬಿಡುತ್ತಾರೆ. ಅನಂತಮೂರ್ತಿಯವರ ವಿಷಯದಲ್ಲೂ ಅದೇ ಆಗಿದೆ. ಅವರ ಮಾತುಗಳನ್ನು ಧ್ವನಿಯಾರ್ಥದಲ್ಲಿ ಗ್ರಹಿಸುವ ಬದಲು ವಾಚ್ಯಾರ್ಥದಲ್ಲಿ ಚರ್ಚೆಗೆ ಒಳಪಡಿಸಲಾಗುತ್ತಿದೆ. ಕೋಮುವಾದಿ ಹಿನ್ನೆಲೆಯ ಪತ್ರಿಕೆಗಳಂತೂ ಅನಂತಮೂರ್ತಿಯವರ ವಿರುದ್ಧ ಒಂದು ವಿಕೃತ ಅಭಿಯಾನವನ್ನೇ ಆರಂಭಿಸಿರುವುದು ಮತ್ತೂ ದುರದೃಷ್ಟಕರ.



- ಕೆ.ಎಲ್.ಅಶೋಕ್, ಸಂಚಾಲಕರು, ಕರ್ನಾಟಕ ಕೋಮು ಸೌಹಾರ್ದ ವೇದಿಕೆ


...ದಿ ಸಿನಿಮಾದ ಮೊದಲ ಟ್ರೈಲರ್

...ರೇಂದ್ರ ಮೋದಿಯನ್ನು ನರಮೇಧಿ ಅಂತ ...ನ್ನವುದೇ ಸೂಕ್ತ ಭಾರತೀಯ ಜನತಾ ಪಕ್ಷದ ಕೋಮು ...ದ ರಾಜಕೀಯಕ್ಕೆ ಅಧಿಕಾರ ಕೊಟ್ಟರೆ ಅದು ಯಾವ ... ಅಮಾನುಷ ಚರ್ಯೆಗಳನ್ನು ನಡೆಸಬಹುದು. ...ವತ್ತೆ ಮೋದಿ ಸಿನಿಮಾ ಬಿಡುಗಡೆಗೆ ಮೊದಲು ...ಕಳ್ಳುವ ಟ್ರೈಲರ್ ತರ ಇದ್ದಾರೆಂದರೆ ಅದು ...ಮ ಮಾತಲ್ಲ. ಬಲಪಂಥೀಯ ಕೋಮುವಾದಿ ...ವನ್ನು ಪ್ರತಿಪಾದಿಸಿದ ಎಷ್ಟೋ ಜನರನ್ನು ಭಾರತ ... ಆದರೆ ಮುಖ್ಯಮಂತ್ರಿ ಸ್ಥಾನದಲ್ಲಿ ಕೂತು ಸರ್ಕಾರಿ ...ಂಗದ ನೇರ ಹಸ್ತಕ್ಷೇಪದಿಂದ ಕೋಮುವಾದಿ ದಾಳಿ ... ವಿಧಾನ ಮತ್ತು ಅದರ ನಿರ್ದಯತೆಯನ್ನು ...ದಿಗೆ ಭಾರತದಂತಹ ಸಾಂಸ್ಕೃತಿಕ ಧಾರ್ಮಿಕ ...ತ್ವದ ದೇಶದಲ್ಲಿ ನರೇಂದ್ರ ಮೋದಿ ಪ್ರತಿನಿಧಿಸುತ್ತಿರುವ ...ವಾದಿ ಫ್ಯಾಸಿಸ್ಟ್ ಧೋರಣೆಯ ಕೇಂದ್ರ ಸರ್ಕಾರ ... ಬಂದರೆ ಎಂತಹ ದುರ್ಭರ ಸನ್ನಿವೇಶ ಎದುರಾಗ... ಎಂಬ ಆತಂಕ ಹುಟ್ಟುವುದು ಸಹಜವೇ ಆಗಿದೆ. ...ದ ಐದಾರು ದಶಕಗಳಿಂದ ಸಾಂಸ್ಕೃತಿಕ ಬಹುಳತ್ವ ... ಧರ್ಮ ನಿರಪೇಕ್ಷ ಪ್ರಭುತ್ವದ ಪರವಾಗಿ ...ಚಿಸಿದ, ಕ್ರಿಯಾಶೀಲವಾಗಿದ್ದ ಯು. ಆರ್. ...ಮೂರ್ತಿಯವರಿಗೆ ನರಮೇದಿಯು ಪ್ರಧಾನಿಯಾದರೆ ...ದ ಭಾರತೀಯ ಸಾಂಸ್ಕೃತಿಕ ಹಿರಿಮೆಗೆ ...ತುದಾಗಿರುವ ದುರ್ಗತಿಯನ್ನು, ಮಾನವೀಯತೆಗೆ ...ಸುವ ಅಪಾಯವನ್ನು ಊಹಿಸಿಕೊಂಡು ...ಮೊಂದು ಸನ್ನಿವೇಶದಲ್ಲಿ ಏನೂ ಮಾಡಲಾಗದ ...ಯುಕತೆಯಲ್ಲಿ ಈ ದೇಶದಲ್ಲಿರುವ ಬದಲು ...ದರೂ ದೇಶಾಂತರ ಹೋಗಿಬಿಡುವುದೇ ಮೇಲು ...ಸೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ.

...ಯು. ಆರ್. ಅನಂತಮೂರ್ತಿಯವರು ಯಾವ ಹಿನ್ನೆಲೆ ...ಅಂತಹ ಮಾತುಗಳನ್ನಾಡಿದ್ದಾರೆ, ಅದರ ಹಿಂದಿರುವ ... ತಾತ್ವಿಕ ನಿಲುವೇನು, ಅವರ ಕಳಕಳಿಯೇನು ...ವನ್ನು ಗ್ರಹಿಸಿ ರಾಜಕೀಯ ಪ್ರಬುದ್ಧತೆಯಿಂದ ...ಯುವ ಸಂಸ್ಕಾರವನ್ನು ಆಯನೂರು ಮಂಜುನಾಥ್ ...ಡಬೇಕಿತ್ತು.

...ಅನಂತಮೂರ್ತಿಯವರು ಮಾತನಾಡುವಾಗ ...ತಹ ಜಾತ್ಯತೀತ ಮನಸ್ಸಿನ ಸಾವಿರಾರು ಜನಗಳ ...ಕ್ಷಿಯಾಗಿ ಮಾತನಾಡಿದ್ದಾರೆ. ಅವರ ಮಾತಿಗೆ ಈ ...ರಿನ ಜನ ಮಾತ್ರವಲ್ಲ, ಭಾರತದ ಧಾರ್ಮಿಕ ...ತತೆ ವಿರೋಧಿಯಾದ ನೂರಾರು ವರ್ಷಗಳ ...ಿ ಕೂಡ ಬೆಂಬಲಕ್ಕಿದೆ. ದಯವಿಲ್ಲದ ಧರ್ಮ ...ದಯ್ಯಾ ಅಂದ ಬಸವಣ್ಣ, ಭಕ್ತಿಯೆಂಬುದು ...ಂಬ ಲಾಭ ಎಂದ ಅಲ್ಲಮಪ್ರಭು, ಎಲ್ಲಾರು ...ವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಎಂದ ...ಸ, ಉದರ ವೈರಾಗ್ಯವಿದು ನಮ್ಮ ಪದುಮನಾಭನಲಿ ...ಕುತಿಯಿಲ್ಲ ಎಂದ ಪುರಂದರ ಹಾಗೂ ಗುಡಿ ... ಮಸೀದಿಗಳ ಬಿಟ್ಟು ಹೊರಬನ್ನಿ, ಓ ಬನ್ನಿ ...ರೆ ಮನುಜ ಮತಕೆ, ವಿಶ್ವ ಪಥಕೆ ಎಂದ ಕುವೆಂಪು ...ವರೆಲ್ಲ ಕೊಡಮಾಡಿರುವ ಅತ್ಯುನ್ನತ ಸಂವೇದನೆಗಳ ... ಅನಂತಮೂರ್ತಿಯವರ ವೇದನಾಪೂರ್ಣವಾದ ... ಹಿಂದೆ ನಿಂತಿದೆ.

...ಯನೂರು ಮಂಜುನಾಥ್ ತಾತ್ಕಾಲಿಕ ರಾಜಕೀಯ ...ಸ್ವಾರ್ಥ ನರಮೇಧಿಯಂತಹವರನ್ನು ಸಮರ್ಥಿಸುವ ...ದಿನಲ್ಲಿ ಭಾರತೀಯತೆಗೆ ತಂದೊಡ್ಡಲಿರುವ ...ಪತರವನ್ನು ಗಮನಿಸುತ್ತಿಲ್ಲ.



... ಅನುಚಿತ ಉಪಮೆಗಳ ...ಕ ಸದ್ದಡಗಿಸಲು ನೋಡು... ವಿವೇಕದ ದನಿ ಯಾವು... ...ಬುದನ್ನು ಅರಿಯದಷ್ಟು ...ನರಾಗಿದ್ದಾರೆ. ಇದಕ್ಕವರು ...ಡಬೇಕು.

- ಡಾ. ಬಂಜಗೆರೆ ಜಯಪ್ರಕಾಶ, ಸಂಶೋಧಕರು ಮತ್ತು ಚಿಂತಕರು

ಮೋದಿ ಪ್ರಧಾನಿ ಆದರೆ ಗಂಡಾಂತರ ಕಾದಿದೆ

...ರೇಂದ್ರ ಮೋದಿಯನ್ನು ಪ್ರಧಾನಿ ಅಭ್ಯರ್ಥಿ ...ದೇ ಅಮೆರಿಕಾದ ವೈಟ್ ಹೌಸ್‌ನಲ್ಲಿ ತಯಾರಾದ ...ಿ ಕಲ್ಪನೆ. ಅದು ಭಾರತದ ಸಂವಿಧಾನ ಮತ್ತು ...ಪ್ರಭುತ್ವೀಯ ಮೌಲ್ಯಗಳಿಗೆ ಅಪಚಾರವೆಸಗು... ...ದು. ಮೋದಿಯ ಫ್ಯಾಸಿಸ್ಟ್ ಮನೋಭಾವ, ...ನಲ್ಲಿ ನಡೆದ ಹತ್ಯಾಕಾಂಡಗಳು ಮತ್ತು ದೇಶದಸ್ವ... ...ಹಾಗೂ ವಿದೇಶ ಕಾರ್ಪೋರೇಟ್ ಕಂಪನಿಗಳಿಗೆ ...ಲ್ಲಿ ಕೊಡುತ್ತಲೇ ಬಂದಿರುವ ಉತ್ತೇಜನಗಳನ್ನು, ...ದ ... ಡಾ. ಯು. ಆರ್. ...ಮೂರ್ತಿಯವರು ಆಡಿದ ಮಾತುಗಳು ಅತ್ಯಂತ ... ಆಗಿವೆ. ಮೋದಿ ಮತ್ತು ಸಂಘಪರಿವಾರದ ಕ್ರೌರ್ಯಗಳ ಬಗ್ಗೆ ಜನತೆಯನ್ನು ಎಚ್ಚರಿಸಲು ಅತ್ಯಂತ ಪ್ರಜ್ಞಾವಂತಿಕೆಯಿಂದ ಅವರು ಈ ಮಾತುಗಳನ್ನು ಹೇಳಿದ್ದಾರೆ. ಭಾರತದಂತಹ ಮಹಾನ್ ದೇಶದ ಚುಕ್ಕಾಣಿ ಇಂತಹವರ ಕೈಗೆ ಸಿಕ್ಕಲ್ಲಿ ಆಗುವ ಅನಾಹುತಗಳನ್ನು ಸರಿಯಾಗಿಯೇ ಗುರುತಿಸಿದ್ದಾರೆ. ಆದರೆ ಭಾರತವನ್ನು ಫ್ಯಾಸಿಸ್ಟ್ ಶಕ್ತಿಗಳಿಂದ ಉಳಿಸಬೇಕು ಎಂಬ ಅವರ ಈ ಹೇಳಿಕೆಯನ್ನು 'ಕರಸೇವಕರು' ಮನಬಂದಂತೆ ತಿರುಚಿ ಅಸಹ್ಯಕರ ದಾಳಿ ಮಾಡುತ್ತಿರುವುದು ಅವರ ನಿಜ ಬಣ್ಣವನ್ನು ಬಯಲುಗೊಳಿಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಭಿಪ್ರಾಯಗಳನ್ನು ಗೌರವಿಸಬೇಕು, ಭಿನ್ನಾಭಿಪ್ರಾಯವಿದ್ದರೆ ಸಂವಾದಿಸಬೇಕು ಎಂಬ ಕನಿಷ್ಠ ಸನ್ನಡತೆಯ ಸಂಸ್ಕೃತಿಯಿಲ್ಲದ, ದೇಶ, ಜನರ ಬಗ್ಗೆ ಯಾವುದೇ ಕಿಂಚಿತ್ತೂ ಕಾಳಜಿಯಿಲ್ಲದ ಇವರು ಅಧಿಕಾರಕ್ಕೆ ಬಂದರೆ ಹೇಗೆ ನಡೆದುಕೊಂಡಾರು? ಹೀಗಾಗಿ ಅವರನ್ನು ಜನತೆ ಯಾಕೆ ದೂರ ಇಡಬೇಕೆಂಬುದನ್ನು ಸ್ಪಷ್ಟಗೊಂಡಿದೆ.


ಇದೇ ಹೊತ್ತಿನಲ್ಲಿ ಮೋದಿಗೆ, ಬಿಜೆಪಿಗೆ ಕಾಂಗ್ರೆಸ್ ಪಕ್ಷವೇ ಪರ್ಯಾಯ, ಅನಿವಾರ್ಯವೆಂಬುದನ್ನು ಒಪ್ಪಲಾಗದು. ಕೋಮುವಾದೀ ಫ್ಯಾಸಿಸ್ಟರನ್ನು ವಿರೋಧಿಸುವ ಭರದಲ್ಲಿ ಕಾಂಗ್ರೆಸ್ ಎಸಗುತ್ತಾ ಬಂದಿರುವ ಕ್ರೌರ್ಯಗಳನ್ನು ಮರೆಯುವುದು ಸರಿಯಲ್ಲ. ಅದು ಒಟ್ಟಾರೆ ಮೋದಿ ಜೀವಂತವಾಗಿರುವುದಕ್ಕೆ ಕಾರ್ಪೋರೇಟ್ ಕಂಪನಿಗಳು ಹೆಣೆದ ಜಾಲಕ್ಕೆ ಸಿಕ್ಕಿ ಹಾಕಿಕೊಂಡಂತೆ ಎಂಬುದನ್ನು ನೆನಪಿಡಬೇಕು. ಕಷ್ಟವೆನಿಸಿದರೂ ಭವಿಷ್ಯದ ದೃಷ್ಟಿಯಿಂದ ಪರ್ಯಾಯ ನೀತಿಗಳ ಆಧಾರದಲ್ಲಿ ಪರ್ಯಾಯ ರಾಜಕೀಯ ರೂಪಿಸುವ ಚಿಂತನೆ ಆದ್ಯತೆ ಪಡೆಯಲಿ.



- ಎಸ್.ವೈ.ಗುರುಶಾಂತ್, ಸಿಪಿಎಂ ನಾಯಕರು

ದ್ವೇಷದ ಮೂಲಕ ದೇಶವನ್ನು ಆಳಲು ಹೊರಟವರು

ಬಿಜೆಪಿಯವರು ದ್ವೇಷದ ಮೂಲಕ ದೇಶವನ್ನು ಆಳಲು ಹೊರಟವರು. ಹಾಗಾಗಿ ಅವರಲ್ಲಿ ಕರುಣೆ, ಪ್ರೀತಿಯಂತಹ ಮಾನವೀಯ ಗುಣಗಳನ್ನು ಹುಡುಕಲಾಗದು. ಅವರು ಪ್ರೀತಿಸೋದು ಹಣ ಮತ್ತು ಅಧಿಕಾರವನ್ನು. ಅಂತವರಿಗೆ ಸಹಜವಾಗಿಯೇ ಅನಂತಮೂರ್ತಿಯವರ ಅಭಿಪ್ರಾಯ ರುಚಿಸಿಲ್ಲ, ರಾಜನೀತಿಯಲ್ಲಿ ಏನು ಹೇಳಿದೆಯೆಂದರೆ ತನ್ನ ಕಾಲಡಿಗೆ ಅಕಸ್ಮಾತ್ತಾಗಿ ಸಿಕ್ಕಿ ನರಳುವ ಇರುವೆಗಳ ರೋದನೆಯ ಸಪ್ಪಳವನ್ನೂ ಕೇಳಿಸಿಕೊಳ್ಳುವಂತಹ ಸೂಕ್ಷ್ಮಮತಿ, ಸಂವೇದನಾಶೀಲ ವ್ಯಕ್ತಿ ರಾಜ್ಯದ ರಾಜನಾಗಬೇಕಂತೆ. ಆದರೆ ತನ್ನ ವ್ಯಕ್ತಿತ್ವಪೂರ್ತಿ ದ್ವೇಷವನ್ನೇ ತುಂಬಿಕೊಂಡಿರುವ ಮತ್ತು ತಾನು ಮಾಡಿದ ನರಮೇಧದ ಪ್ರಮಾದವನ್ನು ಒಪ್ಪಿಕೊಳ್ಳಲಿಕ್ಕೂ ತಯಾರಿಲ್ಲದ ಉದ್ಧಟನೊಬ್ಬನನ್ನು ಈ ದೇಶದ ಪ್ರಧಾನಿ ಮಾಡುವ ಆಲೋಚನೆಯೇ ಆತಂಕಕಾರಿ. ಮಾನವತ್ವವೇ ಇಲ್ಲದ ಇಂತಹ Species ಭಾರತದ ಅಧಿಕಾರ ಗದ್ದುಗೆಗೇರುವುದು ಪ್ರಜ್ಞಾವಂತ ಮನಸ್ಸುಗಳಿಗೆ ಇಷ್ಟವಾಗದೆ ಇರುವುದು ಸರ್ವೇಸಾಮಾನ್ಯ. ಅದಕ್ಕೆ ಅನಂತಮೂರ್ತಿಯವರು ಧ್ವನಿಯಾಗಿದ್ದಾರಷ್ಟೆ. ಈ ಒಂದು ಹೇಳಿಕೆಗಾಗಿ ಅವರ ವಿರುದ್ಧ ಅಭಿಯಾನವನ್ನೇ ಆರಂಭಿಸುವುದು ಮುಠ್ಠಾಳತನ ವಲ್ಲದೆ ಮತ್ತೇನೂ ಅಲ್ಲ. ಅನಂತಮೂರ್ತಿ 'ಸೀನಿಯರ್ ಸಿಟಿಜೆನ್', ಹೇಳಿಕೆಯ ಕಾರಣಕ್ಕೆ ಎಳೆದಾಡುವ ಮುನ್ನ ಇದನ್ನೂ ಪರಿಗಣಿಸಬೇಕಾಗುತ್ತೆ.



- ಬಾಬಯ್ಯ, ಮಾನವಹಕ್ಕುಗಳ ಹೋರಾಟಗಾರ

ಆರೆಸ್ಸೆಸ್‌ನ ಮುಖವಾಡ ಮೋದಿ

ಸಂಘ ಗ್ಯಾಂಗಿನ ಗೂಂಡಾಗಿರಿ ಹಿಮ್ಮೆಟ್ಟಿಸುವುದು ಪ್ರಜ್ಞಾವಂತರ ಮುಂದಿರುವ ಸವಾಲು.

ಸಾಹಿತಿಗಳಿಗೆ ಸಾಮಾಜಿಕ ಬದ್ಧತೆ ಇರುತ್ತದೆ. ಕಾಲಕಾಲಕ್ಕೆ ಸಮಾಜದಲ್ಲಿ ನಡೆಯುವ ವಿದ್ಯಮಾನಗಳಿಗೆ ಸಾಹಿತಿಯು ಸ್ಪಂದಿಸುವುದೆಂದರೆ ಅದು ಆರೋಗ್ಯಕರ ಲಕ್ಷಣವಾಗಿದೆ. ಮಾತ್ರವಲ್ಲ ಅವಶ್ಯಕತೆ ಬಿದ್ದರೆ ಚಿಂತನೆಯೊಂದಿಗೆ ಚಳವಳಿಯ ಬೆರಳು ಹಿಡಿದು ಹೋರಾಟದ ಬೀದಿಗೂ ಬರಬೇಕಾಗುತ್ತದೆ. ಅಂತೆಯೇ ಡಾ. ಯು.ಆರ್.ಅನಂತಮೂರ್ತಿಯವರು ನರೇಂದ್ರ ಮೋದಿಯು ಪ್ರಧಾನಿ ಅಭ್ಯರ್ಥಿ ಎಂದು ಬಿಜೆಪಿ ಘೋಷಣೆ ಮಾಡಿರುವುದಕ್ಕೆ ಸರಿಯಾದ ಪ್ರತಿಕ್ರಿಯೆಯನ್ನೇ ಕೊಟ್ಟಿರುವರು. ಅನಂತಮೂರ್ತಿಯವರು ಹಾಗೆ ಹೇಳುವಲ್ಲಿ ಬಲವಾದ ಕಾರಣಗಳಿವೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಅನಂತಮೂರ್ತಿಯವರ ಹೇಳಿಕೆ ಸಾಂಕೇತಿಕ ಮತ್ತು ಸಕಾಲಿಕ.

ಬಿಜೆಪಿ ಸ್ವಯಂ ನಿರ್ಣಯ ಕೈಗೊಳ್ಳುವ ಸ್ವತಂತ್ರ ರಾಜಕೀಯ ಪಕ್ಷವಲ್ಲ, ಅದು ಆರ್‌ಎಸ್‌ಎಸ್‌ನ ಹಿಂದುತ್ವದ ಅಜೆಂಡಾವನ್ನು ಜಾರಿ ಮಾಡುವಂಥ ಹುಸಿ ದೇಶ ಪ್ರೇಮದ ಮುಖವಾಡವಷ್ಟೆ. ಕಾರ್ಪೋರೇಟ್ ಲೋಕವು ತನ್ನ ಲಾಭಕ್ಕಾಗಿ ಎಂಥದೇ ಕ್ರೌರ್ಯಕ್ಕೂ ಇಳಿಯಬಲ್ಲುದು ಎಂಬುದಕ್ಕೆ ನರಹಂತಕ ನರೇಂದ್ರ ಮೋದಿಯ ಬಗ್ಗೆ ಅಭಿಪ್ರಾಯ ರೂಪಿಸಲು ತನ್ನೆಲ್ಲ ಶಕ್ತಿಸಾಮರ್ಥ್ಯ ಸಂಪೂರ್ಣ ಬಳಸಲು ಹೆಣಗುತ್ತಿರುವುದೇ ಸಾಕ್ಷಿಯಾಗಿದೆ. ದೇಶವನ್ನು ಕೊಳ್ಳೆ ಹೊಡೆಯಲು ಕಾರ್ಪೋರೇಟ್ ಲೋಕ ಮತ್ತು ಮತೀಯವಾದಿಗಳು ಒಟ್ಟಾಗಿ ಹೂಡಿದ ಷಡ್ಯಂತ್ರ ಇದಾಗಿದೆ. ಲಾಭವೇ ಅವುಗಳ ಗುರಿಯಾಗಿದೆ. ಕುರುಡು ಕಾಂಚಾಣದ ಥಕಥೈ. ವ್ಯಾಪಾರಿಗಳಿಗೆ 'ಲಾಭ' ಒಂದೇ ಸಿದ್ಧಾಂತ. ಇವರಿಬ್ಬರ ರಾಕ್ಷಸಿ ಪ್ರವೃತ್ತಿಗೆ ಬಲಿಯಾಗುವುದು ದೇಶದ ಸಾಮಾನ್ಯ ಜನತೆ. ನಾಡಿನ ಶಾಂತಿ, ಸೌಹಾರ್ದತೆಯನ್ನೇ ನಾಶ ಮಾಡಲು ಹೊರಟ ಸಂಘಪರಿವಾರದ ಈ ದೇಶದ್ರೋಹಿತನವನ್ನು ಖಂಡಿಸಬೇಕಾಗಿರುವುದು ಎಲ್ಲರ ಕರ್ತವ್ಯವಾಗಿದೆ. ಇವರ ದೇಶದ್ರೋಹಿತನವನ್ನು ಖಂಡಿಸಿದ ಕೂಡಲೆ ದೇಶ ಬಿಟ್ಟು ಹೋಗಿ ಎಂದು ಹೇಳಲು ಸಂಘಪರಿವಾರಕ್ಕೆ ಅಧಿಕಾರ ಕೊಟ್ಟವರಾರು? ಇನ್ನು ನರೇಂದ್ರ ಮೋದಿ ಪ್ರಧಾನಿಯೇ ಆಗಿಲ್ಲ, ಆಗಲೇ ಇವರ ಪುಂಡಾಟಿಕೆ ಹೀಗೆ ವ್ಯಕ್ತವಾಗುತ್ತಿದೆ. ಮೋದಿ ಅಧಿಕಾರಕ್ಕೆ ಬಂದರೆ ಖಂಡಿತ ಪ್ರಜಾಪ್ರಭುತ್ವೀಯ ಮೌಲ್ಯಗಳನ್ನು ಹೊಸಕಿ, ಫ್ಯಾಸಿಸಂನ ಕರಾಳರೂಪ ವ್ಯಕ್ತ ಮಾಡುವಲ್ಲಿ ಯಾವ ಅನುಮಾನಗಳೂ ಇಲ್ಲ, ಹೀಗಾಗಿ ಮಾನವೀಯ ಮನಸುಳ್ಳವರೆಲ್ಲರೂ ಸಂಘ ಗ್ಯಾಂಗಿನ ಈ ಧಮಕಿ, ಗೂಂಡಾಗಿರಿಯನ್ನು ಹಿಮ್ಮೆಟ್ಟಿಸಬೇಕಿದೆ.




ನೀಲಾ ಕೆ. ಬರಹಗಾರ್ತಿ ಮತ್ತು ಜನವಾದಿ ಮಹಿಳಾ ಸಂಘಟನೆಯ ನಾಯಕಿ

ಆಘಾತದ ಸಂದರ್ಭದಲ್ಲಿ ಮೂಡಿದ ಮಾತು

ನರೇಂದ್ರ ಮೋದಿ ಎಂತಹ ಒಂದು ಕರಾಳ ಇತಿಹಾಸ ಇರುವಂತಹ ವ್ಯಕ್ತಿಯನ್ನು ಬಿಜೆಪಿ ತನ್ನ ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಘೋಷಿಸಿದಾಗ ಸಹಜವಾಗಿಯೇ ಸೌಹಾರ್ದಪ್ರಿಯ ಮನಸ್ಸುಗಳಿಗೆ ಆಘಾತವಾಯಿತು. ಅಂತಹ ಆಘಾತವನ್ನು ಅನುಭವಿಸಿದ ಸಂದರ್ಭದಲ್ಲಿ ಅನಂತಮೂರ್ತಿಯವರು ಅಂತಹ ಹೇಳಿಕೆಯನ್ನು ಮಾಡಿರಬಹುದು.

ಬಿಜೆಪಿಯ ಕೋಮುವಾದಿ ಕಾರ್ಯಸೂಚಿಯನ್ನು ಬೇರೆ ರೀತಿಯಲ್ಲಿ ಎದುರಿಸಬೇಕೆ ಹೊರತು ಅನಂತಮೂರ್ತಿ ಅವರಿಗೆ ಈ ತರಹದ ಹೇಳಿಕೆಯನ್ನು ಕೊಡುವ ಅವಶ್ಯಕತೆ ಇರಲಿಲ್ಲ, ಯಾವುದೋ ಒಂದು ಸಂದರ್ಭದಲ್ಲಿ ಅನಂತಮೂರ್ತಿ ಅವರು ಹೇಳಿರುವುದನ್ನೇ ಸಂಘ ಪರಿವಾರದವರು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಿರುವುದು ಖಂಡನಾರ್ಹ. ಇಂತಹ ಹಲವಾರು ಮೋದಿಗಳನ್ನು ಎದುರಿಸತಕ್ಕಂತಹ ಸೌಹಾರ್ದ ಮನಸ್ಸುಗಳು ಈ ದೇಶದಲ್ಲಿ ಇದ್ದಾವೆ. ಅನಂತಮೂರ್ತಿಯವರು ಸಹಿತ ಸಾಂಸ್ಕೃತಿಕ ವಲಯದಿಂದ ಈ ಕೋಮುವಾದಿ ರಾಜಕೀಯವನ್ನು ಎದುರಿಸುವ ನಿಲುವನ್ನ ಮುಂದುವರೆಸಬೇಕು.

ಅಂದಹಾಗೆ ಚುನಾವಣೆಯ ಮುನ್ನವೇ ಬಿಜೆಪಿಯಾಗಲಿ, ಕಾಂಗ್ರೆಸ್ ಆಗಲಿ ತನ್ನ ಪ್ರಧಾನಿ ಅಭ್ಯರ್ಥಿಯನ್ನು ಘೋಷಿಸುವುದು ನಮ್ಮ ಸಂವಿಧಾನಿಕ ವ್ಯವಸ್ಥೆಯಲ್ಲಿ ಸೂಕ್ತವಲ್ಲ.



- ಸಿದ್ದನಗೌಡ ಪಾಟೀಲ, ಸಿಪಿಐ ನಾಯಕ

ವಾತಾವರಣ ಕಲುಷಿತವಾಗಿದೆ


ಅನಂತಮೂರ್ತಿಯವರು ಅಲಂಕಾರಿಕವಾಗಿ ಆಡಿರುವ ಮಾತನ್ನು ಕೋಮುವಾದಿಗಳು ವಾಚ್ಯವಾಗಿ ಅರ್ಥಮಾಡಿಕೊಂಡು ಅವರನ್ನು ಟೀಕಿಸುತ್ತಿದ್ದಾರೆ. ಅವರ ಮಾತಿನ ಅರ್ಥ ಮೋದಿ ಪ್ರಧಾನಿ ಆದರೆ ಈ ದೇಶಕ್ಕೆ ಎಂತಹ ಮುಜುಗರದ ಮತ್ತು ಹೀನಾಯಸ್ಥಿತಿ ಬರುತ್ತದೆ ಎಂದೂ; ಇದೊಂದು ಕೆಟ್ಟ ಬೆಳವಣಿಗೆ, ಇದನ್ನು ತಡೆಯಬೇಕಿದೆ, ಇಲ್ಲದಿದ್ದರೆ ಇಲ್ಲಿ ಜನರಿಗೆ ಬರ್ಬರ ಬದುಕು ಕಾದಿದೆ ಎಂಬ ಎಚ್ಚರಿಕೆ ಆಗಿದೆ. ಮೋದಿ ಎಂಬ ಫ್ಯಾಸಿಸ್ಟ್ ಪ್ರಧಾನಿ ಆದರೆ ಈ ದೇಶಕ್ಕೆ ಭವಿಷ್ಯವೇ ಇಲ್ಲದಂತಾಗುತ್ತದೆ.

ಇದಕ್ಕೆ ಉದಾಹರಣೆಯಾಗಿ ಇತ್ತೀಚೆಗೆ ಪುಣೆಯಲ್ಲಿ ನಡೆದ ಎರಡು ಘಟನೆಗಳನ್ನು ತೆಗೆದುಕೊಳ್ಳಬಹುದು. ಪುಣೆಯ ಎಫ್‌ಟಿಐಐ ಸಂಸ್ಥೆಗೆ ಕಬೀರ್ ಕಲಾ ಮಂಚ್‌ನ ಕಲಾವಿದರನ್ನು ಆಹ್ವಾನಿಸಿದ್ದಕ್ಕೆ ಹಿಂದೂ ಕೋಮುವಾದಿಗಳು ಪ್ರತಿಭಟಿಸಿದರು. ಮಾತ್ರವಲ್ಲ, ಆ ಕಾರ್ಯಕ್ರಮವನ್ನು ಆಯೋಜಿಸಿದ್ದ ಓರ್ವನನ್ನು ತಡೆದು "ಜೈ ನರೇಂದ್ರ ಮೋದಿ ಎಂದು ಹೇಳು. ಇಲ್ಲಾಂದ್ರೆ ನಿನಗೆ ಒದೆಯುತ್ತೇವೆ" ಎಂದು ಬೆದರಿಸಿದರು.

ಆದರೆ ಆತ ಬೆದರಲಿಲ್ಲ, ಬದಲಾಗಿ "ನೀವು ಒದ್ದರೆ ನನ್ನ ಕೈಲಾದಷ್ಟರ ಮಟ್ಟಿಗೆ ನಾನೂ ನಿಮಗೆ ಒದೆಯುತ್ತೇನೆ. ನಾನ್ಯಾಕೆ ನಿಮ್ಮ ನಾಯಕನಿಗೆ ಜೈ ಅನ್ನಬೇಕು" ಎಂದು ಮಾರುತ್ತರ ನೀಡಿದ. ಆಗ ಆ ಕೋಮುವಾದಿಗಳೇ ಬಂದ ದಾರಿಗೆ ಸುಂಕವಿಲ್ಲ ಎಂದು ಹೊರಟುಹೋದರು.

ಇನ್ನೊಂದು ಘಟನೆ ವಿಚಾರವಾದಿ ನರೇಂದ್ರ ದಾಬೋಲ್ಕರ್ ಅವರ ಹತ್ಯೆಗೆ ಸಂಬಂಧಿಸಿದ್ದು. ಅವರ ಕೊಲೆಯಾದ ಮಾರನೆ ದಿನ ಪುಣೆಯ ಪತ್ರಿಕೆಯೊಂದು "ಮಾಡಿದ್ದುಣ್ಣೋ ಮಹಾರಾಯ. ನೀನು ಬಾಯಿ ಮುಚ್ಚಿಕೊಂಡು ಇದ್ದಿದ್ದರೆ ನಿನ್ನನ್ನು ಯಾರೂ ಸಾಯಿಸುತ್ತಿರಲಿಲ್ಲ" ಎಂಬ ಅರ್ಥ ಬರುವ ಸಂಪಾದಕೀಯವನ್ನು ಬರೆಯಿತು. ಅಂದರೆ ಇವತ್ತಿನ ವಾತಾವರಣ ಅದೆಷ್ಟು ಕಲುಷಿತವಾಗಿದೆ ಎಂದರೆ ಪ್ರಜ್ಞಾವಂತರೆಲ್ಲ ಪ್ರತಿಭಟಿಸಲೇ ಬೇಕಿದೆ.

ಅನಂತಮೂರ್ತಿಯವರ ಮಾತನ್ನು ಇದೆಲ್ಲದರ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಿದೆ.



- ಜಿ.ರಾಮಕೃಷ್ಣ ಜನಪರ ಚಿಂತಕರು

ಮೋದಿತ್ವದ ಅನಾಹುತವನ್ನು ತಪ್ಪಿಸುವ ಸಾಧ್ಯತೆ ಯೋಚಿಸಬೇಕು

ಅನಂತಮೂರ್ತಿಯವರದು ವೈಯಕ್ತಿಕ ಹೇಳಿಕೆಯೇ ಇರಬಹುದು, ಆದರೆ ಅದನ್ನು ಸಾರ್ವಜನಿಕವಾಗಿ ಹರಿಬಿಡುವ ಮುನ್ನ ಅವರು ಸ್ವಲ್ಪ ಯೋಚಿಸಬೇಕಿತ್ತು. ನನ್ನನ್ನೂ ಒಳಗೊಂಡಂತೆ ದೇಶದ ಜಾತ್ಯತೀತತೆಯನ್ನು ಗೌರವಿಸುವ ಪ್ರತಿಯೊಬ್ಬ ಪ್ರಜ್ಞಾವಂತರೂ ಮೋದಿಯಂತಹ ಕೋಮುವಾದಿ ಪ್ರಧಾನಿಯಾಗುವುದನ್ನು ವಿರೋಧಿಸಲೇಬೇಕು. ಆದರೆ ಆ ನಮ್ಮ ವಿರೋಧ ಈ ದೇಶದ ಪ್ರಜಾಪ್ರಭುತ್ವದ ಬದ್ಧತೆಗೆ ಒಳಪಟ್ಟಿರಬೇಕು. ಮೋದಿಯೋ, ಮತ್ತಾರೊ ಪ್ರಧಾನಿಯಾದ ಮಾತ್ರಕ್ಕೆ 'ಭಾರತೀಯ'ನೇಕೆ ದೇಶ ಬಿಡಬೇಕು? ಅಷ್ಟಕ್ಕೂ ಬಿಜೆಪಿ ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಿದ ಮಾತ್ರಕ್ಕೇ ಆತ ಪ್ರಧಾನಿಯಾಗಿ ಬಿಡುತ್ತಾನೆಯೇ. ಮೋದಿತ್ವದ ಅನಾಹುತವನ್ನು ತಪ್ಪಿಸಲು ಇರುವ ಸಾಧ್ಯತೆಗಳತ್ತ ನಾವೆಲ್ಲಾ ಯೋಚಿಸಬೇಕು, ಕಾರ್ಯಪ್ರವೃತ್ತರಾಗಬೇಕೆ ವಿನಃ ಇಂತಹ ಸಲ್ಲದ ಹೇಳಿಕೆಗಳನ್ನು ನೀಡಿ ಮೋದಿಯ ರೋಚಕತೆಯನ್ನು ಉಳಿಸುವ ಕೆಲಸವನ್ನು ಮಾಡಬಾರದು.

ಅನಂತಮೂರ್ತಿಯವರು ಇದನ್ನೊಮ್ಮೆ ಆಲೋಚಿಸ ಬೇಕಿತ್ತು, ಇನ್ನು ಅವರ ಹೇಳಿಕೆಗೆ ಪ್ರತಿಯಾಗಿ ಸೈದ್ಧಾಂತಿಕ ನೆಲೆಗಟ್ಟೇ ಇಲ್ಲದೆ ನಡೆಯುತ್ತಿರುವ ವಿರೋಧದ ಚರ್ಚೆಗಳಂತು ತರ್ಕಹೀನವಾದವು. ಅನಂತಮೂರ್ತಿಯವರ ಹೇಳಿಕೆಯನ್ನು ಮತ್ತು ಆ ಹೇಳಿಕೆಯ ವಿರೋಧಿಗಳನ್ನು ನಾನು ಒಟ್ಟೊಟ್ಟಿಗೆ ಧಿಕ್ಕರಿಸುತ್ತೇನೆ. ಇಲ್ಲಿ ಆರೋಪ-ಪ್ರತ್ಯಾರೋಪಗಳೆರಡೂ ದುರದೃಷ್ಟಕರ.




- ವೆಂಕಟಸ್ವಾಮಿ, ಸಮತಾ ಸೈನಿಕ ದಳ.

ಬದುಕುವುದಿರಲಿ, ನೆಮ್ಮದಿಯೇ ಇರಲ್ಲ

ಅನಂತಮೂರ್ತಿಯವರು ಹೇಳಿರುವುದನ್ನು ನಾವು ಇನ್ನೊಂದು ರೀತಿಯಲ್ಲಿ ಅರ್ಥೈಸಬಹುದಾಗಿದೆ. ಅದೇನೆಂದರೆ ನರೇಂದ್ರ ಮೋದಿ ಎಂಬ ನರಹಂತಕ ಈ ದೇಶದ ಪ್ರಧಾನಿ ಆದರೆ ಈ ದೇಶದಲ್ಲಿ ಜನರು ಬದುಕುವುದಿರಲಿ, ಯಾರೂ ನೆಮ್ಮದಿಯಿಂದ ಒಂದು ಕ್ಷಣವೂ ಜೀವಿಸಲು ಸಾಧ್ಯವಿಲ್ಲ ಎಂಬುದು.

ಯಾಕೆಂದರೆ ಮೋದಿಗೆ ಅಧಿಕಾರ ಸಿಕ್ಕರೆ ಈ ದೇಶದಲ್ಲಿ ಅಲ್ಪಸಂಖ್ಯಾತರು, ಪ್ರಗತಿಪರರು, ಎಡ ಪಂಥೀಯರು, ಇತರೆ ಸಮುದಾಯದವರೆಲ್ಲರ ಬದುಕು ನರಕಸದೃಶ ವಾಗುತ್ತದೆ. ಅದು ಜನರಿಗೆ ಅರ್ಥವಾಗಬೇಕಿದೆ.



- ಭೂಮಿಗೌಡ

ಕೋಮು ಸೌಹಾರ್ದ ವೇದಿಕೆ

"ಹಣವಲ್ಲದೆ ಪರಿಷತ್ತಿನ ಸೈದ್ಧಾಂತಿಕ ನಿಲುವುಗಳಿಗೂ ಸರ್ಕಾರ ಬೆಂಬಲಿಸಬೇಕು"

ಮಂಡಲೀಕ ಹಾಲಂಬಿ

ಸುದ್ದಿಗನ್ನಡಿ
ಸಾಹಿತಿ-ಕಲಾವಿದ-ಚಿಂತಕರ
ಸಂದರ್ಶನ

ಸಂದರ್ಶನ: ಡಾ. ರಂಗನಾಥ ಕಂಟನಕುಂಟೆ

ಪ್ರಶ್ನೆ: ನೀವು ಸಾಹಿತ್ಯದ ಪರಿಚಾರಿಕೆಗೆ ತೊಡಗಿಕೊಂಡ ಹಿನ್ನೆಲೆಯೇನು?

ಕನ್ನಡದ ಬಗೆಗೆ ಉತ್ಕಟ ಅಭಿಮಾನವಿತ್ತು, ಅದನ್ನು ಮೂಡಿಸಿದ್ದು ಯಕ್ಷಗಾನ. ನಂತರ ಶಿವರಾಮ ಕಾರಂತರು ನನಗೆ ಇಷ್ಟವಾದ ಸಾಹಿತಿ. ಕನ್ನಡದ ಬಗೆಗೆ ಆಸಕ್ತಿ ಮೂಡಿಸಿದ್ದು ಕುವೆಂಪು ಅವರ ಎರಡು ಕಾದಂಬರಿಗಳು. ಕನ್ನಡವಲ್ಲದೆ ಬೇರೆ ಭಾಷೆ ಗೊತ್ತಿರಲಿಲ್ಲ, ಅದಿಲ್ಲದಿದ್ದರೆ ಕನ್ನಡ ಎಂ.ಎ. ಅಧ್ಯಯನ ಮಾಡಲೂ ಸಾಧ್ಯವಿರಲಿಲ್ಲ, ನನಗೆ ಕನ್ನಡ ಕೇವಲ ಭಾಷೆಯಾಗಿರಲಿಲ್ಲ, ಬದುಕೇ ಆಗಿತ್ತು. ಇದರಿಂದ ಕನ್ನಡ ಕಟ್ಟುವ ಕಾಯಕದಲ್ಲಿ ತೊಡಗಿಸಿಕೊಂಡೆ.

ಪ್ರಶ್ನೆ: ನಿಮ್ಮ ಕುಟುಂಬದ ಹಿನ್ನೆಲೆಯೇನು?

ಆರ್ಥಿಕವಾಗಿ ತೊಂದರೆಯಿದ್ದ ಮನೆತನದಲ್ಲಿ ಹುಟ್ಟಿಬಂದವನು. ತೀರ ಬಡತನವಲ್ಲದಿದ್ದರೂ ಬದುಕು ಕಟ್ಟಿಕೊಡಲು ನನ್ನ ತಂದೆಯ ಆರ್ಥಿಕ ಸ್ಥಿತಿಗೆ ಸಾಧ್ಯವಿರಲಿಲ್ಲ. ಹಾಗಾಗಿ ಎಸ್‌ಎಸ್‌ಎಲ್‌ಸಿ ನಂತರ ಜೀವನ ಹುಡುಕಿಕೊಂಡು ಬೆಂಗಳೂರಿಗೆ ಬಂದೆ. ಅರ್ನ್ ಅಂಡ್ ಲರ್ನ್- ದುಡಿಯುತ್ತಲೇ ಓದಿದವನು. ಹೋಟೆಲ್‌ನಲ್ಲಿ ಸಪ್ಲೈಯರ್ ಆಗಿದ್ದವನು. ಇದನ್ನು ಹೆಮ್ಮೆಯಿಂದ ಹೇಳಿಕೊಳ್ಳುವೆ. ಆಗಲೇ ನಾನು ಕನ್ನಡ ಚಳವಳಿಯ ಜೊತೆಗೆ ಗುರುತಿಸಿಕೊಳ್ಳತೊಡಗಿದ್ದು. ಕಾರ್ಮಿಕರ ಸಂಘಟನೆ ಮಾಡ್ತಾ ಹೋದೆ. ಆ ವೇಳೆ ನನಗೆ ಅತೀವ ಪ್ರೀತಿ ಮೂಡಿಸಿದ್ದು ಡಾ. ರಾಜ್‌ಕುಮಾರ್.

ಪ್ರಶ್ನೆ: ನಿಮಗೆ ಒಳ್ಳೆಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಇದ್ದರೂ ಬರೆಹ ಯಾಕೆ ಮಾಡಲಿಲ್ಲ?

ಆರಂಭದಲ್ಲಿ ಕವಿತೆ ಕಥೆಗಳನ್ನು ಬರೆದೆ. ಅವು ಪ್ರಕಟವಾಗಿ ಮೆಚ್ಚುಗೆಯೂ ಸಿಕ್ಕಿತು. ಆದರೆ ನಂತರದ ದಿನಗಳಲ್ಲಿ ಕಾರ್ಮಿಕ ಸಂಘಟನೆಯಲ್ಲಿ ತೊಡಗಿದ್ದರಿಂದ ಈ ಕಡೆಗೆ ಗಮನಹರಿಸಲಾಗಲಿಲ್ಲ, ನಂತರ ಬರೀಬೇಕು ಅನ್ನಿಸಲಿಲ್ಲ, ಅಲ್ಲದೆ ನಾನೊಂದು ಬಗೆಯ ಮೌಖಿಕ ಸಂಪ್ರದಾಯದವನು. ಅಧ್ಯಾಪಕನಾಗಬೇಕೆಂದು ಕನಸು ಕಂಡಿದ್ದೆ. ಅದಾಗದೇ ಹೋದದ್ದರಿಂದ ಬರೆಹ ಮಾಡಲಾಗಲಿಲ್ಲವೆನ್ನಿಸುತ್ತದೆ. ಬರೆಯೋದು ಎಂದರೆ ಮಗ್ಗಿಬರೆದಂತಲ್ಲ, ಅದಕ್ಕೆ ಸೃಜನಶೀಲ ಮನಸ್ಸು ಬೇಕು. ಸಂಘಟನೆಯಲ್ಲಿ ತೊಡಗಿ ಬರೆಯದೇ ಇರುವ ಕಾರಣದಿಂದ ನನಗೇನೋ ನಷ್ಟವಾಗಿದೆ ಅಂತಲೂ ಅನ್ನಿಸ್ತಿಲ್ಲ, ಬರೆಯೋರು ಸಾಕಷ್ಟಿದ್ದಾರೆ. ಅವರ ಬರೆಹವನ್ನು ಜನರಿಗೆ ಮುಟ್ಟಿಸೋದು ಮುಖ್ಯ. ಅದನ್ನು ಯಾರೂ ಪ್ರಾಮಾಣಿಕವಾಗಿ ಮಾಡ್ತಾ ಇಲ್ಲ, ಸಾಹಿತ್ಯ ಪರಿಚಾರಕರ ಸಂಖ್ಯೆ ಕಡಿಮೆಯಿದೆ.

ಪ್ರಶ್ನೆ: ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳಲ್ಲಿ ತೊಡಗಿಕೊಂಡ ಬಗೆಗೆ ತಿಳಿಸಿ.

ನಾನು ಆಕಸ್ಮಿಕವಾಗಿ ಪರಿಷತ್ತಿಗೆ ಬಂದವನು. ಸಾ.ಶಿ. ಮರುಳಯ್ಯನವರು ಕಾರ್ಯದರ್ಶಿ ಮಾಡಿದರು. ಆ ನಂತರ ನಾಲ್ಕು ಅಧ್ಯಕ್ಷರ ಅಡಿಯಲ್ಲಿ ಪದಾಧಿಕಾರಿಯಾಗಿ ಕೆಲಸ ಮಾಡಿದೆ. ಒಂದು ವಿಶೇಷತೆ ಎಂದರೆ ಯಾವುದೇ ಅಧ್ಯಕ್ಷರು ತಮ್ಮ ಅವಧಿಯ ಮಧ್ಯದಲ್ಲಿ ನನ್ನನ್ನು ತೆಗೆದುಹಾಕಲಿಲ್ಲ, ಕೊಟ್ಟ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದೆ. ಒಂದು ತತ್ವವನ್ನು ನಂಬಿಕೊಂಡು ಬಂದಿದ್ದೇನೆ. ನಾನು ಜಾತ್ಯತೀತನಾಗಿ ಬಂದವನು. ಜಾತಿಯಲ್ಲಿ ನಂಬಿಕೆಯಿರಲಿಲ್ಲ, ಹಾಗಂತ ನನ್ನ ಮನೆಯಲ್ಲಿ ಸಂಪ್ರದಾಯಗಳನ್ನು ಬಿಟ್ಟಿದ್ದೇನೆಂದು ಹೇಳಲು ತಯಾರಿಲ್ಲ, ಈ ಎಲ್ಲ ವಿಷಯಗಳನ್ನು ನಾನು ಅಡಾಪ್ಟ್ ಮಾಡಿಕೊಂಡಿದ್ದರಿಂದ ಗೆಳೆಯರ ವಲಯದಲ್ಲಿ ಮುಕ್ತವಾಗಿ ಬೆಳೆದೆ. ಕೊನೆಗೆ ಅನಿವಾರ್ಯವಾಗಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಬೇಕಾಯಿತು. ಎಷ್ಟೇ ಆದರೂ ನಂಬರ್ ಒನ್ ಆಗಿ ಕೂತು ಕೆಲಸ ಮಾಡುವುದಕ್ಕೂ ನಂಬರ್ ಎರಡೂ ಮೂರು ಆಗಿ ಮಾಡುವುದಕ್ಕೂ ವ್ಯತ್ಯಾಸವಿದೆ. ಈಗ ಮೂರು ವರ್ಷಗಳ ಕಾಲ ಏನು ಮಾಡದಿದ್ದರೂ ಪರಿಷತ್ತು ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಎಂಬ ಸ್ಪಷ್ಟ ಸಂದೇಶ ಕೊಡುವ ಕಾರಣಕ್ಕಾಗಿ ಕೆಲಸ ಮಾಡುತ್ತಿರುವೆ.

ಪ್ರಶ್ನೆ: ನಿಮ್ಮ ಇನ್ನೊಂದು ಕ್ಷೇತ್ರ ಹೋಟೆಲ್ ಉದ್ಯಮ ಮತ್ತು ಸಹಕಾರಿ ಸಂಘದ ಕ್ಷೇತ್ರ. ಆ ಬಗೆಗೆ ವಿವರಿಸಿ.

ನನ್ನ ಜೀವನದಲ್ಲಿ ಬಹಳ ತೃಪ್ತಿ ಕೊಟ್ಟಿದ್ದು ಕೋಆಪರೇಟಿವ್ ಮೂಮೆಂಟ್. ಕಳೆದ 30 ವರ್ಷಗಳಿಂದ ಸಹಕಾರ ಕ್ಷೇತ್ರದಲ್ಲಿದ್ದೇನೆ. ಬೆಂಗಳೂರು ವಿವಿಯ ನೌಕರರ ಸಹಕಾರ ಸಂಘ, ಗೃಹನಿರ್ಮಾಣ ಸಹಕಾರ ಸಂಘ, ಹೋಟೆಲ್ ಉದ್ಯಮ ಸಹಕಾರಿ ಬ್ಯಾಂಕ್. 30 ವರ್ಷ ಈ ಮೂರು ಸಂಸ್ಥೆಗಳಲ್ಲಿ ಅವಿಶ್ರಾಂತವಾಗಿ ಕೆಲಸ ಮಾಡಿದ್ದೇನೆ. ಹೋಟೆಲ್ ಉದ್ಯಮ ಸಹಕಾರಿ ಬ್ಯಾಂಕ್‌ಗೆ ನಾನು ಪ್ರವೇಶಿಸಿದಾಗ ಕೇವಲ 4 ಕೋಟಿ. ಇವತ್ತು 313 ಕೋಟಿಗಳ ಸಂಸ್ಥೆಯನ್ನಾಗಿಸಿರುವೆ. 1800 ಸದಸ್ಯರ ಸಂಖ್ಯೆಗಳನ್ನು ಸಂಸ್ಥೆಗೆ 3 ಸಾವಿರ ಮಾಡಿರುವೆ. ಪ್ರತಿವರ್ಷ ಶೇ.20ರಷ್ಟು ಲಾಭಾಂಶ ನೀಡಿದ್ದೇವೆ. ಅನೇಕ ಜನರಿಗೆ ಅವರ ಕಷ್ಟಕಾರ್ಪಣ್ಯಗಳಿಗೆ ಅವರಿಗೆ ಸುಲಭವಾಗಿ ಸಾಲ ನೀಡಿದ್ದೇವೆ. 58 ನೌಕರ ನೇಮಕಾತಿ ಮಾಡಿದಾಗ ಸಾಮಾಜಿಕ ನ್ಯಾಯವನ್ನು ಆಧರಿಸಿ ಎಲ್ಲಾ ಜಾತಿಯ ಜನರಿಗೆ ಕೆಲಸ ನೀಡಲಾಗಿದೆ. ಸಾಮಾಜಿಕವಾಗಿ ಆರ್ಥಿಕವಾಗಿ ಜನರಿಗೆ ಸಹಾಯ ಮಾಡಲು ಸಹಕಾರ ಆಂದೋಲನ ಸಹಕರಿಸಿತು.

ಪ್ರಶ್ನೆ: ಸರ್ ನೀವು, ಹೋಟೆಲ್ ಉದ್ಯಮ ಕ್ಷೇತ್ರಕ್ಕೆ ಪ್ರವೇಶಿಸಲು ಇದ್ದ ಕೌಟುಂಬಿಕ ಹಿನ್ನೆಲೆಯೇನು?

ನನ್ನ ತಂದೆ, ಚಿಕ್ಕಪ್ಪ ಹೋಟೆಲ್ ಇಟ್ಟಿದ್ದವರು. ನಾನು ಕಾರ್ಮಿಕನಾಗಿದ್ದವನು. ಈ ವೃತ್ತಿಯಿಂದ ಹೊಟ್ಟೆ ತುಂಬದಿದ್ದರೂ, ಅದನ್ನು ನಮ್ಮ ಕುಟುಂಬದವರು ಮಾಡುತ್ತಿದ್ದರು. ಹೋಟೆಲ್ ಇಡದೆ ಕೆಲಸಕ್ಕೆ ಸೇರಿದೆ. ಹಾಗಾಗಿ ಹೋಟೆಲ್ ಉದ್ಯಮದ ಹಿನ್ನೆಲೆ ನನಗೆ ಇತ್ತು, ಆಕಸ್ಮಿಕವಾಗಿ ನನ್ನ ಹೋಟೆಲ್ ಉದ್ಯಮಿಗಳ ಸಹಕಾರ ಸಂಘದ ಸದಸ್ಯರನ್ನಾಗಿ ಮಾಡಿದರು. ಜನರು ನನ್ನನ್ನು ಆರಿಸಿದರು ಒಮ್ಮೆ ಕಾಲಿಟ್ಟ ಮೇಲೆ ವಾಮನಮೂರ್ತಿಯ ಹಾಗೆ ಆ ಇಡೀ ಸಂಸ್ಥೆಯನ್ನು ನಾನು ಆಕ್ರಮಿಸಿಕೊಂಡೆ. ನಾನು ನಿಷ್ಠುರಿ. ರಾಜಿ ಸ್ವಭಾವದವನಲ್ಲ, ಅದಕ್ಕಾಗಿ ಈಗ ಇಲ್ಲಿ ಅಧ್ಯಕ್ಷನಾಗಿದ್ದೇನೆ. ಆಶ್ಚರ್ಯದ ಸಂಗತಿ ಎಂದರೆ ಪರಿಷತ್ತಿನಂತಹ ಚುನಾವಣೆಗೆ 18 ಲಕ್ಷ ವೆಚ್ಚವಾಗುತ್ತದೆ. ಇದು ಕನಿಷ್ಠ ವೆಚ್ಚ ಇಷ್ಟು ಹಣವನ್ನು ನನ್ನ ಹೋಟೆಲ್ ಉದ್ಯಮದ ಬಂಧುಗಳು ನೀಡಿದರು. ಅವರಿಗೆ ನಮ್ಮವನೊಬ್ಬ ಪರಿಷತ್ತಿನ ಅಧ್ಯಕ್ಷನಾದ ಎಂಬುದೇ ಖುಷಿ.

ಪ್ರಶ್ನೆ: ಸಾಹಿತ್ಯ ಮತ್ತು ಸಹಕಾರ ಕ್ಷೇತ್ರಗಳ ಜೊತೆಗೆ ಇತರೆ ಆಸಕ್ತ ಕ್ಷೇತ್ರಗಳು ಯಾವುವು?

ನಾನು ಯಕ್ಷಗಾನ ಕಲಾವಿದ. ಆದರೆ ಕಲಿ ಆಟ ಇತ್ಯಾದಿಗಳಲ್ಲಿ ತೊಡಗಿಕೊಳ್ಳುವ ಕಾಲದಲ್ಲಿ ಹೋಟೆಲ್‌ನಲ್ಲಿ ಲೋಟ ಎತ್ತುತ್ತಿದ್ದೆ. ಸಪ್ಲೈಯರ್ ಕೆಲಸ ಮಾಡಿ ಅದೇ ಪಂಚೆಯಲ್ಲಿ ಸಂಜೆ ಕಾಲೇಜಿಗೆ ಹೋಗುತ್ತಿದ್ದೆ. ಪಂಚೆಯಲ್ಲಿ ಐದಾರು ಕಾಫಿ ಕಲೆಗಳಿರುತ್ತಿದ್ದವು. ಬಿ.ಎ. ಫೈನಲಿಯರ್‌ನಲ್ಲಿ ಮೊದಲು ಪ್ಯಾಂಟ್ ಹಾಕಿದ್ದು. ಹಾಗಾಗಿ ಇತರೆ ಹಲವು ಕ್ಷೇತ್ರಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಾಗಲಿಲ್ಲ, ನನ್ನ ಮಕ್ಕಳಿಗೆ ಸಿಕ್ಕ ಅವಕಾಶ ನನಗೆ ಸಿಗಲಿಲ್ಲ.

ಪ್ರಶ್ನೆ: ಕಸಾಪದ ಅಧ್ಯಕ್ಷರಾಗಿ ಕಳೆದ ಒಂದೂವರೆ ವರ್ಷದ ಅನುಭವವೇನು? ಪರಿಷತ್ತು ಎದುರಿಸುತ್ತಿರುವ ಪ್ರಮುಖ ಸವಾಲುಗಳೇನು?

ಒಂದೂವರೆ ವರ್ಷದಲ್ಲಿ ನಾನು ಅಂದುಕೊಂಡಿದ್ದರಲ್ಲಿ ಕೆಲವನ್ನು ಮಾಡಲು ಸಾಧ್ಯವಾಗಿದೆ. ಮುಖ್ಯವಾಗಿ ಎಲ್ಲ ವರ್ಗದ ಸಾಹಿತಿಗಳು ಪರಿಷತ್ತಿಗೆ ಬರುವಂತಾಗಿದೆ. ಯಾವುದೇ ರೀತಿಯ ಹಮ್ಮು ತೋರಿಸದೆ ಸಾಹಿತ್ಯದ ಪರಿಚಾರಕನಾಗಿ ಅವರಿಗೆ ಕಾಣಿಸುತ್ತಿದ್ದೇನೆ. ದೊಡ್ಡವರ ಚಿಕ್ಕವರ ಪ್ರೀತಿ ಗಳಿಸಿಕೊಂಡಿದ್ದೇನೆ. ಅನೇಕ ಯೋಜನೆಗಳನ್ನು ಇಂಪ್ಲಿಮೆಂಟ್ ಮಾಡಿದ್ದೇನೆ. ಪರಿಷತ್ತಿಗೆ ಆರ್ಥಿಕ ಶಿಸ್ತನ್ನು ತಂದಿದ್ದೇನೆ. ಈಗ ಅನವಶ್ಯಕವಾದ ವೆಚ್ಚಗಳು ನಡೆಯುತ್ತಿಲ್ಲ, ಪರಿಷತ್ತಿನಿಂದ ಒಂದು ರೂಪಾಯಿ ಸಂಭಾವನೆಯನ್ನು ನಾನು ಪಡೆಯುತ್ತಿಲ್ಲ, ಬಂದ ಅತಿಥಿಗಳಿಗೆ ನನ್ನ ಸ್ವಂತ ಹಣದಿಂದಲೇ ಟೀ ಕುಡಿಸುತ್ತೇನೆ. ಯಾಕೆಂದರೆ, ಪರಿಷತ್ತಿನಲ್ಲಿ ಆರ್ಥಿಕ ಶಿಸ್ತಿರಬೇಕು. ಹಣ ಮತ್ತು ಮಜಾ ಉಡಾಯಿಸಲು ಯಾರೂ ಪರಿಷತ್ತಿಗೆ ಬರಬಾರದು.

ಪ್ರಶ್ನೆ: ಹಾಗಾದರೆ ಈ ಮೊದಲು ಪರಿಷತ್ತಿನಲ್ಲಿ ಆರ್ಥಿಕ ಅಶಿಸ್ತು ಇತ್ತು ಎಂಬುದು ನಿಮ್ಮ ಮಾತಿನ ಅರ್ಥವೇನು?

ಹೌದು ಇತ್ತು, ಅದನ್ನು ತಿಳಿದ ಕಾರಣವೇ ಚುನಾವಣೆಯ ಪೂರ್ವದಲ್ಲಿಯೇ ಈ ಸಮಸ್ಯೆಯನ್ನು ಪರಿಹರಿಸುವುದಾಗಿ ಘೋಷಿಸಿದ್ದೆ. ಆಯ್ಕೆಯಾದರೆ ಪರಿಷತ್ತಿನಿಂದ ಏನೂ ಮುಟ್ಟುವುದಿಲ್ಲ ಎಂದಿದ್ದೆ. ಈಗ ನಗರದಲ್ಲಿ ಓಡಾಡುವುದಕ್ಕೆ ಬ್ಯಾಂಕಿನ ವಾಹನ ಬಳಸುತ್ತೇನೆ. ಸಂಭಾವನೆ ಪಡೆಯುತ್ತಿಲ್ಲ. ಕೇವಲ ಪ್ರತಿಭೆ ಮಾತ್ರ ಗುರುತಿಸಲು ಇಷ್ಟಪಟ್ಟಿಲ್ಲ, ಸಾಮಾಜಿಕ, ಪ್ರಾದೇಶಿಕ ಮತ್ತು ಪ್ರತಿಭಾನ್ಯಾಯ ಈ ಮೂರನ್ನು ಸಮಾನವಾಗಿ ಭಾವಿಸಿ ಕೆಲಸ ಮಾಡುತ್ತಿದ್ದೇನೆ. ಅವಕಾಶಗಳನ್ನು ಕಲ್ಪಿಸುವಾಗ ಈ ಮೂರನ್ನು ಮಾನದಂಡವಾಗಿ ಇಟ್ಟುಕೊಂಡಿದ್ದೇನೆ. ಪ್ರತಿಷ್ಠಿತ ಪ್ರಶಸ್ತಿಗಳನ್ನು ಪ್ರದಾನ ಮಾಡುವಾಗ ಈ ಮಾನದಂಡಗಳನ್ನು ಇಟ್ಟುಕೊಂಡಿದ್ದೇನೆ. ಪ್ರಕಟಣೆಗಳ ವೇಳೆಯೂ ಇದೇ ಮಾನದಂಡವಿದೆ. ಸಮ್ಮೇಳನದ ಅಧ್ಯಕ್ಷರ ಆಯ್ಕೆಗೂ ಇದೆ ಮಾನದಂಡ. ನಾನು ಬರೆಹಗಾರನಾಗದೇ ಇರುವುದು ಇಲ್ಲಿ ನನಗೆ ಸಹಾಯ ಮಾಡುತ್ತಿದೆ.

ಪ್ರಶ್ನೆ: ಪರಿಷತ್ತಿನ ಯೋಜನೆಗಳಿಗೆ ಸರ್ಕಾರ ಬೆಂಬಲಿಸುತ್ತಿದೆಯೇ?

ಪರಿಷತ್ತಿಗೆ ಸರ್ಕಾರ ಹಣ ನೀಡುತ್ತಿದೆ. ಆದರೆ ಪರಿಷತ್ತಿನ ಸೈದ್ಧಾಂತಿಕ ನಿಲುವುಗಳಿಗೆ ಸ್ಪಂದಿಸುತ್ತಿಲ್ಲ, ಸರ್ಕಾರ ಹಣ ಕೊಡದಿದ್ದರೂ ಪರವಾಗಿಲ್ಲ, ನಮ್ಮ ನಿಲುವುಗಳಿಗೆ ಸ್ಪಂದಿಸಬೇಕು. ನನಗೆ ಬಹಳ ನೋವಾಗಿದ್ದು ಕಳೆದ ಬಾರಿ ಸರ್ಕಾರಿ ಶಾಲೆಗಳನ್ನು ಮುಚ್ಚಿದ್ದು. ಕನ್ನಡ ಮಾಧ್ಯಮಕ್ಕೆ ಆದ್ಯತೆ ನೀಡದೆ ಆಂಗ್ಲಭಾಷೆಗೆ ವಾತಾವರಣ ರೂಪಿಸಲು ಸರ್ಕಾರವೇ ಮುಂದಾದುದು. ಕನ್ನಡವೇ ಇಲ್ಲದಿದ್ದರೆ ಆ ಭಾಷೆಗಾಗಿ ಹುಟ್ಟಿದ ನಮ್ಮ ಸಂಸ್ಥೆ ಏನಾಗಬೇಕು. ಮೂರು ದಿನಗಳ ಸಂಭ್ರಮದ ಸಮ್ಮೇಳನ ಮಾಡಿಬಿಟ್ಟರೆ ಭಾಷೆ ಉದ್ಧಾರವಾಗುತ್ತದೆ ಎಂಬ ನಂಬಿಕೆ ನನಗಿಲ್ಲ, ಸೂತಕದ ಮನೆಯ ತರ ನುಡಿಮನೆಯನ್ನು ಇಟ್ಟು ಸಂಭ್ರಮ ಆಚರಿಸುವುದಾದರೆ ಹೇಗೆ? ಬರೀ ಹಣ ಕೋಡೋದಾದ್ರೆ ಕೊಡೋದೆ ಬೇಡ. ನಮ್ಮ ಸೈದ್ಧಾಂತಿಕ ನಿಲುವುಗಳಿಗೆ ಬೆಂಬಲವಿಲ್ಲದಿದ್ದರೆ ಹೇಗೆ? ಹಣ ಪಡೆದು ಕನ್ನಡ ಸಂಸ್ಕೃತಿಯ ಇಲಾಖೆಯ ಭಾಗದಂತೆ ಕೆಲಸ ಮಾಡುವುದರಿಂದ ಪರಿಷತ್ತಿಗೆ ತನ್ನದೇ ಅಸ್ತಿತ್ವ ಇರಲು ಸಾಧ್ಯವಿಲ್ಲ, ಇದು ಸಂಪೂರ್ಣ ಸ್ವಾಯತ್ತ ಸಂಸ್ಥೆ.

ಪ್ರಶ್ನೆ: ಕನ್ನಡದ ಭವಿಷ್ಯದ ಬಗೆಗೆ ಪರಿಷತ್ತಿನ ಅಧ್ಯಕ್ಷರಾದ ನಿಮ್ಮ ಅಭಿಪ್ರಾಯವೇನು?

ಭವಿಷ್ಯದಲ್ಲಿ, ಕನ್ನಡ ಉಳಿಯಲು ಶಿಕ್ಷಣದ ರಾಷ್ಟ್ರೀಕರಣ ಮಾಡಬೇಕು. ಒಂದೇ ಬೆಂಚಿನ ಮೇಲೆ ಸಮಾಜದ ಎಲ್ಲರೂ ಕೂತು ಶಿಕ್ಷಣ ಪಡೆಯುವಂತಾಗಬೇಕು. ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕು. ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಬೇಕು.

ಪ್ರಶ್ನೆ: ಈ ವಿಚಾರವಾಗಿ ಪರಿಷತ್ತು ಒಂದು ಚಳವಳಿಯನ್ನು ಹಮ್ಮಿಕೊಳ್ಳಬಹುದಲ್ಲ?

ಈ ವಿಚಾರವಾಗಿ ಸರ್ಕಾರದ ಗಮನ ಸೆಳೆಯುತ್ತಿದ್ದೇವೆ. ನಿರ್ಣಯಗಳನ್ನು ಮಾಡಿ ಹೇಳುತ್ತಿದ್ದೇವೆ. ಇದು ಸಾಂವಿಧಾನಿಕವಾಗಿ ಮಾಡುವ ಶಕ್ತಿ ಇರುವ ಸಂಸ್ಥೆಯಲ್ಲ, ಎಲ್ಲಿಯವರೆಗೆ ಸರ್ಕಾರದ ಅನುದಾನ ಪಡೆವ ಬಾಲಂಗೋಚಿ ಸಂಸ್ಥೆಯಾಗಿರುತ್ತದೋ ಅಲ್ಲಿಯವರೆಗೆ ಸರ್ಕಾರಕ್ಕೆ ಸೆಡ್ಡು ಹೊಡೆಯಲು ಸಾಧ್ಯವಿಲ್ಲ, ಕಳೆದ ಸಮ್ಮೇಳನದಲ್ಲಿ ಗೋವಿಂದ ಕಾರಜೋಳರು ಕನ್ನಡ ಸಂಸ್ಕೃತಿ ಸಚಿವರಾಗಿದ್ದಾಗ ಒಂದು ಚರ್ಚೆಯಾಯಿತು. ಸಮ್ಮೇಳನದಲ್ಲಿ ನಮ್ಮ ವಿರುದ್ಧ ಕವಿತೆ ಓದ್ತಾರೆ. ಬೈಯೋದಕ್ಕೆ ಹಣ ಕೊಡಬೇಕೆ ಎಂದು ಪ್ರಶ್ನಿಸಿದರು. ಆಗ ನಾನು ಹೇಳಿದೆ. ಸಾಹಿತಿಗಳು ಬರೆದದ್ದನ್ನೂ ನಿಮಗೆ ಕಳಿಸ್ತೀವಿ. ನೀವು ಓದಿ ಅನುಮತಿ ಕೊಟ್ಟ ಮೇ[ಲೆ] ನಾವು ಓದ್ತೀವಿ ಆಗಬಹುದಾ?" ಅಂತ ಹೇಳಿದೆ. ಸರ್ಕಾ[ರದ] ಮಾನಸಿಕ ಸ್ಥಿತಿ ಹೇಗಿದೆಯೆಂದರೆ ನಾವು ದು[ಡ್ಡು] ಕೊಡ್ತೀರೋದರಿಂದ ನಾವು ಹೇಳಿದಂತೆ ಕೇಳಬೇಕು ಎ[ಂಬ] ಧೋರಣೆಯಿದೆ. ಇಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಅನ್ನುತ್ತೇವ[ೆ] ಅದಕ್ಕೆ ಬೆಲೆ ನೀಡುವ ಸಂಪ್ರದಾಯವನ[್ನು] ಅವರಿಟ್ಟುಕೊಂಡಿಲ್ಲ.

ಪ್ರಶ್ನೆ: ಹಾಗಾದರೆ ಪರಿಷತ್ತಿನ ಆರ್ಥಿಕ ಸಂಪನ್ಮೂಲ[ದ] ಮೂಲವೇನು?

ಪುಸ್ತಕ ಮಾರಾಟ, ಸದಸ್ಯತ್ವ ಶುಲ್ಕದ ಸೂಕ್ತ ವಿನಿಯೋ[ಗ] ವೆಚ್ಚಗಳ ಕಡಿತ ಮತ್ತು ಜನರ ಬಳಿಗೆ ಹೋ[ಗಿ] ಕೈಯೊಡ್ಡಬೇಕು. ಜನರಿಂದ ಹಣ ಕೇಳಿ ಪಡೆ[ದರೆ] ಮರ್ಯಾದೆ ಹೋಗಲ್ಲ, ಸರ್ಕಾರಕ್ಕೆ ದುಂಬಾಲು ಬಿ[ದ್ದು] ಕೋಟಿ ಪಡೆವ ಬದಲು ಸಾಮಾನ್ಯರಿಂದ ಹಣ ಕೇಳುವು[ದು] ಸರಿ. ಮತ್ತೆ ಸಂಗ್ರಹಿಸಿ ನಿಧಿ ರೂಪಿಸಬೇಕು. ಒಬ್ಬರು [...] ಮಾಡಿಟ್ಟು ಹೋದರೆ ಮತ್ತಾರೋ ಮಜಾ ಉಡಾಯಿಸಿ[...] ಅದು ಹೊರಟುಹೋಗುತ್ತದೆ. ಈಗ ಸುಮಾರು [...] ಲಕ್ಷ ರೂಪಾಯಿ ನಾನು ಸಂಗ್ರಹಿಸಿರುವೆ. ಇದ[ನ್ನು] ಬೆಳೆಸಬೇಕು.

ಪ್ರಶ್ನೆ: ಕನ್ನಡ ಸಾಹಿತ್ಯದ ಗಂಭೀರ ಓದುಗ[ರು] ಬರೆಹಗಾರರು ಪರಿಷತ್ತಿನ ಜೊತೆ[ಗೆ] ಗುರುತಿಸಿಕೊಳ್ಳುತ್ತಿಲ್ಲವೇಕೆ? ಪರಿಷತ್ತು ಜಾತಿಯ ಕೂಪವಾ[ಗಿದೆ] ಎಂಬ ಭಾವನೆಯಿದೆಯಲ್ಲವೇ?

ಪರಿಷತ್ತು ನಮ್ಮದು ಎನ್ನುವಂತಹ ಆಡಳಿತ ಇರಬೇ[ಕು] ಈಚೆಗೆ ಅನೇಕರನ್ನು ಕರೆದು ಸಭೆ ಮಾಡಿ ಚರ್ಚಿಸಿದ್ದೆ[...] ಎಲ್ಲರೂ ಬರುತ್ತಿದ್ದಾರೆ. ಎಲ್ಲರನ್ನೂ ಒಳಗೊಳ್ಳುವ ಪ್ರ[ಯತ್ನ] ಮಾಡುತ್ತಿದ್ದೇನೆ. ನಿಜ, ಪರಿಷತ್ತು ಜಾತಿ ಕೂಪವಾಗಬಾರ[ದು] ಆದಕ್ಕಾಗಿ ಪರಿಷತ್ತಿನ ಬೈಲಾ ತಿದ್ದುಪಡಿ ಮಾಡಲಾಗುತ್ತಿ[ದೆ] ಕಾರ್ಯಕಾರಿ ಸಮಿತಿ ಮುಂದೆ ತಿದ್ದುಪಡಿ ಕರಡಿದೆ.

ಪ್ರಶ್ನೆ: ಯಾವ ಯಾವ ಅಂಶಗಳಲ್ಲಿ ತಿದ್ದು[ಪಡಿ] ಮಾಡಲಾಗುತ್ತಿದೆ.?

ಒಬ್ಬರು ಒಂದು ಬಾರಿ ಮಾತ್ರ ಅಧ್ಯಕ್ಷರಾಗಬೇ[ಕು] ಎಂಬ ನಿಯಮ ರೂಪಿಸಲಾಗುತ್ತಿದೆ. ಕಾರಣ ಈ ಜಾಗ[ದಲ್ಲಿ] ಕೂತರವರು ಮತ್ತೆ ಚುನಾವಣೆಯಲ್ಲಿ ನಿಂತು ಸೋಲಬಾರ[ದು] ಇದು ರಾಜಕೀಯ ಹುದ್ದೆಯಲ್ಲ, ಹಿಂದುಳಿದ ವರ್ಗ[...] ಕೇಂದ್ರ ಸಮಿತಿಯಿಂದ ಹಿಡಿದು ತಾಲೂ[ಕು] ಸಮಿತಿಯವರೆಗೂ ಕಾರ್ಯಕಾರಿ ಸಮಿತಿಯಲ್ಲಿ ಪ್ರಾತಿ[ನಿಧ್ಯ] ನೀಡಲಾಗುವುದು. ಅದನ್ನು ನಾಮನಿರ್ದೇಶನದ ಮೂ[ಲಕ] ಮಾಡಲಾಗುವುದು. ಹಿಂದುಳಿದ ವರ್ಗಗ[ಳು] ಮುಂದುವರೆಯಲು ಕಷ್ಟವಿದೆ. ಹಾಗಾಗಿ ಅವರ ಪ್ರಾತಿನಿ[ಧ್ಯಕ್ಕೆ] ಆದ್ಯತೆ ನೀಡಲಾಗುತ್ತಿದೆ.

ಪ್ರಶ್ನೆ: ಹಾಗೆ ಮಹಿಳೆಯರಿಗೆ?

ಮಹಿಳೆಯರಿಗೆ ಒಂದು ಪ್ರಾತಿನಿಧ್ಯವಿದೆ. ಒ[...] ಉಪಾಧ್ಯಕ್ಷ ಸ್ಥಾನವನ್ನು ಹೊಸದಾಗಿ ಸೃಷ್ಟಿಸಲಾಗಿದೆ. ನಾ[...] ಪದಾಧಿಕಾರಿ ಹುದ್ದೆಗಳಲ್ಲಿ ಒಂದು ಕಡ್ಡಾಯ[ವಾಗಿ] ಮಹಿಳೆಯರಿಗೆ ಮೀಸಲಿಡಲಾಗಿದೆ,. ಇದರಿಂದ ಸುಮ[ಾರು] 217 ಮಹಿಳೆಯರು ಪರಿಷತ್ತಿನ ಕಾರ್ಯವ್ಯಾಪ್ತಿಯ[...] ಬರುತ್ತಾರೆ. ಧಾರ್ಮಿಕ ಅಲ್ಪಸಂಖ್ಯಾತರಿಗೆ ಒಂದು ಪ್ರಾತಿ[ನಿಧ್ಯ] ನೀಡಬೇಕು. ಯಾವುದೇ ಕಾರಣಕ್ಕೂ ಈ ಸದಸ್ಯರು ಶ[...] ನಿಧಿಯಿಂದ ಹಣವನ್ನು ತೆಗೆದು ಬಳಸುವಂತಿರಬಾರ[ದು] ಇದು ಸಂಸ್ಥೆ ಇರುವವರೆಗೂ ಇರಬೇಕು. ಈಗ ಜನ[...] ಬಾಡಿಯಲ್ಲಿ ಅಪ್ರೋವಲ್ ಪಡೆದು ಬೇಕಾದಾಗ ಅ[...] ಬಳಸಬಹುದಿತ್ತು, ಹೀಗೆ ಹಲವು ಬದಲಾವಣೆಗ[ಳನ್ನು] ತರಲಾಗಿದೆ.


ಪ್ರಶ್ನೆ: ಪರಿಷತ್ತು ಶತಮಾನೋತ್ಸವ ಆಚರಿಸಿಕೊ[ಳ್ಳುವ] ಹಂತದಲ್ಲಿ ಹಮ್ಮಿಕೊಂಡಿರುವ ಯೋಜನೆಗಳೇನು?

ಸಂಭ್ರಮದ ಕಾರ್ಯಕ್ರಮಕ್ಕಿಂತ ಜನಮಾನಸದಲ್ಲಿ ಉ[...] ಕೆಲಸ ಮಾಡಬೇಕಿದೆ. ಅದಕ್ಕೆ ಆಧುನಿಕ ಕನ್ನಡ ಸಾ[ಹಿತ್ಯ] ಚರಿತ್ರೆಯ ನಿರ್ಮಾಣ ಕೆಲಸ ಮಾಡಲಾಗುತ್ತಿದೆ. ಆಧ[...] ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳನ್ನು ಹೊರತ[ರಲು] ಯತ್ನಿಸಲಾಗಿದೆ. ಇದರ ಕೆಲಸ ಈಗಾಗಲೇ ನಡೆ[ದಿದ್ದು] ಅವು ಹೊರಬರುವ ಹಂತದಲ್ಲಿವೆ. ಮೂರು ಮ[...] ಗ್ರಂಥಗಳನ್ನು ತರಲಾಗುವುದು. ಕನ್ನಡ ವಾರ್ಷಿಕ[...] ಪ್ರಕಟಿಸಲಾಗುವುದು. ಕನ್ನಡದ ಸೇವೆಯಲ್ಲಿ ತೊಡಗಿದ[...] ಗೌರವ ಸಮರ್ಪಣೆ, ಶತಮಾನೋತ್ಸವ ಭವನ ನಿರ್ಮಾ[ಣ] ನಾಲ್ವಡಿ ಕೃಷ್ಣರಾಜ ಒಡೆಯರ ಉಪನ್ಯಾಸ ಇ[...] ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.





ಸೆಪ್ಟೆಂಬರ್ 17ರಂದು ಬೆಂಗಳೂರಿನಲ್ಲಿ ವಿಶ್ವಕರ್ಮ ಮಹಾಸಭಾ ಎಂಬ ಸಂಘಟನೆ ಸಮಾವೇಶವೊಂದನ್ನು ಏರ್ಪಡಿಸಿತ್ತು. ಇತ್ತೀಚಿನ ವರ್ಷಗಳಲ್ಲಿ ಈ ಸಮುದಾಯ ತನ್ನ ಅಸ್ಮಿತೆಗಾಗಿ ಆಗಾಗ ದನಿಯೆತ್ತುತ್ತಾ ವಿಭಿನ್ನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ವಿಶ್ವಕರ್ಮ ಜನಾಂಗದ ಸ್ಥಿತಿಗತಿ ಹಾಗೂ ಸಂಘಟನೆಯ ಗೊತ್ತುಗುರಿಗಳ ಬಗ್ಗೆ ಅದರ ಅಧ್ಯಕ್ಷ ಕೆ.ಪಿ. ನಂಜುಂಡಿ ಅವರೊಂದಿಗೆ ನಡೆಸಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.



ವಿಶ್ವಕರ್ಮ ನಾಯಕ ನಂಜುಂಡಿ
"ಎಲ್ಲವನ್ನೂ ಸೃಷ್ಟಿಸುವ ನಮಗೆ ಬೆಲೆ ಇಲ್ಲ!"

• ಇಂದು ಕರ್ನಾಟಕದಲ್ಲಿ ವಿಶ್ವಕರ್ಮ ಜನಾಂಗದ ಸ್ಥಿತಿಗತಿ ಹೇಗಿದೆ?

ವಿಶ್ವಕರ್ಮ ಜನಾಂಗ ಹಿಂದುಳಿದ ಜಾತಿಗಳಲ್ಲೇ ಎರಡನೇ ಅತಿದೊಡ್ಡ [illegible]. ನಮ್ಮ ಜನಾಂಗ ಕರ್ನಾಟಕದಲ್ಲಿ ಸುಮಾರು 35 ಲಕ್ಷ ಮಂದಿ [illegible]. ಆದರೂ ನಮ್ಮ ಜನಾಂಗಕ್ಕೆ ಸೂಕ್ತ ರಾಜಕೀಯ ಪ್ರಾತಿನಿಧ್ಯ [illegible]ತವಾಗಿದೆ. ತಲತಲಾಂತರಗಳಿಂದಲೂ ನಮ್ಮನ್ನು ನಿರ್ಲಕ್ಷಿಸಿ, ಮೂಲೆಗುಂಪು [illegible]ತ್ತಾ ಬರಲಾಗಿದೆ.

• ಈ ನಿರ್ಲಕ್ಷ್ಯಕ್ಕೆ ಕಾರಣವೇನು?

ನಮ್ಮ ಜನಾಂಗದಲ್ಲಿ ರಾಜಕೀಯ ಪ್ರಜ್ಞೆ ಇನ್ನೂ ಜಾಗೃತಗೊಂಡಿಲ್ಲದಿರುವುದೇ ಪ್ರಮುಖ ಕಾರಣ. ಜೊತೆಗೆ ರಾಜಕೀಯ ಪಕ್ಷಗಳ ನಿರ್ಲಕ್ಷ್ಯವೂ [illegible]ಂಡಿದೆ. ಇತ್ತೀಚಿನ ವರ್ಷಗಳಲ್ಲಿ ಜನಾಂಗವನ್ನು ಸಂಘಟಿಸುವ ಕೆಲಸ [illegible]ತ್ತಿದ್ದೇವೆ.



• ನಿಮ್ಮ ಸಂಘಟನೆಯ ಧ್ಯೇಯೋದ್ದೇಶಗಳೇನು?

ಮೊದಲನೆಯದಾಗಿ ನಮ್ಮ ಜನಾಂಗದಲ್ಲಿ ರಾಜಕೀಯ ಪ್ರಜ್ಞೆಯನ್ನು [illegible]ಗೊಳಿಸಬೇಕು. ಹಿಂದಿನಿಂದಲೂ ನಮ್ಮ ಜನಾಂಗ ರಾಜಕೀಯವಾಗಿ ನಿರ್ಲಕ್ಷ್ಯಕ್ಕೆ ತುತ್ತಾಗಿದೆ. ಹಾಗೆ ನೋಡಿದರೆ ಸಮಾಜಕ್ಕೆ ನಮ್ಮ ಸಮುದಾಯದ [illegible]ಗೆ ಅಪಾರವಾಗಿದೆ. ಅನಾದಿಯಿಂದಲೂ ಕೃಷಿಗೆ, ವಿವಿಧ ವೃತ್ತಿಗಳಿಗೆ [illegible] ಸಲಕರಣೆಗಳನ್ನು ತಯಾರಿಸಿರುವುದು ವಿಶ್ವಕರ್ಮರೇ. ಅಷ್ಟೇ ಏಕೆ? [illegible]ನನ್ನೂ ಅರಮನೆಗಳನ್ನೂ ನಿರ್ಮಿಸಿದ್ದು ನಾವು; ರಾಜಮಹಾರಾಜರ [illegible]ಸನಗಳನ್ನು ತಯಾರಿಸಿದ್ದು ನಾವು; ಗುಡಿ-ಗೋಪುರ ಶಿಲ್ಪಗಳನ್ನು ಕೆತ್ತಿದ್ದು, ವಿಗ್ರಹಗಳನ್ನು ಕೆತ್ತಿದ್ದು ನಾವು. ಹೀಗೆ ಎಲ್ಲಾ ಕಡೆ ನಮ್ಮ [illegible]ಲೆ-ಕೊಡುಗೆ ಇದ್ದೇ ಇದೆ. ಆದರೆ ನಮ್ಮ ಕೆಲಸವನ್ನು ಯಾರು [illegible]ಸಿದ್ದಾರೆ? ಒಂದು ರೂಪಾಯಿ ಕಿಮ್ಮತ್ತಿನ ಒಂದು ಬ್ಲೇಡು ತಯಾರಿಸಿದವರೂ [illegible]ಮೇಲೆ ಅವರ ಹೆಸರು ಮುದ್ರಿಸುತ್ತಾರೆ. ಆದರೆ ಅಪಾರವಾದ ಸಂಪತ್ತನ್ನು [illegible] ವಿಶ್ವಕರ್ಮ ಸಮುದಾಯವನ್ನು ಗುರುತಿಸುವವರೇ ಇಲ್ಲವಾಗಿದೆ. [illegible] ಘೋರ ನಿರ್ಲಕ್ಷ್ಯವನ್ನು ಪ್ರಶ್ನಿಸುವ ಕಾಲ ಈಗ ಬಂದಿದೆ. ಹೀಗಾಗಿ [illegible] ಸಮುದಾಯವನ್ನು ಸಂಘಟಿಸಿ, ಸರಿಯಾದ ಜಾಗೃತಿ ಮೂಡಿಸುವ [illegible]ನ್ನು ನಮ್ಮ ಸಂಘಟನೆ ಕೈಗೆತ್ತಿಕೊಂಡಿದೆ.

• ವಿಶ್ವಕರ್ಮ ಜನಾಂಗದಲ್ಲಿ ಬೇರೆಬೇರೆ ಒಳಪಂಗಡಗಳು ಇವೆಯಲ್ಲಾ?

ನಮ್ಮಲ್ಲಿ ಒಳಪಂಗಡಗಳು, ಒಳಜಾತಿಗಳು ಅಂತ ಏನೂ ಇಲ್ಲ. ಆದರೆ ಬೇರೆ ವೃತ್ತಿಗಳನ್ನು ಮಾಡುತ್ತಾ ಬಂದಿರುವ ಜನರಿದ್ದಾರೆ. ಕಬ್ಬಿಣದ [illegible] ಮಾಡುವ ಕಮ್ಮಾರರು, ಮರಗೆಲಸ ಮಾಡುವ ಬಡಗಿಗಳು, ಕಂಚಿನ [illegible] ಮಾಡುವವರು, ವಿಗ್ರಹಗಳ ಕೆತ್ತನೆ ಕೆಲಸ ಮಾಡುವ ಶಿಲ್ಪಿಗಳು, ಚಿನ್ನ [illegible]ಲಸ ಮಾಡುವ ಅಕ್ಕಸಾಲಿಗರು – ಹೀಗೆ ಐದು ಬೇರೆಬೇರೆ ವೃತ್ತಿಗಳಿವೆ. [illegible]ಲ್ಲ ವೃತ್ತಿಗಳ ಜನರೂ ಸೇರಿ ವಿಶ್ವಕರ್ಮ ಜನಾಂಗವಾಗಿದೆ.

• ಅದರಲ್ಲಿ ಕೆಲವರು ಮಾಂಸಾಹಾರಿಗಳು, ಕೆಲವರು ಸಸ್ಯಾಹಾರಿಗಳೂ [illegible]ಲ್ಲಾ?

[illegible], ಪುರಾತನ ಜೀವಿಗಳು ಆರಂಭದಲ್ಲಿ ಎಲ್ಲರೂ [illegible]ಹಾರಿಗಳಾಗಿದ್ದರು ಅಂತ ನಾವು ಇತಿಹಾಸದಲ್ಲಿ ಓದಿದ್ದೇವೆ. ಬರುಬರುತ್ತಾ [illegible]ರಿ, ಮಾಂಸಾಹಾರಿ ಅಂತಾ ಮಾಡಿಕೊಂಡಿದ್ದಾರೆ. ಮಂಗಳೂರಿನ ಕಡೆ [illegible] ಸಸ್ಯಾಹಾರಿ ಜಾತಿಗಳೆನಿಸಿಕೊಂಡವರೂ ಮೀನು ತಿನ್ನೋದನ್ನು ನಾವು [illegible]ತಿದ್ದೇವೆ. ಅದನ್ನು ಅವರು 'ಜಲಪುಷ್ಪ' ಅಂತಾ ಕರೀತಾರಂತೆ. ಹೀಗೆ [illegible] ಪದ್ಧತಿ ಅನ್ನೋದು ಆಯಾ ಪರಿಸರದ ಪ್ರಭಾವದಿಂದ ಬಂದಿರುವಂಥದ್ದು. [illegible] ವಿಶೇಷ ಅರ್ಥವೇನಿಲ್ಲ.

• [illegible]ಸ್ಥದ ಕೆಲಸ ಮಾಡುವವರು, ಕಬ್ಬಿಣದ ಕುಲುಮೆ ಕೆಲಸ ಮಾಡುವವರನ್ನು [illegible] ಕಾಣುತ್ತಾರಲ್ಲ?

[illegible]ಗೇನಿಲ್ಲ. ನಿರ್ದಿಷ್ಟವಾಗಿ ದೇವರ ಶಿಲ್ಪಗಳನ್ನು ಕೆತ್ತುವವರಲ್ಲಿ ಸ್ವಲ್ಪ [illegible]ಚಾರಗಳು ಕಂಡುಬರುತ್ತವೆ. ದೇವರ ಕೆಲಸ ಮಾಡೋವಾಗ ಹೆಚ್ಚು [illegible]ಯು, ಆಚಾರ ಪಾಲಿಸುವುದು ಅನಿವಾರ್ಯವಾಗಿರುತ್ತದೆ. ಅಷ್ಟು ಬಿಟ್ಟರೆ [illegible] ಬೇರೆ ಯಾವ ಮೇಲುಕೀಳು, ತಾರತಮ್ಯವೂ ಇಲ್ಲ.

• [illegible] ವಿಶ್ವಕರ್ಮ ಮಹಾಮಂಡಳ ಎಂಬ ಹೆಸರಿನ ಮತ್ತೊಂದು ಸಂಘಟನೆ [illegible] ಜಯಂತಿಯನ್ನು ಪ್ರತ್ಯೇಕವಾಗಿ ಆಚರಿಸಿದೆಯಲ್ಲ? ನಿಮ್ಮ ಜನಾಂಗದಲ್ಲೇ [illegible]?

ಇದು ಬೇಸರದ ಸಂಗತಿ; ಆದರೆ ವಿಶ್ವಕರ್ಮ ಬಂಧುಗಳಿಗೆ ಈ ಬಗ್ಗೆ ಯಾವುದೇ ಗೊಂದಲವಿಲ್ಲ. ಜನಾಂಗದ ಏಳ್ಗೆಗಾಗಿ ದುಡಿಯುತ್ತಿರುವ ವಿಶ್ವಕರ್ಮ ಮಹಾಸಭಾದ ಜೊತೆ ದೃಢವಾಗಿ ನಿಂತಿದ್ದಾರೆ. ನಮ್ಮ ಸಮಾವೇಶಕ್ಕೆ ರಾಜ್ಯದ ಎಲ್ಲಾ ಭಾಗಗಳಿಂದ ಆಗಮಿಸಿದ ಲಕ್ಷಾಂತರ ಜನರೇ ಅದಕ್ಕೆ ಸಾಕ್ಷಿ. ಹಿಂದುಳಿದ ಸಮುದಾಯದ ನಾವೆಲ್ಲ ಅರ್ಥಮಾಡಿಕೊಳ್ಳಬೇಕಾದ ಒಂದು ಸಂಗತಿಯೆಂದರೆ ನಾವು ಜನಾಂಗವನ್ನು ಒಟ್ಟುಗೂಡಿಸುವ ಕೆಲಸ ಮಾಡಬೇಕೇ ಹೊರತು, ಒಗ್ಗಟ್ಟನ್ನು ಒಡೆಯುವ ಕೆಲಸ ಎಂದಿಗೂ ಮಾಡಲೇಬಾರದು. ಇಂದಿನ ರಾಜಕೀಯ ವಾತಾವರಣದಲ್ಲಿ ಒಡಕನ್ನು ದುರ್ಬಳಕೆ ಮಾಡಿಕೊಂಡು ಜನಾಂಗದಲ್ಲಿ ಗೊಂದಲ ಮೂಡಿಸುವ ಶಕ್ತಿಗಳು ಇದ್ದೇ ಇರುತ್ತವೆ. ನಾವು ಆ ಬಗ್ಗೆ ಎಚ್ಚರಿಕೆ ವಹಿಸಬೇಕಾಗುತ್ತದೆ.

• ಅವರನ್ನೂ ಒಂದುಗೂಡಿಸಲು ನೀವು ಪ್ರಯತ್ನಿಸುತ್ತೀರಾ?

ಇಡೀ ಜನಾಂಗ ಒಗ್ಗಟ್ಟಾಗಿರಬೇಕೆಂಬ ಪ್ರಯತ್ನವನ್ನು ನಾವು [illegible] ಮಾಡುತ್ತಾ ಬಂದಿದ್ದೇವೆ. ಎಲ್ಲರೂ ಒಟ್ಟಾಗಿ ಜನಾಂಗದ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳೋಣ ಎಂಬುದೇ ನನ್ನ ಮನವಿ. ಆದರೆ ಕೆಲವರಿಗೆ ಇಷ್ಟ ಇದು ಮನವರಿಕೆಯಾಗಿಲ್ಲ. ಇಡೀ ಸಮುದಾಯ ನಮ್ಮ ಸಂಘಟನೆಯನ್ನು ಬೆಂಬಲಿಸುತ್ತಿದೆ. ಸಣ್ಣಪುಟ್ಟ ಭಿನ್ನಾಭಿಪ್ರಾಯ ಎಲ್ಲಾ ಕಡೆ ಇರುತ್ತದೆ. ಇದಕ್ಕೆ ಹೆಚ್ಚೇನೂ ಮಹತ್ವವಿಲ್ಲ.

• ನೀವು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಿರುವಂತೆ ಕಾಣುತ್ತಿದೆಯಲ್ಲ?

ಬೆಂಬಲಿಸುವುದು ಮಾತ್ರವಲ್ಲ; ನಾನು ಕಾಂಗ್ರೆಸ್ ಪಕ್ಷದ ಸದಸ್ಯ. ನಾನು ಕಾಂಗ್ರೆಸ್ ಸೇರಿದ್ದಕ್ಕೂ ಕಾರಣವಿದೆ. ಇದುವರೆಗೂ ನಾನು ಎಲ್ಲ ಪಕ್ಷಗಳ ಜೊತೆ ಸಮಾನ ಅಂತರ ಕಾಯ್ದುಕೊಂಡು ಬಂದಿದ್ದೇನೆ. ಎಲ್ಲ ಪಕ್ಷಗಳ ನಾಯಕರನ್ನೂ ನಮ್ಮ ಸಭೆಸಮಾರಂಭಗಳಿಗೆ ಆಹ್ವಾನಿಸಿದ್ದೇವೆ. ನಮ್ಮ ಅಹವಾಲುಗಳನ್ನು ಸಲ್ಲಿಸಿದ್ದೇವೆ. ಆದರೆ ಯಾರಿಂದಲೂ ಸಕಾರಾತ್ಮಕವಾದ ಸ್ಪಂದನೆ ದೊರೆತಿಲ್ಲ.

ಈ ಹಿನ್ನೆಲೆಯಲ್ಲಿ ಮಾನ್ಯ ಆಸ್ಕರ್ ಫರ್ನಾಂಡಿಸ್‌ರವರೊಂದಿಗೆ ದೆಹಲಿಗೆ ಹೋಗಿ ಶ್ರೀಮತಿ ಸೋನಿಯಾ ಗಾಂಧಿಯವರನ್ನು ಭೇಟಿ ಮಾಡಿ ನಮ್ಮ ಜನಾಂಗದ ಸ್ಥಿತಿಗತಿಯನ್ನು ವಿವರಿಸಿದ್ದೆವು. ಆಗ ಅವರು ಆಶ್ವಾಸನೆ ನೀಡಿದ ಪ್ರಕಾರ ನಡೆದುಕೊಂಡಿದ್ದಾರೆ. ಈ ಬಾರಿ ಬಜೆಟ್‌ನಲ್ಲಿ ವಿಶ್ವಕರ್ಮ ಜನಾಂಗಕ್ಕೆ ಅಭಿವೃದ್ಧಿ ನಿಗಮ ಸ್ಥಾಪಿಸುವ ತೀರ್ಮಾನ ಪ್ರಕಟಿಸಿದ್ದಾರೆ.

ಇದು ದೇಶದ ಇತಿಹಾಸದಲ್ಲೇ ಮೊದಲು. ಬೇರೆ ಯಾವುದೇ ರಾಜ್ಯದಲ್ಲಿ ಹೀಗೆ ವಿಶ್ವಕರ್ಮರಿಗಾಗಿಯೇ ಒಂದು ನಿಗಮ ಸ್ಥಾಪನೆಯಾಗಿಲ್ಲ. ನಮ್ಮ ಜನಾಂಗದ ಏಳ್ಗೆಗಾಗಿ ಕಾರ್ಯಕ್ರಮ ರೂಪಿಸುತ್ತಿರುವ ಹಿನ್ನೆಲೆಯಲ್ಲಿ ನಾನು ಕಾಂಗ್ರೆಸ್ ಪಕ್ಷ ಸೇರಿದ್ದೇನೆಯೆ ಹೊರತು ವೈಯಕ್ತಿಕ ಆಸೆ-ಆಕಾಂಕ್ಷೆಗಳಿಗಾಗಿ ಅಲ್ಲ. ವಾಸ್ತವದಲ್ಲಿ ನಾನು ಪಕ್ಷದಿಂದ ಹಣ ಕೇಳಿಲ್ಲ ಅಥವಾ ಟಿಕೆಟ್ ಕೇಳಿಲ್ಲ. ಸರ್ಕಾರ ಹಿಂದುಳಿದ ನಮ್ಮ ಜನಾಂಗದ ಅಭಿವೃದ್ಧಿಗಾಗಿ ಯೋಜನೆ ರೂಪಿಸಬೇಕೆಂಬುದೊಂದೇ ನನ್ನ ಬೇಡಿಕೆ.

• ನಿಮ್ಮ ಸಮುದಾಯಕ್ಕೂ ಒಂದು ಮಠ-ಸ್ವಾಮಿಗಳನ್ನು ರೂಪಿಸುವ ಉದ್ದೇಶ ಇದೆಯೆ?


ವಿಶ್ವಕರ್ಮ ಜನಾಂಗಕ್ಕೆ ಸೇರಿದ 67 ಮಠಗಳು ಇಡೀ ರಾಜ್ಯದಾದ್ಯಂತ ಹರಡಿಕೊಂಡಿವೆ. ಅವೆಲ್ಲಕ್ಕೂ ಮಠಾಧಿಪತಿಗಳೂ ಇದ್ದಾರೆ. ಈ ಹಿಂದೆ ಎಲ್ಲ ಸ್ವಾಮೀಜಿಗಳನ್ನೂ ಸೇರಿಸಿ ಒಂದು ಬೃಹತ್ ಸಮಾವೇಶವನ್ನೇ ಸಂಘಟಿಸಿದ್ದೇವೆ. ಆ ಎಲ್ಲ ಮಠಗಳೂ ಸೇರಿ ಒಂದು ಒಕ್ಕೂಟವನ್ನೂ ರಚಿಸಿಕೊಂಡಿದ್ದಾರೆ. ಮೊನ್ನೆ ನಡೆದ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲೂ ಸುಮಾರು 60 ಸ್ವಾಮಿಗಳು ಭಾಗವಹಿಸಿದ್ದಾರೆ. ಹೀಗಿರುವಾಗ ಹೊಸದಾಗಿ ಮಠ ಕಟ್ಟಿಕೊಳ್ಳುವ ಅಗತ್ಯ ಎಲ್ಲಿಂದ ಬರುತ್ತದೆ ಹೇಳಿ?

• ಸರ್ಕಾರದ ಮುಂದೆ ನಿಮ್ಮ ನಿರ್ದಿಷ್ಟ ಬೇಡಿಕೆಗಳೇನು?

ಹಿಂದುಳಿದ ಜನಾಂಗದ ಶೇ.15ರ ಮೀಸಲಾತಿಯಲ್ಲಿ ವಿಶ್ವಕರ್ಮ ಸಮುದಾಯಕ್ಕೆ ಶೇ.3ರಷ್ಟು ಪ್ರತ್ಯೇಕ ಮೀಸಲಾತಿ ನಿಗದಿಗೊಳಿಸಬೇಕು. ಜನಾಂಗದ ಶೈಕ್ಷಣಿಕ, ಆರ್ಥಿಕ ಅಭಿವೃದ್ಧಿಗೆ ವಿಶೇಷ ಯೋಜನೆ ರೂಪಿಸಬೇಕು. ಚಿನ್ನ ಬೆಳ್ಳಿ ಕೆಲಸ ಮಾಡುತ್ತಿರುವ ನಮ್ಮ ಬಂಧುಗಳಿಗೆ ಪೊಲೀಸರ ಅನಗತ್ಯ ಕಿರುಕುಳ ತಪ್ಪಬೇಕು. ಗ್ರಾಮೀಣ ಪ್ರದೇಶದಲ್ಲಿ ಕಮ್ಮಾರಿಕೆ, ಬಡಗಿ ಮುಂತಾದ ಕೆಲಸದಲ್ಲಿ ತೊಡಗಿರುವವರ ಸ್ಥಿತಿ ನಿಜಕ್ಕೂ ಶೋಚನೀಯವಾಗಿದೆ. ಅಂಥವರು ಕೆಲಸ ಮಾಡಲು ಪ್ರತ್ಯೇಕ ಶೆಡ್‌ಗಳನ್ನು ನಿರ್ಮಿಸಿಕೊಡಬೇಕು. ಅವರಿಗೆ ಆರ್ಥಿಕ ನೆರವು ಒದಗಿಸಬೇಕು. ಹಾಗೇ ರಾಜಕೀಯವಾಗಿ ನಮ್ಮ ಜನಾಂಗ ಬಹಳ ನಿರ್ಲಕ್ಷಿತವಾಗಿದೆ. ಹೀಗಾಗಿ ಗ್ರಾಮ ಪಂಚಾಯ್ತಿಯಿಂದ ಹಿಡಿದು ರಾಜ್ಯಸಭಾ ಸ್ಥಾನದವರೆಗೂ ಜನಸಂಖ್ಯಾ ಪ್ರಮಾಣಕ್ಕನುಗುಣವಾದ ಪ್ರಾತಿನಿಧ್ಯ ಕೊಡಬೇಕು. ಸೆಪ್ಟೆಂಬರ್ 17ರಂದು ವಿಶ್ವಕರ್ಮ ಜಯಂತಿಗೆ ಸರ್ಕಾರಿ ರಜೆ ಘೋಷಿಸಬೇಕು... ಹೀಗೆ ಹತ್ತಾರು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದೇವೆ.

ಸಂದರ್ಶನ : **ದೊಡ್ಡಿಪಾಳ್ಯ ನರಸಿಂಹಮೂರ್ತಿ**

ಇಬ್ಬರು ಯುವ ಸಂಸದರನ್ನು ಕುರಿತು...



ಡಿ.ಕೆ. ಸುರೇಶ್

ಡಿ.ಕೆ. ಶಿವಕುಮಾರ್‌ಗಿಂತ ಉತ್ತಮ ನಾಯಕತ್ವ ಗುಣವಿರುವ ಸುರೇಶ್ ತಾವು ಎಲೆಕ್ಷನ್ ಗೆದ್ದ 'ಶಾಕ್'ನಿಂದ ಇನ್ನೂ ಹೊರಬಂದಂತೆ ಕಾಣುತ್ತಿಲ್ಲ. ಎರಡು ದಶಕಗಳ ರಾಜಕೀಯ ಅನುಭವವಿರುವ ಸುರೇಶ್ ಸಂಸದರಾಗಿ ನಿರ್ವಹಿಸಬೇಕಾದ ಕೆಲವು ಮುಖ್ಯ ವಿಚಾರಗಳಿವೆ. ಕಾವೇರಿ ವಿವಾದ, ಮೇಕೆದಾಟು ಯೋಜನೆಗೆ ತಮಿಳುನಾಡಿನ ಆಕ್ಷೇಪ ಮುಂತಾದ ವಿಚಾರಗಳ ಬಗ್ಗೆ ಕೊಂಚ ಮಾಹಿತಿ ಪಡೆದು ಈ ನಾಡಿನ ಜನರ ಪರವಾಗಿ ಸುರೇಶ್ ಮಾತನಾಡಬೇಕಿದೆ. ತನಗೆ ಸಿಕ್ಕಿರುವ ಅವಕಾಶವನ್ನು ಸುರೇಶ್ ಸರಿಯಾಗಿ ಬಳಸಿಕೊಂಡಿದ್ದೇ ಆದಲ್ಲಿ ಮುಂದಿನ ಮೂರ್ನಾಲ್ಕು ಎಲೆಕ್ಷನ್ ತನಕ ಯಾರೂ ಅವರನ್ನು ಕೆಡವಲು ಅಸಾಧ್ಯ. ಇನ್ನು ಇಪ್ಪತ್ತು ವರ್ಷ ಸಕ್ರಿಯ ರಾಜಕೀಯದಲ್ಲಿರಲು ಸಾಧ್ಯವಿರುವ ಸುರೇಶ್ ರಾಜ್ಯದ ಯುವ ಕಾಂಗ್ರೆಸ್‌ನ ನಾಯಕರಲ್ಲೊಬ್ಬರಾಗಿ ರಾಷ್ಟ್ರಮಟ್ಟದಲ್ಲೇ ಗಮನ ಸೆಳೆಯಬಲ್ಲ ರೀತಿಯಲ್ಲಿ ಮುಂಚೂಣಿಗೆ ಬರಲು ಅವಕಾಶಗಳಿವೆ. ಕೇವಲ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾತ್ರವಲ್ಲ ಕೋಮುವಾದ, ನರೇಂದ್ರ ಮೋದಿಯೆಂಬ ದುಷ್ಟನ ವಿರುದ್ಧವೂ ಮಾತನಾಡಬಲ್ಲ ಛಾತಿಯನ್ನು ಸುರೇಶ್ ತರದ ಯುವ ನಾಯಕರು ಬೆಳೆಸಿಕೊಳ್ಳಬೇಕಿದೆ.

ರಮ್ಯಾ

ಇದೊಂದು ಅನಿರೀಕ್ಷಿತ ಸಂಗತಿ.


ನಟಿ ರಮ್ಯಾ ಎಲೆಕ್ಷನ್‌ಗೆ ನಿಂತಾಗ ಈಕೆಯೂ ಅಂಬರೀಶ್ ತರ ಗೆದ್ದ ಮೇಲೆ ಬೆಂಗಳೂರು ಸೇರಿಕೊಳ್ಳುತ್ತಾರೆ ಅಂತ ಜನ ಭಾವಿಸಿದ್ದರು. ಇಂಗ್ಲಿಷ್ ಮಾತು, ಎ.ಸಿ. ರೂಂ ವಾಸ, ಶ್ರೀಮಂತ ಜೀವನ ಶೈಲಿ, ಸಿನಿಮಾಗಳಲ್ಲಿ [illegible] ಒಟ್ಟಿನಲ್ಲಿ ಮಂಡ್ಯದ ಜನರಿಗೆ ಸಿಗಲಾರಳೆಂಬ ಒಂದು ಅಭಿಪ್ರಾಯವಿತ್ತು.

ಆದರೆ ರಮ್ಯಾ ಬದಲಾಗಿದ್ದಾರೆ ಅಥವಾ ಜನ ಕಲ್ಪಿಸಿಕೊಂಡಂತೆ ಕಣ್ಮರೆಯಾಗದೆ ಸಂಸದೆಯಾಗಿ ತಮ್ಮ ಹೊಣೆ ಏನೆಂಬುದನ್ನೂ ಅರಿತು ಕೆಲಸ ಶುರು ಮಾಡಿದ್ದಾರೆ. ನಿಜಕ್ಕೂ ಇದೊಂದು ಮೆಚ್ಚಬೇಕಾದ ವಿಚಾರ. ರಮ್ಯಾ ಚಿತ್ರನಟಿಯಾಗಿದ್ದಾಗಲೂ ಪಕ್ಕಾ ಪ್ರೊಫೆಷನಲ್ ಆಗಿದ್ದರು. ನಟನಾ ಪ್ರತಿಭೆಯೊಂದಿಗೆ ಆತ್ಮವಿಶ್ವಾಸ, ಶಿಸ್ತು, ಸಮಯ ಪ್ರಜ್ಞೆಗಳೆಲ್ಲವನ್ನೂ ಹೊಂದಿದ್ದರು. ಕೆಲವೊಮ್ಮೆ 'ಅಹಂ' ತೋರುತ್ತಾರೆ. ಅನಿಸುವಂತೆ ವರ್ತಿಸಿದ್ದರೂ ಬಹುಶಃ ಸಿನಿಮಾ ಇಂಡಸ್ಟ್ರಿಯ ಗಂಡಸರ ಗಾಂಚಾಲಿಯೆದುರು ಅಂತದ್ದೆಲ್ಲಾ ಅಗತ್ಯವಿರುತ್ತಿತ್ತೇನೊ... ಅದೇನೇ ಇರಲಿ.

ಸಂಸದೆ ರಮ್ಯಾ ಸಂಸತ್ ಅಧಿವೇಶನದಲ್ಲಿ ಭಾಗವಹಿಸಿ ವಾಪಸ್ ಬಂದ ನಂತರ ಮಂಡ್ಯಾಗೆ ಬಂದು ಅಧಿಕಾರಿಗಳ ಸಭೆ ನಡೆಸಿ, ಕಬ್ಬು ಬೆಳೆಗಾರರ ಸಮಸ್ಯೆ ಆಲಿಸಿ, ಮತದಾರರನ್ನೂ ಕಂಡು ಮಾತನಾಡಿದ್ದಾರೆ.

ಒಪ್ಪಿಕೊಂಡ ಕೆಲಸ ಹಾಗೂ ಸಿಗುವ ಅವಕಾಶವನ್ನು ಅರ್ಥಮಾಡಿಕೊಂಡು ಚೆನ್ನಾಗಿ ನಿಭಾಯಿಸಬಲ್ಲ ರಮ್ಯಾ ತಮ್ಮ ಹೊಸ ರಾಜಕೀಯ ಜೀವನ[illegible] ಸರಿಯಾದ ದಿಕ್ಕಿನಲ್ಲೇ ನಡೆಸುತ್ತಿದ್ದಾರೆ ಎನ್ನಬಹುದು. ಇನ್ನೂ ಹತ್ತು [illegible] ಮಂಡ್ಯದಿಂದಲೇ ಇನ್ನೊಮ್ಮೆ ಎಲೆಕ್ಷನ್‌ಗೆ ನಿಲ್ಲಬೇಕಿರುವ ವಾಸ್ತವ ಸಂಗತಿಯೂ ರಮ್ಯಾಗೆ ಅರ್ಥವಾದಂತಿದೆ. ಈ ಯುವ ಸಂಸದೆಯ ನಡವಳಿಕೆಗಳು ನಾಟಕೀಯವಾಗಿಲ್ಲ ಹಾಗೂ ರಮ್ಯಾ ಮೇಕಪ್ ಇತ್ಯಾದಿ ಇರದ ಸರಳ [illegible] ಮಗಳಂತೆ ಜನರ ಜೊತೆ ಬೆರೆಯುತ್ತಿರುವುದು ಮೆಚ್ಚಬೇಕಾದ ವಿಚಾರ.

ರಮ್ಯಾ, ಪ್ರಜಾಪ್ರಭುತ್ವ, ಕೋಮುವಾದ, ಅಭಿವೃದ್ಧಿಯ ವಿಚಾರಗಳನ್ನು ಚೆನ್ನಾಗಿ ಗ್ರಹಿಸಿ ಮಾತನಾಡುವಂತಾಗಲಿ. ●




1 ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ವಿಘ್ನೇಶ್ವರನು ವಿಘ್ನ ನಿವಾರಕನಾದ ಸುದೀರ್ಘ ಪ್ರಯಾಣ...

"ಇದು ಬೇಡ, ಇದು ಕೇಡು ಎಂದ ವಸ್ತುವನ್ನು ಅಥವಾ ವ್ಯಕ್ತಿಯನ್ನು ಇದೇ ಬಹುಮುಖ್ಯವಾದುದು, ಇದೇ ಶ್ರೇಷ್ಠ ಎಂದು ಹೇಳುವುದು ಏನೂ ಆಶ್ಚರ್ಯದ ವಿಷಯವಲ್ಲ ಹಾಗೂ ತಪ್ಪೂ ಅಲ್ಲ. ಯಾವುದೇ ಒಂದು ವಿಷಯವನ್ನು ನಕಾರಾತ್ಮಕಗುಣದಿಂದ ಗುರುತಿಸಿದ್ದು ತದನಂತರ ಅದನ್ನು ಸಕಾರಾತ್ಮಕವಾಗಿ ನೋಡುವಂತಹ ಪ್ರಕ್ರಿಯೆಯಾಗಲಿ ಅಥವಾ ಬೇರೊಂದು ಮಗ್ಗುಲಿನಿಂದ ನೋಡುವಂತಹ ದೃಷ್ಟಿಕೋನವಾಗಲಿ, ಅದು, ವಿಚಾರಗಳು ಮಡುಗಟ್ಟದೇ ವಿಕಾಸವಾಗುವಂತಹ ಸಂಕೇತವೇ. ಆದರೆ, ವಿಷಯದ ಮೇಲಾಗಿರುವ ಗುರುತುಗಳ ಚರಿತ್ರೆಯನ್ನು ಅಲ್ಲಗಳೆಯಲಾಗದು. ಪ್ರಸ್ತುತ ಯಾವುದೇ ಅಭಿಪ್ರಾಯದಲ್ಲಿ ಅಥವಾ ಮನೋಭಾವದಲ್ಲಿ ವಸ್ತುವನ್ನು ಸ್ವೀಕರಿಸಿದ್ದರೂ, ಅದರ ಬಗ್ಗೆ ಇದ್ದಂತಹ ಈ ಹಿಂದಿನ ಮನೋಭಾವವೂ ಅಸ್ತಿತ್ವದಲ್ಲಿದ್ದು, ನಂತರ ಬದಲಾಗಿದ್ದು ಎಂಬುದನ್ನು ನಿರಾಕರಿಸಲು ಹೇಗೆ ಸಾಧ್ಯ? ಒಂದು ಮನೋಭಾವದಿಂದ ಮತ್ತೊಂದು ಮನೋಭಾವಕ್ಕೆ ಬದಲಾಗುವಂತಹ ಪ್ರಕ್ರಿಯೆಗೆ ನಾನಾ ಕಾರಣಗಳಿರುತ್ತವೆ, ಆಶಯಗಳಿರುತ್ತವೆ ಮತ್ತು ಉದ್ದೇಶಗಳಿರುತ್ತವೆ. ಅವು ಬಹಳ ಕುತೂಹಲಕರವಾಗಿರುತ್ತದೆ. ಅವು ಬಹಳ ಮುಖ್ಯವಾದುದ್ದೂ ಕೂಡ. ಅದರಿಂದಲೇ ವಸ್ತುವನ್ನು ಸತ್ಕರಿಸುವ ರೀತಿ, ಸ್ವೀಕರಿಸುವ ಕಾರಣ ಅಥವಾ ನಿರಾಕರಿಸುವ ಕಾರಣ ಎಲ್ಲವೂ ತಿಳಿಯುವುದು. ಆಗಲೇ ಒಬ್ಬನ ವಸ್ತುನಿಷ್ಠತೆ, ದೃಷ್ಟಿಕೋನ, ಸೈದ್ಧಾಂತಿಕ ನಿಲುವು ಮತ್ತು ಒಲವು ಎಲ್ಲವೂ ತಿಳಿಯುವುದು.

ವಿಘ್ನಗಳ ಒಡೆಯನು ವಿಘ್ನೇಶ್ವರ. ತೊಂದರೆಗಳನ್ನು



ತಂದೊಡ್ಡುವಂತಹ ವಿಘ್ನಕರ್ತನು ಕಾಲಕ್ರಮೇಣ ತೊಂದರೆಗಳನ್ನು ನಿವಾರಿಸುವಂತಹ ವಿಘ್ನಹರ್ತನಾಗಿದ್ದು ಒಂದು ಸುದೀರ್ಘ ಪ್ರಯಾಣ.

ಮಹಾಭಾರತದಲ್ಲಿಯೂ ಗಣೇಶ್ವರರು, ಗಣಪತಿಯರು ಅಥವಾ ವಿನಾಯಕರು ಎಷ್ಟೋ ಸಂಖ್ಯೆಯಲ್ಲಿ ಎಲ್ಲಾ ಕಡೆಗಳಲ್ಲಿಯೂ ಇರುವವರೆಂದು ಹೇಳಿದೆ. ಗಣಪತಿ ಕೆಡುಕಿನ ಅವತಾರವೆಂದು ಕ್ರಿಸ್ತಪೂರ್ವ 5ನೆಯ ಶತಮಾನಗಳಷ್ಟು ಹಳೆಯದಾದ ಗೃಹ್ಯಸೂತ್ರಗಳಲ್ಲಿ ಉಲ್ಲೇಖಿಸಲಾಗಿದೆ. ಮಾನವ ಗೃಹ್ಯಸೂತ್ರ(2.14)ದಲ್ಲಿ ದೆವ್ವ ಅಥವಾ ಪಿಶಾಚಿ ಮೆಟ್ಟಿಕೊಂಡರೆ ಆಗುವಂತೆ ಈ ವಿನಾಯಕರು ಮೆಟ್ಟಿಕೊಂಡರೆ ಆಗುತ್ತದೆ ಎಂದು ತಿಳಿಸುವರು.

"ವಿನಾಯಕರು ಆವರಿಸಿಕೊಂಡರೆ, ನೀರಿನ ಕೊಳಗಳ ಬಳಿ ಅಲೆದಾಡಿಕೊಂಡು, ಹುಲ್ಲನ್ನು ಕತ್ತರಿಸಿಕೊಂಡು, ಮೈಮೇಲೆ ಗೀಚಿಕೊಂಡಿರುವನು. ಕನಸಿನಲ್ಲಿ ನೀರನ್ನೂ, ತಲೆಬೋಳಿಸಿಕೊಂಡಿರುವ ಮನುಷ್ಯರನ್ನೂ, ಒಂಟೆಗಳನ್ನು, ಹಂದಿಗಳನ್ನು, ಕತ್ತೆಗಳನ್ನು ನೋಡುವನು. ಗಾಳಿಯಲ್ಲಿ ತೇಲಿಕೊಂಡು ಹೋಗುತ್ತಿರುವ ಹಾಗೆ ಭಾಸವಾಗುವ ಇವನಿಗೆ, ಹಿಂದಿನಿಂದ ಯಾರೋ ಬಂದು ಹಿಡಿದುಕೊಂಡು ಅಧೀನದಲ್ಲಿಟ್ಟುಕೊಳ್ಳುವಂತೆ ಭಾಸವಾಗುವುದು." ಹಾಗೆಯೇ ಮುಂದುವರಿಸಿ, ಈ ವಿನಾಯಕರು ದೆವ್ವದಂತೆ ಮೆಟ್ಟಿಕೊಂಡಾದ ಮೇಲೆ, "ಆಳಲು ಯೋಗ್ಯವಾಗಿದ್ದರೂ ರಾಜಕುಮಾರನು ಸಿಂಹಾಸನವೇರನು. ಕನ್ಯೆಯು ಸುಲಕ್ಷಣವಾಗಿದ್ದರೂ ಅವಳಿಗೆ ಮದುವೆಯಾಗದು. ಹೆಣ್ಣು ಫಲವತ್ತಾಗಿದ್ದರೂ ಅವಳಿಗೆ ಮಕ್ಕಳಾಗದು. ಬೋಧಿಸಲು ಯೋಗ್ಯವಾಗಿರುವ ಗುರುವು ಶಿಷ್ಯರನ್ನು ಪಡೆಯನು. ವಾಣಿಜ್ಯ ಮತ್ತು ಕೃಷಿ ಯಶಸ್ವಿಯಾಗದು."

ನೀತಿಶಾಸ್ತ್ರವನ್ನು ಹೇಳುವ ಯಾಜ್ಞವಲ್ಕ್ಯನೂ ತನ್ನ ಸ್ಮೃತಿಯಲ್ಲಿ (1.271) ರುದ್ರ ಮತ್ತು ಬ್ರಹ್ಮರಿಂದ ನೇಮಿಸಲ್ಪಟ್ಟ ವಿನಾಯಕನು ಗಣಗಳಿಗೆ ಒಡೆಯನಾಗಿದ್ದು, ತೊಂದರೆಗಳನ್ನು ತಂದೊಡ್ಡುವನು ಎಂದೇ ಪ್ರಾರಂಭಿಸುವನು. ಮಾನವ ಗೃಹ್ಯಸೂತ್ರ ಮತ್ತು ಯಾಜ್ಞವಲ್ಕ್ಯ ಸ್ಮೃತಿಗಳ ನಡುವೆ ಮನುಸ್ಮೃತಿಯೆಂಬುದೊಂದಿದೆ. ಈ ಗ್ರಂಥದಲ್ಲಿ (3.164) ಮನು ಗಣಹೋಮದಲ್ಲಿ ಭಾಗವಹಿಸಿರುವವರನ್ನು ಶ್ರಾದ್ಧದ ಊಟಕ್ಕೂ ಕರೆಯಬಾರದೆಂದು ಹೇಳುವನು. ಹಾಗೆಯೇ ಗಣಪತಿಯು ಶೂದ್ರರ ದೇವತೆಯೆಂದೂ ಹೇಳುವನು (VQ 1931-2. 475). ಶೂದ್ರರೆಂದರೆ, ಮನುವು ಹೇಳುವಂತೆ (10.125) ಕೇವಲ ಉಟ್ಟು ಬಿಟ್ಟ ಬಟ್ಟೆಯನ್ನು ತೊಡುವವರು, ಉಂಡು ಬಿಟ್ಟ ಎಂಜಲೂಟವನ್ನು ತಿನ್ನುವ ಅಧಿಕಾರದವರು.

ಯಾಜ್ಞವಲ್ಕ್ಯ ಮನು ಮತ್ತು ಕಾತ್ಯಾಯನರಂತಹ ಬ್ರಾಹ್ಮಣ ಶಾಸ್ತ್ರಕಾರರು ತಮ್ಮ ಕೃತಿಗಳಲ್ಲಿ ಸ್ಪಷ್ಟವಾಗಿ ಗಣಪತಿಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮತ್ತು ನಿರೂಪಣೆಗಳನ್ನು ತಿಳಿಸಿದ್ದಾರೆ. ಇದು ಅವರ ವೈಯಕ್ತಿಕ ಅಭಿಪ್ರಾಯವೆಂದು ನಾವು ತಿಳಿದು ತಳ್ಳಿಹಾಕಿಬಿಡಲು ಸಾಧ್ಯವಿಲ್ಲ, ಯಾಕೆಂದರೆ, ಅವು ಕಾಲ್ಪನಿಕ ಕಾದಂಬರಿಗಳೋ, ಕಥೆಗಳೋ ಅಲ್ಲ. ಬದಲಾಗಿ ನೀತಿಶಾಸ್ತ್ರಗಳು, ಸಮಾಜವನ್ನು ಮತ್ತು ಸಮೂಹವನ್ನು ಕ್ರಿಯೆಗೆ ಹಚ್ಚುವಲ್ಲಿ ಬಹು ಮಾನ್ಯವಾಗುವಂತಹ ನಿರ್ದೇಶನಾಗ್ರಂಥಗಳು.

ಮತ್ತೊಂದು ಮಗ್ಗುಲಿನಿಂದ ನೋಡುವುದಾದರೆ, ಅವು ಆಗಿನಕಾಲದ ಬ್ರಾಹ್ಮಣ್ಯವರ್ಗದ ಸಾಮೂಹಿಕ ಅಭಿಪ್ರಾಯವೋ, ನಿಲುವೋ ಅಥವಾ ದೃಷ್ಟಿಕೋನವೋ ಆಗಿರಬಹುದು. ಯಾವುದೇ ಒಂದು ಪ್ರಭಾವಶಾಲಿಯಾದ ಸಮೂಹವು, ಅದರಲ್ಲೂ ಬ್ರಾಹ್ಮಣ್ಯದ ಪಂಗಡವು ಯಾರೋ ಒಬ್ಬಾತನಿಗೆ ನೀನೊಂದು ನೀತಿಶಾಸ್ತ್ರವೊಂದನ್ನು ಬರೆ ಇನ್ನು ಮುಂದೆ ಅವನ್ನು ನಾವು ಅನುಸರಿಸುತ್ತೇವೆ ಎಂದು ಅಧಿಕಾರ ಕೊಟ್ಟುಬಿಡುವುದಿಲ್ಲ, ಅವರಲ್ಲಿ ನಡೆದುಬರುತ್ತಿರುವ ವಿಚಾರ, ಆಚಾರ ಮತ್ತು ಪದ್ಧತಿಗಳನ್ನು ಗಮನಿಸುತ್ತಾ, ಅವುಗಳನ್ನು ಕ್ರೋಢೀಕರಿಸುತ್ತಾ ಅದರ ನಿಲುವಿಗೆ ಬದ್ಧವಾಗಿಯೇ ನೀತಿಶಾಸ್ತ್ರವನ್ನು ರಚಿಸುವರು. ಪರಂಪರೆಯಾಗಿ ನಡೆದುಕೊಂಡು ಬಂದಿರುವಂತಹ ಪದ್ಧತಿಗಳನ್ನು ಸೂಚ್ಯವಾಗಿ ತಿಳಿಸಿರಲಿಕ್ಕೂ ಸಾಧ್ಯ. ಹಿಂದೂ ಧರ್ಮವನ್ನು ಪ್ರತಿನಿಧಿಸುವ ಗ್ರಂಥಗಳಾದ ಯಾಜ್ಞವಲ್ಕ್ಯ ಸ್ಮೃತಿ, ಮಾನವ ಗೃಹ್ಯಸೂತ್ರಗಳಲ್ಲಿ ಮತ್ತು ಮನು ಗಣಪತಿಯ ಬಗ್ಗೆ ಅಸಹನೆ, ಕಟುತ್ವ ಮತ್ತು ದ್ವೇಷವನ್ನು ವ್ಯಕ್ತಪಡಿಸಿದಂತೆ, ಅದೇ ಮುಂದುವರೆದು ಬೌದ್ಧಾಯನ ಬರೆದಿರುವಂತಹ ಧರ್ಮಸೂತ್ರದಂತಹ ಬೌದ್ಧಗ್ರಂಥಗಳಲ್ಲಿಯೂ ಗಣಪತಿಯ ಬಗ್ಗೆ ದ್ವೇಷವನ್ನು ಮತ್ತು ಅಸಹನೆಯನ್ನು ವ್ಯಕ್ತಪಡಿಸಿರುವ ಉದಾಹರಣೆಗಳು ಉಂಟು. ನೀತಿನೇಮಗಳ ಬೌದ್ಧ ದೇವತೆಯಾದ ಮಹಾಕಾಲನು ತನ್ನ ಪಾದಗಳ ಕೆಳಗೆ ಗಣಪತಿಯನ್ನು ಮಣಿಸಿರುವ ನೇಪಾಳದ ಬೌದ್ಧ ವಿಗ್ರಹಗಳಿವೆ. ಹಾಗೆಯೇ ಬೌದ್ಧರ ದೇವತೆಯಾದ ಮಂಜುಶ್ರೀಯು ಗಣಪತಿಯನ್ನು ತನ್ನ ಕಾಲ ಕೆಳಗೆ ಹಾಕಿಕೊಂಡಿರುವಂತಹ ಶಿಲ್ಪಗಳೂ ಅಪರೂಪವೇನಲ್ಲ. ಮಹಾಕಾಲ ದೇವತೆಯ ಪರಿಕಲ್ಪನೆಯು ಆಗಿನ ಕಾಲದ ಮೇಲ್ವರ್ಗದವರೊಂದಿಗೆ ತಳುಕು ಹಾಕಿಕೊಂಡಿದ್ದಂತಹ ನಿರೂಪಣೆಗಳು ಸಾಕಷ್ಟಿವೆ.

ಇನ್ನು ಪುರಾಣಗಳ ಕಡೆ ಹೊರಳೋಣ.

ಗಣಪತಿಯನ್ನು ಕುರಿತಂತೆ, ಗಣಪತಿಯ ಹುಟ್ಟಿನ ಕುರಿತಂತೆಯೂ ಹಲವು ಪುರಾಣಗಳಲ್ಲಿ ಹಲವು ರೀತಿಗಳಲ್ಲಿ ಹೇಳಲ್ಪಟ್ಟಿವೆ. ಆದರೆ, ಜನಪ್ರಿಯವಾದ ಹಾಗೂ ಹೆಚ್ಚು ಪ್ರಚಲಿತದಲ್ಲಿರುವ ಕಥೆಯನ್ನೇ ನಾವು ಪರಿಗಣಿಸೋಣ. ಪಾರ್ವತಿ ತನ್ನ ಮೈಯ ಮಲದಿಂದ ಅಥವಾ ಮಣ್ಣಿಂದ ಮೂರ್ತಿಯನ್ನು ಮಾಡಿ ಅದಕ್ಕೆ ಜೀವತುಂಬಿ ತನ್ನ ಸ್ನಾನದ ಮನೆಗೆ ಕಾವಲಿಗೆ ನಿಲ್ಲಿಸುವುದು. ಆ ನಂತರ ಶಿವ ಬರುವುದು. ಇವನು ತನ್ನ ತಾಯಿಯ ಆಜ್ಞೆಯಂತೆ ಶಿವನನ್ನೇ ತಡೆಯುವುದು. ನಂತರ ಯುದ್ಧವಾಗುವುದು. ಶಿವನ ತ್ರಿಶೂಲಕ್ಕೆ ಬಾಲಕನ ಶಿರ ಹರಿದುಬೀಳುವುದು. ಪಾರ್ವತಿಯ ಗೋಳು. ಉತ್ತರಕ್ಕೆ ತಲೆ ಹಾಕಿ ಮಲಗಿರುವವರ ತಲೆ ತರುವ ಆಜ್ಞೆ, ಹಾಗೆ ಹುಡುಕಿದಾಗ ಯಾರೂ ಸಿಗದೇ ಆನೆಯ ತಲೆಯನ್ನು ತರಿದು ತಂದು ಬಾಲಕನ ಮುಂಡಕ್ಕೆ ಅಂಟಿಸುವುದು. ಆಪರೇಷನ್ ಸಕ್ಸಸ್ ಆಗಿ ನಮಗೆ ಗಜವದನನಾದ ಗಣಪತಿಯು ದೊರಕುವುದು.

ಸರಿ, ಪುರಾಣದ ಮಾತ್ರವಲ್ಲ, ನೈಜ ಚಿತ್ರಣದ ಕಥೆಯನ್ನು ಓದುವಾಗಲೂ, ಆ ಕಥೆಗಳಲ್ಲಿ ಅಮೂರ್ತವಾದ ಸಿದ್ಧಾಂತಗಳು, ನಿಲುವುಗಳು, ಸಾಂಸ್ಕೃತಿಕ ಪ್ರಭಾವಗಳು, ಸಾಮಾಜಿಕ ಸ್ಥಿತಿಯ ಪ್ರತಿಫಲನಗಳು ಮತ್ತು ವೈಯಕ್ತಿಕ ಒಲವುಗಳು ಹಾಗೂ ಅಭಿರುಚಿಗಳು ಅವುಗಳಲ್ಲಿ ಹಾಸುಹೊಕ್ಕಾಗಿರುತ್ತವೆ. ಯಾವುದೇ ಕಥೆಯನ್ನು ನೇರವಾಗಿ ಪದಗಳನ್ನು ಓದಿ ಹಾಗೆಯೇ ಗ್ರಹಿಸುವುದೆಂದರೆ, ತೊಟ್ಟಿರುವ ಉಡುಪಿನ ಹಿಂದೆ ದೇಹವೇ ಇಲ್ಲ ಎಂಬಷ್ಟೇ ಆಗುತ್ತದೆ. ಪದಗಳೆಂಬುವು ಭಾವ ಹಾಗೂ ವಿಚಾರದ ಸಂಕೇತಗಳು. ಅವುಗಳ ಜೋಡಣೆಗಳೆಂದರೆ ಭಾವಾರ್ಥಗಳ ಮತ್ತು ವಿಚಾರಗಳ ಹರವುಗಳು ಮತ್ತು ಚಲನೆಗಳಾಗಿ ವಾಕ್ಯಗಳಾಗುವುವು. ಅವೆಲ್ಲಾ ವಾಕ್ಯಗಳ ಸಮಗ್ರ ಸಂಗ್ರಹವು ಒಂದು ಬಗೆಯ ಚಿತ್ರಣವನ್ನು ಒದಗಿಸುತ್ತದೆ. ಇಷ್ಟು ಕೆಲಸವಾಗುವಂತಹ ಬರವಣಿಗೆಯನ್ನು ಮತ್ತು ಓದುವಿಕೆಯನ್ನು ಸಹನೆಯಿಂದ ಗ್ರಹಿಸಲಾಗದ ಮನಃಸ್ಥಿತಿಯವರಿಗೆ ಯಾವುದೇ ಓದು ಮತ್ತು ಬರವಣಿಗೆ ಸಾಧ್ಯವೂ ಇಲ್ಲ.

ರಸಗ್ರಹಣವೋ, ಅರ್ಥಗ್ರಹಣವೋ... ಹಾಗೆಂದರೆ ಏನು? ಅಸಹನೀಯರಿಗೆ ಅವೆಲ್ಲವೂ ಅಸ್ತಿತ್ವದಲ್ಲೇ ಇಲ್ಲ!

ಸಂಕೇತಗಳು ಸೂಚ್ಯವಾಗಿರುತ್ತವೆ. ಕೆಲವೊಮ್ಮೆ ಸರಳವಾಗಿದ್ದರೆ, ಕೆಲವೊಮ್ಮೆ ಒಗಟಿನ ರೀತಿಯಲ್ಲಿ ಮಾರ್ಮಿಕವಾಗಿರುತ್ತವೆ. ಯಾವುದಕ್ಕೂ ಪದಗಳ ಹಿಂದಿನ ಅಮೂರ್ತ ಭಾವವನ್ನು ಪರಿಗ್ರಹಿಸುವ ಸೂಕ್ಷ್ಮ ಮನಃಸ್ಥಿತಿ ತಕ್ಕ ಮಟ್ಟಿಗಾದರೂ ಅಗತ್ಯ.



ಬ್ರಾಹ್ಮಣ್ಯದ ಮುಂದಾಳುಗಳು ಅಂದು ಸೂಚಿಸಿರುವಂತೆ ಕೇಡಿನ ಅಪರಾವತಾರವಾದ ಗಣಪತಿ ಬರಿಯ ಕ್ಷುದ್ರನಷ್ಟೇ ಅಲ್ಲ, ಕೆಳವರ್ಗದವನೂ ಕೂಡ. ಅಂದು, ಪ್ರಾಯಶಃ ಇಂದೂ ಅವರಿಗೆ ಅಪಾರ ಅಸಹನೆಯ ಕಿರಿಕಿರಿಯಾಗಿರುವ ಶೂದ್ರ ವರ್ಗವು ಅವರಿಂದ ಸಹಜವಾಗಿಯೇ ತಿರಸ್ಕೃತಗೊಳ್ಳಲಾಗುವ, ಒಪ್ಪಿಕೊಳ್ಳಲಾಗದಂತಹುದ್ದೇ ಆಗಿದೆ. ಅಂತಹ ವರ್ಗದಲ್ಲಿ ಸೂಚಿಸಿರುವಂತಹ ಗಣಪತಿಯನ್ನು ಪುರಾಣದ ಕಥೆಗಳಲ್ಲಿರುವ ಸಂಕೇತದೊಡನೆ ಸಮೀಕರಿಸಿದಾಗ, ಅದು ಪರ್ವತ ರಾಜನ ಮಗಳು ಪಾರ್ವತಿಯ, ಗಿರಿಕನ್ಯೆಯಾದ ಗಿರಿಜೆಯ ಮೈಯ ಮಲಕ್ಕೆ ಅಥವಾ ಮಣ್ಣಿಗೆ ಒಯ್ಯಲಾಗುತ್ತದೆ. ಹಾಗೆ ಮೂರ್ತೀಕರಿಸಿದ ಗಣಪತಿ ಸಂಘರ್ಷದ ನಂತರ ಗಣಪತಿಯಾಗಿ ಅಧಿಕಾರಕ್ಕೆ ಬರುತ್ತಾನೆ. ಪ್ರಕೃತಿ, ಅರಣ್ಯ ಪರ್ವತಗಳನ್ನೇ ಸಂಕೇತಿಸುವ ಮಾತೃಪ್ರಧಾನ ಪಾರ್ವತಿಯ ಸಂಕೇತವು ಗಣಪತಿಯನ್ನು ಪೋಷಿಸಿದ್ದು ಬೆಳೆಸಿದ್ದು ಢಾಳಾಗಿ ಕಾಣುತ್ತದೆ. ಹಾಗೆ ಬೆಳೆದಿರುವ ಗಣಪತಿಯು ತನ್ನ ಬ್ರಾಹ್ಮಣ್ಯಾಧಿಕ್ಯದ ವಿರುದ್ಧದ ಮೂಲವಾದ ಶೂದ್ರ ಅಥವಾ ಅರಣ್ಯಕ- ಆದಿವಾಸಿಗಳೊಂದಿಗೇ ಗುರುತಿಸಲ್ಪಟ್ಟಿದ್ದು ವೈದಿಕರೊಂದಿಗೆ ಸಂಘರ್ಷವನ್ನು ಸಹಜವಾಗಿಯೇ ಹೊಂದಿರುತ್ತಾನೆ.


ಶಿವ ಮತ್ತು ಪಾರ್ವತಿಯರು ಏಕಾಂತದಲ್ಲಿರುವಾಗ ಅಧಿಕ ಪ್ರಸಂಗದಲ್ಲಿ ವರ್ತಿಸುತ್ತಾ ಹೋಗುವ ಪರಶುರಾಮನ ಜೊತೆ ಗಣಪತಿಯು ಯುದ್ಧಮಾಡುತ್ತಾನೆ. ಆ ಕಾಳಗದಲ್ಲಿ ಗಣಪತಿಯ ದಂತವೊಂದು ಮುರಿದು ಅವನು ಏಕದಂತನಾಗುತ್ತಾನೆ. ಬ್ರಹ್ಮವೈವರ್ತ ಪುರಾಣದ ಕಥೆಯಲ್ಲಿ ಸೂಚ್ಯವಾಗಿರುವ ಈ ವಿಷಯವನ್ನು ಗಮನಿಸಿದರೆ, ಇದು ಇನ್ನೂ ಸ್ಪಷ್ಟವಾಗುತ್ತದೆ. ಪರಶುರಾಮ ಶಸ್ತ್ರಾರಂಗತನಾಗಿದ್ದು ಶಸ್ತ್ರವನ್ನು ಹಿಡಿದು, ತನ್ನ ಬ್ರಾಹ್ಮಣ್ಯದ ಅಧಿಪತ್ಯ ಕೆಳವರ್ಗದವರ ಮೇಲೆ ಸ್ಥಾಪಿಸುವವನಾಗಿ ಕಂಡುಬ... ಗಣಪತಿ ಅವನೊಡನೆ ಹೋರಾಡಿ, ತನ್ನ ಒಂದು ದಂತ... ಮುರಿದುಕೊಂಡು, ಶಿವನ ಮೇಲಿನ ಗೌರವದಿಂದ ಅ... ತನ್ನಂತದ್ದೇ ಬುಡಕಟ್ಟಿನ ಒಡೆಯನ ಸಂಸರ್ಗವು ಆ ಬ್ರಾ... ನೊಡನೆ ಇರುವುದರಿಂದ ತಾನು ಸುಮ್ಮನಾಗಿಬ... ರಾಜೀಮನೋಭಾವವಿದೆ. ಅದೇನೇ ಇರಲಿ, ಸಂಘ... ವೊಂದು ಎದ್ದು ಕಾಣುವುದನ್ನು ನಾವು ತಳ್ಳಿ ಹಾ... ಸಾಧ್ಯವೇ ಇಲ್ಲ. ತದನಂತರದ ಕಾಲಘಟ್ಟದಲ್ಲಿ ... ಬ್ರಾಹ್ಮಣ್ಯವರ್ಗವು ಅದೇ ಗಣಪತಿಯನ್ನು ಆದಿಪೂಜಿತ... ಕಂಡು ಆರಾಧಿಸುವುದು ಯಾರಿಗೇನು ಆಕ್ಷೇಪ? ಅ... ಇತಿಹಾಸವಾಗಿರುವ ಕುರುಹನ್ನು ಅಳಿಸುವುದಾ... ನಿರಾಕರಿಸುವುದಾಗಲಿ, ಅದರಿಂದ ತಪ್ಪಿಸಿಕೊಳ್ಳುವುದ... ಮೊಂಡುತನದ ಅವಿವೇಕವಾಗಿ ಕಾಣುವುದು. ಅ... ಬದಲಿಗೆ, ಆ ಬಗೆಯ ಆಧಾರ... ಹೇಗೆ ಸತ್ಯವಾಗಿದ್ದವು ಅಥವಾ ... ಮಿಥ್ಯವಾಗಿದ್ದವು? ಯಾವ ಬ... ತಳದಿಂದ ಅಂತಹ ಚಿಂತನೆ... ಒಡಮೂಡಿರಬಹುದು ... ಜಿಜ್ಞಾಸೆ ನಮ್ಮ ಪರಿಕಲ್ಪನೆಗ... ಗಟ್ಟಿಗೊಳಿಸುತ್ತವೆ. ಜೊತೆಗೆ ವೈ... ಸಾಮರಸ್ಯವೂ ಉಂಟಾಗು... ಇಲ್ಲವಾದರೆ ಆಳುವ, ದಬ್ಬಾಳಿ... ವರ್ಗದಲ್ಲಿ ಗುರುತಿಸಲ್ಪಟ್ಟು, ಸ... ಪರರು, ಅಧಿಕಾರಶಾಹಿಗ... ಅಹಂಕಾರಿಗಳು, ಕುತಂತ್ರಿ... ಎರಬೆಲ್ಲಾ ಮಾಡುವಂತಹ ಆಪ... ಗಳೆಲ್ಲವೂ ನಿಜವೇನೋ ಎನಿಸು... ಮಾಡಿಬಿಡುತ್ತಾರೆ.

ತಮ್ಮ ಕೃತಿಗಳಲ್ಲಿ ಗಣಪತಿಯನ್ನು ಕೀಳಾಗಿ ನೋ... ಉಲ್ಲೇಖಗಳು ಈಗ ಸಂಖ್ಯಾ ಪ್ರಮಾಣದಲ್ಲಿ ಕ... ಯಾಗಿದ್ದು ಅದೇ ವರ್ಗದವರಿಂದಲೇ ಅದೇ ಗಣಪತಿ... ಬಹುಮಾನ್ಯ ಮಾಡಿರುವ ಕೃತಿಗಳು ಬಹುಸಂಖ್ಯೆಯ... ವಿಷಯ ಅದಲ್ಲ. ಆದರೆ, ಕೃತಿ ರಚನೆಯ ಚರಿತ್ರೆ... ಅಂತಹ ಗುರುತುಗಳು ಮೂಡಿರುವುದಕ್ಕೆ ಕಾರಣವಿ... ಎಂಬುದಷ್ಟೇ ಈಗಿನ ಅಧ್ಯಯನ. ಆ ಬ... ಅಧ್ಯಯನಗಳಲ್ಲಿ ದೊರಕುವಂತಹ ವಿಷಯಗಳು ತಪ್ಪುಗ... ಭಿನ್ನತೆಗಳನ್ನು ಸರಿಪಡಿಸಿಕೊಳ್ಳಲು ನೆರವಾಗಬೇಕೇ ಹೊ... ಅವುಗಳನ್ನು ನಿರಾಕರಿಸುತ್ತಾ ಮೊಂಡು ಹಟಮಾಡು... ಸಾಮರಸ್ಯವನ್ನು ಬೆಳೆಸುವಲ್ಲಿ, ಸಂಸ್ಕೃತಿಯನ್ನು ಅರಳಿಸ... ಸಾಮಾಜಿಕವಾಗಿ ಬೆರೆಯುವಲ್ಲಿ ಮತ್ತು ರಾಜಕೀಯ... ಬೆಸೆಯುವಲ್ಲಿಯೂ ಒಳ್ಳೆಯ ಲಕ್ಷಣಗಳಲ್ಲ. ಭೂತದ... ಗುದ್ದಾಡಿಕೊಂಡು, ವರ್ತಮಾನ ವನ್ನು ಕಳೆದುಕೊ... ಭವಿಷ್ಯವನ್ನು ನಾಶಮಾಡಿಕೊಳ್ಳುವುದು ಯಾವುದೇ ಸಮಾ... ಮತ್ತು ಸಂಸ್ಕೃತಿಗೆ ಬೇಕಾಗಿರುವುದೇನಲ್ಲವಲ್ಲ!

ಅರಣ್ಯಕರ ಗಣಗಳು, ಪ್ರಾಣಿಗಳ ಸಂಕೇ... ಬುಡಕಟ್ಟುಗಳು ಗೋತ್ರಗಳಾಗಿದ್ದು, ಅನಾ... ಮೂಲದವರುಗಳು ಬ್ರಾಹ್ಮಣ್ಯಾಧಿಕ್ಯದ ಶ್ರೇಣಿ... ಗುರುತಿಸಿಕೊಂಡಿದ್ದು ಇತ್ಯಾದಿಗಳನ್ನು ಮುಂದಿನ ... ನೋಡೋಣ.

ಇತ್ತೀಚೆಗೆ ತೀರಿಕೊಂಡ ಬರಹಗಾರ ರಾಮಚಂದ್ರ ದೇವ ಅವರ ನೆನಪಿನಲ್ಲಿ ಅವರದ್ದೇ ಒಂದು ಪದ್ಯವ... ಇಲ್ಲಿ ಪ್ರಕಟಿಸಿದ್ದೇವೆ. 1996ರ ನವೆಂಬರ್‌ನಲ್ಲಿ ಆಗಿನ 'ಲಂಕೇಶ್ ಪತ್ರಿಕೆ'ಯಲ್ಲಿ ಪ್ರಕಟವಾದ ಈ ಪದ್ಯ ದ... ಒಟ್ಟಾರೆ ಜೀವನ ದೃಷ್ಟಿಯನ್ನು ಬಿಂಬಿಸುವಂತೆಯೂ ಧ್ವನಿಸುತ್ತದೆ.

-ಸಂಪಾ...



(ಗಂಗಾಧರ ಚಿತ್ತಾಲರು ಕಂಡಂತೆ)

ಜೀವಕ್ಕೆ ಮೂರು ನಡೆ:
ದನಿ ಗಡುಸು, ಜಂಘೆಯಲಿ
ಬಿರುಸು,
ತಲೆಯಲ್ಲಿ ಕನಸು-ಬಾಳಿನ
ದಿಬ್ಬ ಏರುವುದು ಮೊದಲ
ನಡೆ.
ಆ ಹೊತ್ತು ವಿಶ್ವದ ಸಕಲ
ಚಲಿಸುವುದು ನಮ್ಮ ಜೊತೆ-
ಬೆಳಕ ಹೊಳೆ
ಹರಿಸಿ ಬರುವನು ಸೂರ್ಯ.


ಆ ಮೇಲೆ ಹತ್ತಿದ ಸುಸ್ತು,
ತೋಲ ತಪ್ಪಿದ ದೇಹ:
ಹೋಗಬೇಕಾದ್ದು ಒಂದು ಕಡೆ,
ಕಾಲು ಚಲಿಸುವುದು ಇನ್ನೊಂದು ಕಡೆ.
ನನಗಾಗಿಯೇ ಬಂದ
ಎಂದನ್ನಿಸಿದ ಅದೇ ಸೂರ್ಯ ಈಗ ನಿರ್ಲಕ್ಷ್ಯ.
ಜೊತೆಗಾರರೇ ಇಲ್ಲ,

ಬಾನತಳ ಚಪ್ಪೊಡೆದು ಬರಿವ
ಒರಲಿದರು, ಚೀರಿದರು
ನಿರುತ್ತರ ಭವನ.

ಕೆಲವರು ಈ ಅಸಂಗತಕ್ಕೆ
ಶರಣಾಗುವರು.
ಹಣೆಬರಹ ಎಂದೊಪ್ಪಿಕೊಳ್ಳು...


ಮೂರನೆಯ ನಡೆ,
ಯಾಕೆ ಹೀಗೆಂದು ದೇವರ
ಮುಂದಲೆ ಹಿಡಿದು ಕೇಳುವುದು,
ಹೋರುವುದು, ಹೊರಮಾಗ...
ಹುಡುಕುವುದು, ಕಾಣದೇ ಇದ್ದಾಗ
ಧೀರೋದಾತ್ತ ಇಚ್ಛಾಮರಣ-
ವಿಧಿಯ ಧಿಕ್ಕರಿಸಿ,
ಇದುವರೆಗೆ ಜೊತೆಗಿದ್ದ
ಬದುಕಿಗೆ ನಮಿಸಿ.

- ರಾಮಚಂದ್ರ ದೇವ






ಮೋದಿಯ ಭಂಟನಿಗೆ 200 ಕೋಟಿ ರೂ. ದಂಡ ವಿಧಿಸಿದ್ದು



...ದಾನಿ ಗ್ರೂಪ್‌ನ ಗೌತಮ್ ಅದಾನಿ ನರೇಂದ್ರ ಮೋದಿಯ ಅತ್ಯಂತ ಆಪ್ತ ಕಾರ್ಪೊರೇಟ್ ಧಣಿಗಳಲ್ಲೊಬ್ಬ. ...ಉದ್ಯಮಪತಿಗಳಿಗೆ ಬೇಕಾಬಿಟ್ಟಿಯಾಗಿ ಯೋಜನೆಗಳನ್ನು ಮಂಜೂರು ಮಾಡುವುದರಲ್ಲಿ ನಿಸ್ಸೀಮನಾದ. ಮೋದಿ ...ಯಿಂದ ಗುಜರಾತ್‌ನ ಮುಂದ್ರಾ ಎಂಬಲ್ಲಿ ಒಂದು ಖಾಸಗಿ ಬಂದರು ಮತ್ತು ವಿದ್ಯುತ್ ಉತ್ಪಾದನಾ ಘಟಕವನ್ನು ...ಸಲು ಅನುಮತಿ ಗಿಟ್ಟಿಸಿಕೊಂಡ. ಆದರೆ ಇತ್ತೀಚೆಗೆ ಈ ಬಹುಕೋಟಿ ಯೋಜನೆ ಪರಿಸರವನ್ನು ಹಾಳುಗೆಡುತ್ತಿದೆಯಲ್ಲದೆ ...ಲ್ಲಿ ಹಲವು ಅವ್ಯವಹಾರಗಳೂ ನಡೆದಿವೆ ಎಂಬ ದೂರುಗಳು ಬಂದ ಹಿನ್ನೆಲೆಯಲ್ಲಿ ಕೇಂದ್ರ ಪರಿಸರ ಇಲಾಖೆ ...ಗೆ ಆದೇಶಿಸಿತು. ತನಿಖೆಯ ಜವಾಬ್ದಾರಿಯನ್ನು ದಿಲ್ಲಿಯ ವಿಜ್ಞಾನ ಮತ್ತು ಪರಿಸರ ಕೇಂದ್ರದ ನಿರ್ದೇಶಕಿ ಸುನಿತಾ ...ಯಣ್ ನೇತೃತ್ವದ ಸಮಿತಿಗೆ ವಹಿಸಲಾಯಿತು. ವಿಸ್ತೃತ ಅಧ್ಯಯನದ ಬಳಿಕ ಸಮಿತಿ ತನ್ನ ವರದಿಯನ್ನು ಸಲ್ಲಿಸಿದೆ. ...ಪ್ರಕಾರ ಅದಾನಿ ಕಂಪೆನಿಯು ಕಡಲಕಿನಾರೆ ನಿಯಂತ್ರಣ ನಿಯಮಗಳಿಂದ ತಪ್ಪಿಸಿಕೊಳ್ಳಲು ದತ್ತಾಂಶಗಳನ್ನು ...ಚಿದೆ ಮತ್ತು ಮರೆಮಾಚಿದೆ; ಈ ಯೋಜನೆಯಿಂದಾಗಿ ಸುತ್ತಮುತ್ತಲಿನ ಖಾರಿಗಳು ನಾಶವಾಗಿವೆ ಮತ್ತು 75 ಹೆಕ್ಟೇರ್ ವಿಸ್ತೀರ್ಣದ ಮ್ಯಾಂಗ್ರೋವ್ ತೋಪುಗಳಿಗೆ ಹಾನಿಯಾಗಿದೆ.



ಈ ವರದಿಯ ಆಧಾರದಲ್ಲಿ ಕ್ರಮ ಕೈಗೊಂಡ ಇಲಾಖೆ ಇದೀಗ ಅದಾನಿ ಗ್ರೂಪ್ ಮೇಲೆ 200 ಕೋಟಿ ರೂಪಾಯಿಗಳ ದಂಡ ವಿಧಿಸಿದೆ. ಯೋಜನೆಯ ಕೆಲವು ಭಾಗಗಳಿಗೆ ಅನುಮತಿ ರದ್ದುಪಡಿಸುವುದರೊಂದಿಗೆ ಸ್ಥಳೀಯ ಮೀನುಗಾರರಿಗಾಗಿ ಒಂದು ಪ್ರತ್ಯೇಕ ಬಂದರು ನಿರ್ಮಿಸುವಂತೆ ಆದೇಶಿಸಿದೆ.

ನಿತಿನ್ ಸೇಠಿ, ಡೆಕ್ಕನ್ ಹೆರಾಲ್ಡ್.

ಬಿಜೆಪಿಯಿಂದ ಹೊರಬಿದ್ದು ಗುಜರಾತ್ ಪರಿವರ್ತನ್ ಪಾರ್ಟಿ ಎಂಬ ನೂತನ ರಾಜಕೀಯ ಪಕ್ಷವನ್ನು ಸ್ಥಾಪಿಸಿರುವ ಕೇಶುಭಾಯಿ ಪಟೇಲ್ ಮತ್ತು ಸುರೇಶ್ ಮೆಹ್ತಾ ಎಂಬಿಬ್ಬರು ಮಾಜಿ ಮುಖ್ಯಮಂತ್ರಿಗಳು ಮೋದಿ ವಿರುದ್ಧ ಹೊಸ ಬಾಂಬ್ ಒಂದನ್ನು ಸ್ಫೋಟಿಸಿದ್ದಾರೆ. ಮಾಹಿತಿ ಹಕ್ಕು ಕಾಯ್ದೆಯಡಿ ದೊರೆತಿರುವ ದಾಖಲೆಗಳನ್ನು ಉಲ್ಲೇಖಿಸಿರುವ ಸುರೇಶ್ ಮೆಹ್ತಾ, ಕೆಲವು ತಿಂಗಳ ಹಿಂದೆ ಮೋದಿಯ 'ಸದ್ಭಾವನಾ' ಚಳವಳಿಯಲ್ಲಿ ಸಾವಿರಾರು ಮುಸ್ಲಿಮರು ಭಾಗವಹಿಸಿ ಆತನಿಗೆ ಶುಭ ಕೋರಿದ್ದರೆನ್ನುವುದು ಅಪ್ಪಟ ಸುಳ್ಳು ಎಂದಿದ್ದಾರೆ. 'ನವಸಾರಿ ಜಿಲ್ಲೆಯ ಕಲೆಕ್ಟರ್ ಅಂದು ಮೋದಿ ಆದೇಶದನ್ವಯ 28,000 ಮುಸ್ಲಿಂ ಟೋಪಿಗಳನ್ನು ಖರೀದಿಸಿ ಬಿಜೆಪಿ ಕಾರ್ಯಕರ್ತರಿಗೆ ಹಂಚುವ ಏರ್ಪಾಟು ಮಾಡಿದ್ದ. ಅವತ್ತು ಟೋಪಿ ಹಾಕಿಕೊಂಡು ಮುಸ್ಲಿಮರ ವೇಷಭೂಷಣ ತೊಟ್ಟು 'ಸದ್ಭಾವನಾ' ಕಾರ್ಯಕ್ರಮಕ್ಕೆ ಬಂದವರೆಲ್ಲ ಅಸಲಿಗೆ ಬಿಜೆಪಿ ಕಾರ್ಯಕರ್ತರು!' ಎನ್ನುತ್ತಾರೆ ಮೆಹ್ತಾ - ಬದ್ರಿ ರೈನಾ, www.zcommunications.org

ಕನಿಷ್ಠ ನಾಲ್ಕಂಶಗಳ ಹಿಂದುತ್ವ ಅಜೆಂಡಾವನ್ನು ಪಾಲಿಸಿದರಷ್ಟೇ ಮೋದಿಗೆ ತನ್ನ ಬೆಂಬಲವೆಂದು ಆರೆಸ್ಸೆಸ್ ಸ್ಪಷ್ಟಪಡಿಸಿರುವುದಾಗಿ ವರದಿಯಾಗಿದೆ. ಒಂದು ವೇಳೆ ಅಧಿಕಾರ ಸಿಕ್ಕಿತೆಂದಾದರೆ ಆರೆಸ್ಸೆಸ್‌ನ ಡಿಮಾಂಡ್‌ಗಳು ಇನ್ನಷ್ಟು ಹೆಚ್ಚಾಗಲಿರುವುದು ಖಚಿತ. ಆಗ ಭಿನ್ನಾಭಿಪ್ರಾಯ, ತಿಕ್ಕಾಟ ತಲೆದೋರಿದಲ್ಲಿ ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತೆಂಬಂತೆ ಎರಡೆರಡು ಶಕ್ತಿಕೇಂದ್ರಗಳಿಂದಾಗಿ ಬಡವಾದ ಈಗಿನ ಕೇಂದ್ರ ಸರ್ಕಾರದ ಗತಿಯೇ ಹೊಸ ಸರ್ಕಾರಕ್ಕೂ ಆಗಲಿದೆ. ಹಾಗೇನಾದರೂ ಆದರೆ ಮತ್ತೆ ನಿಷ್ಕ್ರಿಯ ಆಡಳಿತ ಗ್ಯಾರಂಟಿ. ಆದುದರಿಂದಲೆ ತಮ್ಮ 21ನೆ ಶತಮಾನದ ಆಧುನಿಕ ಭಾರತದ ಕನಸನ್ನು ಸಾಕಾರಗೊಳಿಸುವಾತನೆ ಮೋದಿ ಎಂದು ನಂಬಿರುವ ಯುವಜನತೆಯ ಒಂದು ವರ್ಗವೂ, ಮೋದಿ ಸರ್ಕಾರದಲ್ಲಿ ಹೂಡಿಕೆಗಾಗಿ ಹಾತೊರೆಯುತ್ತಿರುವ ಪಾಶ್ಚಿಮಾತ್ಯ ದೇಶಗಳ ವಾಣಿಜ್ಯೋದ್ಯಮಿಗಳೂ, ದೊಡ್ಡ ದೊಡ್ಡ ಸ್ವದೇಶಿ ಉದ್ಯಮಪತಿಗಳೂ, ಮೋದಿ ಸೀನಿದರೂ ಸಾಕು ಆನಂದಾತಿರೇಕದಿಂದ ಮೂರ್ಛೆಹೋಗುವ ಟಿವಿ ಆಂಕರ್‌ಗಳೂ ಈಗಲೆ ಒಂದು ಕ್ಷಣ ನಿಂತು ಗಂಭೀರವಾಗಿ ಯೋಚಿಸುವ ಅಗತ್ಯ ಇದೆ.

ಸುಪ್ರಸಿದ್ಧ ವ್ಯಂಗ್ಯಚಿತ್ರಕಾರ ರಾಜೆಂದರ್ ಪುರಿ.

● ಸುರೇಶ್ ಭಟ್ ಬಾಕ್ರಬೈಲು

...ಷಣ್ಮುಖ ಶಿವಯೋಗಿಗಳ ನೆಲದಲ್ಲಿ ದಸರಾ ದರ್ಬಾರ್ ಯಾಕೆ?

...ಜೇವರ್ಗಿ ಪಟ್ಟಣದಲ್ಲಿ ಏರ್ಪಾಡಾಗಿರುವ ಅನಗತ್ಯ ದಸರಾ ...ರ್ಬಾರ್‌ಗೆ ಈಗ ವಿರೋಧ ಎದುರಾಗಿದೆ. ಹಿಂದೂ ಕೋಮುವಾದಿಗಳ ...ಗೆ ವಿಚಾರವಾದಿ ಬಸವಾನುಯಾಯಿಗಳು ಈಗ ವಿರೋಧವಾಗಿ ...ದ್ದಾರೆ.

...ಇಡೀ ಜಗತ್ತಿನ ಸಕಲ ಜೀವರಾಶಿಗಳಿಗೆಲ್ಲ ಒಳಿತನ್ನು ಬಯಸಿದ ...ವಾದಿ ಶರಣರ ನೆಲದಲ್ಲಿ ಇದೀಗ ಕೋಮುವಾದಿಗಳ ಅಟ್ಟಹಾಸ ...ವಾಗಿದೆ. ಬಹುಶಃ ಜಾತ್ಯತೀತ ಮನಸ್ಸುಗಳ ಬೇರುಗಳು ಎಲ್ಲಿವೆಯೋ ...ದಲೆ ತಮ್ಮ ಪಯಣ ಆರಂಭಿಸಿದರೆ ತಮಗೊಂದು ಯಶಸ್ಸು ...ಹುದೆಂಬ ಹುನ್ನಾರದ ಭ್ರಮೆಯಿಂದ ಅವು ಕ್ರಿಯಾತ್ಮಕವಾಗಿವೆ. ...ಣ್ಣನವರ ಕರ್ಮಭೂಮಿಯಾದ ಬಸವ ಕಲ್ಯಾಣ, ಬೀದರ, ಗುಲ್ಬರ್ಗಾ, ...ದಗಿರಿ, ರಾಯಚೂರು ಜಿಲ್ಲೆಗಳಲ್ಲಿ ಇವುಗಳ ಹಾವಳಿ ...ತಕ್ಕಿಟ್ಟುಕೊಂಡಿದೆ.

...ಕ್ತರ ಕಂಡರೆ ಬೋಳರಪ್ಪಿರಯ್ಯಾ;
...ವಣರ ಕಂಡರೆ ಬತ್ತಲೆಯಪ್ಪಿರಯ್ಯಾ;
...ರುವರ ಕಂಡರೆ ಹರಿನಾಮವೆಂಬಿರಯ್ಯಾ;
...ವರವರ ಕಂಡರೆ ಅವರವರಂತೆ!
...ಳಿಗೆ ಹುಟ್ಟದವರ ತೋರದಿರಯ್ಯಾ,
...ಕೂಡಲಸಂಗಮದೇವನ ಪೂಜಿಸಿ ಅನ್ಯದೈವಂಗಳಿಗೆರಗಿ
...ಭಕ್ತರೆನಿಸಿಕೊಂಬ ಅಜ್ಞಾನಿಗಳ ನಾನೇನೆಂಬೆನಯ್ಯಾ?

...ಂದು ಬಸವಣ್ಣನವರು ಅಂದೆ ಊಹಿಸಿದಂತೆ ಲಿಂಗಾಯತರೆಂದು ...ಸಿಕೊಳ್ಳುವ ಉತ್ತರ ಕರ್ನಾಟಕದ ಜನಗಳು ಕರ್ಮಠತನ ಬ್ರಾಹ್ಮಣ್ಯಕ್ಕೆ ...ಅಂಟಿಕೊಂಡುಬಿಟ್ಟಿದ್ದಾರೆಂದರೆ ತಾವು ಲಿಂಗಾಯತ ಎಂಬ ಪರಿಧಿಯನ್ನು ...ಹೊರಟಿದ್ದೇವೆ ಎಂದು ಅವರಿಗೆ ಅನಿಸುತ್ತಲೆ ಇಲ್ಲ. ಏಕೆಂದರೆ ಯಾರನ್ನು ...ತಮ್ಮ ಗುರುಗಳೆಂದು ಕರೆದುಕೊಂಡಿದ್ದಾರೋ ಆ ಗುರುಗಳು ಅಕ್ಷರಶಃ ...ವರಂತೆ ಕರ್ಮಠೇದಿಗಳಾಗಿ ಬಿಟ್ಟಿದ್ದಾರೆ. ಸ್ವಾಭಿಮಾನಿಗಳಲ್ಲದ, ಪರಾವಲಂಬಿ ...ತಾಗಿರುವ ಲಿಂಗಾಯತರ ಬೆನ್ನೆಲುಬನ್ನು ಮಠೀಯ ವ್ಯವಸ್ಥೆ ಎಂದೋ ...ದುಹಾಕಿದೆ. ಅದ್ದರಿಂದ ಉತ್ತರ ಕರ್ನಾಟಕದ ಕೆಲ ಲಿಂಗಾಯತರು ...ಂಡವರನ್ನು ತಮ್ಮ ತಂದೆಯೆಂದು ಅವಲತ್ತುಕೊಳ್ಳುತ್ತಿದ್ದಾರೆ. ಇದರಿಂದ ...ಂಡ ಪುರೋಹಿತಶಾಹಿ ಬಸವಣ್ಣನವರ ನೆಲದಲ್ಲಿ ದಾಂಗುಡಿಯಿಟ್ಟು ...ತ್ತಿದೆ.

...ಪುಟಂದಾಪುರ ಮಠದ ರಾಘವೇಶ್ವರ ಸ್ವಾಮಿ ಸದಾಕಾಲ ಉತ್ತರ ಕರ್ನಾಟಕದಲ್ಲಿ ರಾಮಕಥಾವನ್ನು ಹೇಳುತ್ತಾ ವಿಜೃಂಭಿಸುತ್ತಿದ್ದಾನೆ. ಸಮಯ ಸಿಕ್ಕಾಗಲೆಲ್ಲ ಲೋಕಕಲ್ಯಾಣಕ್ಕೆ ಯಜ್ಞ-ಯಾಗಗಳ ನೆಪದಲ್ಲಿ ಲಿಂಗಾಯತರ ಬೇಜುಗಳನ್ನು (ಅವರಿಗೆ ಅರಿವಿಲ್ಲದಂತೆ) ಕತ್ತರಿಸುತ್ತಿದ್ದಾನೆ. ಪೇಜಾವರ ಮಠದ ಸ್ವಾಮಿಯಂತೂ ತನ್ನ ಪಟಾಲಂದೊಂದಿಗೆ ಆಗಾಗ ಇಲ್ಲಿ ದರ್ಶನವಿತ್ತು ತನ್ನ ತಿಜೋರಿ ತುಂಬಿಕೊಂಡು ಹೋಗುತ್ತಿರುತ್ತಾರೆ. ಇದನ್ನೆಲ್ಲ ಕಂಡು ನಾವೇನು ಈ ಚಟುವಟಿಕೆಗಿಂತ ಕಮ್ಮಿ ಇಲ್ಲ ಎಂದು ಪಂಚಪೀಠಗಳ ಜಗದ್ಗುರುಗಳು ಪೈಪೋಟಿಗೆ ಬಿದ್ದವರಂತೆ ಮಾನವ ಕಲ್ಯಾಣಕ್ಕಾಗಿ (!?) ಅವರ ಅಡ್ಡಪಲ್ಲಕ್ಕಿ ಉತ್ಸವಗಳು ಯಾಗ ಎಗ್ಗಿಲ್ಲದೆ ನಡೆದಿವೆ. ಧರ್ಮವನ್ನು ಬಂಡವಾಳವನ್ನಾಗಿ ಮಾಡಿಕೊಂಡಿರುವ ಈ ಪುರೋಹಿತಶಾಹಿ ವ್ಯವಸ್ಥೆ ಜನತೆಗೆ ಮೌಢ್ಯವನ್ನು ಹಂಚಿ ಧರ್ಮೋದ್ಧಾರಕರಂತೆ ಮೆರೆಯುತ್ತಿದ್ದಾರೆ.



ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ (ಕೊನೆಯ ವಚನಕಾರ ಷಣ್ಮುಖ ಶಿವಯೋಗಿಗಳ ಜನ್ಮಸ್ಥಳ) ಪಟ್ಟಣದಲ್ಲಿ ನಡೆಸಲು ಉದ್ದೇಶಿಸಲಾಗಿರುವ ರಂಭಾಪುರಿ ಜಗದ್ಗುರುಗಳ 'ದಸರಾ ದರ್ಬಾರ್' ಎಂಬ ಅವೈಜ್ಞಾನಿಕ ಉತ್ಸವದ ಪುಗ್ಗಲ ಮುರಿಯಲು ಬಸವ ಕೇಂದ್ರದ ಯುವಕರು ಸಜ್ಜಾಗಿ ನಿಂತಿದ್ದಾರೆ. ಬಸವಪ್ರಣೀತ ವಿಚಾರಗಳಿಂದ ಪುರಿಗೊಂಡಿರುವ ಯುವಕರ ದಂಡನ್ನು ಕಂಡು ಆಗಲೇ ರಂಭಾಪುರಿ ಪಟಾಲಂಗೆ ನಡುಕಹುಟ್ಟಿದೆ. ಆದರೂ ಲಿಂಗವನ್ನು ಪೂಜಿಸಿಯೂ ಅನ್ಯದೈವಂಗಳಿಗೆರಗಿ ಭಕ್ತರೆನಿಸಿಕೊಂಡ ಅಜ್ಞಾನಿಗಳೊಂದಿಗೆ ಒಡಗೂಡಿ ಹೇಗಾದರೂ ಸೈ ತಮ್ಮ ಕಾರ್ಯವನ್ನು ಪೂರೈಸಿಕೊಳ್ಳಲೇಬೇಕೆಂದು ಮಠೀಯ ವ್ಯವಸ್ಥೆ ಹೊಂಚುಹಾಕಿದೆ.


ಒಬ್ಬ ವ್ಯಕ್ತಿ ಮತ್ತೊಬ್ಬನ ಹೆಗಲ ಮೇಲೆ ಸವಾರಿ ಹೊರಡುವುದು ಮೂರ್ಖತನದ ಪರಮಾವಧಿ. ಯಾರೋ ಒಬ್ಬ ವ್ಯಕ್ತಿ (ಗುರು) ಬಂಗಾರ ಕಿರೀಟಧಾರಿಯಾಗಿ ಮೆರೆದರೆ, ಆತ ಮೃಷ್ಟಾನ್ನ ಭೋಜನ ಉಂಡರೆ ಇಡೀ ಸಮಾಜವೇ ಪರಿವರ್ತನೆಗೊಳ್ಳುತ್ತದೆ ಎಂದು ಹೇಳುತ್ತಿರುವುದು ನಾಚಿಕೆಯ ಸಂಗತಿ ಎಂದೆಲ್ಲ ಜೇವರ್ಗಿಯ ಬಸವ ಕೇಂದ್ರ ಜನತೆಯಲ್ಲಿ ಪ್ರಜ್ಞೆಯ ಬೀಜಬಿತ್ತುತ್ತಿದೆ. ಮಾನವ ಧರ್ಮಕ್ಕೆ ಜಯವಾಗಲಿ ಎಂದು ಹೇಳುತ್ತ ಮಾನವನ ಹೆಗಲ ಮೇಲೆ ಕುಳಿತುಕೊಳ್ಳುವುದು ಕುಚೋದ್ಯತನ ಬಿಂಬಿಸುತ್ತದೆ ಎಂದೆಲ್ಲ ಬಸವ ಕೇಂದ್ರದವರು ಸಾರುತ್ತಿದ್ದಾರೆ. ತೀರಾ ಇತ್ತೀಚೆಗೆ ಜೇವರ್ಗಿಯ ನೆಲದಲ್ಲಿ ರಂಭಾಪುರಿ ಜಗದ್ಗುರುಗಳು ಜಂಗಮ ಸಮಾವೇಶವೆಂಬ ಜಾತಿ ಸಮಾವೇಶ ನಡೆಸಿದರು. ಇದೀಗ ಲಿಂಗಾಯತರ ಗುರುಗಳೆಂದು ನಮ್ಮಲ್ಲಿಗೆ ಬಂದು ಮೆ(ಉ)ರವಣಿಗೆ ಮಾಡಿಸಿಕೊಳ್ಳಬೇಕೆಂದು ಹೊರಟಿದ್ದಾರೆ, ಇದು ಅವರ ಇಬ್ಬಂದಿತನ ತೋರುತ್ತದೆ ಎಂದೆಲ್ಲ ಕೇಂದ್ರದವರು ಅವರ ಒಂದೊಂದೆ ಹುಳುಕನ್ನು ಬಯಲಿಗೆ ಹಾಕುತ್ತಿದ್ದಾರೆ.

ಪುರೋಹಿತರ ತಂತ್ರಗಳನ್ನು ಮೈಗೂಡಿಸಿಕೊಂಡಿರುವ ಮಾಧ್ಯಮಗಳು ಬಸವ ಕೇಂದ್ರದ ಕೂಗನ್ನು ವ್ಯವಸ್ಥಿತವಾಗಿ ಬಗ್ಗುಬಡಿಯಲು ಯತ್ನಿಸುತ್ತಿವೆ. ಆದರೂ ಬಸವಾದಿ ಶರಣರ ವಿಚಾರದಿಂದ ಪುರಿಗೊಂಡಿರುವ ಗುಲ್ಬರ್ಗಾ ಬಸವ ಕೇಂದ್ರದ ಮಲ್ಲಣ್ಣ ನಾಗರಾಳ, ಸಿದ್ರಾಮಪ್ಪ ಬಾಲಪ್ಪಗೋಳ್, ಸೋಮಣ್ಣ ನಡಕಟ್ಟಿ, ಶಿವಶರಣಪ್ಪ ಕಲ್ಬುರ್ಗಿ, ಶರಣಬಸವಕಲ್ಲಾ, ಷಣ್ಮುಖಪ್ಪ ಹಿರೇಗೌಡ್ರು, ಬಾಪುಗೌಡ ಪಾಟೀಲ, ಎಸ್.ಕೆ.ಬಿರಾದಾರ, ಶಿವಣ್ಣ ಇಜೇರಿ, ಶಿವಣ್ಣಗೌಡ ಕಲ್ಲಹಂಗರಗಾ ಮೊದಲಾದವರು ಶಿಸ್ತುಬದ್ಧ ಯೋಜನೆಗಳನ್ನು ಹಾಕಿಕೊಂಡು ಪುರೋಹಿತರ ಪಟಾಲಂನ ಮಗ್ಗಲು ಮುರಿಬೇಕೆಂದು ಸಜ್ಜಾಗಿದ್ದಾರೆ.

ಆದರೆ ಇದ್ಯಾವುದರ ಅರಿವಿಲ್ಲದವರಂತೆ ತಮ್ಮ ಓಟಿನ ರಾಜಕೀಯಕ್ಕೆ ಗಂಟು ಬಿದ್ದಿರುವ ಇಲ್ಲಿನ ರಾಜಕಾರಣಿಗಳು ಅವರಿಗೂ ಸೈ, ಇವರಿಗೂ ಸೈ ಎಂಬಂತೆ ವರ್ತಿಸುತ್ತಿದ್ದಾರೆ. ದಸರಾ ದರ್ಬಾರ್ ಉತ್ಸವದಲ್ಲಿ ಪಾಲ್ಗೊಳ್ಳಲು ಕೇಂದ್ರದ ರೈಲ್ವೆ ಖಾತೆಗಳ ಸಚಿವ ಮಲ್ಲಿಕಾರ್ಜುನ ಖರ್ಗೆ ಆಗಮಿಸಲಿದ್ದಾರಂತೆ. ಮಾಜಿ ಮಂತ್ರಿ, ಧರ್ಮಸಿಂಗ್‌ರ ಪುತ್ರ ಶಾಸಕ ಅಜಯಸಿಂಗ್‌ರ ಅಭಯ ಇವರಿಗಿದೆಯಂತೆ. ಅಸಂವಿಧಾನಿಕವಾಗಿ ನಡೆಯುವ ಅಡ್ಡಪಲ್ಲಕ್ಕಿ ಉತ್ಸವಗಳು, ಸಭೆಗಳಲ್ಲಿ ಭಾಗವಹಿಸಿ ಜನಪ್ರತಿನಿಧಿಗಳು ತಮ್ಮ ಇದ್ದಬದ್ದ ವರ್ಚಸ್ಸನ್ನು ಕಳೆದುಕೊಳ್ಳುತ್ತಾರೋ ಅಥವಾ ಉಳಿಸಿಕೊಳ್ಳುತ್ತಾರೋ ಕಾದು ನೋಡಬೇಕಿದೆ

● ವಿಶ್ವಾರಾಧ್ಯ ಸತ್ಯಂಪೇಟೆ

ರಘು ಆಚಾರ್ ಗೆಲುವು ಮತ್ತು ಪ್ರಜಾಪ್ರಭುತ್ವ



ಕಳೆದ ತಿಂಗಳು ವಿಧಾನ ಪರಿಷತ್ತಿನ ಮೂರು ಸ್ಥಾನಗಳಿಗೆ ನಡೆದ ಉಪಚುನಾವಣೆಯಲ್ಲಿ ರಘು ಆಚಾರ್ ಎಂಬ ವ್ಯಕ್ತಿ ಪಕ್ಷೇತರನಾಗಿ ಸ್ಪರ್ಧಿಸಿ ಹೊಸದಾಗಿ ಆಯ್ಕೆಯಾಗಿದ್ದಾರೆ. ಇದರಲ್ಲಿ ಏನು ವಿಶೇಷ? ವಿಧಾನ ಪರಿಷತ್ತಿಗೆ ಪಕ್ಷೇತರರಾಗಿ ಸ್ಪರ್ಧಿಸಿ ಗೆಲ್ಲುವುದು ಹೊಸದೇನಲ್ಲ. ಶಿಕ್ಷಕರ, ಪದವೀಧರರ ಕ್ಷೇತ್ರಗಳಲ್ಲಂತೂ ಅದು ಮಾಮೂಲು. ರಘು ಆಚಾರ್ ಗೆದ್ದಿರುವುದು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಮತಕ್ಷೇತ್ರದಿಂದ. ಇದೂ ಸಹ ಆಶ್ಚರ್ಯಕರವೇನಲ್ಲ. ಆದರೆ ಆಶ್ಚರ್ಯವಿರುವುದು ಮೈಸೂರಿನ ರಘು ಆಚಾರ್, ದಾವಣಗೆರೆ, ಚಿತ್ರದುರ್ಗಗಳನ್ನೊಳಗೊಂಡ ಕ್ಷೇತ್ರದಿಂದ, ಯಾವೊಂದು ಪ್ರಮುಖ ರಾಜಕೀಯ ಪಕ್ಷದ ಬೆಂಬಲವಿಲ್ಲದೇ ಗೆದ್ದಿರುವುದರಲ್ಲಿ. ಅದರ ಜೊತೆಗೆ ಹೇಳಬೇಕಾದ ಇನ್ನೊಂದು ಸಂಗತಿಯೆಂದರೆ ರಘು ಆಚಾರ್, ಅಂತಹ ಪ್ರಬಲವೂ ಅಲ್ಲದ, ದೊಡ್ಡ ಸಂಖ್ಯೆಯಲ್ಲೂ ಇರದ ವಿಶ್ವಕರ್ಮ ಸಮುದಾಯಕ್ಕೆ ಸೇರಿದ ವ್ಯಕ್ತಿ.

ಹಾಗಾಗಿಯೇ ಬೆಂಗಳೂರಿನ ಕೇಂದ್ರ ಭಾಗದಲ್ಲಿ ರಾರಾಜಿಸುತ್ತಿರುವ ಪೋಸ್ಟರ್ ಮತ್ತು ಫ್ಲೆಕ್ಸ್ ಬ್ಯಾನರ್‌ಗಳಲ್ಲಿ ರಘು ಆಚಾರ್ ಹೀಗೆ ಬರೆಸಿಕೊಂಡಿದ್ದಾರೆ - 'ಜಾತಿ, ಪ್ರಾದೇಶಿಕತೆ ಮತ್ತು ಸಂಕುಚಿತತೆಯನ್ನು ಮೀರಿ ಆಯ್ಕೆ'. ಪ್ರಜಾಪ್ರಭುತ್ವದ ವಿಶೇಷಣಗಳಲ್ಲಿ ಇಂತಹವು ಹಲವು ಇವೆ, ನಡೆಯುತ್ತವೆ, ನಡೆಯಲು ಸಾಧ್ಯ ಎಂದು ಆಗಾಗ ಹೇಳಲಾಗುತ್ತದೆ. ಅತ್ಯಂತ ದುರ್ಬಲ ಸಮುದಾಯಕ್ಕೆ ಸೇರಿದ ವ್ಯಕ್ತಿಗಳು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ, ಬೇರೆ ಬೇರೆ ಕಡೆ ಪ್ರಮುಖ ಅಧಿಕಾರಸ್ಥ ಸ್ಥಾನಗಳಿಗೆ ಏರಿದ್ದಾರೆ. ಅಗೆಲ್ಲ ಇದು ಪ್ರಜಾಪ್ರಭುತ್ವದಲ್ಲಿ ಮಾತ್ರ ಸಾಧ್ಯ ಎಂದೂ ಹೇಳಲಾಗುತ್ತದೆ. ಅದೇ ನಿಜವಾಗಿದ್ದರೆ, ಅದಕ್ಕಿಂತ ಖುಷಿಯ ಸಂಗತಿ ಇನ್ನೇನಿದೆ?

ಆದರೆ ವಾಸ್ತವ ಅದಾಗಿಲ್ಲ. ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ 12 ತಾಲೂಕುಗಳಲ್ಲಿ ಒಂದು ಕ್ಷೇತ್ರದಲ್ಲಿ ಸೋತ ಶಾಸಕ(ಗೂಳಿಹಟ್ಟಿ ಶೇಖರ್)ನ ಬಹಿರಂಗ ಬೆಂಬಲ ಮಾತ್ರ ರಘು ಆಚಾರ್‌ಗೆ ಇತ್ತು. ಈ ಚುನಾವಣೆಗೆ ವರ್ಷಗಟ್ಟಲೆ ಸಿದ್ಧತೆಯನ್ನೇನೂ ಆತ ಮಾಡಿಕೊಂಡಿರಲಿಲ್ಲ. ಹಾಗಿದ್ದೂ ನಿಚ್ಚಳವಾದ ಗೆಲುವನ್ನು ಆತ ಸಾಧಿಸಬಹುದು ಎಂಬ ಭವಿಷ್ಯವನ್ನು ಚುನಾವಣೆಗೆ ಕೆಲವು ದಿನಗಳ ಮುಂಚೆಯೇ ಆ ಜಿಲ್ಲೆಗಳ ಹಲವು ಗೆಳೆಯರು ಹೇಳುತ್ತಿದ್ದರು. ಇದು ಸಾಧ್ಯವಾಗಿದ್ದು ಹೇಗೆ?

ಇದಕ್ಕಿರುವ ಉತ್ತರ ಅಷ್ಟು ನಿಗೂಢವೇನಲ್ಲ. ಕಳೆದ 20 ವರ್ಷಗಳ ಚುನಾವಣಾ ರಾಜಕಾರಣವು ಪಡೆದುಕೊಂಡಿರುವ ತಿರುವನ್ನು ನೋಡಿರುವ ಯಾರಾದರೂ ಊಹಿಸಬಹುದಾದ ಉತ್ತರವಿದು. ಜಾಗತೀಕರಣದ ನಂತರದ ಕಾಲಘಟ್ಟವು ವಿಕೃತ ಅಭಿವೃದ್ಧಿ ಮತ್ತು ವಿಕೃತ ಆರ್ಥಿಕತೆಗೆ ದಾರಿ ಮಾಡಿಕೊಟ್ಟಿರುವಂತೆಯೇ, ರಾಜಕಾರಣವನ್ನೂ ಮತ್ತಷ್ಟು ಭ್ರಷ್ಟಗೊಳಿಸಿರುವುದಕ್ಕೆ ನಾವೆಲ್ಲರೂ ಸಾಕ್ಷಿಯಾಗಿದ್ದೇವೆ. ಆದರೆ ಇಲ್ಲಿ ನಮ್ಮಲ್ಲಿ ವಿಷಾದ ಮೂಡಿಸಬೇಕಾದ ಸಂಗತಿಯೇನೆಂದರೆ, ಇದು ಯಾರನ್ನೂ ದಿಗ್ಭ್ರಮೆಗೊಳಿಸದೇ ಇರುವುದು.

ಬಹುಶಃ ಇದನ್ನು ಹೀಗೂ ಕೆಲವರು ಹೇಳಬಹುದು. 'ಒಬ್ಬ ಹಿಂದುಳಿದ ಜಾತಿಗೆ ಸೇರಿದ ವಿಶ್ವಕರ್ಮ ಹುಡುಗ ಗೆದ್ದು ಬಂದರೆ ಅದಕ್ಕೆ ಖುಷಿ ಪಡಬೇಕೇ ಹೊರತು ಇಂತಹ ಪ್ರಶ್ನೆಗಳನ್ನು ಕೇಳಬಾರದು', 'ಹಾಗಾದರೆ ಅದೇ ಕ್ಷೇತ್ರದಲ್ಲಿ ಪ್ರಬಲ ಜಾತಿಗೆ ಸೇರಿದವರು ಗೆದ್ದು ಬಂದಿದ್ದರೆ ಅದರಿಂದ ಪ್ರಜಾಪ್ರಭುತ್ವಕ್ಕೆ ಒಳ್ಳೆಯದಾಗುತ್ತಿತ್ತಾ?', 'ಇನ್ನೆಲ್ಲೂ ಯಾರೂ ಹಣ ಖರ್ಚೇ ಮಾಡಿಲ್ಲವಾ? ಉಳಿದವರು ಅದನ್ನೇ ಮಾಡಿದಾಗ ಪ್ರಶ್ನೆ ಕೇಳದೇ ಈಗ ಮಾತ್ರ ಏಕೆ ಕೇಳಬೇಕು'.

ಇಲ್ಲಿ ಚರ್ಚೆಯ ಸಂಗತಿ ಅದಾವುದೂ ಅಲ್ಲ. ನಮ್ಮ ಚುನಾವಣೆಗಳಲ್ಲಿ ಜಾತಿಯಷ್ಟೇ ಅಥವಾ ಅದಕ್ಕಿಂತ ಹಣ ಹೆಚ್ಚು ಪಾತ್ರವನ್ನು ವಹಿಸುತ್ತಿರುವುದನ್ನು ಮಾತ್ರ ಇದು ತೋರಿಸುತ್ತದೆ. ಒಂದು ವೇಳೆ ಇನ್ನೂ ಪ್ರಬಲ ಜಾತಿಯ ಅಭ್ಯರ್ಥಿ, ಇದೇ ರೀತಿ ಹಣವನ್ನು ಖರ್ಚು ಮಾಡಿದರೆ ರಘು ಆಚಾರ್‌ಗಿಂತ ಸುಲಭವಾಗಿ ಗೆದ್ದು ಬಿಡುವ 'ಜಾತಿಯ ಅನುಕೂಲ'ವನ್ನೂ ಹೊಂದಿರುತ್ತಿದ್ದುದರಲ್ಲಿ ಅನುಮಾನವಿಲ್ಲ. ಹಾಗೆಂದು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಪಂಚಾಯಿತಿ ಸದಸ್ಯರು 'ಜಾತ್ಯತೀತ'ರಾಗಿ ಓಟು ಹಾಕಿದರೆಂದೂ ನಾವೇನೂ ಭಾವಿಸಬೇಕಿಲ್ಲ. ಆದರೆ ಹಣದ ಥೈಲಿಯನ್ನು ಹಿಡಿದು, ಕುಬೇರರು ಎಲ್ಲಿಂದ ಬೇಕಾದರೂ ಗೆದ್ದು ಬರಬಹುದು ಎಂಬ ಸತ್ಯವನ್ನು ಈ ಉಪಚುನಾವಣೆ ಹೊರಗೆಡವಿರುವುದನ್ನು ಇಲ್ಲಿ ಕಾಣಬಹುದು.

ಗಾಬರಿಗೊಳಿಸಬೇಕಾದ ಮತ್ತೂ ಒಂದು ಸಂಗತಿಯೆಂದರೆ, ಓಟು ಹಾಕಿರುವವರು (ಅಂದರೆ ದುಡ್ಡು ತೆಗೆದುಕೊಂಡು ಓಟು ಹಾಕಿರುವವರು) ಸಾಮಾನ್ಯ ಮತದಾರರಲ್ಲ. ಬದಲಿಗೆ, ಪ್ರಜಾಪ್ರಭುತ್ವದ ಮತ್ತೊಂದು ವಿಶೇಷವಾದ ವಿಕೇಂದ್ರೀಕೃತ ವ್ಯವಸ್ಥೆಯ ತಳಮಟ್ಟದ ಜನಪ್ರತಿನಿಧಿಗಳು. ಇದರಲ್ಲೇನು ವಿಶೇಷ ಎಂತಲೂ ಕೇಳಬಹುದು. ಏಕೆಂದರೆ ಪಂಚಾಯಿತಿ ಸದಸ್ಯರುಗಳಲ್ಲಿ ಹೆಚ್ಚಿನವರು ಕಡಿಮೆ ಶಿಕ್ಷಣ ಪಡೆದುಕೊಂಡಿರುವವರಾಗಿರುತ್ತಾರೆ. ಕನಿಷ್ಠ ಒಂದು ಪದವಿಯನ್ನು ಹೊಂದಿರುವ ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳಿಗೆ ವಿಧಾನ ಪರಿಷತ್ ಚುನಾವಣೆ ನಡೆದಾಗ, ಎಲ್ಲೆಡೆ ಮದ್ಯದ ಪಾರ್ಟಿಗಳು ನಡೆಯುವುದು ಮತ್ತು ಹಣದ ಚೆಲ್ಲಾಟ ನಡೆಯುವುದನ್ನು ನಾವೆಲ್ಲರೂ ನೋಡಿದ್ದೇವೆ. ಈಗ ವಕೀಲರ ಸಂಘದ ಚುನಾವಣೆಗಳು, ಪತ್ರಕರ್ತರ ಸಂಘದ ಚುನಾವಣೆಗಳು ನಡೆದಾಗಲೂ ಇದೇ ಪರಿಸ್ಥಿತಿ ಇರುವುದನ್ನು ನೋಡುತ್ತಿದ್ದೇವೆ. ಹಾಗಿದ್ದ ಮೇಲೆ ಕೇಳಬೇಕಿರುವ ಪ್ರಶ್ನೆ ಒಂದಿದೆ. ಪ್ರಜಾಪ್ರಭುತ್ವದಲ್ಲೇನು ವಿಶೇಷ? ಇದು ವರ್ಗ, ಜಾತಿ, ಲಿಂಗ ಮತ್ತು ಧರ್ಮಾಧಾರಿತ ತಾರತಮ್ಯಗಳನ್ನು ಮತ್ತಷ್ಟು ಗಟ್ಟಿಗೊಳಿಸುವ ವ್ಯವಸ್ಥೆಯೇ



ಆಗಿದೆ ಅಲ್ಲವೇ?


ಇದನ್ನು ಒಪ್ಪದೇ ಮತ್ತೊಂದು ವಾದವನ್ನೂ ಮುಂದಿಡಬಹುದಾಗಿದೆ. ಅದೇನೆಂದರೆ ಇಂದು ಈ ದೇಶದ ಅತ್ಯುನ್ನತ ಸಾಂವಿಧಾನಿಕ ಸಂಸ್ಥೆಯಾದ ಸಂಸತ್ತಿಗೆ 130ಕ್ಕೂ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿನಿಧಿಗಳು ಆಯ್ಕೆಯಾಗಲು ಸಾಧ್ಯವಾಗಿದೆಯಲ್ಲವೇ? ಇದೇ ಒಂದು ಪ್ರಜಾಪ್ರಭುತ್ವದ ಪವಾಡವಲ್ಲವೇ ಎಂದು. ಈ ಪವಾಡವನ್ನು ಅರ್ಥಮಾಡಿಕೊಳ್ಳಲು ಕರ್ನಾಟಕದ ಒಂದು ಉದಾಹರಣೆಯನ್ನು ನೋಡಬೇಕು. ಈ ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಚಿತ್ತಾಪುರದಿಂದ ಸ್ಪರ್ಧಿಸಿದ್ದರು. ಅಲ್ಲಿಯವರೆಗೆ ಸತತವಾಗಿ 7 ಸಾರಿ ಅವರು ಗುರುಮಿಠಕಲ್ ಕ್ಷೇತ್ರದಿಂದ ಗೆದ್ದು ಬಂದಿದ್ದರು. ಕೆಪಿಸಿಸಿ ಅಧ್ಯಕ್ಷರೂ ಆಗಿದ್ದು, ಮುಖ್ಯಮಂತ್ರಿ ಸ್ಥಾನದ ಸ್ಪರ್ಧಿಗಳಲ್ಲೊಬ್ಬರಾಗಿದ್ದ ಖರ್ಗೆಯವರು ಕ್ಷೇತ್ರ ಪುನರ್ವಿಂಗಡಣೆಯಾದಾಗ ಗುರುಮಿಠಕಲ್ ಮೀಸಲು ಕ್ಷೇತ್ರವಾಗಿರದೇ ಹೋಗಿದ್ದರಿಂದ, ಕ್ಷೇತ್ರವನ್ನೇ ಬದಲಾಯಿಸಿದರು. ಇದೇ ಮಾತು ಹಾಲಿ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಅವರಿಗೂ ಅನ್ವಯಿಸುತ್ತದೆ. ಮಧುಗಿರಿಯಿಂದ ಕೊರಟಗೆರೆಗೆ ಅವರು ಬಂದಿದ್ದು ಅದೇ ಕಾರಣಕ್ಕೆ.

ಹಾಗಿದ್ದ ಮೇಲೆ ಜಾತಿಯನ್ನು ಮೀರಿ ಚುನಾವಣೆಗ ನಡೆಯುವುದು ಸಾಧ್ಯವೇ? ಅದರಲ್ಲೂ ಈ ದೇಶದ ದ ಸಮುದಾಯಕ್ಕೆ ಸೇರಿದ ವ್ಯಕ್ತಿಗಳ ವಿಚಾರದಲ್ಲಿ ಸಾಧ್ಯ ರಘು ಆಚಾರ್ ವಿಚಾರದಲ್ಲಿ ಸಾಧ್ಯವಾಗಿದ್ದು ಹೇಗೆ? ಇ ಇವರೊಬ್ಬರು ಹೊರತೇನಲ್ಲ. ಈ ಸಾರಿಯ ವಿಧಾನ ಸ ಚುನಾವಣೆಯಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ 11 ವಿಧಾನಸಭಾ ಕ್ಷೇತ್ರಗಳಲ್ಲಿ ಗೆದ್ದು ಬಂದಿರುವ ಯಾದಿಯನ್ನು ನೋಡಿದರೆ ತಿಳಿಯುತ್ತದೆ. ಕನಿಷ್ಠ ಕ್ಷೇತ್ರಗಳಲ್ಲಿ, ಆ ಕ್ಷೇತ್ರದ ಜೊತೆ ಯಾವ ಸಂಬಂಧ ಇಲ್ಲದೇ ಬೆಂಗಳೂರಿನಲ್ಲಿ ದುಡಿದ ಪಡಬೇ ದುಡ್ಡ ತೆಗೆದುಕೊಂಡು ಹೋದವರು ಗೆದ್ದಿದ್ದಾರೆ. ಒಂದು ಕ್ಷೇತ್ರದ (ಗೌರಿಬಿದನೂರು) ಕೇವಲ 3 ವರ್ಷಗಳ ಕೆಳಗೆ ಹಣ ಚೀಲದೊಂದಿಗೆ ಹೊಸದಾಗಿ ಕ್ಷೇತ್ರ ಹುಡುಕಿಕೊಂಡ ಹೊ ವ್ಯಕ್ತಿ ಕೇವಲ 4 ಸಾವಿರ ಮತಗಳ ಅಂತರದಿಂದ ಸೋತಿದ ಇನ್ನು ಐದು ಕ್ಷೇತ್ರಗಳಲ್ಲಿ ಅದೇ ಕ್ಷೇತ್ರದವರಾಗಿದ್ದರ ಬಾರ್, ರೆಸಾರ್ಟ್, ರಿಯಲ್ ಎಸ್ಟೇಟ್‌ಗಳಲ್ಲಿ ದುಡಿ ಹಣದ ಆಚೆಗೆ ಇನ್ನಾವ ಅರ್ಹತೆಗಳೂ ಇಲ್ಲದವ ಗೆದ್ದಿದ್ದಾರೆ. ಇವರೆಲ್ಲರ ಪಾಲಿಗೆ ಜಾತಿಯ ಅನುಕೂಲಕರವಾಗಿ ಒದಗಿ ಬಂದಿದ್ದರೂ ಮುಖ್ಯವ ಹಣದ ಮುಖಾಂತರ ಮತದಾರರನ್ನು ಕೊಂಡುಕೊಳ್ಳು ಯಶಸ್ವಿಯಾಗಿದ್ದಾರೆ.

ಸಾರ್ವತ್ರಿಕ ಚುನಾವಣೆಗಳಿಂದ 'ಪ್ರಜ್ಞಾವ ಮತದಾರ'ರು ಇರುವ ಚುನಾವಣೆಗಳು ಕಟ್ಟವೋ? ಅಥ ಪ್ರಜ್ಞಾವಂತರೇ ಮಾದರಿಯಾಗಿ ಇದನ್ನು ಕೆಡಿಸಿದರೆ ಅಥವಾ ಇದು ಅಸಮಾನ ಸಾಮಾಜಿಕ, ರಾಜಕೀ ಆರ್ಥಿಕ ವ್ಯವಸ್ಥೆ ಇರುವ ಕಡೆ ಸಂಸದೀಯ ಪ್ರಜಾತಂತ್ರ ಇರುವ ಪರಿಯೋ?

ಇದಕ್ಕೆ ಉತ್ತರವನ್ನು ಆಮ್ ಆದ್ಮಿ ಪಕ್ಷದ ಲೋಕಸತ್ತಾದಲ್ಲಿ; ಸರ್ವೋದಯ ಕರ್ನಾಟಕದಲ್ಲಿ ಅಥ ವೈ.ಎಸ್.ವಿ.ದತ್ತಾರಲ್ಲಿ ಕಂಡುಕೊಳ್ಳಬೇಕೆಂದು ಹೇ ಇದ್ದಾರೆ. ಅಂದರೆ ಅಪವಾದಗಳ ಮುಖಾಂತರ ಸಾರ್ವ ನಿಯಮವನ್ನು ಬದಲಾಯಿಸಬಹುದೆನ್ನುವ ಆಶ ಅವರದ್ದು. ತನ್ಮೂಲಕ ಈ ಚುನಾವಣಾ ಪ್ರಜಾತಂ ಪಿಡ್ಡಾದೊಳಗೆ ಬಿದ್ದು ಮತ್ತೆ ಮೇಲೇಳದ ಸ್ಥಿತಿಯ ತಾವೇ ಮೇಲೆಳೆದುಕೊಳ್ಳುವುದು.

ಪ್ರತೀ ಚುನಾವಣೆಯ ಸಂದರ್ಭದಲ್ಲೂ ಈ ಪ್ರಶ್ನೆಗಳ ಮತ್ತೆ ಮತ್ತೆ ಕೇಳಿಕೊಳ್ಳಬೇಕಿದೆ; ಪ್ರಜಾಪ್ರಭುತ್ವ ವ್ಯವಸ್ಥೆ ಮೂಲಭೂತ ಬದಲಾವಣೆಯ ಕುರಿತು, ನಿಜವಾ ಪ್ರಜಾತಂತ್ರವನ್ನು ತರುವ ಮಾರ್ಗದ ಕುರಿತು ಚಿಂ ನಡೆಸಬೇಕಿದೆ. ಇಲ್ಲದಿದ್ದರೆ ಇನ್ನು ಕೆಲವೇ ದಿನಗಳಲ್ಲಿ ಹ ಥೈಲಿಯ ಜನರು ಎಲ್ಲೆಡೆ ಪ್ರಜಾತಂತ್ರವನ್ನು ಸಂಪೂ ಕೊಂಡುಕೊಂಡಿರುತ್ತಾರೆ. ಅದನ್ನು ಬೆಂಗಳೂರಿನ ದೆಹಲಿಯಲ್ಲಿ ಹರಾಜಾಕುತ್ತಾರೆ. ಹರಾಜಿನಲ್ಲಿ ನಾ ಬಿಕರಿಯಾಗುತ್ತಿರುತ್ತೇವೆ.



ನಾನು ಸಾವಿರ ನಿಜ ಹೇಳಿ ಮದುವೆ ಆಗಬೇಕಂತ ಇದ್ದೀನಿ...

☛ ಸಿನಿಮಾ ಹಾಡು ಬರೆಯೋರನ್ನು ಯಾಕೆ ಕವಿಗಳೆಂದು ಹೇಳಲ್ಲ?

- ಸರೋಜ, ದಾವಣಗೆರೆ

♠ ಸ್ಪರ್ಧೆಯಲ್ಲಿ ಕೆಲವೊಮ್ಮೆ ಕವಿಗಳು ಸೋಲುತ್ತಿರುವುದರಿಂದ.

☛ ಸುಂದರ ಹುಡುಗಿಯರು ಬೇಗ ಯಶಸ್ಸು ಪಡೆಯುತ್ತಾರೆ ಅಂತ ನನ್ನ ಅನಿಸಿಕೆ... ಏನಂತೀರಾ?

- ರವಿ, ಗದಗ

♠ ನಿಜ..., ಅದು ಪುರುಷರ ದಡ್ಡತನದ indicator ಕೂಡ.

☛ ನರೇಂದ್ರ ಮೋದಿ ಮಿಲಿಟರಿಯವರನ್ನು ಹೊಗಳುತ್ತಿರುವುದೇಕೆ?

- ಶೂದ್ರ ಸಂತೋಷ್, ಕಡೂರು

♠ ಎಲೆಕ್ಷನ್ ಸೋತರೂ ಅಧಿಕಾರಕ್ಕೆ ಬರಲು ಹುಡುಕುತ್ತಿರುವ ಒಳದಾರಿ ಅದು.

☛ ಕರ್ನಾಟಕದ ಬೆಂಗಳೂರಿನಲ್ಲಿ ಪ್ರತಿ ಊರಿನವರೂ ಇದ್ದಾರಂತೆ ನಿಜಾನಾ?

- ಭಾನುಪ್ರಕಾಶ್, ಶಹಾಬಾದ್

♠ ಹಾಗಾಗಿ ಬೆಂಗಳೂರಿನ ಕಾಯಿಲೆಗಳೆಲ್ಲಾ ರಾಜ್ಯದ ಪ್ರತಿ ಊರಿಗೂ ಹಬ್ಬಿರುವುದು.

☛ ಅನಿಲ್ ಕುಂಬ್ಳೆ ವಿಕಕಾಲದಲ್ಲಿ ಪತ್ತಾರು ಹುದ್ದೆಯಲ್ಲಿದ್ದಾನಲ್ಲ, ಅವನೇನು ಸೂಪರ್‌ಮ್ಯಾನಾ?

- ಎಸ್.ಮರುಗುತ್ತಿ, ಗುಲ್ಬರ್ಗಾ



♠ ದುಡ್ಡು ಸಿಕ್ಕರೆ ಅವನು ಚಿಯರ್ ಗರ್ಲ್ಸ್ ವೇಷಾ ಹಾಕಲೂ ರೆಡಿ.

☛ ಸಂಸದೆ ರಮ್ಯಾ ಮೇಕಪ್ ಇಲ್ಲದೆ ಮಂಡ್ಯದಲ್ಲಿ ಓಡಾಡುತ್ತಿದ್ದಾರಲ್ಲ?

- ಶಿವಲಿಂಗೇಗೌಡ, ಮದ್ದೂರು

♠ ಸತ್ತವರನ್ನು ನೋಡಲು ಬರುವಾಗಲೂ ಮೇಕಪ್ ಹಾಕುವ ಸರೋಜದೇವಿಗಿಂತ ವಾಸಿ.

☛ 'ಬರಹಗಾರರ ದುರಂತ' ಅಂತಾರಲ್ಲ... ಹಾಗಂದರೇನು ಸಾರ್?

- ಪ್ರಕಾಶ್, ತೀರ್ಥಹಳ್ಳಿ

♠ ಪುಸ್ತಕದ ಅಂಗಡಿಗೆ ಮಾರಲು ಕಳುಹಿಸಿದ 10 ಪ್ರತಿಗಳು ಹನ್ನೆರಡಾಗಿ ವಾಪಸ್ ಬರುವುದು.

☛ ನಾನು ಸಾವಿರ ನಿಜ ಹೇಳಿ ಮದುವೆ ಆಗಬೇಕಂತ ಇದ್ದೀನಿ...?

- ಗಂಗರಾಜ್, ಭದ್ರಾವತಿ

♠ ಪ್ರಯತ್ನಿಸು, ನಿನ್ನ ಪಟ್ಟಿ ಹತ್ತು ದಾಟಲ್ಲ.

☛ ಜಯಲಲಿತಾಳನ್ನು ತಮಿಳರು 'ಅಮ್ಮ' ಅನ್ನುವುದೇಕೆ?

- ರಜಾಕ್, ಶಿವಾಜಿನಗರ

♠ ಗುಮ್ಮ ಅನ್ನಲು ಭಯ.

☛ ನಮ್ಮ ಮದುವೆಯಾಗಿ ಇಪ್ಪತ್ತು ವರ್ಷ ಕಳೆದಿದೆ... ಹೇಗೆ ಆಚರಿಸಬೇಕು ಹೇಳಿ?

- ರವಿ-ರೂಪ, ಮೈಸೂ

♠ ಬಾಕಿ ಉಳಿದಿರುವ ವರ್ಷಗಳನ್ನು ಕಳೆದುಕೊ ರುವಂತೆ.

☛ ಮಾಳಾಶ್ರೀ ಮತ್ತೆ ಮತ್ತೆ ಪೊಲೀಸ್ ಪ ಮಾಡುತ್ತಿದ್ದಾರೆ ಯಾಕೆ?

- ಸುಧಾಮ, ಬೆಂಗಳೂ

♠ ಸಾಲಗಾರರನ್ನು ಸಮಾಧಾನಪಡಿಸಲು.

☛ ನಟ ವಿಷ್ಣು ಸಮಾಧಿ ವಿಚಾರ ಯಾಕೆ ವಿವಾದವಾಗ್ತಿ

- ರವಿ ಗಣೇಶ್, ಬ

♠ ಆತ ಅವತಾರ ಪುರುಷ ಅಂತ ಭಾ ನಂಬಿರುವುದರಿಂದ.

☛ ಮೋದಿ ಪ್ರಧಾನಿ ಆಗೇ ಬಿಟ್ಟ ಅಂತಿಟ್ಟುಕೊಳ್ಳಿ...

- ತಿಮ್ಮರಾಜ್, ಕೋಲ

♠ ಆಗಲ್ಲ ಅನ್ನೋದನ್ನ ಬರೆದಿಟ್ಟುಕೊಳ್ಳಿ.

(ಸೂಚನೆ: ಕಣ್ಣಾಮುಚ್ಚಾಲೆಗೆ ಪ್ರಶ್ನೆ ಕಳುಹಿಸುವವ ... 9980331427ಗೆ SMS ಮತ್ತು kannamucchale@gmail.com ಗೆ ಇ-ಮೇಲ್ ಮೂಲಕವೂ ಕಳುಹಿಸಬಹುದು ...)





ಭೂಗೋಳದಾಳದಿಂದ ಹೊರ ಚಿಮ್ಮಿ ಕಗ್ಗಲ್ಲಾಗಿ ನಿಂತ ಲಾವಾರಸ-"ಯಾಣ"

ಕೋಟ ಶಿವರಾಮ ಕಾರಂತರಷ್ಟು ಅವರ ಸಹೋದರ ...ೋಟ ಲಕ್ಷ್ಮೀನಾರಾಯಣ ಕಾರಂತರು ಪ್ರಸಿದ್ಧ ...ಲ್ಲದಿರಬಹುದು. ಆದರೆ ಅವರ ಸಾಧನೆಯೇನೂ ಕಡಿಮೆ ...ಲ್ಲ. ಶುದ್ಧ ನಾಸ್ತಿಕರಾಗಿದ್ದ ಅವರು ಮಹಾ ಪರಿಸರ ...ೇಮಿಯಾಗಿದ್ದರು. ತಾವು ಬದುಕಿ ಬಾಳಿದ 'ಕೋಟ'ದ ...ುಂಬಾ ವಿಧವಿಧದ ಸಸ್ಯಗಳನ್ನು ನೆಟ್ಟು ಬೆಳೆಸಿದವರು ...ವರು. ಸಸ್ಯಶಾಸ್ತ್ರದಲ್ಲಿ ಹಲವು ಪ್ರಯೋಗಗಳನ್ನು ನಡೆಸಿದರು. ...ವರಾಮ ಕಾರಂತರ 'ಬಾಳ್ವೆಯೇ ಬೆಳಕು' ವೈಚಾರಿಕ ...ಂಥದ ಓದಿನ ಮೂಲಕ ನಮ್ಮಂತವರು ವಿಚಾರವಾದಿ ...ಾದಂತೆಯೇ ಕೋ.ಲ.ಕಾರಂತರು ಬರೆದ ಗ್ರಹ, ನಕ್ಷತ್ರ, ...ೀಹಾರಿಕೆಗಳ ಮೇಲಿನ ವೈಜ್ಞಾನಿಕ ಗ್ರಂಥ ಕೂಡಾ ...ಬವರನ್ನು ಮೂಢನಂಬಿಕೆಗಳಿಂದ ಮುಕ್ತವಾಗಿಸಿದೆ! ಅವರ ...ಂತಹ ವೈಜ್ಞಾನಿಕ ಗ್ರಂಥವೊಂದರಲ್ಲಿ ನಾನು ಈ ಕೆಳಗಿನ ...ಜ್ಯೋತಿಶಾಸ್ತ್ರದ ವಿವರ ಓದಿದ ನೆನಪು.

"ಸುಮಾರು **460** ಕೋಟಿ ವರ್ಷಗಳ ಹಿಂದೆ ಧಗಧಗ ...ರಿಯುತ್ತಿರುವ ನಮ್ಮ ನಕ್ಷತ್ರ ಸೂರ್ಯನಿಂದ ಹಾರಿ ...ಹೊರ ಸಿಡಿದ ಬೆಂಕಿಕಿಡಿ ಗ್ರಹಗಳಲ್ಲಿ ಒಂದು ನಮ್ಮ ...ಭೂಮಿ. ಪ್ರಾರಂಭದ ಕೋಟ್ಯಾಂತರ ವರ್ಷಗಳಲ್ಲಿ ಬೆಂಕಿ ...ಸಿಡಿಸುತ್ತಿದ್ದ ಈ ಗ್ರಹದಲ್ಲಿ ಯಾವ ಜೀವಿಗಳೂ ಇರಲಿಲ್ಲ. ...ನಂತರ ನಿಧಾನಕ್ಕೆ ಈ ಬೆಂಕಿಚೆಂಡು ತಣ್ಣಗಾಗುತ್ತಾ ಬಂತು. ...ಹಾಗೆ ತಣ್ಣಗಾದ ಮೇಲೆ ಈ ಭೂಮಿ ಎನ್ನುವ ಗ್ರಹದಲ್ಲಿ ...ಏಕಕೋಶ ಜೀವಿಗಳಾದ ವೈರಸ್, ಅಮೀಬಾ, ಬ್ಯಾಕ್ಟೀರಿಯಾ ...ಅಂತಹ ಜೀವಿಗಳು ಅಸ್ತಿತ್ವಕ್ಕೆ ಬಂದವು. ನಂತರ ಏಕಕೋಶ ...ಜೀವಿಗಳು ವಿಭಜನೆಗೊಂಡು ಬಹುಕೋಶ ಜೀವಿಗಳಾದವು. ...ನೀರು ತುಂಬಿದ ಪದರಗಳಲ್ಲಿ ವೈವಿಧ್ಯಮಯ ಜಲಚರ, ...ಜಲಸಸ್ಯಗಳು ಸೃಷ್ಟಿಯಾದವು. ನೀರಿಲ್ಲದ ಭೂಮಿಯ ...ಮೇಲೆ ಅಸಂಖ್ಯಾತ ಪ್ರಾಣಿ, ಸಸ್ಯ ಪ್ರಭೇದಗಳು ಅಸ್ತಿತ್ವಕ್ಕೆ ...ಬಂದವು. ಈ **460** ಕೋಟಿ ವರ್ಷಗಳ ದೀರ್ಘ ಇತಿಹಾಸ...ದಲ್ಲಿ ನಾವು ಮನುಷ್ಯರು ಹುಟ್ಟಿದ್ದು ಮೊನ್ನೆ ಮೊನ್ನೆ! **25** ...ಲಕ್ಷ ವರ್ಷಗಳ ಹಿಂದೆ 'ನೆಂದರ್ಥಾಲ್ ಮಾನವ' ...ಮಂಗನಿಂದ ಮಾನವನಾಗಿ ಈ ಭೂಗ್ರಹದ ಮೇಲೆ ಓಡಾಡಿಕೊಂಡಿದ್ದನೆಂದು ವಿಜ್ಞಾನಿಗಳು ಊಹಿಸುತ್ತಾರೆ. ಈ ಪ್ರಾಣಿ ವಿಕಾಸದ ಕತೆ ಮುಂದುವರಿಯುತ್ತಾ ನಮ್ಮ ಈಗಿನ 'ನಾಗರಿಕ' ಮನುಷ್ಯರು ಕೇವಲ ಇತ್ತೀಚಿನ **25-30** ಸಾವಿರ ವರ್ಷಗಳಲ್ಲಿ ವಿಕಾಸಗೊಂಡು ಬಂದಿರಬಹುದು. ನಮ್ಮ ಎಲ್ಲಾ 'ದೇವರು'ಗಳು ಹುಟ್ಟಿದ್ದು ಕೇವಲ ಇತ್ತೀಚಿನ **10** ಸಾವಿರ ವರ್ಷಗಳ ನಂತರ. ಹೀಗೆ ಸಾವಿರಾರು ಜ್ಯೋತಿರ್ ವರ್ಷಗಳ ವಿಸ್ತಾರದಲ್ಲಿ ಸಾವಿರಾರು ಕೋಟಿ ವರ್ಷಗಳಿಂದ ಗ್ರಹ, ತಾರೆ, ನೀಹಾರಿಕೆಗಳಾಗಿ ಮೆರೆಯುತ್ತಿರುವ ಈ 'ಸೃಷ್ಟಿ'ಯ ರಹಸ್ಯದ ಅತಿಸಣ್ಣ ಎಳೆ ಕೂಡಾ ಪೂರ್ತಿಯಾಗಿ ನಮಗೆ ತಿಳಿದಿಲ್ಲ. ಆದರೂ ದೇವರು-ಧರ್ಮಗಳ ಬಗ್ಗೆ ಎಷ್ಟೆಲ್ಲಾ ಸುಳ್ಳು ನಂಬಿಕೆಗಳು! ಈ ಮನೋಜೀವಿಯಾದ ಮಾನವ ಎಂತಹ ಅಧಿಕಪ್ರಸಂಗಿ....."

ಕಾರಂತದ್ವಯರ ಇಂತಹ ವಿಚಾರಧಾರೆಯಿಂದ ಪ್ರಭಾವಿತನಾಗಿರುವ ನನ್ನ ಹತ್ತಿರ ಮೂಲ್ಕಿಯ ವಿಜಯಾ ಕಾಲೇಜಿನ ಎನ್.ಎಸ್.ಎಸ್. ವಿದ್ಯಾರ್ಥಿಗಳು ಬಂದು "ಸರ್ ನಾವು ಪ್ರವಾಸಕ್ಕೆ ಹೋಗೋಣ. ನಾವು **125** ಮಂದಿ ಇದ್ದೇವೆ. ಎರಡು ಬಸ್ ಮಾಡಿಕೊಂಡು ಹೋಗಿ ಗಮ್ಮತ್ತು ಮಾಡಿ ಬರುವಾ.." ಎಂದು ಹೇಳಿದಾಗ "ಬರೀ ದೇವಸ್ಥಾನಗಳನ್ನು ಸಂದರ್ಶಿಸುವ ತೀರ್ಥಯಾತ್ರೆಗಾದರೆ ನನ್ನ ಸಮ್ಮತಿ ಇಲ್ಲ. ಆದರೆ ಬೆಳೆಯುವ ಮಕ್ಕಳಾದ ನಿಮ್ಮ ಅರಿವನ್ನು ಹೆಚ್ಚಿಸುವ ಮತ್ತು ವಿಸ್ತರಿಸುವ ಶೈಕ್ಷಣಿಕ ಪ್ರವಾಸಕ್ಕಾದರೆ ನಾನು ರೆಡಿ" ಎಂದು ನಾನು ಹೇಳಿದೆ. "ಹಾಗೇ ಆಗಲಿ. ಎಲ್ಲಿಗೆ ಹೋಗುವಾ? ನೀವೇ ಹೇಳಿ" ಎಂದು ಮಕ್ಕಳು ನನ್ನತ್ತಲೇ ಪ್ರಶ್ನೆ ಎಸೆದರು. ನಾನು "ನಮ್ಮ ಈ ಮೂಲ್ಕಿಯಿಂದ ಸುಮಾರು **250** ಕಿ.ಮಿ. ದೂರ ಇರುವ ಯಾಣಕ್ಕೆ ಹೋಗುವ" ಎಂದೆ. "ಅರೇ! ಅಲ್ಲೇನಿದೆ ವಿಶೇಷ ಸಾರ್?" ಎಂದು ಕೇಳಿದರು. "ಅದು ಉತ್ತರಕನ್ನಡ ಜಿಲ್ಲೆಯ ಪ್ರಕೃತಿಯ ಮಡಿಲಲ್ಲಿ ಇರುವ ಒಂದು ಅಪೂರ್ವ ಕ್ಷೇತ್ರ, ಅಲ್ಲಿಗೆ ಹೋದ ಮೇಲೆ ಅದರ ವೈಶಿಷ್ಟ್ಯ ಹೇಳುತ್ತೇನೆ" ಎಂದು ಹೇಳಿ ಶೈಕ್ಷಣಿಕ ಪ್ರವಾಸಕ್ಕೆ ತಯಾರಿ ನಡೆಸಿದೆ.

ಒಂದು ದಿನ ಎರಡು ಬಸ್ಸುಗಳಲ್ಲಿ ಬೆಳಗ್ಗೆ ಬೇಗನೆ ಹೊರಟು-ಉಡುಪಿ, ಕುಂದಾಪುರ, ಭಟ್ಕಳ, ಶಿರಸಿ, ಯಲ್ಲಾಪುರ ದಾಟಿ ಮಧ್ಯಾಹ್ನದ ಹೊತ್ತಿಗೆ 'ಯಾಣ' ಸೇರಿದೆವು. ಸುಲಭದಲ್ಲಿ ಕಲ್ಪಿಸಲಿಕ್ಕೆ ಸಾಧ್ಯವಾಗದಷ್ಟು ದೊಡ್ಡ ಲಾವಾರಸದಿಂದ ಉದ್ಭವಿಸಿದ ಬೃಹತ್ ಬಂಡೆ ಮತ್ತು ಅಂತಹದೇ ಆದರೆ ಗಾತ್ರದಲ್ಲಿ ತುಸು ಸಣ್ಣದಾಗಿರುವ ಇತರ ಬಂಡೆಗಳು ಅಲ್ಲಿದ್ದವು. ಈ ಲೇಖನದ ಜತೆ ನೀಡಿರುವ ಭಾವಚಿತ್ರಗಳಲ್ಲಿ ಕಾಣುವಂತೆ ಅತಿ ದೊಡ್ಡ ಬಂಡೆಗೆ ಊರಿನವರು 'ಭಸ್ಮಾಸುರ' ಬಂಡೆ ಅಂತಾರೆ. ಅಲ್ಲೇ ಸ್ವಲ್ಪ ದೂರದಲ್ಲಿರುವ ಇನ್ನೊಂದು ಬಂಡೆಗೆ 'ಮೋಹಿನಿ' ಬಂಡೆ ಎನ್ನುತ್ತಾರೆ.

ಕಾರಂತ ಸಹೋದರರ ವೈಜ್ಞಾನಿಕ ಬರಹಗಳನ್ನು ಓದಿ ಜ್ಞಾನಾವೇಶಿತನಾಗಿರುವ ನನಗೆ ಅಲ್ಲಿ ಸಂಭ್ರಮವೋ ಸಂಭ್ರಮವಾಗಿತ್ತು. ಯಾಕೆಂದರೆ ನಮ್ಮ ಈ ಭೂಗೋಲ ಕೋಟ್ಯಾಂತರ ವರ್ಷಗಳ ಹಿಂದೆ ಧಗಧಗ ಉರಿಯುತ್ತಿದ್ದ ಬೆಂಕಿ ಚೆಂಡಿನಂತಿತ್ತು, ಈಗ ಆ 'ಬೆಂಕಿ' ಭೂಗೋಳದ ಒಡಲಲ್ಲಿ ಅಡಗಿದೆ. ಜ್ವಾಲಾಮುಖಿ ಸಿಡಿಸಿದ ಲಾವಾರಸ ಹೊರ ಚಿಮ್ಮಿದಾಗ ಈ ಬೃಹತ್ ಬಂಡೆಗಳು ಚಿತ್ರವಿಚಿತ್ರ ಆಕಾರಗಳಲ್ಲಿ ತಲೆ ಎತ್ತಿ ನಿಂತವು. ಆ ಪ್ರದೇಶದ ತುಂಬಾ ಆ ಬಂಡೆಯ ಲಾವಾರಸದ್ದೇ ಕಪ್ಪು ಮಣ್ಣು ಎಲ್ಲೆಂದರಲ್ಲಿ ಹರಡಿ ಬಿದ್ದಿತ್ತು. ದೊಡ್ಡ ಬಂಡೆ ಇದ್ದಂತೆ ಅಲ್ಲಲ್ಲಿ ಪುಟ್ಟ ಪುಟ್ಟ ಬಂಡೆಗಳು ಇದ್ದವು. ಈ ನನ್ನ ವೈಜ್ಞಾನಿಕ ಮಾಹಿತಿಯನ್ನು ನನ್ನ ವಿದ್ಯಾರ್ಥಿಗಳಿಗೆ ತಿಳಿಹೇಳುವ ಉತ್ಸಾಹದಲ್ಲಿ ನಾನಿದ್ದೆ. ಆದರೆ ನನಗೆ ನಿರಾಶೆ ಕಾದಿತ್ತು! ಅಲ್ಲಿದ್ದ ದೊಡ್ಡ ಬಂಡೆಗೆ 'ಭಸ್ಮಾಸುರ' ಎಂದು ಹೆಸರಿದೆ. ಅದರ ಅಡಿಯಲ್ಲಿ ಒಂದು ಶಿವಪಾರ್ವತಿಯರ ದೇವಸ್ಥಾನವಿದೆ. ಆ ದೇವಸ್ಥಾನದೊಳಗೆ ನನ್ನ ಶಿಷ್ಯರ ಗುಂಪು ನುಗ್ಗಿತ್ತು. ಅಲ್ಲಿದ್ದ 'ದೇವರ' ಮೂರ್ತಿಗಳಿಗೆ ಭಯಭಕ್ತಿಯಿಂದ ನಮಿಸಿ, ಅರ್ಚಕರು ನೀಡಿದ ತೀರ್ಥಪ್ರಸಾದವನ್ನು ಸ್ವೀಕರಿಸಿದ ನನ್ನ ವಿದ್ಯಾರ್ಥಿಗಳು ಆ ಅರ್ಚಕರು ಹೇಳುವ 'ಪುರಾಣ'ಕ್ಕೆ ಕಿವಿಗೊಡತೊಡಗಿದರು.

ಹಿಂದೆ ಆ ಬೃಹತ್ ಬಂಡೆಯ ಬಳಿ ಬರಲು ಸರಿಯಾದ ದಾರಿ ಇರಲಿಲ್ಲವಂತೆ. ಆದ್ದರಿಂದ ಅಲ್ಲಿಗೆ ಶಿವರಾತ್ರಿಯ ಹಬ್ಬದ ಸಮಯಕ್ಕೆ ಬರುವ ಯಾತ್ರಿಕರಿಗೆ ಅದೊಂದು ದೊಡ್ಡ ಪ್ರಯಾಸದ ಪ್ರಯಾಣವಾಗಿತ್ತಂತೆ. ಆದ್ದರಿಂದ ಆ ಪ್ರದೇಶಕ್ಕೆ 'ಯಾಣ' ಎನ್ನುವ ಹೆಸರಾಯಿತು. ಈ-ಮಾಹಿತಿ ನಂಬಲರ್ಹವಾಗಿಯೇ ಇದೆ. ನಂತರ ಮಾತ್ರ ಆ ಅರ್ಚಕ ತನ್ನ ಸುಳ್ಳು ಪುರಾಣ ಹೇಳತೊಡಗಿದ.


"ಹಿಂದೆ ಶಿವನ ತಪಸ್ಸು ಮಾಡಿ ವರ ಪಡೆದ ರಾಕ್ಷಸನೊಬ್ಬ-ತಾನು ತಲೆ ಮೇಲೆ ಕೈ ಇಟ್ಟವರೆಲ್ಲಾ ಸಾಯಬೇಕೆಂಬ ವರ ಪಡೆದನಂತೆ. ಆ ವರ ಪಡೆದ ಮೇಲೆ ಆ 'ರಾಕ್ಷಸ' ಶಿವನ ತಲೆ ಮೇಲೆಯೇ ಕೈ ಇಡಲು ಬಂದನಂತೆ. ಆಗ ಶಿವ ವಿಷ್ಣುವಿನ ಸಹಾಯ ಯಾಚಿಸಿದನು. ವಿಷ್ಣು ಮೋಹಿನಿಯ ರೂಪದಲ್ಲಿ ಬಂದು ರಾಕ್ಷಸನನ್ನು ಮರಳು ಮಾಡಿ ಅವನ ಮುಂದೆ ನರ್ತಿಸುತ್ತಾ ಅವನ ತಲೆಯ ಮೇಲೆಯೇ ಅವನು ಕೈ ಇಡುವಂತೆ ಮಾಡಿ ಅವನು ಭಸ್ಮವಾಗುವಂತೆ ಮಾಡಿದನಂತೆ. ಅದೇ ಭಸ್ಮಾಸುರ ಈ ಬೃಹತ್ ಬಂಡೆಯಾಗಿದ್ದಾನಂತೆ. ಪಕ್ಕದಲ್ಲೇ ತೋರುವ ಇನ್ನೊಂದು ಬಂಡೆ ವಿಷ್ಣುವಿನ 'ಮೋಹಿನಿ' ಅವತಾರವಂತೆ..." ಹೀಗೆಲ್ಲಾ ಸುಳ್ಳು ಸುಳ್ಳೇ 'ಹರಿಕತೆ' ಮಾಡಿದ ಅರ್ಚಕ ಹೇಳುತ್ತಿದ್ದ "ಇಲ್ಲಿರುವ ಶಿವನ ಮೂರ್ತಿಯ ಮೇಲೆ ಈಗಲೂ ಹನಿಹನಿಯಾಗಿ ನೀರು ಬೀಳುತ್ತಿದೆ. ಎಂತಹ ಬೇಸಿಗೆಯಲ್ಲೂ ಆ ಹನಿ ನೀರು ಬೀಳುವುದು ನಿಲ್ಲುವುದಿಲ್ಲ..."

ಅರ್ಚಕನ ಈ 'ಹರಿಕತೆ'ಯನ್ನು ನನ್ನ ವಿದ್ಯಾರ್ಥಿಗಳು ಭಯಭಕ್ತಿಯಿಂದ ನಂಬಿದಂತೆ ಮಾಡಿದರು. ಅಲ್ಲಿ ಈಗಲೂ ಹರಿಯುವ ನೀರು ನೋಡಿ "ಎಂತಹ ಪವಾಡ ಸರ್!" ಎಂದು ನನಗೆ ಪಾಠ ಮಾಡಲು ಬಂದರು. ನನಗೆ ಆ ಅರ್ಚಕನ 'ಹರಿಕತೆ' ಕೇಳಿ ಸಿಟ್ಟು ಬಂತು. ನಾನು ಅಲ್ಲೇ ಹೇಳಿದೆ - "ಇವರು ಹೇಳಿದ ವಿಷಯವೆಲ್ಲಾ ಕಟ್ಟುಕತೆ, ಸುಳ್ಳು ಪುರಾಣ. ಇದನ್ನು ನಂಬಬೇಡಿ. ಇಲ್ಲಿರುವ ಬಂಡೆಗಳೆಲ್ಲಾ ಪ್ರಕೃತಿಯ ಅದ್ಭುತಗಳು. ಎಷ್ಟು ಭವ್ಯವಾಗಿದೆ ನೋಡಿ! ಭೂಗೋಳದೊಳಗಿನ ಲಾವಾರಸ ಚಿಮ್ಮಿ ಉಂಟಾದ ಶಿಲಾರಚನೆಗಳು ಇವು. ಈ ರಚನೆಗಳು ನಮಗೆ ನಮ್ಮ ಭೂಗ್ರಹದ ಬಗ್ಗೆ ಅಮೂಲ್ಯ ರಹಸ್ಯಗಳನ್ನು ಬಿಚ್ಚಿಡುತ್ತಿವೆ... ಈ ಬಂಡೆಯ ಮುಂದೆ ನಾವೆಲ್ಲಾ ಎಷ್ಟು ಅಲ್ಪರು ನೋಡಿ! ನಮ್ಮ ಅಹಂಕಾರ ಪುಡಿ ಪುಡಿ ಆಗಬೇಕು, ಹಾಗಿವೆ ಈ ಬೃಹತ್ ಬಂಡೆಗಳು!" ಹೀಗೆಲ್ಲಾ ನಾನು ಭಾಷಣ ಮಾಡುತ್ತಿದ್ದರೆ ಪದವಿ ತರಗತಿಗಳಲ್ಲಿ ಕಲಿಯುತ್ತಿರುವ ನನ್ನ ಶಿಷ್ಯರು ನನ್ನ ವೈಜ್ಞಾನಿಕ ವಿಶ್ಲೇಷಣೆಗೆ ಗಮನ ಕೊಡದೇ ಆ ದೇವಸ್ಥಾನದ ಸುತ್ತು ಬಂದು ನಮಸ್ಕರಿಸುತ್ತಲೇ ಇದ್ದರು. ಅವರಿಗೆ ನನ್ನ ವೈಜ್ಞಾನಿಕ ವಿಶ್ಲೇಷಣೆಗಿಂತಲೂ, 'ಪುರಾಣ'ವೇ ಆಕರ್ಷಕವಾಗಿ ಕಂಡಿತ್ತು!

ನನಗೆ ತುಂಬಾ ಅವಮಾನ ಆಯಿತು. ಛೇ ನಾನು ಶೈಕ್ಷಣಿಕ ಪ್ರವಾಸಕ್ಕೆಂದು ಪದವಿ ತರಗತಿಗಳ ಮಕ್ಕಳನ್ನು ಇಲ್ಲಿಗೆ ಕರೆತಂದರೆ ಆ ದೇವರ ಅರ್ಚಕ ಅದನ್ನು ತೀರ್ಥಯಾತ್ರೆಯನ್ನಾಗಿ ಮಾಡಿಬಿಟ್ಟನಲ್ಲ! ಪರಿಸ್ಥಿತಿ ಹೀಗಿರುವಾಗ ನಮ್ಮ ವಿದ್ಯಾರ್ಥಿಗಳಿಗೆ ನಾವು ವೈಜ್ಞಾನಿಕ ಮನೋಭಾವ ಹುಟ್ಟಿಸುವುದು ಹೇಗೆ! ಎಲ್ಲೆಲ್ಲೂ ಮೂಢನಂಬಿಕೆಗಳೇ ಮೆರೆಯುತ್ತಿರುವಾಗ...! ಎಂದು ವಿಷಾದವಾಯಿತು. 'ಮೋಹಿನಿ ಭಸ್ಮಾಸುರ' ಬಂಡೆಗಳು ನನ್ನನ್ನು ಅಣಕಿಸುತ್ತಿದ್ದಂತೆ ಭಾಸವಾಯಿತು.

● ಡಾ. ಹಯವದನ ಉಪಾಧ್ಯ

ಸಾವು ಮತ್ತು ಪ್ರೇಮ



...ಸಾವು ಸಹಜವಾದದ್ದು ಎನ್ನುವುದು ಎಲ್ಲರಿಗೆ ಗೊತ್ತಿದೆ; ...ಹುಟ್ಟಿದ ಮೇಲೆ ಸಾಯಲೇಬೇಕು. ಆದರೆ ಈ 'ಸಹಜ' ...ಘಟನೆ ಇವತ್ತಿಗೂ ನಿಗೂಢ. ಮನುಷ್ಯನಿಗೆ ತಾನು ಹುಟ್ಟಿದ್ದು ...ಮತ್ತು ಸಾಯಲಿರುವುದು ಸ್ಪಷ್ಟವಾಗುವುದೇ ಇಲ್ಲ. ಮೊನ್ನೆ ...ವಿಮಾನದಲ್ಲಿ ತೀರಿಕೊಂಡ ವೈ.ಎನ್. ಕೃಷ್ಣಮೂರ್ತಿ ...ಅಮೆರಿಕದಿಂದ ಭಾರತಕ್ಕೆ ಬರುತ್ತಿದ್ದರು; ದಾರಿಯಲ್ಲೇ ಅವರಿಗೆ ...ಸಾವಿನ ಸ್ಪರ್ಶವಾಯಿತು. ಆಗ ಅಸಹಾಯಕ ಮಗುವಿನಂತೆ ...'ಹೆಲ್ಪ್ ಮೀ', 'ಹೆಲ್ಪ್!' 'ಉಳಿಸಿ' ಎಂದು ಕೂಗಿಕೊಂಡರು. ...ಅವರಿಗೆ ಎದೆನೋವು ತೀವ್ರವಾಗಿತ್ತೆ, ಸಾವಿನ ಭೀಕರತೆ ...ಕಾಣತೊಡಗಿತ್ತೆ, ಜೀವನ ಮುಗಿಯಿತು ...ಎಂದು ದಿಗ್ಭ್ರಮೆಯಾಗಿತ್ತೆ- ಇವೆಲ್ಲ ...ಪ್ರಶ್ನೆಗಳು ಉತ್ತರವಿಲ್ಲದೆ ಉಳಿದವು. ...ಇಷ್ಟು ಮಾತ್ರ ನಿಜ. ಪುನರ್ಜನ್ಮದಲ್ಲಿ ...ನಂಬಿಕೆ ಇಲ್ಲದ ವ್ಯಕ್ತಿ ಈತ; ಆದರೂ ...ಜ್ಯೋತಿಷಿಗಳು, ಹಸ್ತಸಾಮುದ್ರಿಕೆಯವರು ...ಅವರಲ್ಲಿ ಆಸಕ್ತಿ, ಭಕ್ತಿ ಹುಟ್ಟಿಸುತ್ತಿದ್ದರು.

...ವೈಯನ್ಕೆ ಇಲ್ಲಿ ಬಿಟ್ಟುಹೋಗಿರುವ ...ಅಂಥ ಪರಿಚಿತರಲ್ಲಿ ಹಲವು ರೀತಿಯ ...ಜನ ಬಿಟ್ಟುಹೋಗಿದ್ದಾರೆ. ವೈಯನ್ಕೆ ...ಜೀನಿಯಸ್ ಆಗಿದ್ದಾಗಿನಿಂದಲೂ ನನಗೆ ...ಗೊತ್ತು. ಈತ ಪ್ರಾಮಾಣಿಕವಾಗಿ ...ನಡೆಸಿದ್ದೆವು; ಗೆಳೆಯರೊಬ್ಬರಿಗೆ ...ಸಾಲ ಕೊಟ್ಟು ನೀಡಿದ ...ನಂತರ ... ಹೋಗುತ್ತಿದ್ದರು. ಆದರೆ



ಮನೆಯಲ್ಲಿದ್ದ ತಾಯಿಯ ಬಗ್ಗೆ ಸ್ವಲ್ಪ ಕ್ರೂರವಾಗಿದ್ದರು. 'ಬೆಳಗ್ಗೆ ತಾಯಿಗೆ ಖರ್ಚಿಗೆಂದು ಕೊಟ್ಟುಹೋದ ಐದು ರೂಪಾಯಿ ಹೇಗೆ ಖರ್ಚಾಯಿತೆಂದು ಪೈಸೆ, ರೂಪಾಯಿಗಳ ಲೆಕ್ಕ ಒಪ್ಪಿಸಬೇಕಾಗಿತ್ತು, ಆದರೆ ಇದೇ ವ್ಯಕ್ತಿ ಬೇಂದ್ರೆಯವರನ್ನು ಅಷ್ಟಾಗಿ ಇಷ್ಟಪಡುತ್ತಿರಲಿಲ್ಲ; ಯಾಕೆಂದರೆ ಬೇಂದ್ರೆಯವರಿಗೆ ಇವರ ಪರಿಚಯ ಇರಲಿಲ್ಲ. ಅಡಿಗರೆಂದರೆ ಇವರಿಗೆ ತಮಾಷೆ. ನರಸಿಂಹಸ್ವಾಮಿಗಳ ನವ್ಯಕಾವ್ಯ ಕಂಡು ನಗುತ್ತಿದ್ದರು. ಎಂದೂ ಸಾಹಿತ್ಯವನ್ನು ಸಾಹಿತ್ಯದ ವಿದ್ಯಾರ್ಥಿಗಳ ರೀತಿಯಲ್ಲಿ ನೋಡದ ವೈಯನ್ಕೆ, ರಾಜಕೀಯ, ಸಾಹಿತ್ಯ, ವಿಜ್ಞಾನ ಎಲ್ಲವನ್ನೂ ಒಟ್ಟಾಗಿಯೇ ನೋಡಿ ಗೊಂದಲಗೊಳ್ಳುತ್ತಿದ್ದರು. ಆದರೆ ಯಾವುದು ಪ್ರಾಂತಗಳಲ್ಲಿ ಮೂಡಿಬಂದಿದೆ ಎಂದು ತಿಳಿಯಲು ಕಾತರರಾಗಿರುತ್ತಿದ್ದರು. ಒಮ್ಮೆ ನಾವಿಬ್ಬರೂ ಕೆ.ಎಸ್. ನರಸಿಂಹಸ್ವಾಮಿಗಳ ಮನೆಗೆ ಹೋಗಿದ್ದೆವು. ನರಸಿಂಹಸ್ವಾಮಿ ಕಡುಬಡವರು; ಬಂದವರಿಗೆ ಅನೇಕ ಸಲ ನೀರನ್ನೂ ಕೊಡುತ್ತಿರಲಿಲ್ಲ. 'ಕೊಟ್ಟರೆ ಕಾಫಿ, ನಿಮ್ಮ ಪದ್ಯಕ್ಕೆ ಮಾಫಿ' ಎಂದು ಹೇಳುತ್ತಲೇ ಅವರ ಮನೆ ಪ್ರವೇಶಿಸುತ್ತಿದ್ದರು. ಎಂದೂ ಭೀಕರ ಗಾಂಭೀರ್ಯವನ್ನು ವೈಯನ್ಕೆ ಇಷ್ಟಪಡುತ್ತಿರಲಿಲ್ಲ; ಮಹಾ ಹುಡುಗಾಟವನ್ನು ಕೂಡ. ಗೆಳೆತನದಲ್ಲಿ ಲೆಕ್ಕಾಚಾರ ಮುಖ್ಯ ಎಂದು ಇವರು ನಂಬಿದ್ದರು. ಒಮ್ಮೆ ಅವರು ವಿದ್ಯಾರ್ಥಿಭವನದಲ್ಲಿ ಮಸಾಲೆದೋಸೆ ಕೊಡಿಸಿದರೆ ಅದನ್ನು ನಾವು ಹಿಂದಿರುಗಿಸುವವರೆಗೆ ಬಿಡುತ್ತಿರಲಿಲ್ಲ, ಆದರೆ ಇವರಲ್ಲಿ ವಿಚಿತ್ರ ಕ್ರೌರ್ಯ ಇತ್ತು. ಇದು ಇವರ ಪುಕ್ಕಲುತನದ ಅಭಿವ್ಯಕ್ತಿ ಎಂದು ನನಗೆ ಅನ್ನಿಸುತ್ತಿತ್ತು.

ಸಾವು ಹೇಗೆ ಬದುಕಿರುವವರಲ್ಲಿ ನೆನಪುಗಳನ್ನು ಬದಲಾಯಿಸುತ್ತದೆ! ಮೊನ್ನೆ ಒಬ್ಬ 'ನೀವು ನಿಮ್ಮ ಆತ್ಮಕಥನ 'ಹುಳಿಮಾವಿನ ಮರ'ದಲ್ಲಿ ವೈಯನ್ಕೆ ಬಗ್ಗೆ ಬರೆದದ್ದನ್ನೇ ಅಚ್ಚುಮಾಡಬಹುದಿತ್ತು" ಅಂದ. ನಾನು ಯೋಚಿಸಿದೆ. 'ಅದು **open-ended**. ಬದುಕಿರುವಾಗ ಬರೆದದ್ದು, ಅದು ಇಲ್ಲಿಗೆ ಸರಿಹೋಗುವುದಿಲ್ಲ' ಅಂದೆ. ಯಾಕೆಂದರೆ ನನ್ನ ಮನಸ್ಸಿನ ಎರಕದಲ್ಲಿ ನೆನಪುಗಳು ವಿಚಿತ್ರ ರೀತಿಯಲ್ಲಿ ಗಸ್ತು ತಿರುಗತೊಡಗಿದ್ದವು. ಸಾವು ಎಲ್ಲಕ್ಕೆ ವಿಚಿತ್ರ ಬಣ್ಣ ರೂಪ ನೀಡಿತ್ತು.

ಆಲನಹಳ್ಳಿ ಕೃಷ್ಣ ಡಿ.ಆರ್. ನಾಗರಾಜ, ಈಗ ವೈಯನ್ಕೆ. ಎಲ್ಲ ಸಮಕಾಲೀನರೂ ವಿದಾಯ ಹೇಳುತ್ತಿದ್ದಾರೆ. ಕೆಲವರು ಹುಂಬತನದಿಂದಾಗಿ, ಇನ್ನು ಕೆಲವರು ತೀರಾ ಹುಷಾರಾಗಿ ಬದುಕಿದವರಾಗಿ. ನಾಗರಾಜ ಮಹಾ ವ್ಯಾಮೋಹಿ; ತನ್ನ ಬಗ್ಗೆ, ಗೆಳೆಯರ ಬಗ್ಗೆ, ಮೌಲ್ಯಗಳ ಬಗ್ಗೆ. ಕೃಷ್ಣ ಮಹಾ ತುಂಟ. ಈ ಕೃಷ್ಣ ಎಂದೂ ನನ್ನೊಂದಿಗೆ ಜಗಳ ಆಡಲಿಲ್ಲ; ಎಂದೂ ನನ್ನ ಬಗ್ಗೆ ಎಲ್ಲಿಯೂ ಕೆಟ್ಟದಾಗಿ ಮಾತಾಡಿಕೊಂಡು ಓಡಾಡಲಿಲ್ಲ, ಆದರೆ ಈತನಿಗೆ ಡಯಾಬಿಟಿಸ್‌ನಿಂದಾಗಿ ಕಣ್ಣು ಮಂದವಾಗಿತ್ತು; ಶಕ್ತಿ ಉಡುಗಿತ್ತು, ಹೃದಯ ದುರ್ಬಲವಾಗಿತ್ತು, ಈ ಬಗ್ಗೆ ಎಚ್ಚರಿಸಿದರೆ ಎಂದೂ ಕೇಳುತ್ತಿರಲಿಲ್ಲ; 'ನನಗೇನಾಗ್ತತೆ ಬಿಡಿ ಸಾರ್' ಎಂದು ಈತ ನಕ್ಕುಬಿಡುತ್ತಿದ್ದ. ನಾಗರಾಜನೂ ಅಷ್ಟೆ. ಕೆ.ಸದಾಶಿವ, ವೈಯನ್ಕೆ-ಎಲ್ಲರೂ ಒಂದೊಂದು ರೀತಿಯಲ್ಲಿ ಸಾವಿಗಾಗಿ ಹೆದರಿದವರು; ಸಾವನ್ನು ಸ್ವಾಗತಿಸಿದವರು. ಮನುಷ್ಯ ಮೂಲಭೂತವಾಗಿ ದುರ್ಬಲ; ಆತನ ಸುಖದಲ್ಲೇ ಅಸುಖ ಬೆಳೆಯುತ್ತಾ ಹೋಗುತ್ತದೆ; ಸಾವು ಬದುಕಿಗಿಂತ ಚೆನ್ನ ಅನ್ನಿಸತೊಡಗುತ್ತದೆ. ತೀವ್ರವಾಗಿ ಬದುಕಿದವರಿಗೆ ತೀವ್ರವಾದ ಸಾವು ಬರುತ್ತದೆ. ಇವೆಲ್ಲ ಊಹೆ ಇರಬಹುದು.

● 07 ಜುಲೈ, 1999

ಭಾರತೀಯ ಜನರಂಗ ಭೂಮಿಗೆ 'ಇಪ್ಟಾ'ದ ಕೊಡುಗೆ



'ಇಂಡಿಯನ್ ಪೀಪಲ್ಸ್ ಥೇಯೇಟರ್ ಅಸೋಸಿಯೇಶನ್' ಅಂದರೆ ಹೊಸ ಪೀಳಿಗೆಯವರಿಗೆ ಅರ್ಥವಾಗುತ್ತೋ ಇಲ್ಲವೋ ಗೊತ್ತಿಲ್ಲ, ಆದರೆ 'ಇಪ್ಟಾ' ಅಂದರೆ ಬುದ್ಧಿಜೀವಿಗಳು, ಸಾಹಿತಿಗಳು, ರಂಗಭೂಮಿ ಯುವರಿಗಷ್ಟೇ ಅಲ್ಲ, ಹಲವಾರು ಹಳ್ಳಿ-ಪಟ್ಟಣಗಳ ಸಾಮಾನ್ಯ ಜನರಿಗೂ ತಕ್ಷಣ ಗೊತ್ತಾಗುತ್ತದೆ ಬೀದಿ ನಾಟಕದವರು ಅಂತ. ಜನ ಸಾಮಾನ್ಯರನ್ನು ಎಚ್ಚರಿಸುವಂತಹ, ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವಂತಹ ನಾಟಕಗಳನ್ನು ಆಡುವ 'ಇಪ್ಟಾ' ತಂಡಗಳು ಭಾರತದ 22 ರಾಜ್ಯಗಳಲ್ಲಿ ಈಗಲೂ ಸಕ್ರಿಯವಾಗಿವೆ. 'ಇಪ್ಟಾ' ಕಲಾವಿದರು ಹಾಡುವ ಹೋರಾಟದ ಹಾಡುಗಳನ್ನು ಜನ ಈಗಲೂ ನೆನೆಸಿಕೊಳ್ಳುತ್ತಾರೆ. 'ಇಪ್ಟಾ' ಒಂದು ಸಾಮಾಜಿಕ ಬದ್ಧತೆ ಇರುವ, ಸಮಸಮಾಜದ ಪರಿಕಲ್ಪನೆ ಹೊಂದಿರುವ ಸಾಂಸ್ಕೃತಿಕ ಸಂಘಟನೆ.

ಇಪ್ಟಾ ಹುಟ್ಟಿದ್ದು 1942ರಲ್ಲಿ, ಅಂದರೆ ಸ್ವಾತಂತ್ರ್ಯ ಪೂರ್ವದಲ್ಲಿ, ಅದು ಎರಡನೇ ವಿಶ್ವ ಯುದ್ಧದ ಸಂಕಷ್ಟದ ಕಾಲ. ಬ್ರಿಟಿಷರು ಭಾರತವನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡು ಸರ್ವಾಧಿಕಾರಿ ಆಡಳಿತ ನಡೆಸುತ್ತಿದ್ದ ಕಾಲ. ಭಾರತದ ಜನತೆ ಸ್ವಾತಂತ್ರ್ಯಕ್ಕಾಗಿ ಪರಿತಪಿಸುತ್ತಿದ್ದ ಕಾಲ. ಸ್ವಾತಂತ್ರ್ಯ ಹೋರಾಟದ ಸಾಗರದಲ್ಲಿ ಸಾವಿರಾರು ನದಿಗಳು ಹರಿಯತೊಡಗಿದ್ದವು. ಭಾರತದ ಸ್ವಾತಂತ್ರ್ಯದ ಸಂಗ್ರಾಮಕ್ಕೆ ಪೂರಕವಾಗಿ ಸೈದ್ಧಾಂತಿಕ ಹಿನ್ನೆಲೆಯ, ಸಾಂಸ್ಕೃತಿಕ ನಾಯಕತ್ವವನ್ನು ಒದಗಿಸಿದ್ದು 'ಇಂಡಿಯನ್ ಪೀಪಲ್ಸ್ ಥೇಯೇಟರ್ ಅಸೋಸಿಯೇಶನ್.'

'ಇಪ್ಟಾ' ಅಸ್ತಿತ್ವಕ್ಕೆ ಬರಲು 1942ರ ಮಾನವ ನಿರ್ಮಿತ 'ಬಂಗಾಳದ ಬರ' ಕೂಡಾ ಒಂದು ಪ್ರಮುಖ ಕಾರಣವಾಗಿತ್ತು, ಆ ಕ್ಷಾಮ ಲಕ್ಷಾಂತರ ಜನ ಮತ್ತು ಜಾನುವಾರುಗಳನ್ನು ಬಲಿತೆಗೆದುಕೊಂಡಿತು. ಲಕ್ಷಾಂತರ ಜನ ಅನ್ನ ನೀರು ಇಲ್ಲದೇ ಕಂಗಾಲಾದರು. ಈ ದುರಂತ ಘಟನೆ ಅನೇಕ ಪ್ರಗತಿಪರ ಬರಹಗಾರರು ಮತ್ತು ಕಲಾವಿದರು ಒಂದಾಗಲು ಪ್ರೇರಣೆಯಾಯಿತು. ಬರ ಪೀಡಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಹಣ, ಆಹಾರ ಸಂಗ್ರಹಿಸಲು ಬಿನಯ್ ರಾಯ್ ನೇತೃತ್ವದಲ್ಲಿ 'ಸಾಂಸ್ಕೃತಿಕ ಪಡೆ'ಯೊಂದು ಸಂಘಟಿತವಾಯ್ತು, ಈ ಪಡೆಯ ಕಾರ್ಯಕರ್ತರು ದೇಶಾದ್ಯಂತ ಹಲವಾರು ಕಡೆ ವಾಮಿಕ್ ಜಾನ್‌ಪುರಿಯವರ 'ಭೂಕಾ ಹೈ ಬೆಂಗಾಲ್' ನಾಟಕವನ್ನು ಪ್ರದರ್ಶಿಸಿ, ಬೀದಿಬೀದಿಗಳಲ್ಲಿ ಹಾಡುಗಳನ್ನು ಹಾಡಿ ಹಣ ಸಂಗ್ರಹಿಸಿ ಕ್ಷಾಮಪೀಡಿತರ ನೋವಿಗೆ ದನಿಯಾದರು. ಈ ಸಾಂಸ್ಕೃತಿಕ ಪಡೆಯ ಪ್ರೇರಣೆಯಿಂದಾಗಿ ಅನೇಕ ಸಾಂಸ್ಕೃತಿಕ ತಂಡಗಳು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಜನಜಾಗೃತಿಯ ಉದ್ದೇಶದಿಂದ ಹುಟ್ಟಿಕೊಂಡವು.

ಆಗ ಭಾರತೀಯ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾಮ್ರೇಡ್ ಪಿ.ಸಿ.ಜ್ಯೋಷಿಯವರು ಇಂತಹ ಹಲವಾರು ಪ್ರತ್ಯೇಕ ತಂಡಗಳನ್ನು ಸೈದ್ಧಾಂತಿಕ ತಳಹದಿಯ ಮೇಲೆ ಒಂದೇ ವೇದಿಕೆಯಡಿ ತರಲು ಶ್ರಮಿಸಿದರು. ಜೊತೆಗೆ ಪ್ರಗತಿಪರ ಬರಹಗಾರರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದ ಸಾಜದ್ ಜಹೀರ್ ಕೂಡಾ ಬರಹಗಾರರನ್ನು ಒಂದು ಬ್ಯಾನರ್ ಕೆಳಗೆ ಸಂಘಟಿಸಿದರು. ಈ ಎಲ್ಲಾ ರೀತಿಯ ಪ್ರಯತ್ನಗಳ ಫಲವಾಗಿ ಇಂಡಿಯನ್ ಪೀಪಲ್ಸ್ ಥೇಯೇಟರ್ ಅಸೋಸಿಯೇಶನ್ (ಇಪ್ಟಾ) ಜನ್ಮ ತಾಳಿತು.

ಭಾರತೀಯ ಕಮ್ಯೂನಿಸ್ಟ್ ಪಕ್ಷದ ಪ್ರಗತಿಪರ ಆಲೋಚನೆಗಳ ಆಶಯಕ್ಕೆ ಪೂರಕವಾಗಿ 'ಕಲೆಗಾಗಿ ಕಲೆಯಲ್ಲ, ಜನರಿಗಾಗಿ ಕಲೆ' ಎನ್ನುವ ಜನಪರ ಸಿದ್ಧಾಂತ 'ಇಪ್ಟಾ'ದ ಧೋರಣೆ ಆಯಿತು. ಎಡಪಂಥೀಯ ರಂಗಭೂಮಿ (ಲೆಫ್ಟಿಸ್ಟ್ ಥೇಯೇಟರ್) ಎಂದೇ ಹೆಸರಾಗಿದ್ದ 'ಇಪ್ಟಾ' ಕಳೆದ ಏಳು ದಶಕಗಳಿಂದ ಭಾರತದಾದ್ಯಂತ ಬಹುತೇಕ ರಾಜ್ಯಗಳಲ್ಲಿ ಸಕ್ರಿಯವಾಗಿದೆ.

ಸಾಂಸ್ಕೃತಿಕ ಎಚ್ಚರವನ್ನು ದೇಶದ ಜನತೆಯಲ್ಲಿ ತರುವುದೇ ಇಪ್ಟಾದ ಪ್ರಮುಖ ಗುರಿಯಾಗಿದೆ. ಕಲೆ ಎಂಬುದು ಕೇವಲ ಮನರಂಜನೆಗಾಗಿ ಮಾತ್ರವಲ್ಲ, ಅದು ಜನರಲ್ಲಿ ಜಾಗೃತಿ ಮೂಡಿಸುವ ಪರಿಕರವಾಗಿ ಬಳಕೆಯಾಗಬೇಕು ಎನ್ನುವ ಮಹತ್ವಾಕಾಂಕ್ಷೆ ಇಟ್ಟುಕೊಂಡ ಈ ಸಾಂಸ್ಕೃತಿಕ ಸಂಘಟನೆಯು ಪ್ರದರ್ಶಕ ಕಲೆಯ ಎಲ್ಲಾ ಆಯಾಮಗಳನ್ನು ಹೊಸ ದೃಷ್ಟಿಕೋನದಿಂದ ಪ್ರಸ್ತುತಪಡಿಸುತ್ತಾ ಬಂದಿದೆ. ಜನರ ನಡುವೆಯೇ ಇದ್ದು ಜನತೆಯ ಸಂಕಷ್ಟಗಳನ್ನು ಅರಿತು ಜನರಲ್ಲಿ ಸಾಂಸ್ಕೃತಿಕ ಮತ್ತು ರಾಜಕೀಯ ಅರಿವನ್ನು ಮೂಡಿಸಲು ನಾಟಕ, ಬೀದಿನಾಟಕ, ಹಾಡು, ನೃತ್ಯ ಸಂಗೀತಗಳನ್ನು ಬಳಸುತ್ತಾ ಬಂದ 'ಇಪ್ಟಾ' ರಂಗಮಂದಿರದತ್ತ ಜನರನ್ನು ಕರೆತರುವ ಬದಲು ಬೀದಿನಾಟಕಗಳ ಮೂಲಕ ಜನರತ್ತಲೇ ರಂಗಭೂಮಿಯನ್ನು ತೆಗೆದುಕೊಂಡು ಹೋಗುವ ಕೆಲಸವನ್ನು ಮಾಡಿತು. ನಿಜವಾದ ಅರ್ಥದಲ್ಲಿ 'ಇಪ್ಟಾ' ಜನತೆಗಾಗಿಯೇ ಇರುವ ಜನತಾ ರಂಗಭೂಮಿ ಅರ್ಥಾತ್ 'ಪೀಪಲ್ಸ್ ಥೇಯೇಟರ್' ಆಗಿದೆ.

ಭಾರತೀಯ ಸಂಸ್ಕೃತಿಯಲ್ಲಿರುವ ಜೀವಂತಿಕೆಯನ್ನು ಅಳವಡಿಸಿಕೊಂಡು ಪ್ರಗತಿಪರ ಚಿಂತನೆಗಳನ್ನು ರೂಢಿಸಿಕೊಂಡ ಇಪ್ಟಾ ಕಲಾ ಜಗತ್ತಿಗೆ ಅಪ್ರತಿಮ ಕ್ರಿಯಾಶೀಲ ಕೊಡುಗೆಯನ್ನು ಕೊಟ್ಟಿತು. ಪ್ರಗತಿಪರ ನಿಲುವು ಮತ್ತು ಕ್ರಾಂತಿಕಾರಿ ವಿಚಾರ ಹಾಗೂ ಆಚರಣೆಗಳಿಂದಾಗಿ ಇಪ್ಟಾದ ಸದಸ್ಯರು ಅನೇಕ ಬಾರಿ ಆಳುವ ಶಕ್ತಿಗಳಿಂದ ದಮನಕ್ಕೊಳಗಾದರೂ ಲೆಕ್ಕಿಸಲಿಲ್ಲ, ಮುಂದಿಟ್ಟ ಹೆಜ್ಜೆ ಹಿಂದಿಡಲಿಲ್ಲ.

"ಸಾರೆ ಜಹಾಸೆ ಅಚ್ಛಾ..." ಹಾಡಿನ ಜನಪ್ರಿಯತೆಯ ಹಿಂದೆ ಇಪ್ಟಾದ ಕೊಡುಗೆಯೂ ಇದೆ ಎಂದರೆ ನಂಬುತ್ತೀರಾ? ವಾಸ್ತವವಾಗಿ ಕವಿ ಇಕ್ಬಾಲ್ ಅವರು ರಚಿಸಿದ "ಸಾರೆ ಜಹಾಸೆ ಅಚ್ಛಾ..." ಎಂಬ ದೇಶಪ್ರೇಮದ ಗೀತೆಗೆ ಪಂಡಿತ್‌ಗೆ ರವಿಶಂಕರ್ ಸ್ವರಸಂಯೋಜನೆ ಮಾಡಿದ್ದರು. ಇಪ್ಟಾದ ಕೇಂದ್ರ ಸಮಿತಿ 1944ರಲ್ಲಿ ಈ ಹಾಡನ್ನು ಪ್ರಸ್ತುತಪಡಿಸಿತು. ಮುಂದೆ ಈ ಹಾಡು ಎಲ್ಲಾ ವಲಯಗಳಲ್ಲೂ ಜನಪ್ರಿಯವಾಗಿದ್ದರಿಂದ ಹಲವಾರು ಬರಹಗಾರರು ಅನೇಕ ಜನಜಾಗೃತಿಯ ಹಾಡುಗಳನ್ನು ರಚಿಸಿದರು. ಅವುಗಳನ್ನು ಇಪ್ಟಾದ ಕಲಾವಿದರು ಜನರ ನಡುವೆ ಹಾಡುವ ಮೂಲಕ ಸಾಮಾಜಿಕ ಎಚ್ಚರವನ್ನು ಮೂಡಿಸಿದರು. ಇದರಿಂದಾಗಿ 'ಜನಸಂಗೀತ' ಎಂಬ ಪರಂಪರೆ ಬೆಳೆಯತೊಡಗಿತು.


ಇಪ್ಟಾ ಪ್ರಯೋಗಿಸಿದ ನೃತ್ಯ-ಸಂಗೀತ ನಾಟಕಗಳಾದ 'ಭಾರತ್ ಕೀ ಆತ್ಮಾ' ಮತ್ತು 'ಅಮರ್ ಭಾರತ್'ಗಳು ಐತಿಹಾಸಿಕ ಕೊಡುಗೆಗಳಾಗಿವೆ. ಸಾಂಪ್ರದಾಯಿಕ ಜಾನಪದ ಪ್ರಕಾರಗಳಿಗೆ ಸಮಕಾಲೀನತೆಯನ್ನು ತಂದ ಜ್ಯೋತಿರ್ಮಯಿ ಮೊಯಿತ್ರಾ ಅವರ 'ನವಜೀವನ ಗಾನ್', ಆಂಧ್ರಪ್ರದೇಶದಲ್ಲಿ ಡಾ.ರಾಜಾರಾವ್ ಪ್ರಯೋಗಿಸಿದ 'ಬುರ್ರ ಕಥಾ', 'ವೀಧಿ ನಾಟಕ', ಹರಿಕಥೆಗಳು ಇಪ್ಟಾದ ಅಪೂರ್ವ ಪ್ರದರ್ಶನಗಳಾಗಿವೆ.

ಭಾರತದ ರಂಗಭೂಮಿಗೆ ಇಪ್ಟಾ ಹೊಸ ದಿಕ್ಕನ್ನೇ ತೋರಿಸಿತು. ಹಳೆಯ ಸಾಂಪ್ರದಾಯಿಕ ಪ್ರದರ್ಶನ ಪದ್ಧತಿಗಳನ್ನು ಒಡೆದು ಹಾಕಿ, ಹೊಸ ದೃಷ್ಟಿಕೋನದಲ್ಲಿ ನಾಟಕಗಳನ್ನು ಪ್ರಸ್ತುತಪಡಿಸಲಾರಂಭಿಸಿತು. ಜನರ ನೋವು, ದುಃಖ, ಕನಸು ಮತ್ತು ಮಹತ್ವಾಕಾಂಕ್ಷೆಗಳನ್ನು ಕಲಾಪ್ರಕಾರಗಳಲ್ಲಿ ಪ್ರಸ್ತುತಪಡಿಸಿದ ರೀತಿ ಅಮೋಘವಾಗಿತ್ತು. ಬಂಗಾಳದ ಬಿಜಾನ್ ಭಟ್ಟಾಚಾರ್ಯರ "ನವಾನ್ನ" (ಹೊಸ ಬೆಳೆ) ನಾಟಕವು ಸಾಂಪ್ರದಾಯಿಕತೆಯನ್ನು ಒಡೆದು ಕಟ್ಟುವ ರೀತಿಗೆ ಸಾಕ್ಷಿಯಾಯಿತು. ಶಂಕರ-ವಾಸಿರೆಡ್ಡಿಯವರ 'ಮಾ ಭೂಮಿ', ತೋಫಿಲ್ ಬಾಸಿಯವರ 'ತುಮ್ನೆ ಮುಜೆ ಕಮ್ಯೂನಿಸ್ಟ್ ಬನಾಯಾ' ನಾಟಕಗಳು ಆಧುನಿಕ ರಂಗಭೂಮಿಯಲ್ಲಿ ಹೊಸ ಇತಿಹಾಸವನ್ನೇ ಸೃಷ್ಟಿಸಿದವು. ಡಾ.ರಶೀದ್ ಜಹಾನ್, ಕ್ವಾಜಾ ಅಹಮದ್ ಅಬ್ಬಾಸ್, ಅಲಿ ಸರ್ದಾರ್ ಜಾಫ್ರಿ, ಸರ್‌ಮಾಲ್ಕರ್, ಬಲವಂತ ಗಾರ್ಗಿ, ಜಸ್ವಂತ ಟಕ್ಕರ್, ಮಾಮಾ ವರೇರ್ಕರ್, ಆಚಾರ್ಯ ಅತ್ರೇಯ ಮತ್ತು ಇತರ ಹಲವಾರು ರಂಗದಿಗ್ಗಜರು ವಾಸ್ತವವಾದಿ ರಂಗಭೂಮಿಯನ್ನು 'ಇಪ್ಟಾ'ದ ಮೂಲಕ ಹುಟ್ಟುಹಾಕಿದರು.

ಬಲರಾಜ್ ಸಹಾನಿ, ಶಂಭುಮಿತ್ರ, ಹಬೀಬ್ ತನ್ವೀರ್, ಭೀಷ್ಮ ಸಹಾನಿ, ದೀನಾ ಪಾಠಕ್, ರಾಜೇಂದ್ರ ರಘುವಂಶಿ, ಆರ್.ಎಂ.ಸಿಂಗ್, ಉತ್ಪಲ್ ದತ್, ಎ.ಕೆ.ಹಾನಗಲ್, ರಾಮೇಶ್ವರ್ ಸಿಂಗ್ ಕಶ್ಯಪ್, ಶೈಲಾ ಭಾಟಿಯಾ... ಹೀಗೆ ಹಲವಾರು ನಟ, ನಟಿ, ನಿರ್ದೇಶಕರು ಇಪ್ಟಾದ ಮೂಲಕ ಸಾಂಸ್ಕೃತಿಕ ಲೋಕದ ಆಯಾಮಗಳನ್ನು ವಿಸ್ತರಿಸಿದರು.

ಆಗತಾನೇ ಚಲನಚಿತ್ರರಂಗ ಭಾರತದಲ್ಲಿ ಜನಪ್ರಿಯವಾಗತೊಡಗಿತ್ತು. ಈ ಮಾಧ್ಯಮವನ್ನೂ ಬಳಸಿ ತಮ್ಮ ಜನಪರ ಆಶಯಗಳನ್ನು ಜನರಿಗೆ ತಲುಪಿಸಲು ಸಾಧ್ಯ ಎಂಬುದನ್ನು ಮನಗಂಡು 'ಇಪ್ಟಾ'ದಲ್ಲಿ ಸಕ್ರಿಯವಾಗಿದ್ದ ಹಲವಾರು ಪ್ರತಿಭಾವಂತರು ಸ್ವಾತಂತ್ರ್ಯದ ನಂತರ ಸಿನಿಮಾ ಮಾಧ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡರು.





ಇಪ್ಟಾ ಬೀದಿ ನಾಟಕಗಳ ದೃಶ್ಯಗಳು

ಹೀಗಾಗಿ ಇಪ್ಟಾ 1946ರಲ್ಲಿ 'ದರ್ತಿ ಕೆ ಲಾಲ್' ಎನ್ನುವ ಸಿನೆಮಾವನ್ನೂ ನಿರ್ಮಿಸಿತು. ಬಿಜೋನ್ ಭಟ್ಟಾಚಾರ್ಯರ 'ನವಾನ್ನ' ಮತ್ತು 'ಅಂತಿಮ್ ಅಭಿಲಾಶಾ' ಎಂಬ ಎರಡು ನಾಟಕಗಳನ್ನಾಧರಿಸಿದ ಈ ಸಿನಿಮಾ ಖ್ವಾಜಾ ಅಹ್ಮದ್ ಅಬ್ಬಾಸ್ ಅವರ ನಿರ್ದೇಶನದಲ್ಲಿ ತಯಾರಾಯಿತು. ಅಲಿ ಸರ್ದಾರ್ ಜಾಫ್ರಿ ಬರೆದ ಹಾಡುಗಳಿಗೆ ಪಂಡಿತ್ ರವಿಶಂಕರ್ ಸಂಗೀತ ನೀಡಿದರು. ಪ್ರೇಮ್ ಧವನ್, ಶಂಭು ಮಿತ್ರಾ, ತೃಪ್ತಿ ಮಿತ್ರಾ, ಬಲರಾಜ್ ಸಹಾನಿ, ದಮಯಂತಿ ಸಹಾನಿ, ಉಷಾ ದತ್ತ ತರಹದ ಇಪ್ಟಾದ ದಿಗ್ಗಜರು ಈ ಚಲನಚಿತ್ರದಲ್ಲಿ ನಟಿಸಿದ್ದರು.



ಸಿನಿಮಾದ ಆರಂಭದ ದಿನಗಳಲ್ಲಿ ಹಿಂದಿ ಮತ್ತು ಬಂಗಾಳಿ ಚಲನಚಿತ್ರರಂಗವನ್ನು ಇಪ್ಟಾದಲ್ಲಿ ಸಕ್ರಿಯರಾಗಿದ್ದ ಪ್ರತಿಭೆಗಳೇ ಆಳಿದರು. ಬಲರಾಜ್ ಸಹಾನಿ ಬಾಂಬೆಯ ಇಪ್ಟಾ ಮತ್ತು ಸಿನಿಮಾರಂಗಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

1946ರಿಂದ ಅವರು ಕಾಲವಶರಾದ 1973 ರವರೆಗೆ ಬಲರಾಜ್ ಸಹಾನಿ 82 ಸಿನಿಮಾಗಳಲ್ಲಿ ನಟಿಸಿದ್ದರು. 200ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದ ಎ.ಕೆ.ಹಾನಗಲ್ ಇಪ್ಟಾದ ಅಧ್ಯಕ್ಷರೂ ಆಗಿದ್ದರು. ಕರ್ನಾಟಕದಿಂದ ಬಾಂಬೆಗೆ ಹೋಗಿ ಇಪ್ಟಾದಲ್ಲಿ ತಮ್ಮನ್ನು ತೊಡಗಿಸಿಕೊಂಡ ಎಂ.ಎಸ್.ಸತ್ಯೂ ಅವರು ಹಲವಾರು ನಾಟಕಗಳನ್ನು ನಿರ್ದೇಶಿಸುವುದರ ಜೊತೆಗೆ ಏಳು ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. 'ಏಕ್ ಥಾ ಚೋಟು ಏಕ್ ಥಾ ಮೋಟು', 'ಗರಂ ಹವಾ', 'ಕನ್ನೇಶ್ವರರಾಮ', 'ಸೂಖಾ' (ಬರ).... ಮುಂತಾದ ಹೊಸ ಅಲೆಯ ಸಿನಿಮಾಗಳು ಅವರ ಜನಪರ ಕಾಳಜಿಗೆ ಸಾಕ್ಷಿಗಳಾದವು.

1947ರಲ್ಲಿ ಬ್ರಿಟೀಷರಿಂದ ಭಾರತಕ್ಕೆ ಮುಕ್ತಿ ಸಿಕ್ಕಾಗ "ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಇಪ್ಟಾ ಕೂಡಾ ವಿಸರ್ಜನೆಗೊಳ್ಳಬೇಕು. ಯಾಕೆಂದರೆ ಸಾಮ್ರಾಜ್ಯಶಾಹಿಗಳಿಂದ ಸ್ವಾತಂತ್ರ್ಯ ಪಡೆಯುವ ಇಪ್ಟಾದ ಆಶಯ ಈಡೇರಿತು" ಎಂದು ಕೆಲವರು ಒತ್ತಾಯಿಸಿದರು. ಆದರೆ ಸಮಾನತೆ ಬರದೇ ಸ್ವತಂತ್ರಕ್ಕೆ ಬೆಲೆ ಇಲ್ಲ ಎಂದು ಹಲವರು ಪ್ರತಿಪಾದಿಸಿದರು. ಕೊನೆಗೆ 1960ರಲ್ಲಿ ಇಪ್ಟಾ ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಲ್ಲಿ ಹಂಚಿಹೋಯಿತು. ಇಪ್ಟಾದ ಪ್ರಮುಖರು ತಮ್ಮದೇ ಆ[...] ರಂಗತಂಡಗಳನ್ನು ಕಟ್ಟಿಕೊಂಡು ತಮ್ಮ ತಮ್ಮ ರಾಜ್ಯಗಳ[...] ಕ್ರಿಯಾಶೀಲರಾದರು. ಒಂದು ರೀತಿಯಲ್ಲಿ ಇಪ್ಟಾ ವಿಕೇಂದ್ರಿಕರಣಗೊಂಡಿತು. ಇನ್ನೊಂದು ಅರ್ಥದಲ್ಲಿ ವ್ಯಕ್ತಿಕೇಂದ್ರಿತ ರಂಗತಂಡಗಳಾಗಿ ಹಂಚಿಹೋಯಿತು.

ಬೇರೆ ಬೇರೆ ರಾಜ್ಯಗಳಲ್ಲಿ ಇಪ್ಟಾ ಬೇರೆ ಬೇ[ರೆ] ಹೆಸರುಗಳಲ್ಲಿ ತನ್ನ ಸಾಂಸ್ಕೃತಿಕ ಚಳವಳಿ ಮತ್ತು ಚಟುವಟಿಕೆಗಳನ್ನು ಮುಂದುವರೆಸಿತ್ತು, ಕರ್ನಾಟಕದಲ್ಲಿ 'ಭಾರತೀಯ ಜನಕಲಾ ಸಮಿತಿ', ಬೇರೆ ರಾಜ್ಯಗಳಲ್ಲಿ 'ಜನ ನಾಟ್ಯ ಮಂಚ್', 'ಜನ ಸಂಸ್ಕೃತಿ ಮಂಚ್' ಮುಂತಾದ ಹೆಸರುಗಳಲ್ಲಿ ಇಪ್ಟಾ ಮುಂದುವರೆದಿತ್ತು. 1980ರಲ್ಲಿ ಭಾರತದಾದ್ಯಂತ ಬೇರೆ ಬೇರೆ ಹೆಸರುಗಳಲ್ಲಿ ಕೆಲಸ ಮಾಡುತ್ತಿ[ದ್ದ] ಎಲ್ಲಾ ಇಪ್ಟಾದ ಘಟಕಗಳನ್ನು ರಾಷ್ಟ್ರಮಟ್ಟದಲ್ಲಿ ಮರುಸಂಘಟಿಸುವ ಕೆಲಸಕ್ಕೆ ಚಾಲನೆ ನೀಡಲಾಯಿತು.

1986ರಲ್ಲಿ ಹೈದರಾಬಾದ್‌ನಲ್ಲಿ ನಡೆದ ಇಪ್ಟಾದ ರಾಷ್ಟ್ರೀಯ ಸಮ್ಮೇಳನವನ್ನು ಹೆಸರಾಂತ ಚಲನಚಿತ್ರ ನಿರ್ದೇಶ[ಕ] ಶ್ಯಾಮ್ ಬೆನಗಲ್ ಅವರು ಉದ್ಘಾಟಿಸಿದರು. ಖ್ಯಾತ ನ[ಟಿ] ಶಬಾನಾ ಅಜ್ಮಿಯವರ ತಂದೆ ಕೈಫಿ ಅಜ್ಮಿ ಇಪ್ಟಾ[ದ] ಅಧ್ಯಕ್ಷರಾಗಿ ಆಯ್ಕೆಗೊಂಡರು. ಎ.ಕೆ.ಹಾನಗಲ್, ಎಂ.ಎಸ್.ಸತ್ಯು, ರಾಜೇಂದ್ರ ರಘುವಂಶಿ, ದೀನಾ ಪಾಠಕ್, ಭೀಷ್ಮ ಸಹಾನಿ, ಮುಂತಾದವರು ಉಪಾಧ್ಯಕ್ಷರಾ[ಗಿ] ಆಯ್ಕೆಯಾದರು. ಗೋವಿಂದ್ ವಿದ್ಯಾರ್ಥಿ ಪ್ರಧಾ[ನ] ಕಾರ್ಯದರ್ಶಿಯಾದರು.


"ಇಪ್ಟಾದ ಹಳೆಯ ಮತ್ತು ಹೊಸ ತಲೆಮಾರಿ[ನ] ಸಂಚಾಲಕರುಗಳಾದ ನಾವು ಸದೃಢವಾದ ಮತ್ತು ಕ್ರಿಯಾಶೀಲವಾದ ರಾಷ್ಟ್ರೀಯ ಸಾಂಸ್ಕೃತಿಕ ಚಳವಳಿಯನ್ನು ಕಟ್ಟಲು ನಮ್ಮನ್ನು ನಾವು ಮತ್ತೆ ಸಮರ್ಪಿಸಿಕೊಳ್ಳುತ್ತಿದ್ದೇವೆ. ದುಷ್ಟಶಕ್ತಿಗಳಿಂದ ಶೋಷಣೆಗೊಳಗಾದ ಭಾರತದ ಜನತೆಯನ್ನು ಸಂಪೂರ್ಣವಾಗಿ ನಂಬುತ್ತೇವೆ ಮತ್ತು ನಾವೆಲ್ಲರೂ ಕೈಜೋಡಿಸುವ ಮೂಲಕ ಜೀವಂತ ಸಾಂಸ್ಕೃತಿ[ಕ] ಸಂಬಂಧಗಳನ್ನು ನಿರ್ಮಿಸಲು ಹೆಮ್ಮೆ ಪಡುತ್ತೇವೆ" ಎಂದು ಹೈದರಾಬಾದ್ ರಾಷ್ಟ್ರೀಯ ಸಮ್ಮೇಳನದ[ಲ್ಲಿ] ಘೋಷಿಸಲಾಯಿತು.

2011ರಲ್ಲಿ ಛತ್ತೀಸಗಢದ ಬಿಲಾಯಿಯಲ್ಲಿ ನಡೆದ 13[ನೇ] ರಾಷ್ಟ್ರೀಯ ಸಮ್ಮೇಳನದಲ್ಲಿ ಸ್ವಾತಂತ್ರ್ಯ ಹೋರಾಟಗಾ[ರ] ಹಿರಿಯ ರಂಗಕರ್ಮಿ, ಸಿನಿಮಾ ನಟ ಪದ್ಮಭೂಷ[ಣ] ಎ.ಕೆ.ಹಾನಗಲ್ ಅವರನ್ನು ಇಪ್ಟಾದ ರಾಷ್ಟ್ರೀಯ ಸಮಿತಿಯ ಗೌರವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. 26 ಆಗ[ಸ್ಟ್] 2012ರಲ್ಲಿ ಹಾನಗಲ್ ಅವರು ಕಾಲವಶರಾಗುವವರೆಗೂ ಅವರೇ ಇಪ್ಟಾದ ಗೌರವಾಧ್ಯಕ್ಷರಾಗಿದ್ದರು. ಹಿರಿಯ ರಂಗಕರ್ಮಿ ರಣಬೀರ್ ಸಿಂಗ್ ಕಾರ್ಯಕಾರಿ ಅಧ್ಯಕ್ಷರಾ[ಗಿ] ಪ್ರಸ್ತುತ ಇಪ್ಟಾವನ್ನು ಮುನ್ನಡೆಸುತ್ತಿದ್ದಾರೆ.

ಭಾರತದಾದ್ಯಂತ ಈಗ 600ಕ್ಕೂ ಹೆಚ್ಚು ಇಪ್ಟಾ ಘಟಕಗಳು 22 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ[ಲ್ಲಿ] ಕ್ರಿಯಾಶೀಲವಾಗಿವೆ. 12000 ಕ್ಕೂ ಹೆಚ್ಚು ಇಪ್ಟಾ ಕಾರ್ಯಕರ್ತರು ದೇಶಾದ್ಯಂತ ಸಕ್ರಿಯರಾಗಿದ್ದಾರೆ.

ಇಪ್ಟಾ ಜನ್ಮತಾಳಿದಾಗ ಸ್ವಾತಂ[ತ್ರ್ಯ] ಚಳವಳಿ ತೀವ್ರವಾಗಿತ್ತು. ಆಗ ಅದ[...] ಇಪ್ಟಾ ಸಾಂಸ್ಕೃತಿಕ ನಾಯಕತ್ವವನ್ನು ಒದಗಿಸಿತ್ತು. ಈಗ ಜಾಗತೀಕರ[ಣ] ಎನ್ನುವುದು ಎಲ್ಲಾ ಚಳವಳಿಗಳನ್ನು ಆಪೋಷಣ ತೆಗೆದುಕೊಳ್ಳುತ್ತಿದೆ. ಇ[...] ವ್ಯವಸ್ಥೆ ಭ್ರಷ್ಟವಾಗಿದೆ. ಕೋಮುಶಕ್ತಿಗ[ಳು] ತಮ್ಮ ಅಧಿಕಾರ ದಾಹಕ್ಕಾಗಿ ಕೋಮ[ು] ಸೌಹಾರ್ದತೆಯನ್ನು ಕದಡಿ ಜನರನ್ನು ಒಡೆದು ಆಟವಾಡುತ್ತಿವೆ. ಅಮೆರಿ[ಕಾ] ದಂತಹ ಸಾಮ್ರಾಜ್ಯಶಾಹಿ ದೇಶಗ[ಳು] ಕಾರ್ಪೋರೇಟ್ ಕಂಪನಿಗಳು ಭಾರತ[ದ] ಆರ್ಥಿಕತೆಯನ್ನು ತಮ[್ಮ] ಕಪಿಮುಷ್ಟಿಯಲ್ಲಿಟ್ಟುಕೊಂಡಿವೆ. ವಿದೇ[ಶಿ] ಸಂಸ್ಕೃತಿಯ ಅಟ್ಟಹಾಸಕ್ಕೆ ದೇಶಿ ಸಂಸ್ಕೃತಿ ನಾಶವಾಗುತ್ತಿ[ದೆ].

ಇಂತಹ ಪ್ರಕ್ಷುಬ್ಧ ಕಾಲಘಟ್ಟದಲ್ಲಿ ಇಪ್ಟಾದಂತ[ಹ] ಸಂಘಟನೆ ಜನರಲ್ಲಿ ಜಾಗೃತಿ ಮೂಡಿಸಲು ಅಗತ್ಯವಾಗಿ[...] ತಳಸಂಸ್ಕೃತಿಯ ಪ್ರತೀಕವಾದ ಚರ್ಮವಾದ್ಯ 'ನಗಾರಿಯ[ನ್ನು] ಬಾರಿಸುವ ಕಲಾವಿದನ ಲಾಂಛನ' ಹೊಂದಿರು[ವ] ಇಪ್ಟಾದಂತಹ ಸಾಂಸ್ಕೃತಿಕ ಸಂಘಟನೆಯ ಅಗತ್ಯ ಇನ[್ನೂ] ಇದೆ. ಅಸಮಾನ ವ್ಯವಸ್ಥೆಯ ವಿರುದ್ಧ ಸಾಂಸ್ಕೃತಿಕ ಚಳವ[ಳಿ] ಯೊಂದನ್ನು ರೂಪಿಸುವ ನಿಟ್ಟಿನಲ್ಲಿ ಇಪ್ಟಾ ಮ[...] ಸಂಘಟನೆಗೊಂಡು ಜನರ ಬಳಿಗೆ ಹೋಗಬೇಕಾಗಿದೆ. ಸಶಕ್ತ ಸಮಾನ, ಸ್ವಾಭಿಮಾನಿ ಭಾರತವನ್ನು ಕಟ್ಟುವ ಇಪ್ಟಾದ ಕನಸು ನನಸಾಗಬೇಕಿದೆ.




- ಶಶಿಕಾಂತ ಯಡಹಳ್ಳಿ

ಎಸ್.ನಾರಾಯಣ್‌ನ ಅಪ್ರಬುದ್ಧ ನಿಲುವು


ಕನ್ನಡ ನಾಡಿನ ಜೀವನದಿ ಈ ಕಾವೇರಿ.....' ಎಂಬ 'ಜೀವನದಿ' ಚಿತ್ರದ ಹಾಡಿನ ಸಾಲುಗಳನ್ನು ...ಯದ ಕನ್ನಡಿಗರೇ ಇಲ್ಲ ಎಂದು ಹೇಳಬಹುದು. ...ಷ್ಣುವರ್ಧನ್ ಮತ್ತು ಖುಷ್ಬು ಮಡಿಕೇರಿಯ ಕಾವೇರಿ ...ಕ್ಷೇತ್ರದಲ್ಲಿ ಈ ಹಾಡಿಗೆ ನರ್ತಿಸಿದ್ದರು. ಡಿ. ...ಜೇಂದ್ರಬಾಬು ನಿರ್ದೇಶನದ ಈ ಚಿತ್ರ ಬಾಕ್ಸ್ ...ಫೀಸ್‌ನಲ್ಲಿ ಮುಗ್ಗರಿಸಿದರೂ ಈ ಹಾಡು ಮಾತ್ರ ...ನ್ನಡಿಗರ ಮನಸ್ಸನ್ನು ಗೆದ್ದಿತ್ತು.

ಈಗ ಅಂತಹ ಒಂದು ಸುಮಧುರ ಹಾಡು ವಿವಾದ ...ದ್ರಬಿಂದುವಾಗಿರುವುದು ಬೇಸರದ ವಿಷಯ. ಒಂದು ...ಮೂಲದ ಪ್ರಕಾರ ಚೆನ್ನೈನಲ್ಲಿ ನಡೆಯಲಿರುವ ಭಾರತೀಯ ...ತ್ರರಂಗದ ಶತಮಾನೋತ್ಸವ ಸಮಾರಂಭದಲ್ಲಿ ...ಯಾವುದೇ ಕಾರಣಕ್ಕೂ ಕಾವೇರಿ ನದಿಯನ್ನು ಹಾಡಿ



ಹೊಗಳುವ ಕನ್ನಡದ ಹಾಡುಗಳನ್ನು ಹಾಕಲು ತಮಿಳುನಾಡು ಸರ್ಕಾರ ಬಿಡುವುದಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಈ ಬಗ್ಗೆ ಕನ್ನಡ ಚಿತ್ರರಂಗದ ಸಾಂಸ್ಕೃತಿಕ ಕಾರ್ಯಕ್ರಮದ ನೇತೃತ್ವ ವಹಿಸಿರುವ ನಿರ್ದೇಶಕ ಎಸ್.ನಾರಾಯಣ್ ಅವರನ್ನು ಸಂಪರ್ಕಿಸಿದರೆ ಅವರು ಇನ್ನೂ ಒಗಟಾಗಿ ಮಾತನಾಡುತ್ತಾರೆ.

"ನೋಡಿ! ನನ್ನ ಮೇಲೆ ಜವಾಬ್ದಾರಿಯಿಟ್ಟು ಈ ಕಾರ್ಯಕ್ರಮವನ್ನು ನೆರವೇರಿಸಲು ನನಗೆ ಅವಕಾಶ ನೀಡಿದ್ದಾರೆ. ಇಂತಹ ಹಾಡನ್ನು ತಮಿಳುನಾಡಿನಲ್ಲಿ ನಾನು ಕೇಳಿಸಿದರೆ ಅಥವಾ ಆ ಹಾಡಿಗೆ ನಮ್ಮ ಕಲಾವಿದರು ನೃತ್ಯ ಮಾಡಿದರೆ ಪರಿಸ್ಥಿತಿ ಏನಾಗಬಹುದು ಎಂಬ ಅರಿವು ನನಗಿದೆ. ಈ ಸಮಾರಂಭ ಯಶಸ್ವಿಯಾಗಿ ಮತ್ತು ವಿವಾದರಹಿತವಾಗಿ ನಡೆಯಬೇಕೆಂಬ ಆಶಯಕ್ಕಾಗಿ ನಾನೇ ಈ ಹಾಡನ್ನು ಕೈಬಿಟ್ಟಿದ್ದೇನೆ" ಎಂದು ನಾಣಿ ಸಬೂಬು ನೀಡಿದರು.



ಅಜಯ್‌ರಾವ್ ಬೇಸರ

ನಾಯಕ ನಟ ಅಜಯ್ ರಾವ್ ಗಾಂಧಿನಗರದವರ ದೃಷ್ಟಿಯಲ್ಲಿ 'ಅತ್ಯಂತ ನತದೃಷ್ಟ ನಟ'ನಾಗಿ ಕಾಣಿಸುತ್ತಿದ್ದಾರೆ. ಯಾಕೆಂದರೆ ಈತ ನಟಿಸಿರುವ ಅನೇಕ ಚಿತ್ರಗಳು ಸಂಪೂರ್ಣ ಗೊಂಡಿದ್ದರೂ ಅವುಗಳು ಬಿಡುಗಡೆಯ ಭಾಗ್ಯ ಕಾಣುತ್ತಿಲ್ಲ. ಅದರಲ್ಲೂ ಯೋಗೇಶ್ ಹುಣಸೂರು ನಿರ್ಮಾಣದ 'ಕೃಷ್ಣ ಸನ್ ಆಫ್ ಸಿ.ಎಂ' ಮತ್ತು ಸುರೇಶ್ ನಿರ್ಮಾಣದ 'ಅದ್ವೈತ' ಚಿತ್ರಗಳು ತೆರೆ ಕಾಣಲು ತಯಾರಾಗಿದ್ದರೂ ಅವಕ್ಕಿನ್ನೂ ಮುಕ್ತಿಯೇ ಸಿಕ್ಕಿಲ್ಲ. ಈ ಬಗ್ಗೆ ಅಜಯ್‌ನನ್ನು ಕೇಳಿದರೆ ಅವರು "ಈ ಚಿತ್ರಗಳನ್ನು ಥಿಯೇಟರ್‌ನಲ್ಲಿ ಬಿಡುಗಡೆಯಾಗಿ ನಿರ್ಮಾಪಕರಿಗೆ 30 ರಿಂದ 40 ಲಕ್ಷ ರೂಪಾಯಿ ನಷ್ಟವಾಗುವುದಾದರೆ ಅವರು ಚಿತ್ರವನ್ನು ನೇರವಾಗಿ ಟಿ.ವಿಯಲ್ಲಾದರೂ ಬಿಡುಗಡೆ ಮಾಡಲಿ" ಎಂದು ದಯನೀಯವಾಗಿ ಬೇಡಿಕೊಳ್ಳುತ್ತಾರೆ.

ಇದು ಕನ್ನಡ ಚಿತ್ರರಂಗದ ನಿರ್ಮಾಪಕರ ಮತ್ತು ನಾಯಕ ನಟರ ದಯನೀಯ ಸ್ಥಿತಿಯ ಒಂದು ಸಣ್ಣ ಝಲಕ್ ಅಷ್ಟೆ.

...ಬೆದರಿಸಿದವರ ವಿರುದ್ಧ ಬಂಡಾಯ


ವಿವಾದಿತ ಲೇಖಕ ಯೋಗೇಶ್ ಮಾಸ್ಟರ್‌ರ ಹೊಸ ...ಅಂಕಣ ನೋಡಿ ಥ್ರಿಲ್ ಆಯಿತು. ಹಿಂದೂ ಕೋಮುವಾ...ದಿಗಳು ತಾವು ಗೆದ್ದೆವೆಂದು ಬೀಗುತ್ತಿದ್ದ ಕ್ಷಣದಲ್ಲೇ ಅವರ ...ಮುಖಕ್ಕೆ ಹೊಡೆಯುವಂತೆ 'ಪುರಾಣದ ಹೂರಣ' ...ಪ್ರಾರಂಭಿಸಿರುವುದು ಸವಾಲೆಸೆಯುವಂತಿದೆ.

...ಕಲಾವಿದ ರವಿ ಕೋಡಿಗದ್ದೆಯವರ ಆಯುಧಧಾರಿ ...ಗಣೇಶನ ಚಿತ್ರ ಮೈ ಜುಂ ಎನಿಸುವಂತಿದೆ.

- ಪ್ರಕಾಶ್ ಬೆಳಕವಾಡಿ, ಮೈಸೂರು

'ಲೂಸಿಯಾ'ಗೆ ಥ್ಯಾಂಕ್ಸ್

...ಹೊಸಬರ ಪ್ರಯತ್ನ ಹಾಗೂ ಪ್ರಯೋಗಗಳನ್ನು ...ಪ್ರೀತಿಯಿಂದ ಬೆಂಬಲಿಸುವ 'ಲಂಕೇಶ್'ಗೆ ಥ್ಯಾಂಕ್ಸ್.




...ಲೂಸಿಯಾ ನಿಜಕ್ಕೂ ಚೆನ್ನಾಗಿದೆ. ಆದರೆ ಕೆಲವು ...ಸಿನಿಮಾ ಪತ್ರಕರ್ತರು ಲೂಸಿಯಾ ತಲೆಬುಡವಿರದ, ...ಅರ್ಥವೇ ಆಗದ ಸಿನಿಮಾ ಎಂದು ಮಾತನಾಡುತ್ತಿದ್ದಾರೆ. ...ಅಂತವರೆಲ್ಲಾ ಅನಕ್ಷರಸ್ಥರೆಂಬುದು ಈಗ ಗೊತ್ತಾಗಿದೆ.

-ವಸಂತ್‌ಕುಮಾರ್, ಕಿರುತೆರೆ ನಟ, ಬೆಂಗಳೂರು

...ಮೋದಿಯ ಮುಖವಾಡ

...ನರೇಂದ್ರ ಮೋದಿಯ 'ಅಭಿವೃದ್ಧಿ'ಯ ಅಸಲಿ ...ಮುಖವನ್ನು ನಿರೂಪಿಸುವ 'ಬೂಸಿ ಬಾಸ್ಯ ...ಮೋದಿ' ಅಂಕಣ ಖಂಡಿತಾ ಬೇಕಿತ್ತು. ನಮಗೆ ...ಮೋದಿ ಒಬ್ಬ ಕೆಡುಕ ಎಂಬುದು ಗೊತ್ತಿತ್ತು. ...ಆದರೆ ಮೋದಿಯ ಬೆಂಬಲಿಗರೊಂದಿಗೆ ...ಚರ್ಚಿಸುವಾಗ ಈ 'ಅಭಿವೃದ್ಧಿ'ಗೆ ...ಸಂಬಂಧಿಸಿದಂತೆ ಪ್ರತಿವಾದ ಹೂಡಲು ಮಾಹಿತಿಯ ಕೊರತೆ ...ಇತ್ತು. ಈ ಅಂಕಣವು ನ್ಯಾಯದ ಪರವಿರುವ ಎಲ್ಲರಿಗೂ ...ಉಪಯೋಗಕ್ಕೆ ಬರಲಿ ಎಂದು ಆಶಿಸುತ್ತೇವೆ.



-ಚಂದ್ರ ಮತ್ತು ಗೆಳೆಯರು, ದಾವಣಗೆರೆ

...ವಿಷ್ಣು ಗೌರವ ಕಳೆಯುತ್ತಿರುವ ಜನ

...ವಿಷ್ಣು ಸಮಾಧಿ ಬೇಗುದಿ ವರದಿ ಓದಿ ಮನಸ್ಸಿಗೆ ...ನೋವಾಯಿತು. ವಿಷ್ಣು ತೀರಿಕೊಂಡ ದಿನವೇ ಮುಂದಿನ ...ಕಾರ್ಯಗಳ ಬಗ್ಗೆ ಸರಿಯಾಗಿ ಯೋಚಿಸದೆ ಎಡವಟ್ಟು ...ಮಾಡಿ ಈಗ ಅದೇ ಬಗೆಹರಿಸಲಾಗದ ಕಗ್ಗಂಟಾಗಿರುವುದು ...ಬೇಸರದ ಸಂಗತಿಯಾಗಿದೆ. ದಿವಂಗತ ನಟ ಬಾಲಕೃಷ್ಣರ ...ಮಗಳು ಗೀತಾಬಾಲಿಯವರ ನಿಷ್ಠೂರ ಅಭಿಪ್ರಾಯ ...ಪ್ರಕಟಿಸುವ ಮೂಲಕ ಈ ವಿವಾದದ ಇನ್ನೊಂದು ಮುಖ ...ತೆರೆದಿರಿಸಿದ್ದೀರಿ.

- ರವೀಶ್, ಭದ್ರಾವತಿ

...ವಿಷ್ಣು ಸಮಾಧಿ ಮೌಢ್ಯಕ್ಕೆ ಒಂದು ಅತ್ಯುತ್ತಮ ಉದಾಹರಣೆ

...ವಿಷ್ಣುವರ್ಧನ್ ಅವರ 'ಸಮಾಧಿ ಬೇಗುದಿ' ಓದಿ ...ಬೇಸರವಾಯಿತು. ವಿಷ್ಣುವರ್ಧನರ ಮರಣಕ್ಕೂ ಮೌಢ್ಯ



ಕಾರಣ. ಈಗ ಅವರ ಸ್ಮಾರಕಕ್ಕೂ ಮೌಢ್ಯವೇ ಅಡ್ಡಗೋಡೆ. ವಿಷ್ಣು ತೀರಿಕೊಂಡಾಗ ಅವರಿಗೆ ಕೇವಲ 59 ವರ್ಷ ವಯಸ್ಸು. ಮೇಲಾಗಿ ಅವರಿಗೆ ಆ ವಯಸ್ಸಿಗೆ ಸಹಜವಾದ ಸಣ್ಣಪುಟ್ಟ ಕಾಯಿಲೆಗಳ ಹೊರತು ಗಂಭೀರ ಕಾಯಿಲೆಗಳಿರಲಿಲ್ಲವಂತೆ. ಆದರೆ ಅವರು ಈ ಕಾಯಿಲೆಗಳಿಗೆ ಸಮರ್ಥ ಡಾಕ್ಟರರ ಸಲಹೆಯಂತೆ ಔಷಧ ತೆಗೆದುಕೊಳ್ಳುವ ಬದಲು ಅಧ್ಯಾತ್ಮದ ಮೊರೆ ಹೋದರು. ಉಡುಪಿ ಬನ್ನಂಜೆಯ ಒಬ್ಬ ಅರೆ-ಪಂಡಿತನ ಬೋಧನೆಗೆ ಒಳಗಾಗಿ ಪೂಜೆ-ಧ್ಯಾನ-ಮಂತ್ರಗಳಿಂದ ಕಾಯಿಲೆ ಗುಣಪಡಿಸಿಕೊಳ್ಳಲು ಪ್ರಯತ್ನಿಸಿ ಬೇಗ ಮರಣ ತಂದುಕೊಂಡರೆಂದು ಪತ್ರಿಕೆಗಳಲ್ಲಿ ಆಗ ವರದಿಯಾಗಿತ್ತು. ಈ ಮೌಢ್ಯವಿಲ್ಲದಿದ್ದರೆ ಇನ್ನೂ 10-15 ವರ್ಷ ಅವರು ಜೀವಿಸುತ್ತಿದ್ದು ಕನ್ನಡ ಕಲಾಲೋಕಕ್ಕೆ ಅವರ ಅಮೂಲ್ಯ ಸೇವೆ ಮುಂದುವರಿಯುತ್ತಿತ್ತು. ತೀರಿಕೊಂಡ ನಂತರವೂ ಅವರ ಹೆಸರಿಗೆ ಮೌಢ್ಯದ ಕಾಟ ನಿಜಕ್ಕೂ ಖೇದಕರ.

ಸಶಕ್ತ ಮನಸ್ಸಿನವರಿಗೆ ವಿಚಾರವಾದ-ನಾಸ್ತಿಕತೆ ಸಹಜವಾಗಿ ಒಪ್ಪುತ್ತದೆ, ಆದರೆ ದುರ್ಬಲ ಮನಸ್ಸಿನವರ ಮಾನಸಿಕ ಆರೋಗ್ಯಕ್ಕಾಗಿ ದೇವರ ನಂಬಿಕೆ ಅಗತ್ಯ ಬೇಕಾಗುತ್ತದೆ. ಅರೆ ಸಾಕ್ಷರ ಸಮಾಜವು ಸುರಳೀತವಾಗಿ ನಡೆಯಲು ದೇವರ ನಂಬಿಕೆ ಬೇಕೇಬೇಕು. ದೇವರ ನಂಬಿಕೆ ಇರದಿದ್ದರೆ ಸಮಾಜದಲ್ಲಿ ಅರ್ಧಕ್ಕೂ ಹೆಚ್ಚು ಜನ ಮಾನಸಿಕ ರೋಗಗಳಿಗೆ ತುತ್ತಾಗಿರುತ್ತಿದ್ದರಂತೆ. ಧ್ಯಾನ-ಪೂಜೆ-ಮಂತ್ರಗಳಿಗೆ ನಿಜವಾಗಿ ಅಂತಹ ಯಾವ ಅಲೌಕಿಕ ಶಕ್ತಿಗಳಿರದಿದ್ದರೂ ದುರ್ಬಲ ಮನಸ್ಸಿನವರಿಗೆ ಇದರಿಂದ ಮಾನಸಿಕ ಶಾಂತಿ ಸಿಕ್ಕಿ ಅದರಿಂದ ಮೆದುಳಿನಲ್ಲಿ ಆಗುವ ರಾಸಾಯನಿಕ ಪ್ರಕ್ರಿಯೆಯಿಂದ ಮಾನಸಿಕ ರೋಗಗಳು ಹತೋಟಿಗೆ ಬರುತ್ತವೆ ಎಂದು ಮನಃಶಾಸ್ತ್ರಜ್ಞರೇ ಒಪ್ಪುತ್ತಾರೆ.


ಆದರೆ ದೈಹಿಕ ರೋಗಗಳಿಗೂ ದೇವರ ಮೇಲೆ ಭಾರ ಹಾಕಿ ಅಧ್ಯಾತ್ಮದ ಮೊರೆ ಹೋಗುವುದು ಆತ್ಮಹತ್ಯೆಗೆ ಸಮ. ಅತಿಯಾದರೆ ವಿಷವೂ ಅಮೃತವಂತೆ. ಅದರಂತೆ ದೇವರ ನಂಬಿಕೆ / ಅಧ್ಯಾತ್ಮ ಇದು ಸಹ ಅತಿಯಾದರೆ ಅದೇ ಒಂದು ಮನೋರೋಗದಂತೆ. ಡ್ರಗ್-ಅಡಿಕ್ಟ್ ಕೇವಲ ತನ್ನನ್ನು ತಾನೇ ಕೆಡಿಸಿಕೊಂಡರೆ, ಗಾಡ್-ಅಡಿಕ್ಟ್ ಇಡೀ ಕುಟುಂಬವನ್ನೇ ಕೆಡಿಸುತ್ತಾನಂತೆ. ವಿಷ್ಣುವರ್ಧನರ ಸಮಾಧಿಯ ವಿಷಯದಲ್ಲಿ ಅಧ್ಯಾತ್ಮದ ಜೊತೆ ವಾಸ್ತು

ಎಂಬ ಮೌಢ್ಯವೂ ಸೇರಿದೆ. ಈಗ ಎಲ್ಲೆಡೆ ಪ್ರಚಾರದಲ್ಲಿರುವ ವಾಸ್ತುಶಾಸ್ತ್ರದಲ್ಲಿ ಕೇವಲ 20% ಮಾತ್ರ ಮೂಲ ಭಾರತೀಯ ವಾಸ್ತು ಶಾಸ್ತ್ರ ಹಾಗೂ ಉಳಿದ 80% ಚೀನಾ ದೇಶದ ಫೆಂಗ್-ಶ್ವೇಯಿಂದ ಪ್ರಭಾವಿತವಾದದ್ದು. ಚೀನಾದ ಈ ಮೂಢನಂಬಿಕೆಯನ್ನು ಭಾರತದ ಪ್ರಾಚೀನ ವಾಸ್ತು ಶಾಸ್ತ್ರದೊಟ್ಟಿಗೆ ಅಕ್ರಮವಾಗಿ ಮೇಳೈಸಿ ಜನರನ್ನು ಮೋಸಮಾಡುವ ವಾಸ್ತು ಪಂಡಿತರೇ ಈಗ ಎಲ್ಲೆಡೆಯೂ ಕಾಣಸಿಗುತ್ತಾರೆ. ಈಗ ಹುಟ್ಟೂರು ಚೀನಾದಲ್ಲಿಯೇ ಯಾರೂ ನಂಬದ ಈ ಫೆಂಗ್-ಶುಯಿಯು ಭಾರತದ ಸಮಾಜದಲ್ಲಿ ಮಾತ್ರ ವಾಸ್ತುಶಾಸ್ತ್ರದ ಸೋಗಿನಲ್ಲಿ ಭಾರೀ ಅನಾಹುತ ಸೃಷ್ಟಿಸುತ್ತಿದೆ. ವಿಷ್ಣು ಸಮಾಧಿ ಅದಕ್ಕೊಂದು ಅತ್ಯುತ್ತಮ ಉದಾಹರಣೆ.

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಅಸಾರಾಮ್ ಅಲ್ಲ ಮೃಗರಾಮ್

ಸ್ವಯಂಘೋಷಿತ ದೇವಮಾನವ, ನಕಲಿ ಸಂತ ಅಸಾರಾಮ್ ಎಂಬಾತ ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ಅತ್ಯಾಚಾರವೆಸಗಿ ಪೊಲೀಸರ ಕೈಗೆ ಸಿಕ್ಕಿ ಬಿದ್ದು ಈಗ ಜೈಲುಪಾಲಾಗಿರುವುದು ಸರಿಯಷ್ಟೇ.



ಈತನ ಆಶ್ರಮಗಳಲ್ಲಿ ಭಕ್ತರಿಗೆ ಮೋಸ ಮಾಡುತ್ತಿದ್ದನ್ನು, ಆತನ ವಿರುದ್ಧ ದೂರು ದಾಖಲಿಸಲು ಮುಂದಾದರೆ ಅವರಿಗೆ ಜೀವ ಬೆದರಿಕೆ ಹಾಕುತ್ತಿದ್ದದ್ದು, ಈತನ ಅನೈತಿಕ ಕೃತ್ಯಗಳು, ಅಕ್ರಮಗಳು ಈಗ ಬಯಲಾಗುತ್ತಿವೆ. ಈ ಮುದಿ ವಿಕೃತ ಕಾಮಿಗೆ ಎಂತಹ ಘೋರ ಶಿಕ್ಷೆ ವಿಧಿಸಬೇಕು? ಗಲ್ಲು ಶಿಕ್ಷೆಯಾದರೆ ಸರಿ ಅಲ್ಲವೇ?

ಮಕ್ಕಳ ಪೀಡಕ, ಸಾರ್ವಜನಿಕ ಆಸ್ತಿಯ ಭಕ್ಷಕ ಎಲ್ಲವೂ ಆಗಿರುವ ಈ ನಕಲಿ ಸ್ವಯಂಘೋಷಿತ ದೇವಮಾನವನ ಅಕ್ರಮ, ಅನೈತಿಕತೆ, ಭೂಲೂಟಿ ಎಲ್ಲವೂ ಸಮಗ್ರ ತನಿಖೆಗೆ ಒಳಪಟ್ಟು ಆತನ ಸಂಪೂರ್ಣ ಆಸ್ತಿಯನ್ನು ಮುಟ್ಟುಗೋಲು ಹಾಕಬೇಕು. ಅವನಿಗೆ ಸೂಕ್ತ ಶಿಕ್ಷೆಯೂ ಆಗಬೇಕು. ಮಾತ್ರವಲ್ಲ ಈತನಿಗೆ ಬೆನ್ನೆಲುಬಾಗಿ ನಿಂತಿರುವ ಪ್ರಭಾವಿ ವ್ಯಕ್ತಿಗಳ ಮೇಲೂ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಅಸಾರಾಮನಂತೆಯೇ ದೇಶದಾದ್ಯಂತ ಇರುವ ಅನೇಕ ನಕಲಿ ಸಾಧುಸಂತರು, ಬಾಬಾಗಳು, ಪವಾಡ ಪುರುಷರ ನಿಜಬಣ್ಣವನ್ನು ಬಯಲು ಮಾಡಬೇಕು ಎಂದುದು ಈ ನಾಡಿನ ಪ್ರಜ್ಞಾವಂತ ನಾಗರಿಕರ ಅಭಿಪ್ರಾಯ.

- ಡಿ.ವಿ ಭೀಮಾಶಂಕರ, ಪಾಣೇಗಾಂವ

'Modi'fied media: ಫಟಾ ಪೋಸ್ಟರ್, ನಿಕ್ಲಾ ಹೀರೊ!!!

ಮೇಡಮ್, ಕಸ್ತೂರಿ ಸುದ್ದಿವಾಹಿನಿಯಲ್ಲಿ ನೀವು ಭಾಗವಹಿಸಿದ ಚರ್ಚೆ ವೀಕ್ಷಿಸಿದ ನಂತರ ಈ ಪತ್ರ ಬರೆಯುತ್ತಿದ್ದೇನೆ.

ಮೋದಿಯ ಅಪಾಯಗಳ ಕುರಿತು ನೀವು ಮತ್ತು ದ್ವಾರಕಾನಾಥ್ ವಿವರಿಸಿದ್ದು ಪರಿಣಾಮಕಾರಿಯಾಗಿತ್ತು. ಬಿಜೆಪಿಯ ಸುಳ್ಳುಬುರುಕ ಬಾಯಿಬಡುಕರ ಬಾಯಿ ಮುಚ್ಚುವಂತೆ ಮಾಡಿದ್ದಕ್ಕೆ ಧನ್ಯವಾದಗಳು.

ಮೋದಿಯ ಇಮೇಜನ್ನು ಬೆಳೆಸಲು ಬಹುಪಾಲು ಇಂಗ್ಲಿಷ್ ಮತ್ತು ಹಿಂದಿ ಮಾಧ್ಯಮಗಳು ಸಾಕಷ್ಟು 'ಸೇವೆ' ಸಲ್ಲಿಸುತ್ತಿರುವುದಂತೂ ಸತ್ಯ.

ಆಗಸದಿಂದ ಪಿ.ಎಂ. ಮೆಟಿರಿಯಲ್ಲೊಂದು ಉದುರಿ ಬಿದ್ದುಬಿಟ್ಟಿತು ಎಂಬಂತೆ ಟಿವಿ ಮಾಧ್ಯಮಗಳು ನರೇಂದ್ರ ಮೋದಿಯ 'ಪಟ್ಟಾಭಿಷೇಕ'ವನ್ನು ಸಂಭ್ರಮದಿಂದ ಬಿತ್ತರಿಸಿದ್ದೇ ಬಿತ್ತರಿಸಿದ್ದು, ಅದೇ ದಿನ (13, ಸೆಪ್ಟೆಂಬರ್) ದೆಹಲಿಯ



ಅತ್ಯಾಚಾರದ ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸಿದ ತೀರ್ಪಿನ ಬಗ್ಗೆ ದಿನವಿಡೀ ಸತತವಾಗಿ ಬಿತ್ತರಿಸಿ ಸುಸ್ತಾಗಿದ್ದ ಚಾನೆಲ್‌ಗಳಿಗೆ ಸಂಜೆ ಹೊತ್ತಿಗೆ 'ಗಂಗಾಜಲ'ವನ್ನು ಬಿಜೆಪಿ ಒದಗಿಸಿತ್ತು.

ಮೋದಿಯ ಆಯ್ಕೆಗೂ ಮುಂಚೆ ನಡೆದ ನಾಟಕಗಳು ಚಾನೆಲ್‌ಗಳ ಪಾಲಿಗೆ ಕಂಟೆಂಟೋ ಕಂಟೆಂಟು. ಅಡ್ವಾನಿ ಎಂಬ ಊಸರವಳ್ಳಿ 'ಹೊರಗುಳಿದು' ಸೃಷ್ಟಿಸಿದ ಡ್ರಾಮಾ ಇಡೀ ಕಥಾನಕಕ್ಕೆ ರೋಚಕ ತಿರುವನ್ನು ನೀಡಿಬಿಟ್ಟಿತ್ತು.

ಕಳೆದೆರಡು ವರ್ಷಗಳಿಂದ ಶುರುವಾಗಿರುವ 'ಪಿ.ಎಂ. ಮೋದಿ' ಅಭಿಯಾನದಲ್ಲಿ ಮಾಧ್ಯಮಗಳು ಪಿಆರ್‌ಒ ಪಾತ್ರವನ್ನು ಸರಿಯಾಗೇ ನಿರ್ವಹಿಸುತ್ತ ಬಂದಿವೆ. ಈ ದೈತ್ಯ ಮಾಧ್ಯಮಗಳು ಬಯಸಿದಂತೆ ಅಡ್ವಾನಿ ಈಗ 'ರಾಜಿ'ಯೂ ಆಗಿದ್ದಾರೆ.

ಮೋದಿಯ 'ಅಭಿವೃದ್ಧಿ'ಯ ಮಾದರಿ ಟಾಟಾ, ಅಂಬಾನಿಗಳಿಗೆ; ಅಮಿತಾಬ್‌ರಂತಹವರಿಗೆ (ಮಲ್ಲಿಕಾ ಶೆರಾವತ್‌ಗಳಿಗೂ?) ಪ್ರಿಯವಾದ ಮಾದರಿಯಷ್ಟೇ. ಇನ್ನು ಹಿಂದುತ್ವದ ಅಮಲಿನವರಿಗೆ ಮೋದಿ ಇಷ್ಟವಾಗಿರುವುದು 2002ರ ವ್ಯವಸ್ಥಿತ ಮಾರಣಹೋಮಕ್ಕಾಗಿಯಷ್ಟೇ.

ಆದರೆ, ಇಂತಹ ಸತ್ಯಾಂಶಗಳನ್ನು ಹಿನ್ನೆಲೆಗೆ ಸರಿಸಿದ ಮಾಧ್ಯಮಗಳಿಗೆ ಮೋದಿ ಹೀರೊ ಆಗಿ ಕಾಣುವುದೇಕೆ? ಇದರ ಹಿಂದೆ ವೈದಿಕಶಾಹಿ ಮತ್ತು ಬಂಡವಾಳಶಾಹಿಗಳ ಪರಂಪರಾಗತ ಅಗೋಚರ ಒಳಮೈತ್ರಿಯೇ ಕೆಲಸ ಮಾಡುತ್ತಿದೆಯಲ್ಲವೇ?

ಒಟ್ಟಿನಲ್ಲಿ, ಬರಲಿರುವ ಹಿಂದಿ ಸಿನಿಮಾ 'ಫಟಾ ಪೋಸ್ಟರ್, ನಿಕ್ಲಾ ಹೀರೊ' ಎಂಬ ಟೈಟಲ್ಲು ಈ ಸಂದರ್ಭಕ್ಕೆ ಸರಿಯಾಗಿದೆ.

ಹಾಗೆಯೇ, 'ನಾಮ್ ಸಿಕಂದರ್ ರಖನೆ ಸೆ ಸಿಕಂದರ್ ನ ಬನ್ ಸಕಾ' ಅಲ್ಲವೇ?

ಮಸೀದಿ ಕೆಡವಿದ
ಮುದುಕ
ಭ್ರೂಣ ಹಿಸುಕಿದ
ಹಂತಕ
ಇಬ್ಬರೂ ಈ ದೇಶಕ್ಕೆ
ಕಂಟಕ

-ಪಿ.ಕೆ.ಮಲ್ಲನಗೌಡರ್, ತೋಂಟಗಂಟಿ (ಗದಗ)

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

‘ಒಗ್ಗರಣೆ’ ಚಿತ್ರದ ನಿರ್ದೇಶನ ಮತ್ತು ನಿರ್ಮಾಣಕ್ಕಾಗಿ ಕರ್ನಾಟಕಕ್ಕೆ ಬಂದಿಳಿದಿರುವ ಕನ್ನಡದ ಕುವರ ಪ್ರಕಾಶ್ ರೈ ಮೊನ್ನೆ ಸಿನಿಮಾ ಪತ್ರಕರ್ತರೊಂದಿಗೆ ‘ಮೊದಲ ಸಂಜೆ’ಯನ್ನು ಕಳೆದರು. ಮುಂದಿನ ನಾಲ್ಕು ತಿಂಗಳು ರೈ ಮೈಸೂರಿನಲ್ಲಿ ಇರುತ್ತಾರೆ.

ರೈ ಜೊತೆಗೆ ಮಾತಿಗೆ ಕುಳಿತರೆ ಸಿನಿಮಾಕ್ಕಿಂತ ಸಿನಿಮೇತರ ವಿಷಯಗಳೇ ಹೆಚ್ಚು ಚರ್ಚೆಯಾಗುತ್ತವೆ. ಹೀಗಾಗಿ ಮೊನ್ನೆಯೂ ಸಾಹಿತ್ಯ ಕ್ರೀಡೆ, ರಾಜಕೀಯ ಮತ್ತು ವೈಯುಕ್ತಿಕ ಜೀವನ ಚರ್ಚೆಯಾಗಿ ರೈ ಕೆಲವೊಮ್ಮೆ ತಮಾಷೆಯಾಗಿಯೂ, ಕೆಲವೊಮ್ಮೆ ಗಂಭೀರವಾಗಿಯೂ ಮಾತುಗಳನ್ನು ಆಡುತ್ತಾ ಹೋದರು.

“ನಿಮ್ಮ ಅಮ್ಮ ಮಾಡಿದ ದೋಸೆಗೂ, ಪಕ್ಕದ ಮನೆಯವರ ದೋಸೆಗೂ ವ್ಯತ್ಯಾಸವಿರುವುದಿಲ್ಲವೇ?” ಎಂದು ಪ್ರಶ್ನಿಸುವ ಮುಖಾಂತರ ರೈ ತಾನು ರಿಮೇಕ್ ಚಿತ್ರ ಮಾಡುತ್ತಿರುವುದನ್ನು ಸಮರ್ಥಿಸಿಕೊಂಡರು. “ಇದು ಮಲಯಾಳಂನ ‘ಸಾಲ್ಟ್ ಅಂಡ್ ಪೆಪ್ಪರ್’ ಚಿತ್ರದ ರಿಮೇಕ್ ಎಂದು ಸ್ವತಃ ನಾನೇ ಘೋಷಿಸಿದ್ದೇನೆ. ಆದರೆ ಇದರರ್ಥ ನಾನು ಮಕ್ಕಿಕಾಮಕ್ಕಿ ಭಟ್ಟಿ ಇಳಿಸುವುದಿಲ್ಲ. ಈ ಚಿತ್ರದ ಕ್ಲೈಮ್ಯಾಕ್ಸ್ ಸ್ವಲ್ಪ ಬದಲಾಯಿಸಿದ್ದೇನೆ. ಹಾಗೆಯೇ ಇನ್ನೆರಡು ಹೊಸ ಪಾತ್ರಗಳನ್ನು ಸೃಷ್ಟಿಸಿದ್ದೇನೆ. ನನಗೆ ಇಷ್ಟವಾದ ಕಥೆಯನ್ನು ಹೇಳಲು ನಾನು ಮುಂದೆ ಬಂದಿದ್ದೇನೆ. ಹೀಗಾಗಿ ಅದು ರಿಮೇಕೋ? ಸ್ವಮೇಕೋ? ಎಂದು ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ ನಿರೂಪಣೆಯಲ್ಲಿ



ನಾನೂ ನನ್ನ ಕನಸು... ರೈ, ಅಮೂಲ್ಯ ಮತ್ತು ಸಿತಾರ

ನನ್ನದೇ ಆದ ಶೈಲಿಯಂತೂ ಇದ್ದೇ ಇರುತ್ತದೆ” ಎಂದು ರೈ ಹೇಳಿದರು.

ಆನಂತರ ರೈ ನಿರ್ದೇಶಿಸಿ-ನಿರ್ಮಿಸಿ-ನಟಿಸಿದ್ದ ಚಿತ್ರ ‘ನಾನು ಮತ್ತು ನನ್ನ ಕನಸು’ ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿದ್ದರಿಂದ ಅವರಿಗಾದ ಆರ್ಥಿಕ ನಷ್ಟದ ಬಗ್ಗೆ ಪ್ರಸ್ತಾಪವಾಯಿತು. ‘ನಷ್ಟ’ ಎಂಬ ಶಬ್ದ ಕೇಳಿದಾಕ್ಷಣ ರೈ ಭಾವುಕರಾಗಿ ಫ್ಲ್ಯಾಶ್‌ಬ್ಯಾಕ್‌ಗೆ ಹೋದರು. “ನಾನು ಇಪ್ಪತ್ತೈದು ವರ್ಷಗಳ ಹಿಂದೆ ನನ್ನ ಮನೆಯ ಸಾಮಾನನ್ನು ತಂಗಿ ಮನೆಯಲ್ಲಿಟ್ಟು, ಮದ್ರಾಸ್‌ಗೆ ಕಾಲಿಟ್ಟಾಗ ನನ್ನ ಜೇಬಿನಲ್ಲಿ ಇದ್ದದ್ದು ಕೇವಲ 140 ರೂಪಾಯಿಗಳು. ಅದರಲ್ಲಿ 20 ರೂ. ‘ದಿನಾ’ ಸ್ನಾನಕ್ಕಾಗಿ ವ್ಯಯಿಸುತ್ತಿದ್ದೆ. ಆ ಹಂತದಿಂದ ನಾನು ಇವತ್ತು ಇಷ್ಟು ಎತ್ತರಕ್ಕೆ ಬೆಳೆದಿದ್ದೇನೆ. ಕೋಟಿ ಕೋಟಿ ರೂ. ಸಾಲ ಮಾಡುತ್ತಿದ್ದೇನೆ. ಕೋಟಿ ಕೋಟಿ ರೂ. ನಷ್ಟವನ್ನೂ ಅನುಭವಿಸುತ್ತಿದ್ದೇನೆ. ಆದರೆ ಒಟ್ಟಾರೆಯಾಗಿ ಲೆಕ್ಕ ಹಾಕಿದರೆ ಆ 140 ರೂ.ಗಳಿಗೆ ಹೋಲಿಸಿದರೆ ನನಗೆ ನಷ್ಟವಾಗಲು ಸಾಧ್ಯವೇ ಇಲ್ಲ. ಇದು ನಾನು ಜೀವನದಲ್ಲಿ ನಂಬಿಕೊಂಡು ಬಂದ ಸಿದ್ಧಾಂತ. ಹೀಗಾಗಿ ನನಗಿಷ್ಟವಾದ ಕಥೆಯನ್ನು ನಾನು ಮಾಡುತ್ತೇನೆ. ಅದನ್ನು ನೋಡುವ, ತಿರಸ್ಕರಿಸುವ ಹಕ್ಕು ಪ್ರೇಕ್ಷಕರಿಗಿದೆ. ಅವರಿಗೆ ಇಷ್ಟವಿದ್ದುದನ್ನು ಅವರು ಮಾಡುತ್ತಾರೆ. ನನಗೆ ಇಷ್ಟವಿದ್ದುದನ್ನು ನಾನು ಮಾಡುತ್ತೇನೆ, ಅಷ್ಟೇ” ಎಂದರು ರೈ.

“ಅಮೆರಿಕದಲ್ಲಿ ಒಬ್ಬ ಮಹಿಳೆ ಮೈಪ್ರಕಾಶ್‌ರಾಜ್.ಕಾಮ್ ಎಂಬ ವೆಬ್‌ಸೈಟ್ ಆರಂಭಿಸಿ ನಾನು ನಟಿಸಿದ 300 ಚಿತ್ರಗಳಲ್ಲಿ 220 ಚಿತ್ರಗಳ ಡಿವಿಡಿ ಖರೀದಿಸಿ ನನ್ನ ಚಿತ್ರವನ್ನು ವೀಕ್ಷಿಸಿದ್ದಾಳೆ. ಇದೇರೀತಿ ಭೂತಾನ್, ಪಾಕಿಸ್ತಾನ್, ರಷ್ಯಾ ಹೀಗೆ ಅನೇಕ ದೇಶಗಳಲ್ಲಿ ನನ್ನನ್ನು ಇಷ್ಟಪಡುವ ಅಭಿಮಾನಿಗಳಿದ್ದಾರೆ. ನಾನು ಚಿತ್ರ ಮಾಡಿ ಕೈಸುಟ್ಟುಕೊಂಡಿದ್ದೇನೆ ಎಂದು ಅವರ್‍ಯಾರೂ ನನ್ನನ್ನು ದೂರ ಮಾಡಿಲ್ಲ. ಹೀಗಾಗಿ ನಾನು ಎಂದೆಂದಿಗೂ ಎಷ್ಟೇ ಚಿತ್ರ ಮಾಡಿ ನಷ್ಟ ಅನುಭವಿಸಿದರೂ ‘ಬಡವ’ನಾಗಲು ಸಾಧ್ಯವೇ ಇಲ್ಲ” ಎಂದು ಭಾವುಕವಾಗಿ ಹೇಳಿದರು.

“ಮೊನ್ನೆ ಪಂಜಾಬಿಗೆ ಹೋದಾಗ ಅಲ್ಲಿ ಚಿಕ್ಕಮಕ್ಕಳು ಪ್ರಕಾಶ್ ರೈ ಮತ್ತು ಶಾರೂಖ್ ಖಾನ್ ಎಂಬ ಎರಡು ಗಾಳಿಪಟಗಳನ್ನು ಆಗಸದತ್ತ ಚಿಮ್ಮಿಸಿ ಆಟವಾಡಿದ್ದನ್ನು ನೋಡಿ ನನಗೇ ಆಶ್ಚರ್ಯವಾಯಿತು. ಅಂದರೆ, ನಾನು ವಿಲನ್ ಪಾತ್ರದಲ್ಲಿ ಕಾಣಿಸಿಕೊಂಡರೂ ಚಿಕ್ಕಮಕ್ಕಳೂ ನನ್ನನ್ನು ಇಷ್ಟಪಟ್ಟಿರುವುದನ್ನು ನೋಡಿ ಸಂತೋಷವಾಯಿತು” ಎಂದು ಹೇಳಿದರು.

ಅವರ ಹಿಂದಿ ಚಿತ್ರರಂಗದ ವೃತ್ತಿಜೀವನದ ಬಗ್ಗೆ ಮಾತು ಹೊರಳಿದಾಗ ರೈ ಅಷ್ಟೇನೂ ಥ್ರಿಲ್ ಆಗಲಿಲ್ಲ. “ಹಿಂದಿಯಲ್ಲಿ ಒಟ್ಟು ಎಂಟು ಸಿನಿಮಾಗಳನ್ನು ಮುಗಿಸಿದ್ದೇನೆ. ಇತ್ತೀಚೆಗೆ ಬಿಡುಗಡೆಯಾದ



ಪ್ರಕಾಶ್

ಪ್ರಕಾಶ್ ರೈ ಅಂತರಂಗದ ಮಾತು

‘ದಬಾಂಗ್-2’ ಚಿತ್ರದಲ್ಲಿ ನಾನು ನಟಿಸಿದ್ದೇನೆ. ಆದರೆ ಆ ಚಿತ್ರದಲ್ಲಿ ನನ್ನ ಪಾತ್ರಕ್ಕೆ ನಾನು ಧ್ವನಿ ನೀಡಿಲ್ಲ” ಎಂದರು. “ಯಾಕೆ?” ಅಂದಾಗ “ನನಗೆ ಸಿನಿಮಾ ಕಥೆ ಹೇಳಿದ್ದೇ ಬೇರೆ. ಸಿನಿಮಾ ಆದ ನಂತರ ಅಲ್ಲಿ ನನ್ನ ಪಾತ್ರ ಕಾಣಿಸಿಕೊಂಡಿದ್ದೇ ಬೇರೆ. ಅರ್ಧಕ್ಕರ್ಧ ಕತ್ತರಿಸಿದ್ದರು. ಇದು ಯಾಕೆ? ಎಂದು ಕೇಳಿದರೆ ‘ಸಲ್ಮಾನ್ ಖಾನ್ ಚಿತ್ರಗಳಲ್ಲಿ ಇದೆಲ್ಲ ಮಾಮೂಲು. ಇದನ್ನು ಪ್ರಶ್ನಿಸಿ ಅವರನ್ನು ಎದುರು ಹಾಕಿಕೊಳ್ಳಬೇಡಿ’ ಎಂದು ಯಾರೋ ಸಲಹೆ ನೀಡಿದರು. ಹಾಗಾದರೆ ಅವರನ್ನು ಎದುರು ಹಾಕಿಕೊಳ್ಳದಷ್ಟು ನಾನು ನಿಶ್ಯಕ್ತನೋ? ಎಂದು ಒಮ್ಮೆ ನೋಡಿಬಿಡೋಣ ಎಂದು ಡಬ್ಬಿಂಗ್ ಮಾಡಲಿಲ್ಲ” ಎಂದು ತಮಾಷೆಯಾಗಿ ರೈ ಮಾತು ಮುಗಿಸಿದರು.




ಭಾಗ್ ಮಿಲ್ಖಾ ಭಾಗ್ ಫರಾನ್ ಅಖ್ತರ್

“ಓಂ ಪ್ರಕಾಶ್ ಮೆಹ್ರಾ ನಿರ್ದೇಶನದ ‘ಭಾಗ್ ಮಿಲ್ಖಾ ಭಾಗ್’ ಚಿತ್ರದಲ್ಲಿ ವಾನು ಅನೇಕ ಹೊಸ ವಿಷಯಗಳನ್ನು ಕಲಿತುಕೊಂಡೆ. ಬಹುಶಃ ಈತನಕ ಕಲಿಯದ ಅನೇಕ ನಟನಾ ಟಿಪ್ಸ್‌ಗಳನ್ನು ಆ ಚಿತ್ರದ ನಿರ್ದೇಶಕರಿಂದ ಕಲಿತೆ. ಆ ಚಿತ್ರದ ಪಾತ್ರಕ್ಕಾಗಿ ನಿರ್ದೇಶಕ ನನ್ನನ್ನು ಸಂಪರ್ಕಿಸಿದಾಗ ‘ನೀವು ಈ ಚಿತ್ರವನ್ನು 30 ಕೋಟಿ ರೂಪಾಯಿಯಲ್ಲಿ ಹೇಗೆ ಮುಗಿಸುತ್ತೀರಿ?’ ಎಂದು ಕೇಳಿದೆ. ಕೊನೆಗೆ ಅವರ ಪರಿಸ್ಥಿತಿಯನ್ನು ನೋಡಿ ಕೇವಲ ಒಂದು ರೂಪಾಯಿಯನ್ನು ಮಾತ್ರ ನನ್ನ ಸಂಭಾವನೆಯಾಗಿ ಪಡೆದು ಆ ಚಿತ್ರದಲ್ಲಿ ನಟಿಸಿದೆ”

ಎಂದು ರೈ ಜ್ಞಾಪಿಸಿಕೊಂಡರು. ಆ ಚಿತ್ರಕ್ಕಾಗಿ ಸುಮಾರು ಎರಡು ವರ್ಷಗಳ ಕಾಲ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಂಡ ನಾಯ[...] ನಟ ಫರಾನ್ ಅಖ್ತರ್‌ನನ್ನು ಬಾಯಿತುಂಬಾ ಕೊಂಡಾಡಿ ರೈ “ಅಂತ[...] ಮತ್ತೊಬ್ಬ ನಟನನ್ನೇ ನಾನು ನೋಡಿಲ್ಲ” ಎಂದು ಹೇಳಿದರು.

ಮಾತು ಮತ್ತೆ ‘ಒಗ್ಗರಣೆ’ ಸಿನಿಮಾದತ್ತ ಹೊರಳಿತು. “ಈ ಚಿತ್ರ[...] ಸಂಪೂರ್ಣವಾಗಿ ಮೈಸೂರಿನಲ್ಲಿ ಚಿತ್ರೀಕರಿಸುತ್ತಿದ್ದೇನೆ. ಕನ್ನಡ, ತಮಿಳು[...] ಮತ್ತು ತೆಲುಗು ಒಟ್ಟು ಮೂರು ಭಾಷೆಗಳಲ್ಲಿ ಏಕಕಾಲದಲ್ಲಿ ಇದರ[...] ಚಿತ್ರೀಕರಣ ನಡೆಯುತ್ತಿದೆ. ಎಸ್.ಪಿ.ಬಾಲಸುಬ್ರಹ್ಮ[...] ಊರ್ವಶಿ, ಸ್ನೇಹಾ ಮತ್ತು ಕನ್ನಡದ ನಾಯ[...] ಸಂಯುಕ್ತ, ಸಿಹಿಕಹಿ ಚಂದ್ರು ಮತ್ತು ಅಚ್ಯುರ ಈ ಚಿತ್ರದಲ್ಲಿ ನಟಿಸುತ್ತಿದ್ದಾರೆ[...] ಈ ಚಿತ್ರದಲ್ಲಿ ಆಯಾ ಪ್ರದೇಶದ ಊಟ, ತಿಂಡಿಯ ಬಗ್ಗೆ ಅನೇಕ ವಿಷಯಗಳು ಹಾದುಹೋಗುವುದರಿಂದ ಆಯಾ ಪ್ರಾದೇಶಿಕ ಭಾಷಾ ತಿಂಡಿ, ತಿನಿಸುಗಳಿಗೆ ಸಂಬಂಧಪಟ್ಟ ಹೆಸರನ್ನೇ ಇಟ್ಟದ್ದೇ[...] ಎಂದು ಹೇಳಿದರು.



“ಈ ಚಿತ್ರದಲ್ಲಿ ತಿಂಡಿಗಳ ಬ[...] ಜಯಂತ್ ಕಾಯ್ಕಿಣಿ ಒಂದು ಒಳ್ಳೆಯ ಹಾಡನ್ನು ಬರೆದಿದ್ದಾ[...] ಒಟ್ಟಾರೆಯಾಗಿ ಮಧ್ಯ ವಯಸ್ಕರ ಮತ್ತು ಕಿರಿಯರ[...] ಪ್ರೇಮಕಥಾವಸ್ತುವಿನ ಈ [...] ಎಲ್ಲರಿಗೂ ಇಷ್ಟವಾಗುವ ಸಾಧ್ಯತೆಯಿದೆ” ಎಂಬ ಆಶಯವನ್ನು ವ್ಯಕ್ತಪಡಿಸಿದರು. “ನ[...] ನಾಲ್ಕು ತಿಂಗಳುಗಳ ಕಾಲ ಮೈಸೂರಿನಲ್ಲಿರುವುದರಿಂದ ಅತ್ಯಂತ ಖು[...] ಪಡುತ್ತಿರುವವರು ನನ್ನ ತಾಯಿ. ‘ಕನಿಷ್ಠ ನಾಲ್ಕು ತಿಂಗಳಾದರೂ ಕರ್ನಾಟಕದಲ್ಲಿ ಇರುತ್ತೀಯಲ್ಲ?’ ಎಂದು ಆಕೆ ಹಿಗ್ಗಿದರು. ನಮ್ಮ ಕುಟುಂಬದಲ್ಲಿ ಆಕೆ ದೊಡ್ಡ ಕನ್ನಡ ಅಭಿಮಾನಿ. ಆಕೆಯ ಸೊಸೆಯಂ[...] ತಮಿಳು, ಪಂಜಾಬಿನವರಾದರೆ ಮೊಮ್ಮಕ್ಕಳೆಲ್ಲಾ ತಮಿಳು, ಮಲಯಾ[...] ಮಾತನಾಡುತ್ತಾರೆ. ಆದರೂ ನನ್ನ ತಾಯಿ ಮಾತ್ರ ಈಗಲೂ ಅಪ್ಪಟ [...] ಕನ್ನಡಾಭಿಮಾನಿ” ಎಂದು ಪ್ರಕಾಶ್ ರೈ ಕುಟುಂಬದ ಸದಸ್ಯರ ಮೇಲ[...] ಒಂದಿಷ್ಟು ಬೆಳಕು ಚೆಲ್ಲಿದರು.

“ಚೆನ್ನೈನಲ್ಲಿ ನಡೆಯಲಿರುವ ಭಾರತೀಯ ಚಿತ್ರರಂಗದ ಶತಮಾನೋ[...] ಸಮಾರಂಭದಲ್ಲಿ ನಿಮ್ಮ ಪಾತ್ರವೇನು?” ಎಂಬ ಪ್ರಶ್ನೆಗೆ “ರಾಷ್ಟ್ರಪತಿ ಬ[...] ದಿನದ ಸಮಾರಂಭದ ನಿರೂಪಣೆಯ ಜವಾಬ್ದಾರಿಯನ್ನು ನನಗೆ ನೀಡಿದ[...] ಬಹುಶಃ ತಮಿಳು, ತೆಲುಗು, ಮಲಯಾಳಂ, ಕನ್ನಡ ಮತ್ತು ಹಿಂದಿ ಭಾಷ[...] ಚಿತ್ರೋದ್ಯಮಿಗಳು ಅಲ್ಲಿರುವುದರಿಂದ ಮತ್ತು ಆ ಎಲ್ಲಾ ಭಾಷೆಗಳಲ್ಲಿ ನಾ[...] ಮಾತನಾಡಬಲ್ಲವನಾಗಿರುವುದರಿಂದ ಈ ಜವಾಬ್ದಾರಿಯನ್ನು ನನಗೆ ನೀಡಿ[...] ಎಂದೆನಿಸುತ್ತಿದೆ ಅಥವಾ ಬೇರೆ ಕಲಾವಿದರಂತೆ ನನಗೆ ನೃತ್ಯ ಮಾಡ[...] ಬರುವುದಿಲ್ಲ ಎಂಬ ಸತ್ಯ ಅವರಿಗೆ ಗೊತ್ತಿರುವುದರಿಂದಲೂ [...] ಮಾಡಿರಬಹುದು! ಒಟ್ಟಾರೆಯಾಗಿ ಈ ಜವಾಬ್ದಾರಿ ನನಗೆ ಸಂತ[...] ನೀಡಿದೆ” ಎಂದು ಹೇಳಿದರು.

“ಇನ್ನೊಂದು ಕನ್ನಡ ಚಿತ್ರಕ್ಕಾಗಿ ಕಥೆಯನ್ನು ಬರೆಯುತ್ತಿದ್ದೇನೆ. [...] ಯಾವಾಗ ಆರಂಭಿಸುತ್ತೇನೋ ಗೊತ್ತಿಲ್ಲ. ಈ ಮಧ್ಯೆ ಒಮ್ಮೆ ಹಾಲಿ[...] ಚಿತ್ರರಂಗಕ್ಕೂ ಹೋಗಿಬರುವ ಸಾಧ್ಯತೆಯಿದೆ” ಎಂದು ಸೂಕ್ಷ್ಮವಾಗಿ [...] ಭವಿಷ್ಯದ ಬಗ್ಗೆಯೂ ಮಾತನಾಡಿದರು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com